Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 174
ಬುಧವಾರ,24 ಜೂನ್ 2026 | ಪುಟಗಳು: 16 | ಬೆಲೆ: ₹ 5.00
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಮಹಾ ಸರಕಾರ ಆರ್‌ಟಿಐ ಕಾಯಿದೆ ತಿದ್ದುಪಡಿ ಹಿಂಪಡೆಯದಿದ್ದರೆ ನಿರಶನ: ಅಣ್ಣಾ ಹಜಾರೆ

ಕಾಕ್ರೋಚ್ ಜನತಾ ಪಕ್ಷವು ತುಕ್ಡೆ ತುಕ್ಡೆ ಗ್ಯಾಂಗ್‌ನ ಬಿ-ತಂಡ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ವಾಗ್ದಾಳಿ

ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಅಂತಿಮಗೊಳಿಸಲು ಮಾತುಕತೆ ಪುನಾರಂಭ

ವಿಕ ಹೊಂಗಿರಣ

ನಿನ್ನೆಯನ್ನು ದೂರುತ್ತಾ ಕೂತರೆ ನಾಳೆ ನಮ್ಮನ್ನು ನಾವೇ ದೂರಿಕೊಳ್ಳಬೇಕಾಗುತ್ತದೆ.

-ಅನಾಮಿಕ

ಮೀಸಲು ಹೆಚ್ಚಳ: ಜುಲೈ 15ರಿಂದ ಅಂತಿಮ ವಿಚಾರಣೆ »03

ಹರ್ಮುಜ್‌ನಲ್ಲಿ ಮತ್ತೆ ಮುಕ್ತ ಸಂಚಾರ »08

ವಚನಾನಂದ ಶ್ರೀ ನಿರೀಕ್ಷಣಾ ಜಾಮೀನು ರದ್ದು ಸನ್ನಿಹಿತ »04

ಭೂ ಸ್ವಾಧೀನದಲ್ಲಿ ಸುಧಾರಣೆ: ಪರಿಹಾರದ ಬದಲು ಅಭಿವೃದ್ಧಿಪಡಿಸಿದ ಭೂಮಿಗೆ ರೈತರ ಜೈ!

ಒಂದು ಎಕರೆಗೆ 10,781 ಚದರ ಅಡಿ ಸೈಟು: ಭೂ ಮಾಲೀಕರ ಕೈಹಿಡಿದ ಹೊಸ ಆದ್ಯತಾ ಸೂತ್ರ

ಕೆಐಎಡಿಬಿ ಭೂ ಮಾಡೆಲ್!

■ **ಕೆಂಚೇಗೌಡ** ಬೆಂಗಳೂರು
kenche.gowda@timesgroup.com

ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ನಡೆಸುವ ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ಈಗ ದೊಡ್ಡ ಬದಲಾವಣೆಯೊಂದು ಕಂಡುಬರುತ್ತಿದೆ. ಇದುವರೆಗೆ ಭೂಮಿ ಕಳೆದುಕೊಂಡು ನಗದು ಪರಿಹಾರ ಪಡೆಯುತ್ತಿದ್ದ ರೈತರು, ಈಗ ಅದರ ಬದಲಿಗೆ 'ಅಭಿವೃದ್ಧಿ ಪಡಿಸಿದ ನಿವೇಶನ' ಪಡೆಯಲು ಮುಗಿಬೀಳುತ್ತಿದ್ದಾರೆ.

ರಾಜ್ಯ ಸರಕಾರ ಜಾರಿಗೆ ತಂದಿರುವ 'ಆದ್ಯತಾ ಸೂತ್ರ' ಹಾಗೂ ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ರೈತರಿಗೆ ಸಿಗುತ್ತಿರುವ ಭಾರಿ ಲಾಭವೇ ಈ ಹೊಸ ಟ್ರೆಂಡ್‌ಗೆ ಪ್ರಮುಖ ಕಾರಣವಾಗಿದೆ. ಈ ಮೂಲಕ ಸ್ಥಳೀಯ ರೈತರನ್ನು ಒಕ್ಕಲೆಬ್ಬಿಸುವ ಹಳೆ ಸಂಪ್ರದಾಯ ಮುಗಿಯುತ್ತಿದ್ದು, ಭೂಮಾಲೀಕರೂ ಸಹ ರಾಜ್ಯದ ಕೈಗಾರಿಕಾ ಪ್ರಗತಿಯ ಭಾಗವಾಗುತ್ತಿದ್ದಾರೆ. ಕರ್ನಾಟಕ ಗೃಹ ಮಂಡಳಿ ಮತ್ತು ಬಿಡಿಎ ಮಾದರಿಯಲ್ಲೇ ಈಗ ಕೆಐಎಡಿಬಿ ಕೂಡ ಈ ಯಶಸ್ವಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ.

ರೈತರಿಗೆ ಆದ್ಯತಾ ಸೂತ್ರ: ಯಾವುದೇ ಹೊಸ ಕೈಗಾರಿಕಾ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ, ಭೂಮಿ ನೀಡಿದ ರೈತರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಅಭಿವೃದ್ಧಿ ಪಡಿಸಿದ ನಿವೇಶನಗಳಲ್ಲಿ ರೈತರು ತಮಗೆ ಬೇಕಾದ ಪ್ರಮುಖ ಜಾಗವನ್ನು ಮೊದಲು ಆಯ್ಕೆ ಮಾಡಿಕೊಳ್ಳಬಹುದು. ರೈತರು ತಮ್ಮ ಪಾಲನ್ನು ಆರಿಸಿಕೊಂಡ ನಂತರವಷ್ಟೇ ಉಳಿದ ಭೂಮಿಯನ್ನು ಕೈಗಾರಿಕೆಗಳಿಗೆ ಹಂಚಿಕೆ ಮಾಡಲು ಸರಕಾರ ಕಡ್ಡಾಯಗೊಳಿಸಿದೆ. ಈ ಸಂಬಂಧದ ರೈತರ ಅರ್ಜಿಗಳ ವಿಲೇವಾರಿಗೆ ಕೆಐಎಡಿಬಿ ಮಂಡಳಿಯು ಪ್ರತಿ ಶುಕ್ರವಾರ ವಾರಕ್ಕೊಮ್ಮೆ ಕಡ್ಡಾಯ ಸಭೆ ನಡೆಸುವ ನಿಯಮ ತಂದಿದೆ.

ದೇವನಹಳ್ಳಿ ಐಟಿಐಆರ್ ಮತ್ತು ಪಾಸ್ಕಾನ್ ಸುತ್ತಮುತ್ತ ಅಭಿವೃದ್ಧಿ ಪಡಿಸಿದ ಭೂಮಿಯಲ್ಲಿ ಪಾಲು ಪಡೆದವರಿಗೆ ದೊಡ್ಡ ಲಾಭವಾಗುತ್ತಿದೆ. ಎಕರೆಗೆ 1.35 ಕೋಟಿ ರೂ. ಪರಿಹಾರದ ಬದಲಿಗೆ ಅಭಿವೃದ್ಧಿಯಲ್ಲಿ ಪಾಲು ಪಡೆದ ರೈತರಿಗೆ ಪ್ರತಿ ಚದರಡಿಗೆ ಏಳೆಂಟು ಸಾವಿರ ವರೆಗೆ ಬೆಲೆ ಸಿಗುತ್ತಿದೆ. ಇದು ರಾಜ್ಯದ ಬೇರೆ ಭಾಗಗಳಲ್ಲೂ ರೈತರು ಪರಿಹಾರದ ಬದಲಿಗೆ ಈ ಆಯ್ಕೆಯನ್ನು ಅವಲಂಬಿಸುತ್ತಿದ್ದಾರೆ. ಭೂಮಾಲೀಕ ರೈತರೂ ಅಭಿವೃದ್ಧಿಯ ಭಾಗವಾಗುವ ಹೊಸ ವ್ಯವಸ್ಥೆ ಗಟ್ಟಿಯಾಗುತ್ತಿದೆ.

»05

ಕೆಐಎಡಿಬಿಗೆ ಏನು ಲಾಭ?

ಭೂಸ್ವಾಧೀನಕ್ಕಾಗಿ ಸರಕಾರ ತಕ್ಷಣವೇ ಕೋಟ್ಯಂತರ ರೂ. ನಗದು ಪರಿಹಾರ ನೀಡುವ ಹೊರೆ ತಪ್ಪಲಿದ್ದು, ಹೊಸ ಕೈಗಾರಿಕಾ ಪ್ರದೇಶಗಳನ್ನು ಕಡಿಮೆ ಬಜೆಟ್‌ನಲ್ಲಿ ಅಭಿವೃದ್ಧಿಪಡಿಸಬಹುದು. 'ಕೆಲವೇ ಉದ್ಯಮಿಗಳಿಗಾಗಿ ಸಾವಿರಾರು ರೈತ ಕುಟುಂಬಗಳ ಬದುಕಿನ ಆಸರೆ ಕಸಿದುಕೊಳ್ಳಲಾಗುತ್ತಿದೆ' ಎಂಬ ಸಾರ್ವಜನಿಕ ಅಪವಾದದಿಂದ ಸರಕಾರ ಮುಕ್ತಿ ಪಡೆಯಬಹುದು.

ರೈತರಿಗೆ ಅನುಕೂಲ ಏನು?

1. ಭೂಮಿ ನೀಡಿದ ರೈತರಿಗೆ ಪ್ರತಿ ಎಕರೆಗೆ 10,781 ಚದರ ಅಡಿ ವಿಸ್ತೀರ್ಣದ ಸಂಪೂರ್ಣ ಅಭಿವೃದ್ಧಿ ಪಡಿಸಿದ ನಿವೇಶನ
2. ಈ ಜಾಗವನ್ನು ವಾಣಿಜ್ಯ, ಕೈಗಾರಿಕೆ ಅಥವಾ ವಸತಿ ಉದ್ದೇಶಗಳಿಗಾಗಿ ಬಳಸಬಹುದು
3. ಇಲ್ಲಿ ಯಾವುದೇ ರೀತಿಯ ಭೂ ಪರಿವರ್ತನೆ ಮಾಡುವ ಅಗತ್ಯವಿರುವುದಿಲ್ಲ
4. ರಸ್ತೆ, ವಿದ್ಯುತ್, ನೀರು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳೂ ಸಿದ್ಧವಿರುವುದರಿಂದ ಜಾಗಕ್ಕೆ ಭಾರಿ ಡಿಮ್ಯಾಂಡ್ ಇರುತ್ತದೆ
5. ಸ್ವಂತ ಉದ್ದಿಮೆ ಆರಂಭಿಸಬಹುದು, ಮಾರಾಟ ಮಾಡಬಹುದು, ವಸತಿ ಸಮುಚ್ಚಯ/ಗೋದಾಮು ನಿರ್ಮಿಸಿ ಬಾಡಿಗೆ ನೀಡಬಹುದು
6. ಕೈಗಾರಿಕೀಕರಣದ ನಡುವೆಯೂ ರೈತರಿಗೆ ತಮ್ಮ ಪೂರ್ವಿಕರ ಭೂಮಿ ತಮ್ಮಲ್ಲೇ ಉಳಿದಿದೆ ಎಂಬ ನೆಮ್ಮದಿ ಸಿಗುತ್ತದೆ

ಹರಿಹರದಲ್ಲಿ ಶಂಕಿತ ಉಗ್ರನ ಬಂಧನ

■ **ವಿಕ ಸುದ್ದಿಲೋಕ** ದಾವಣಗೆರೆ

ಹರಿಹರ ತಾಲೂಕು ವ್ಯಾಪ್ತಿಯ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶ ಮೂಲದ ಶಂಕಿತ ಉಗ್ರನನ್ನು ಜಿಲ್ಲಾ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ. 18 ದಿನಗಳ ಅಂತರದಲ್ಲಿ ಜಿಲ್ಲೆಯಲ್ಲಿ ಶಂಕಿತ ಉಗ್ರನನ್ನು ಪತ್ತೆ ಹಚ್ಚಿದ ಎರಡನೇ ಪ್ರಕರಣ ಇದಾಗಿದ್ದು, ರಾಜ್ಯದಲ್ಲಿ ಮೂರನೆಯ ಪ್ರಕರಣ.

ಬನ್ನಿಕೋಡು ಗ್ರಾಮದಲ್ಲಿ ವಾಸವಿದ್ದ ಸುಹೇಲ್ (20) ಬಂಧಿತ ಆರೋಪಿ. ಈತ ಉತ್ತರ ಪ್ರದೇಶದ ಶಹಜಾನ್‌ಪುರ ಮೂಲದವನು ಎಂದು ತಿಳಿದು ಬಂದಿದೆ. ಕಾರ್ಖಾನೆ ಒಂದರಲ್ಲಿ ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದ.

18 ದಿನಗಳ ಅಂತರದಲ್ಲಿ ಮೂವರ ಸೆರೆ

ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಸೂಚನೆಯ ಮೇರೆಗೆ ದಾವಣಗೆರೆ ಗ್ರಾಮಾಂತರ ವಿಭಾಗದ ಡಿವೈಎಸ್‌ಪಿ ಬಿ.ಎಸ್. ಬಸವರಾಜ್ ನೇತೃತ್ವದ ತಂಡ, ಮಂಗಳವಾರ ನಸುಕಿನಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಬಂಧಿತ ಸುಹೇಲ್, ವಾಟ್ಸ್ಆ್ಯಪ್, ಇನ್‌ಸ್ಟಾಗ್ರಾಮ್ ಹಾಗೂ ಇತರ ಸಾಮಾಜಿಕ ಮಾಧ್ಯಮ, ಜಾಲತಾಣಗಳ ಮೂಲಕ ಪಾಕಿಸ್ತಾನದ ಕೆಲವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದ. ಶಂಕಿತ ಉಗ್ರನ ವಾಟ್ಸ್ಆ್ಯಪ್‌ನಲ್ಲಿ ಭಯೋತ್ಪಾದಕ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿ ಪತ್ತೆಯಾಗಿದೆ. ಬಂಧಿತನ ವಿಚಾರಣೆ ಪೂರ್ಣಗೊಳಿಸಿ ತುಮಕೂರು ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದಾವಣಗೆರೆಯಲ್ಲಿ ಜೂನ್ 4ರಂದು ನಗರದ ನಿವಾಸಿಯಾಗಿದ್ದ ಜಮೀರ್ ಖಾನ್ (22) ಎಂಬ ಶಂಕಿತ ಉಗ್ರನನ್ನು ತುಮಕೂರು ಪೊಲೀಸರು ಬಂಧಿಸಿದ್ದರು. ಇದೇ ವೇಳೆ ತುಮಕೂರಿನಲ್ಲಿ ಅಲ್ಲಾಬಕ್ಷ್ (24) ಎಂಬ ಮತ್ತೊಬ್ಬ ಶಂಕಿತ ಉಗ್ರನನ್ನು ಬಂಧಿಸಲಾಗಿತ್ತು.



Bennett & Coleman THE TIMES OF INDIA
ಸಂಪಾದಕೀಯ EDITORIAL

ಕನ್ನಡ ಪುಸ್ತಕಗಳ ಕೈಹಿಡಿಯಿರಿ

ಅಂಕೇಗೌಡರಂತೆ ಪುಸ್ತಕೋದ್ಯಮ ಸಂಕಷ್ಟಕ್ಕೂ ಸ್ಪಂದಿಸಿ

ಪದ್ಮಶ್ರೀ ಪುರಸ್ಕೃತ ಎಂ. ಅಂಕೇಗೌಡರು ಜೀವಮಾನದ ಶ್ರಮದಿಂದ ಸಂಗ್ರಹಿಸಿರುವ 20 ಲಕ್ಷಕ್ಕೂ ಅಧಿಕ ಅಪರೂಪದ ಗ್ರಂಥಗಳ ಸುರಕ್ಷತೆಗೆ ರಾಜ್ಯ ಸರಕಾರ ಕಡೆಗೂ ಮುಂದಾಗಿರುವುದು ಸ್ವಾಗತಾರ್ಹ. ಮಂಡ್ಯ ಜಿಲ್ಲೆಯಲ್ಲಿ ಸುಸಜ್ಜಿತ ಗ್ರಂಥಾಲಯ ನಿರ್ಮಾಣಕ್ಕಾಗಿ 2 ಎಕರೆ ಭೂಮಿ ಹಾಗೂ 5 ಕೋಟಿ ರೂಪಾಯಿಗಳ ಆರ್ಥಿಕ ನೆರವು ಘೋಷಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಿರ್ಧಾರ, ಜ್ಞಾನದಾಸೋಹದ ಈ ಅಪ್ರತಿಮ ಸೇವೆಗೆ ಸಿಕ್ಕ ಸೂಕ್ತ ಮನ್ನಣೆಯಾಗಿದೆ.

ಒಂದು ಕಾಲದಲ್ಲಿ ಸಹಕಾರ ಸಕ್ಕರೆ ಕಾರ್ಖಾನೆಯ ಸಾಮಾನ್ಯ ನೌಕರರಾಗಿದ್ದ ಅಂಕೇಗೌಡರು, ತಮ್ಮ ಜೀವನದ ಸಂಪಾದನೆ ಮತ್ತು ಆಸ್ತಿಯನ್ನೆಲ್ಲ ತ್ಯಾಗ ಮಾಡಿ ಪುಸ್ತಕಗಳನ್ನು ಸಂಗ್ರಹಿಸಿದ ಪರಿ ಅನನ್ಯ. ಆದಿಕವಿ ಪಂಪನ ಕೃತಿಗಳಿಂದ ಹಿಡಿದು ಬೀದಿಕವಿಗಳ ಜನಪದ ಗೀತೆಗಳವರೆಗೆ, ಅಪರೂಪದ ಹಸ್ತಪ್ರತಿಗಳಿಂದ ಹಿಡಿದು ಅಳಿವಿನಂಚಿನಲ್ಲಿರುವ ಅಪರೂಪದ ದಾಖಲೆಗಳವರೆಗೆ ಅಂಕೇಗೌಡರ 'ಪುಸ್ತಕ ಮನೆ'ಯ ವ್ಯಾಪ್ತಿ ವಿಶಾಲವಾದುದು. ಇದು ಕೇವಲ ವೈಯಕ್ತಿಕ ಹವ್ಯಾಸವಲ್ಲ, ಬದಲಿಗೆ ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಭವಿಷ್ಯದ ಪೀಳಿಗೆಗೆ ದಾಟಿಸುವ ಶ್ರೇಷ್ಠಪ್ರಯತ್ನ ಕೂಡ. ಈ ಪುಸ್ತಕರಾಶಿಯ ಮೌಲ್ಯ ಹಣದಲ್ಲಿ ಅಳೆಯಲಾಗದಷ್ಟು ಅಮೂಲ್ಯವಾದುದು. ಅಂಕೇಗೌಡರ ಪುಸ್ತಕ ಭಂಡಾರವು ಕೇವಲ ಒಂದು ಕಟ್ಟಡದಲ್ಲಿ ಭದ್ರವಾದರೆ ಸಾಲದು; ಅದು ನಾಡಿನ ಜ್ಞಾನದಾಹಿಗಳಿಗೆ ಸದಾ ಮುಕ್ತವಾಗಿರುವ, ಸಂಶೋಧಕರಿಗೆ ಆಸರೆಯಾಗುವ ಜ್ಞಾನದ ಕೇಂದ್ರವಾಗಿಯೂ ರೂಪಾಂತರಗೊಳ್ಳಬೇಕು. ಸರಕಾರ ಘೋಷಿಸಿರುವ ಈ ನೆರವು ಶೀಘ್ರವಾಗಿ ಕಾರ್ಯಾನುಷ್ಠಾನ ಕಂಡು ಸಾಹಿತ್ಯ ಲೋಕಕ್ಕೆ ಕಸುವು ತುಂಬುವಂತಾಗಲಿ.

ಅಂಕೇಗೌಡರ ಸಾಧನೆಯನ್ನು ಸರಕಾರ ಗುರುತಿಸಿದ ಇದೇ ಸಂದರ್ಭದಲ್ಲಿ, ರಾಜ್ಯದ ಒಟ್ಟಾರೆ ಗ್ರಂಥಾಲಯ ವ್ಯವಸ್ಥೆಯ ದಯನೀಯ ಸ್ಥಿತಿಯತ್ತಲೂ ಗಮನಹರಿಸಬೇಕಾದ ಅನಿವಾರ್ಯತೆ ಇದೆ. ಒಂದು ಕಾಲದಲ್ಲಿ ದೇಶದಲ್ಲೇ ಸುಸಜ್ಜಿತ ಗ್ರಂಥಾಲಯ ವ್ಯವಸ್ಥೆಗೆ ಮಾದರಿಯಾಗಿದ್ದ ಕರ್ನಾಟಕದಲ್ಲಿ, ಇಂದು ಅನೇಕ ಗ್ರಂಥಾಲಯಗಳು ಶಿಥಿಲಗೊಂಡ ಕಟ್ಟಡಗಳಾಗಿ, ನಿರ್ವಹಣೆ ಇಲ್ಲದೆ ಸೊಳ್ಳೆಗಳ ತಾಣಗಳಾಗಿ ಮಾರ್ಪಟ್ಟಿವೆ. ಅನುದಾನ ಕೊರತೆ ನೆಪದಲ್ಲಿ ಪುಸ್ತಕಗಳ ಖರೀದಿಯನ್ನು ನಿಲ್ಲಿಸುತ್ತಿರುವುದು ಕನ್ನಡ ಪುಸ್ತಕೋದ್ಯಮಕ್ಕೆ ದೊಡ್ಡ ಹೊಡೆತ ನೀಡಿದೆ. ಲೇಖಕರು ತಮ್ಮ ಕೃತಿಗಳನ್ನು ಮಾರಾಟ ಮಾಡಲು ಪರದಾಡುತ್ತಿರುವ ಇಂದಿನ ದಿನಗಳಲ್ಲಿ, ಗ್ರಂಥಾಲಯಗಳ ಮೂಲಕ ಪುಸ್ತಕಗಳ ಖರೀದಿ ಪ್ರಕ್ರಿಯೆ ನಿರಂತರವಾಗಿ ನಡೆಯುವುದು ಅತ್ಯಗತ್ಯ. ಹೊಸ ತಲೆಮಾರಿನ ಓದುಗರನ್ನು ಸೆಳೆಯಲು ಗ್ರಂಥಾಲಯಗಳನ್ನು ಸಜ್ಜುಗೊಳಿಸಬೇಕಾಗಿರುವುದು ಸರಕಾರದ ಕರ್ತವ್ಯವೂ ಹೌದು.

ವಿಶೇಷವಾಗಿ ಬೆಂಗಳೂರಿನಂಥ ನಗರಗಳಲ್ಲಿ ವಾರ್ಡ್‌ಗಳ ಸಂಖ್ಯೆ ಹೆಚ್ಚಿದಂತೆ ಗ್ರಂಥಾಲಯಗಳ ಬಲವರ್ಧನೆಯೂ ಆಗಬೇಕಿತ್ತು. ಆದರೆ, ಏಕಗವಾಕ್ಷಿ ಸೇರಿದಂತೆ ಪುಸ್ತಕ ಖರೀದಿಗೆ ಸಂಬಂಧಿಸಿದ ಹಲವು ಯೋಜನೆಗಳು ಸ್ಥಗಿತಗೊಂಡಿರುವುದು ಸಾಹಿತ್ಯ ಪ್ರಪಂಚವನ್ನು ಸಂಕಷ್ಟಕ್ಕೆ ನೂಕಿದೆ. ಸರಕಾರವು ಅಂಕೇಗೌಡರಂಥ ಮಹಾನ್ ಸಾಧಕರಿಗೆ ನೆರವು ನೀಡುವ ಜತೆಗೆ, ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಗ್ರಂಥಾಲಯಗಳನ್ನು ಸಕ್ರಿಯಗೊಳಿಸುವ, ಹೊಸ ಪುಸ್ತಕಗಳನ್ನು ಖರೀದಿಸುವ ಮತ್ತು ಸಾಹಿತ್ಯ ಸಂಸ್ಕೃತಿಯನ್ನು ಪೋಷಿಸುವ ಸಮಗ್ರ ನೀತಿಯನ್ನು ಜಾರಿಗೆ ತರಬೇಕು.

ಬೋಧಿ ವೃಕ್ಷ

ಎಲ್ಲವೂ ಪರಮಾತ್ಮನ ಅಂಶವೇ

ಈ ಕೆಳಗಿನ ವಸ್ತುಗಳನ್ನು ಪರಸ್ಪರ ಹೋಲಿಸಿ, ಯಾವುದು ಶ್ರೇಷ್ಠವೆಂದು ಹೇಳಬಹುದೇ?

- ಬಂಗಾರದ ಬಳೆ, ಬಂಗಾರದ ಹಾರ ಮತ್ತು ಬಂಗಾರದ ಕಿವಿಯೋಲೆ.
- ಗುಲಾಬ್ ಜಾಮೂನು, ಹಲ್ವಾ ಮತ್ತು ಖೀರ್
- ವಿದ್ಯುದ್ದೀಪ, ಟೇಬಲ್ ಫ್ಯಾನ್ ಮತ್ತು ಮೈಕ್ರೊಫೋನ್

ನೀವು ನಿಮ್ಮ ವೈಯಕ್ತಿಕ ಆಸಕ್ತಿಗೆ ತಕ್ಕಂತೆ ಆಯ್ಕೆ ಮಾಡುತ್ತೀರಿ. ಈ ವಸ್ತುಗಳು ಆಕಾರ, ಗಾತ್ರ, ತೂಕ ಮತ್ತು ಇತರ ಭೌತಿಕ ಲಕ್ಷಣಗಳಲ್ಲಿ ವಿಭಿನ್ನವಾಗಿದ್ದರೂ, ಅವೆಲ್ಲವೂ ಒಂದೇ ಮೂಲವಾದ ಬಂಗಾರ, ಸಕ್ಕರೆ ಮತ್ತು ವಿದ್ಯುತ್‌ನಿಂದ ನಿರ್ಮಿತವಾಗಿವೆ.

ನಾವು ನೋಡುತ್ತಿರುವ ಈ ಭೌತಿಕ ಜಗತ್ತು ಇದೇ ರೀತಿಯದು. 'ದೈವತ್ವ'ವೇ ಅನೇಕ ರೂಪಗಳಲ್ಲಿ ಈ ವಿಶ್ವದಲ್ಲಿ ವ್ಯಕ್ತವಾಗಿದೆ. ಶಬ್ದ ಮತ್ತು ಬೆಳಕು ಸಂಚರಿಸುವ ಆಕಾಶ, ನಾವು ಉಸಿರಾಡುವ ಗಾಳಿ, ಎಲ್ಲವನ್ನೂ ದಹಿಸುವ ಅಗ್ನಿ, ದಾಹ ತಣಿಸುವ ಜಲ, ಎಲ್ಲರಿಗೂ ಆಶ್ರಯವಿತ್ತ ಭೂಮಿ... ಇವೆಲ್ಲವೂ ಒಂದೇ ಅಂಶದ ವಿಭಿನ್ನ ರೂಪಗಳು.

ಯಾವುದನ್ನಾದರೂ ಹೆಚ್ಚಾಗಿ ಹೊಗಳುವುದು ಅಥವಾ ತೆಗಳುವುದು ನಮ್ಮ ಅಜ್ಞಾನದ ಪ್ರಯತ್ನಗಳು. ಏಕೆಂದರೆ, ಎಲ್ಲವೂ ಮತ್ತು ಎಲ್ಲರೂ ಆ ಒಂದೇ ಸಾಮಾನ್ಯ ಅಂಶದಿಂದಲೇ ಅಸ್ತಿತ್ವದಲ್ಲಿದ್ದಾರೆಂಬ ಸತ್ಯವನ್ನು ನಾವು ಮರೆತಿರುತ್ತೇವೆ. 'ನಾನು ಇದ್ದೇನೆ' ಈ 'ನಾನು' ಎಲ್ಲರಲ್ಲಿಯೂ ಇರುವ ಶಾಶ್ವತ ಸತ್ಯ. ಉಳಿದ ಎಲ್ಲವೂ ಮಾಯೆ. ಈ ಮಾಯೆಯ ಆಚೆಗೆ ಪಾರದರ್ಶಕ ದೃಷ್ಟಿಯಿಂದ ನೋಡಿ. ಆಗ, ನೀವು ಅಚ್ಚರಿಗೊಳ್ಳುತ್ತೀರಿ.

(ಸದ್ಗುರು ಶ್ರೀ ಮಧುಸೂದನ ಸಾಯಿ, ಸತ್ಯಸಾಯಿ ಗ್ರಾಮ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ)

ವಿಕ ತಗೋ ಕನ್ನಡ

ಸರಂಗ, ಸೆರಾಂಗ್

ಇದು 'ಹುಟ್ಟುಹಾಕುವ ಹಡಗಿನಲ್ಲಿ ಸಿಬ್ಬಂದಿಯನ್ನು ನೋಡಿಕೊಳ್ಳುವ ಮುಖ್ಯಸ್ಥನ ಪದನಾಮ' – ಕನ್ನಡದ ನಿಘಂಟಿನಲ್ಲಿ ಇನ್ನೂ ದಾಖಲಾಗಿಲ್ಲ. ಫಾರಸಿಯಿಂದ ಬಂದಿರುವ ಸಾಧ್ಯತೆ ಇದೆ. ಹ್ಯಾಂಕ್ಲಿನ್ – ಜಾನ್‌ಕ್ಲಿನ್ ನಿಘಂಟು ಇದನ್ನು ಉರ್ದು ಮೂಲದ್ದು ಎಂದು ದಾಖಲಿಸುತ್ತದೆ. ರುಡ್ಯಾರ್ಡ್ ಕಿಪ್ಲಿಂಗ್ 'ದ ಲಿಮಿಟೇಷನ್ಸ್ ಆಫ್ ಪಾಂಬೆ ಸೆರಾಂಗ್' ಎಂಬ ಕಥೆಯಲ್ಲಿ 'ಸೆರಾಂಗ್'ನ ಕೆಲಸಕಾರ್ಯಗಳ ಬಗ್ಗೆ ವಿವರಗಳು ಸಿಕ್ಕುತ್ತವೆ. ಹಿಂದೆ ಚಂದಮಾಮದ 'ಸಿಂದಾಬಾದ್ ನಾವಿಕ'ನ ಕಥೆಯಲ್ಲಿ 'ಮೂವರು ಮಾಂತ್ರಿಕರು' ಧಾರಾವಾಹಿಯಲ್ಲಿ 'ಸರಂಗ' ಇರುತ್ತಿದ್ದ: ''ಕ್ರೂರನಾದ ಹಡಗಿನ 'ಸರಂಗ'ನಿಂದ ಪೀಡನೆಗೊಳಗಾಗಿದ್ದ ಗುಲಾಮರು, ಪಿಂಗಳನ ನಾಯಕತ್ವವನ್ನು ಒಪ್ಪಿದರು; ಸರಂಗನ ವಧೆಯಾಯಿತು.'' ಆಗೆಲ್ಲ ಹಿರಿಯರು ಸರಂಗನ ದುಷ್ಟತನದ ಬಗ್ಗೆ ತಿಳಿಸುತ್ತಿದ್ದರು. ಹುಟ್ಟುಹಾಕುವಾಗ ನಾವಿಕರನ್ನು ಹುರಿದುಂಬಿಸಲು 'ಹೇ ಹೋ' ಎಂದು ಕೂಗುವುದೂ ಸೆರಾಂಗ್‌ನ ಒಂದು ಕೆಲಸ. ಈ ಪದವನ್ನು ಯಾವುದಾದರೂ ಲೇಖನದಲ್ಲಿ ನೋಡಿದ ನೆನಪು ನಿಮಗಿದೆಯೇ?

– ಜಿ.ವಿ. ಅರುಣ

ಪದ ಸೂಚಿಸಿದವರು: ಅರುಣ್ ಬಿ.ಆರ್. ಅಜ್ಜಂಪುರ

ಬತ್ತಳಿಕೆ



ವಿಕ ಜೋಕ್ FALLS

ಸಂಗ್ಯಾ ಆಗಷ್ಟೇ ಮದುವೆಯಾಗಿದ್ದ. ಸಂಗಿಗೆ ಬರ್ಗರ್ ತಿನ್ನಬೇಕೆಂಬ ಆಸೆಯಾಯ್ತು. ಸಂಗ್ಯಾ ತಂದುಕೊಟ್ಟ.

ಸಂಗಿ: ಥ್ಯಾಂಕ್ಯೂ ಥ್ಯಾಂಕ್ಯೂ...

ಸಂಗ್ಯಾ: ಬರೀ ಥ್ಯಾಂಕ್ಸ್ ಅಷ್ಟೇನಾ...?

ಸಂಗಿ: (ನಾಚಿಕೆಯಿಂದ) ಹಾಗಾದ್ರೆ, ಬೇರೆ ನಿಂಗೇನು ಬೇಕು?

ಸಂಗ್ಯಾ: ಅರ್ಧ ಬರ್ಗರ್ ಕೊಡು!

ಸರಕಾರಿ ಒಡೆತನದ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸುವ ವಿಚಾರ ಈಗ ಬಹುಚರ್ಚಿತ ವಿಷಯ. ಅದರಂತೆ ಕರ್ನಾಟಕದ 15 ಜಿಲ್ಲೆಗಳಲ್ಲಿ ಈ ಜವಾಬ್ದಾರಿ ಹೊರಲು ಮುಂದಾದ 'ದಿ ಟಾಟಾ ಪವರ್' ಕಂಪನಿ ಕೆಇಆರ್‌ಸಿಗೆ ಅರ್ಜಿ ಕೂಡ ಹಾಕಿದೆ. ಆದರೆ, ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ರೈತರು, ನೌಕರರು, ಸಂಘಟನೆಗಳು ಪ್ರತಿಭಟನೆ ಹಾದಿ ತುಳಿದಿವೆ. ಹೀಗಾಗಿ, ಕೇಂದ್ರ ಸರಕಾರ ಏಕೆ ಈ ಹೆಜ್ಜೆ ಇಟ್ಟಿದೆ? ಇದರಿಂದ ಸಾಮಾನ್ಯ ಗ್ರಾಹಕನಿಗೆ ಏನೆಲ್ಲ ಹೊರೆ ಆಗಬಹುದು? ಈ ನಿಲುವಿನ ಲಾಭ–ನಷ್ಟದ ಲೆಕ್ಕ ಏನು?

ಬೆಳಕಿನ ಮಾರಾಟ



ವಿಕ ಫೋಕಸ್

ವಿದ್ಯುತ್ ಖಾಸಗೀಕರಣ... ಇದು ಅಭಿವೃದ್ಧಿಯೋ? ಗ್ರಾಹಕನಿಗೆ ಸಂಕಷ್ಟವೋ?

● ನಿಜಗುಣಿ ದಿಂಡಲಕೊಪ್ಪ

ದೇಶದಲ್ಲಿ ವಿದ್ಯುತ್ ಪೂರೈಕೆ ಸಮವರ್ತಿ ಪಟ್ಟಿಯಲ್ಲಿದೆ. ಕೇಂದ್ರಾಡಳಿತ ಪ್ರದೇಶದಲ್ಲಿ ವಿದ್ಯುತ್ ವಿತರಣೆ ವ್ಯವಸ್ಥೆಯನ್ನು ಕೇಂದ್ರ ಸರಕಾರ ನಿರ್ವಹಿಸುತ್ತಿದ್ದರೆ ಬಹುತೇಕ ರಾಜ್ಯಗಳಲ್ಲಿ ರಾಜ್ಯ ಸರಕಾರಗಳೇ ಈ ಹೊಣೆ ಹೊತ್ತಿವೆ. ಕರ್ನಾಟಕ ಸರಕಾರವು ರಾಜ್ಯದಲ್ಲಿ ರೈತರಿಗೆ, ಬಡವರಿಗೆ ಉಚಿತ ಹಾಗೂ ಕೈಗಾರಿಕೆಗಳಿಗೆ ರಿಯಾಯತಿ ದರದಲ್ಲಿ ವಿದ್ಯುತ್ ಪೂರೈಸುತ್ತಿರುವ ಈ ಸಂದರ್ಭದಲ್ಲಿ ವಿದ್ಯುತ್ ವಲಯವನ್ನು ಖಾಸಗೀಕರಣಗೊಳಿಸಿದರೆ ಬಡವರಿಗೆ, ಬೆಳೆಗಾರರ ಹೆಗಲಿಗೆ ಆರ್ಥಿಕ ಭಾರ ಬೀಳುವ ಆತಂಕವಿದೆ. ಹೀಗಾಗಿ, ಹೊರೆಯಾಗಲಿರುವ ವಿದ್ಯುತ್ ಸೌಲಭ್ಯದ ಉನ್ನತೀಕರಣ ನಮಗೆ ಬೇಡ ಎಂಬ ಧ್ವನಿ ಈಗ ಗಟ್ಟಿಗೊಳ್ಳುತ್ತಿದೆ.

ರಾಜ್ಯದಲ್ಲಿ ವಾರ್ಷಿಕ 97,334 ದಶಲಕ್ಷ ಯುನಿಟ್ ವಿದ್ಯುತ್‌ಗೆ ಬೇಡಿಕೆ ಇದೆ. ದಿನವಹಿ ಸರಾಸರಿ 267 ದಶಲಕ್ಷ ಯೂನಿಟ್ ವಿದ್ಯುತ್ ಬೇಡಿಕೆಯ ಅಂದಾಜಿದೆ. ಹೆಚ್ಚುಕಡಿಮೆ ಅದೇ ಪ್ರಮಾಣದಲ್ಲಿ ಉತ್ಪಾದನೆ ಇದೆ. ಈ ಪೈಕಿ ಶೇ. 26.47ರಷ್ಟು (25,760 ಮಿ.ಯು) ವಿದ್ಯುತ್ ಕೃಷಿ ಪಂಪ್ ಸೆಟ್‌ಗಳಿಗೆ ಹಾಗೂ ಶೇ.10ರಷ್ಟು (800–900 ದಶಲಕ್ಷ ಯುನಿಟ್) ಗೃಹಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್‌ಗೆ ಬಳಕೆ ಆಗುತ್ತಿದೆ. ಇನ್ನು ಬೀದಿದೀಪ ಹೀಗೆ ವಿವಿಧ ಯೋಜನೆಗಳಡಿ ಜನರಿಗೆ ನೀಡುತ್ತಿರುವ ವಿದ್ಯುತ್ ಬಿಲ್ ಸ್ಥಳೀಯ ಸಂಸ್ಥೆಗಳಲ್ಲಿ ಬಾಕಿ ಉಳಿಯುತ್ತಿದೆ. ಒಂದು ವೇಳೆ ವಿದ್ಯುತ್ ಕೊರತೆ ಕಂಡಲ್ಲಿ ಬ್ಯಾಂಕಿಂಗ್ ಸಿಸ್ಟಮ್ ಅಡಿಯಲ್ಲಿ ಮಾರುಕಟ್ಟೆಯಲ್ಲಿ ವಿದ್ಯುತ್ ಖರೀದಿಸಿ ಪೂರೈಸಲಾಗುತ್ತಿದೆ. ಇಂಥದ್ದರಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆ ಖಾಸಗೀಕರಣಗೊಂಡಲ್ಲಿ ಈ ಉಚಿತ ಯೋಜನೆಗಳ ಗತಿ ಏನು? ಎಂಬ ಪ್ರಶ್ನೆ ಮೂಡಿದೆ. ಪ್ರತಿ ಯುನಿಟ್ ವಿದ್ಯುತ್ ದರ ದುಬಾರಿ ಆಗುವ ಆತಂಕ ಹುಟ್ಟಿದೆ.

ಖಾಸಗೀಕರಣ ಹೊಸದೇನಲ್ಲ

ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಖಾಸಗಿ ಕಂಪನಿಗಳು ನಿರ್ವಹಿಸುತ್ತಿರುವುದು ಹೊಸದೇನಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ವಿದ್ಯುತ್ ಸಂಪರ್ಕ ಪಡೆದಿದ್ದ ದೇಶದ ಮೈಸೂರು, ಕಲ್ಕತ್ತಾ, ಹೈದರಾಬಾದ್, ದಿಲ್ಲಿ, ಬಾಂಬೆ, ಜೆಮ್‌ಷೆಡ್‌ಪುರ, ಸೂರತ್ ಸೇರಿದಂತೆ ಹಲವು ನಗರಗಳಿಗೆ ಖಾಸಗಿ ಕಂಪನಿಗಳೇ ವಿದ್ಯುತ್ ಪೂರೈಸುತ್ತಿದ್ದವು. ತದನಂತರ ಈ ಜವಾಬ್ದಾರಿಯನ್ನು ಸರಕಾರಗಳು ವಹಿಸಿಕೊಂಡಿವೆ. ಇದಾದ ಬಳಿಕವೂ 1993ರಲ್ಲಿ ಉತ್ತರಪ್ರದೇಶ, 1999 ಒಡಿಶಾ, 2002ರಲ್ಲಿ ದಿಲ್ಲಿ, 2025ರಲ್ಲಿ ಚಂಡೀಗಢನಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿ ಕಂಪನಿಗಳೇ ನಿರ್ವಹಿಸುತ್ತಿವೆ. ದೇಶದಲ್ಲಿ ಈಗ 12 ಖಾಸಗಿ ಕಂಪನಿಗಳು ಕಾರ್ಯೋನ್ಮುಖವಾಗಿವೆ. ಈ ವ್ಯವಸ್ಥೆಯಿಂದ ಹಲವು ರಾಜ್ಯಗಳಲ್ಲಿ ನಷ್ಟದ ಪ್ರಮಾಣ ತಗ್ಗಿದೆ ಎಂಬ ಅಂಶ ಉಲ್ಲೇಖಿಸಿ ಈಗ ಕೇಂದ್ರ ಸರಕಾರ ಕರ್ನಾಟಕದ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಖಾಸಗಿಯವರಿಗೆ ನೀಡುತ್ತಿದೆ ಎಂಬುದು ಚರ್ಚೆಯ ಮೂಲವಾಗಿದೆ.

ಭರ್ತಿಯಾಗದ ಖಾಲಿ ಹುದ್ದೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಸ್ಥಿತಿ ಅವಲೋಕಿಸಿದಾಗ ಮತ್ತೊಂದು ಮಗ್ಗುಲಿನ ಚರ್ಚೆಗಳು ಮುಗುಳೊಡೆಯಲಿವೆ. ಇಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಯೂ ಸಾಧ್ಯ ಆಗುತ್ತಿಲ್ಲ. ಹೀಗಾಗಿ ಅಭಿವೃದ್ಧಿ ನಿರೀಕ್ಷೆ ಸಾಧ್ಯವೇ ಎಂಬ ಪ್ರಶ್ನೆಯೂ ಮೂಡಲಿದೆ. ಹಾಗೆಯೇ ರಾಜ್ಯದ 5 ವಿದ್ಯುತ್ ಸರಬರಾಜು ಕಂಪನಿಗಳು 2026 ಜನವರಿ ಅಂತ್ಯದವರೆಗೆ ಒಟ್ಟು 42,750 ಕೋಟಿ ರೂ. ದೀರ್ಘಾವಧಿ ಸಾಲದ ಹೊರೆ ಹೊತ್ತುಕೊಂಡಿವೆ. ಪರಿಣಾಮ ಮೂಲಸೌಲಭ್ಯ ಕಲ್ಪಿಸಲು ಸಾಧ್ಯ ಆಗುತ್ತಿಲ್ಲ. ಇದೂ ಸರಕಾರದ ಚಿತ್ತವನ್ನು ಖಾಸಗೀಕರಣಗೊಳಿಸುವ ನಿಲುವಿನತ್ತ ಹೊರಳಿಸಿರಬಹುದು. ನಗರಾಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳು ಬೀದಿಸ್ಥಾವರಗಳಿಗೆ ಹಾಗೂ ಇತರ ಇಲಾಖೆಗಳು ಸರಕಾರಿ ಕಚೇರಿಗಳಿಗೆ ವಿದ್ಯುತ್ ಪೂರೈಸಿದ ಸರಬರಾಜು ಕಂಪನಿಗಳಿಗೆ 12 ಸಾವಿರ ಕೋಟಿ ರೂ. ಬಿಲ್ ಬಾಕಿ ಉಳಿಸಿಕೊಂಡಿವೆ. ಹೀಗಾಗಿ, 'ನೆಲಕ್ಕೆ ಬಿದ್ದವರ ನೆತ್ತಿಗೊಂದು ಕಲ್ಲು' ಎಂಬಂತೆ ವಿದ್ಯುತ್ ಸರಬರಾಜು ಕಂಪನಿಗಳು ನಷ್ಟದ ಸುಳಿಯಿಂದ ದಾಟುತ್ತಲೇ ಇಲ್ಲ. ಎಲ್ಲ ಇಲಾಖೆಗಳು ಬಾಕಿ ಬಿಲ್ ಪಾವತಿಸಿ ದುಂದುವೆಚ್ಚ ನಿಯಂತ್ರಿಸಿದರೆ ವಿದ್ಯುತ್ ಪೂರೈಕೆ ಸರಕಾರದ ಅಧೀನದಲ್ಲಿರುವುದೇ ಉತ್ತಮ.

ಕರ್ನಾಟಕ ವಿದ್ಯುತ್ ಕಾಯಿದೆ– 2003ರ ಸೆಕ್ಷನ್ 14 ಮತ್ತು 15ರ ಅಡಿ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಖಾಸಗಿಯವರಿಗೆ ನೀಡಲು ಅವಕಾಶ ಇದೆ. ಆದರೆ, ಇದರ ಪೂರ್ವಾಪರ ಚರ್ಚೆಗಳ ಅಗತ್ಯತೆ ಇದೆ. ಇಲ್ಲಿ ಬಡ ಗ್ರಾಹಕರ ಜತೆಗೆ ಕರ್ತವ್ಯನಿರತ 52 ಸಾವಿರ ನೌಕರರ ಬಗ್ಗೆಯೂ ಚಿಂತನೆ ಅಗತ್ಯವಿದೆ. ಖಾಸಗೀಕರಣ ಕೃಷಿವಲಯದ ಮೇಲೆ ಪರಿಣಾಮ ಬೀರಬಹುದೇ ಎಂಬುದನ್ನೂ ಅವಲೋಕಿಸಬೇಕಿದೆ. ಇಲ್ಲದಿದ್ದರೆ ರಸ್ತೆಗೆ ಮಿತಿಮೀರಿದ ಟೋಲ್ ನಂತೆಯೇ ವಿದ್ಯುತ್ ದರವೂ ಹೆಚ್ಚಬಹುದುದೇನೋ?

ಯಾವ ಜಿಲ್ಲೆ ಪರವಾನಗಿಗೆ ಅರ್ಜಿ?

ಧಾರವಾಡ, ಬೆಂಗಳೂರು ಗ್ರಾಮೀಣ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಮೈಸೂರು, ಚಾಮರಾಜನಗರ, ಹಾಸನ, ಬೆಳಗಾವಿ ಉತ್ತರಕನ್ನಡ.

ರಾಜ್ಯದ ಪ್ರಮುಖ ವಿದ್ಯುತ್ ಮೂಲಗಳು

(2025 ಏಪ್ರಿಲ್‌ನಿಂದ 2026 ಜನವರಿ ವರೆಗೆ)

ವಿದ್ಯುತ್ ಮೂಲ	ದಶಲಕ್ಷ ಯುನಿಟ್‌ನಲ್ಲಿ
ಜಲವಿದ್ಯುತ್	13,168
ಉಷ್ಣವಿದ್ಯುತ್	15,650
ಪವನ ವಿದ್ಯುತ್	9,722
ಸೌರ ವಿದ್ಯುತ್	9,556
ಕೇಂದ್ರ ಸರಕಾರ ಸ್ವಾಮ್ಯದ ಉತ್ಪಾದನಾ ಘಟಕಗಳಲ್ಲಿನ ರಾಜ್ಯ ಪಾಲು	22,067
ಒಟ್ಟು	81,758

ಎಲ್ಲಿ?	ಎಷ್ಟು	ಸಿಬ್ಬಂದಿ?
ಸಂಸ್ಥೆ	ಮಂಜೂರಾತಿ	ಕರ್ತವ್ಯನಿರತರು
ಕವಿಪ್ರನಿನಿ	16,301	9,687
ಬೆಸ್ಕಾಂ	24,603	13,433
ಸೆಸ್ಕ್	10,402	6,284
ಮೆಸ್ಕಾಂ	9,247	5,210
ಹೆಸ್ಕಾಂ	16,894	10,297
ಜೆಸ್ಕಾಂ	10,197	7,340
ಒಟ್ಟು	87,644	52,251

ಖಾಸಗೀಕರಣ ವಿರೋಧಕ್ಕೆ ನೀಡುವ ಕಾರಣಗಳು

- ಖಾಸಗಿ ಕಂಪನಿಗಳೊಂದಿಗೆ ಪೈಪೋಟಿ ನಡೆಸಲು ಇಂಧನ ಇಲಾಖೆಗೆ ಸಾಧ್ಯವಿಲ್ಲ. ಹೀಗಾಗಿ ಜಿಯೊ–ಏರ್‌ಟೆಲ್ ಪೈಪೋಟಿಯಿಂದ ಬಿಎಸ್‌ಎನ್‌ಎಲ್ ಸ್ಥಿತಿ.
- ನೀರಾವರಿ ಐಪಿ ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಖಾಸಗೀಕರಣದಿಂದ ಅದು ವ್ಯಾಪಾರೀಕರಣವಾಗಿ ಮೀಟರ್ ಅಳವಡಿಸಲಾಗುತ್ತದೆ. ಅನ್ನದಾತರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದ್ದಾರೆ.
- ಗೃಹಜ್ಯೋತಿ ಮೂಲಕ ಪ್ರತಿ ಮನೆಗೆ 200 ಯುನಿಟ್ ವರೆಗೂ ಉಚಿತ ವಿದ್ಯುತ್ ಸಿಗುತ್ತಿದೆ. ಹಿಂದೆ ಭಾಗ್ಯಜ್ಯೋತಿ ಇತ್ತು. ವಿದ್ಯುತ್ ವಿತರಣೆ ಖಾಸಗಿಯಾದರೆ ಸರಕಾರ ಸಬ್ಸಿಡಿ ಸಿಕ್ಕಿಲ್ಲವೆಂದು ಸಂಪರ್ಕ ಕಡಿತ ಆಗಲಿದೆ.
- ವಿದ್ಯುತ್ ವಿತರಣೆ ಜವಾಬ್ದಾರಿಯೊಂದಿಗೆ ಖಾಸಗಿ ಕಂಪನಿಗಳು ವಿದ್ಯುತ್ ಉತ್ಪಾದನೆ, ಸಾಗಣೆಯಲ್ಲೂ ಹಸ್ತಕ್ಷೇಪ ಮಾಡಲಿವೆ. ಎಐನಂಥ ತಂತ್ರಜ್ಞಾನ ಬಳಸಿ ಅಲ್ಲಿರುವ 52 ಸಾವಿರ ಸರಕಾರಿ ನೌಕರರನ್ನು ತೆಗೆದು ಹಾಕಲಿದೆ.
- ಬೀದಿದೀಪಗಳಿಗೆ ಪೂರೈಸಿದ ವಿದ್ಯುತ್ ಬಿಲ್‌ಗಳನ್ನು ಸ್ಥಳೀಯ ಸಂಸ್ಥೆಗಳು ತುಂಬುತ್ತಿಲ್ಲ. ಖಾಸಗಿ ಕಂಪನಿಯಿಂದ ಈ ವಿನಾಯಿತಿ ಸಿಗಲಾರದು. ಒಂದು ದಿನ ವಿಳಂಬವಾದರೂ ಬೀದಿದೀಪ ಸಂಪರ್ಕ ಸ್ಥಗಿತಗೊಳ್ಳಲಿದೆ.
- ಖಾಸಗಿ ಕಂಪನಿಗಳು ಸರ್ವಿಸ್ ಚಾರ್ಜ್, ಇತರೆ ಶುಲ್ಕ ಹೆಸರಿನಲ್ಲಿ ಹೆಚ್ಚುವರಿ ಶುಲ್ಕ ಆಕರಣೆ ಮಾಡಲಿವೆ. ಈಗ ಮುಂಬಯಿ ನಗರದಲ್ಲಿ ಈ ಸ್ಥಿತಿ ಇದೆ. ದೊಡ್ಡಪ್ರಮಾಣದ ಸೆಕ್ಯೂರಿಟಿ ಡಿಪಾಸಿಟ್ ಪಡೆಯಲಾಗುತ್ತಿದೆ.
- ಖಾಸಗೀಕರಣದ ಹುಚ್ಚು ನೋಡಿದರೆ, ಸರಕಾರ ಏಕೆ ಬೇಕು ಎಂಬ ಪ್ರಶ್ನೆ ಮೂಡಲಿದೆ. ರಸ್ತೆಗಳನ್ನು ನಿರ್ಮಿಸಿದ ಖಾಸಗಿ ಕಂಪನಿಗಳು ಈಗ ಟೋಲ್ ರೂಪದಲ್ಲಿ ಹಣ ಕೀಳುತ್ತಿವೆ. ಇದು ವಿದ್ಯುತ್ ವ್ಯವಸ್ಥೆಗೂ ಬರಲಿದೆ.

ಖಾಸಗಿ ಕಂಪನಿಗೆ ಏಕೆ ಕೊಡಬೇಕು?

- ವಿದ್ಯುತ್ ಸರಬರಾಜು ಸಂಸ್ಥೆಗಳು ಈಗ ನಷ್ಟದಲ್ಲಿವೆ. ಇದರಿಂದ ಹೊಸ ಮಾರ್ಗಗಳ ಸೃಷ್ಟಿ ಕಷ್ಟವಾಗಿ ವಿದ್ಯುತ್ ವಿತರಣೆ ಮೇಲೆ ಪರಿಣಾಮ ಬೀರುತ್ತಿದೆ.
- ವಿದ್ಯುತ್ ಪೂರೈಕೆ ಖಾಸಗಿಯವರಿಗೆ ನೀಡಿದರೆ ಸೋರಿಕೆ ತಡೆಗಟ್ಟಬಹುದು. ವಿದ್ಯುತ್ ಮಾರ್ಗಗಳು ಆಧುನೀಕರಣಗೊಂಡು ಗ್ರಾಹಕರಿಗೆ ಉತ್ತಮ ಸೇವೆ ಸಿಗಲಿದೆ.
- ಯಾರೋ ಒಂದಿಷ್ಟು ಜನ ಅಥವಾ ಸರಕಾರದ ಇಲಾಖೆಗಳು ಬಿಲ್ ಪಾವತಿಸದ್ದರಿಂದ ನಷ್ಟದ ಹೊರೆ ಬೀಳುತ್ತಿದೆ. ಖಾಸಗಿ ಕಂಪನಿಗಳಿಂದ ಶುಲ್ಕ ವಸೂಲಾತಿ ಹೆಚ್ಚಲಿದೆ.
- ಪ್ರಸ್ತುತ ವ್ಯವಸ್ಥೆಯಲ್ಲಿ ಸರಕಾರ ಪ್ರತಿಯೊಂದಕ್ಕೂ ಹಣ ನೀಡುವ ಸ್ಥಿತಿ ಇದೆ. ವಿದ್ಯುತ್ ಪೂರೈಕೆಯಲ್ಲಿ ಆರ್ಥಿಕ ಸ್ಥಿರತೆ ಬಂದರೆ ಸರಕಾರ ಮೇಲಿನ ಹೊರೆಯು ಕಡಿಮೆ ಆಗಲಿದೆ.
- ವಾಸ್ತವ ವೆಚ್ಚ ಹಾಗೂ ವರಮಾನ ಸಂಗ್ರಹದ ನಡುವಿನ ಅಂತರ ಕಡಿಮೆ ಆಗಿ ವಿದ್ಯುತ್ ದರ ಕಡಿಮೆ ಆಗಲಿದೆ ಎಂಬ ಭರವಸೆ.

ಖಾಸಗಿ ಕಂಪನಿಗಳು ಲಾಭ ನೋಡುತ್ತವೆ. ಹೀಗಾಗಿ. ಈಗ ಅವು ಹಿಂದುಳಿದ ಜಿಲ್ಲೆಗಳನ್ನು ಬಿಟ್ಟು ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ಜವಾಬ್ದಾರಿ ಹೊತ್ತುಕೊಳ್ಳಲು ಮುಂದೆ ಬಂದಿವೆ. ವಿದ್ಯುತ್ ಪೂರೈಕೆ ಖಾಸಗೀಕರಣಗೊಂಡರೆ ಅನುದಾನ ಬಂದಿಲ್ಲ ಎಂದು ಉಚಿತ ಯೋಜನೆಗಳು ನಿಲ್ಲುವ ಆತಂಕ ಇದೆ. ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಿ ಉಚಿತ ವಿದ್ಯುತ್ ನಿಲ್ಲಿಸಲಾಗುತ್ತದೆ. ಅಷ್ಟೇ ಏಕೆ, ಮುಂಬಯಿನಂಥ ನಗರಗಳಲ್ಲಿ ಖಾಸಗಿ ಕಂಪನಿಯವರು ವಿಧಿಸುತ್ತಿರುವ ವಿದ್ಯುತ್ ಶುಲ್ಕಕ್ಕೂ ಕರ್ನಾಟಕದ ಈಗಿನ ಶುಲ್ಕಕ್ಕೂ ಭಾರಿ ವ್ಯತ್ಯಾಸ ಇದೆ. ಸರಕಾರ ಈ ವಿಚಾರದಲ್ಲಿ ಎಚ್ಚೆತ್ತುಕೊಳ್ಳದಿದ್ದರೆ ಇಂಧನ ಇಲಾಖೆಗೂ ಬಿಎಸ್‌ಎನ್‌ಎಲ್ ಸ್ಥಿತಿ ಬರಲಿದೆ. ಉದ್ಯೋಗ ಕಡಿತ ಆಗಲಿದೆ.

– ದೇವಪ್ಪ ಕೋರಿ ಹೆಸ್ಕಾಂ, ಜ್ಯೂ. ಎಂಜಿನಿಯರ್

nijaguni.dindalkoppa@timesofindia.com

ಕಾಕ್ರೋಚ್ ಇನ್ ದ ಕಿಚನ್ ಆ್ಯಂಡ್ ದ ನೇಷನ್

■ ಶಿವಕುಮಾರ ಮಾವಲಿ



'ಅವಿತಿರುವ ಒಂದು ಜಿರಳೆಯೂ ಅಪಾಯಕಾರಿಯಾಗಬಲ್ಲದು' ಎಂಬ ಜಿರಳೆಗಳನ್ನು ಕೊಲ್ಲಲು ಸಿಂಪಡಿಸುವ ಔಷಧಿ 'ಹಿಟ್'ನ ಜಾಹೀರಾತಿನಲ್ಲಿ ಬರುವ ಈ ಸಾಲನ್ನು ನಾವೆಲ್ಲ ಕೇಳಿಸಿಕೊಂಡಿರುತ್ತೇವೆ. ಬೆಳಗ್ಗೆ ಎದ್ದು ಬಂದಾಗ ಅಡುಗೆಮನೆಯಲ್ಲಿ ನಮ್ಮನ್ನು ಸ್ವಾಗತಿಸುವ ಜಿರಳೆಗಳ ಸಂಖ್ಯೆಯೂ ಕಮ್ಮಿಯೇನಿಲ್ಲ. ಜಿರಳೆಗಳನ್ನು ಉಪದ್ರವಿಗಳೆಂದು ಭಾವಿಸುತ್ತಿದ್ದ ಹೊತ್ತಿನಲ್ಲಿ, ನ್ಯಾಯಮೂರ್ತಿಗಳ ಒಂದು ಹೇಳಿಕೆ ದೇಶಾದ್ಯಂತ ಕಿಡಿ ಹೊತ್ತಿಸಿ, ಒಂದು ಆಂದೋಲನವಾಗುವ, ಒಂದು ಪಕ್ಷವೆಂದು ಕರೆದುಕೊಳ್ಳುವ ಹಂತಕ್ಕೆ ಹೋಗಿದೆ. ಈ ವಿದ್ಯಮಾನಗಳಿಂದಾಗಿ ಜಿರಳೆ ಎಂಬುದು ಒಂದು ಹೊಸ 'ರೂಪಕ'ವಾಗಿ (metaphor) ಕಾಣತೊಡಗಿದೆ. ಕೇವಲ ಋಣಾತ್ಮಕವಾಗಿ ಕಾಣುತ್ತಿದ್ದ ಕಾಕ್ರೋಚ್‌ಗಳು ರಸ್ತೆಗಿಳಿದು ಸಕಾರಣವಾಗಿ ಸರಕಾರದ ವಿರುದ್ಧ ಪ್ರತಿಭಟಿಸುತ್ತಿರುವುದನ್ನು ಕಂಡಾಗ ಇಂಗ್ಲಿಷ್ ಭಾಷೆಯಲ್ಲಿ ಕಾಕ್ರೋಚ್‌ಗಳ ಸುತ್ತ ಇರುವ idiom ಗಳು ನೆನಪಾಗುತ್ತಿವೆ.

"Cockroach in the kitchen" ಎಂಬುದು ಇದರಲ್ಲಿ ಮೊದಲನೆಯದ್ದು. ಇದರರ್ಥ A hidden, obvious or lingering problem that everyone notices but no one wants to talk about ಎಂದಾಗುತ್ತದೆ. ನುಡಿಗಟ್ಟುಗಳು ಸಾಮಾನ್ಯವಾಗಿ ಎಲ್ಲರೂ ಒಪ್ಪಿತ ತತ್ವಗಳಾಗಿರುತ್ತವೆ ಎಂಬುದು ಎಲ್ಲಾ ಭಾಷೆಗಳಿಗೆ ಅನ್ವಯ. ಗಾದೆಗಳಂತೆಯೇ ನುಡಿಗಟ್ಟುಗಳೂ idiomatic expression of a reality ಆಗಿರುತ್ತವೆ. ಈ ದೃಷ್ಟಿಯಲ್ಲಿ ಯೋಚಿಸಿದಾಗ ಸದ್ಯಕ್ಕೆ 'ಸಿಜೆಪಿ' ಹುಟ್ಟಿಕೊಂಡಿರುವುದು ನೀಟ್ ಪರೀಕ್ಷೆಯಲ್ಲಾದ ಅಕ್ರಮದ ವಿರುದ್ಧ ಮತ್ತು ಪದವೀಧರರಿಗೆ ಸೂಕ್ತ ಉದ್ಯೋಗಾವಕಾಶಗಳನ್ನು ಒದಗಿಸಲು ಸಾಧ್ಯವಾಗದ ವ್ಯವಸ್ಥೆಯ ವಿರುದ್ಧ. ಆ ವ್ಯವಸ್ಥೆ ಸಹಜವಾಗಿ ಸರಕಾರವೇ ಆಗಿರುತ್ತದೆ. ದೇಶದಲ್ಲಿ ಕಳೆದ ಒಂದು ದಶಕದಲ್ಲಿ ಸೋರಿಕೆಯಾದ ಪ್ರಶ್ನೆಪತ್ರಿಕೆಗಳ ಸಂಖ್ಯೆ 80ರಿಂದ 90 ಎನ್ನುವ ಅಂಕಿ ಅಂಶಗಳಿವೆ. ಕೇವಲ ಕರ್ನಾಟಕ ಒಂದರಲ್ಲೇ ನಡೆದ ನೇಮಕಾತಿ ಪರೀಕ್ಷೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಹತ್ತಾರು ಬಾರಿ ಪತ್ರಿಕೆ ಸೋರಿಕೆಯಾದದ್ದನ್ನು ನಾವು ಕಂಡಿದ್ದೇವೆ. ಯಾವ ಪಕ್ಷದ ಸರಕಾರವಿದ್ದರೂ ಈ ಅಕ್ರಮ ಕಟ್ಟಿಟ್ಟಬುತ್ತಿ ಎನ್ನುವಂತಾಗಿದೆ.

ಆದರೆ, ಈ ಪರೀಕ್ಷೆಗಳಿಗೆ ವರ್ಷಾನುಗಟ್ಟಲೆ ತಯಾರಿ ನಡೆಸಿದ ವಿದ್ಯಾರ್ಥಿಗಳ ಮತ್ತು ಅವರ ಪೋಷಕರ ಮನಸ್ಸಲ್ಲಿ ಈ ಹಗರಣಗಳು ಸೃಷ್ಟಿಸುವ ತಲ್ಲಣಗಳು ಮಾತ್ರ ತುಂಬಾ ಭಯಾನಕ. ಕೆಲವೊಮ್ಮೆ ಆತ್ಮಹತ್ಯೆಯಲ್ಲೂ ಕೊನೆಗೊಂಡ ನಿದರ್ಶನಗಳಿವೆ. ಇವನ್ನೆಲ್ಲ ಎಷ್ಟೋ ವರ್ಷಗಳಿಂದ ತೀರಾ ಸಹಜವೆಂಬಂತೆ 'ಎಲ್ಲರಿಗೂ ಗೊತ್ತಿರುವ' ಆದರೆ ಯಾರೂ ಏನೂ ಮಾಡಲಾಗದ ಸ್ಥಿತಿಯಲ್ಲಿದ್ದ ಈ ಸಮಸ್ಯೆಯನ್ನೇ ಮುಂದಿಟ್ಟುಕೊಂಡು 'ಜೆನ್‌ಜಿ' ಯುವ ಸಮುದಾಯ ಬೀದಿಗಿಳಿದಿದೆ. ಡಿಜಿಟಲ್ ನೇಟಿವ್ಸ್ ಆಗಿರುವ ಈ ಸಮುದಾಯಕ್ಕೆ ಸಾಂಪ್ರದಾಯಿಕ ರಾಜಕೀಯ ಪಟ್ಟುಗಳು ನಾಟುವುದಿಲ್ಲ ಎಂಬುದನ್ನು ಆದಷ್ಟು ಬೇಗ ಆಳುವವರು ಅರಿಯಬೇಕಿದೆ. ಜಾತಿ– ಧರ್ಮ ಮತ್ತು ಲಿಂಗಾಧಾರಿತ ವಿಭಜನೆಯನ್ನು ನೋಡಿ ಈ ಸಮೂಹ ಬೇಸತ್ತಿದೆ. ಜಗತ್ತನ್ನು ತನ್ನ ಕೈಬೆರಳುಗಳಲ್ಲಿ ಹೊಂದಿರುವ ಅವರಿಗೆ ಪ್ರಸ್ತುತ ಇರುವ ರಾಜಕೀಯ ವ್ಯವಸ್ಥೆಯ ಬಗ್ಗೆ ಸಂಪೂರ್ಣ ಅರಿವಿದೆ. ಎಲ್ಲವನ್ನೂ ಆ ಸಮೂಹ ಕೂಲಂಕಷವಾಗಿ ಗಮನಿಸುತ್ತಿದೆ. ಮೊದಲು I am a cockroach ಎಂದು ಆನ್‌ಲೈನ್‌ನಲ್ಲಿ ಹೇಳಿದಾಗ ಇದು ಕೇವಲ ಮೂರು ದಿನ ವೈರಲ್ ಆಗಿ ಮಾಯವಾಗುವ ಕ್ರಾಂತಿ ಮಾತ್ರ ಎಂದುಕೊಂಡೆವು. ಆದರೆ, ಡಿಜಿಟಲ್ ಪ್ಲಾಟ್‌ಫಾರಂಗಳನ್ನು ಬಳಸಿ 'ಅಭಿಪ್ರಾಯ ರೂಪಿಸುವುದು' ಈ ಸಮೂಹಕ್ಕೆ ಬಹಳ ಸುಲಭದ ಕೆಲಸ. ನಮ್ಮ ರಾಜಕೀಯ ಪಕ್ಷಗಳೂ ತಂತಮ್ಮ ಐಟಿ ಸೆಲ್ ಮತ್ತು ಪೇಜ್ ಹ್ಯಾಂಡಲ್‌ಗಳಿಂದ ಚುನಾವಣೆಯ ಸಮಯಗಳಲ್ಲಿ ಹೇಗೆ ಜನಾಭಿಪ್ರಾಯ ರೂಪಿಸಿಕೊಳ್ಳುತ್ತವೆ ಎಂಬುದನ್ನು ಮರೆಯಬಾರದು. ಅವರ ಬೇಡಿಕೆಯಲ್ಲಿ ತಪ್ಪಿಲ್ಲದ ಕಾರಣ ನಾವು ಅವರ ಜತೆ ನಿಲ್ಲಬಹುದು. ಆದರೆ, ಕೇವಲ ರಾಜಕೀಯ ಪಕ್ಷಗಳಲ್ಲಿ

ವಿಕ ಪ್ರಸ್ತುತ

ಹರಿದು ಹಂಚಿ ಹೋಗಿರುವ ಜನರು ಇದನ್ನು ರಾಜಕೀಯ ಉದ್ದೇಶದಿಂದ ಮಾತ್ರ ನೋಡಿದಾಗ ಈ ಜಿರಳೆಗಳನ್ನು ಮೂದಲಿಸುವ, ಹೀಯಾಳಿಸುವ, ಹಿಮ್ಮೆಟ್ಟಿಸುವ, ಹಲ್ಲೆ ಮಾಡುವ ಮನಸ್ಸಾಗುತ್ತದೆ. ಆದರೆ, ಒಂದು ದಿನ ಈ ಜಿರಳೆಗಳು ಈ ದೇಶದ ಯಾವುದೇ ವ್ಯವಸ್ಥೆಯನ್ನು ನಿರ್ಧರಿಸಬಲ್ಲ ಶಕ್ತಿ ಹೊಂದುತ್ತಾರೆ ಎಂಬುದನ್ನು ಮರೆಯುವಂತಿಲ್ಲ. ಈ ಆಂದೋಲನದ ಹಿನ್ನೆಲೆಯಲ್ಲಿ 'ಜಿರಳೆ'ಗಳಿಗೆ ಸಂಬಂಧಿಸಿದ ಇನ್ನಷ್ಟು ಐಭಜಿಟಿಣಗಳನ್ನು ನೋಡೋಣ. ಕಾಕತಾಳೀಯವೆಂಬಂತೆ ಈ ನುಡಿಗಟ್ಟುಗಳು ಸಿಜೆಪಿಯ ವಿದ್ಯಮಾನಗಳಿಗೂ ಹೊಂದಿಕೆಯಾಗಬಲ್ಲವು.

- **As tough as a cockroach:** ಇದರ ಅರ್ಥ tough to defeat ಮತ್ತು exceptionally durable. ಈ ಜಿರಳೆಗಳು ಕೇವಲ ಡಿಜಿಟಲ್ ಲೋಕಕ್ಕೆ ಸೀಮಿತವಾಗಿ ಕಣ್ಮರೆಯಾಗುತ್ತವೆ ಎಂದುಕೊಳ್ಳಲಾಗದು ಹಾಗೂ ಮುಂದೊಂದು ದಿನ ಅವುಗಳನ್ನು ಮಣಿಸುವುದು ಕಷ್ಟವಾಗಬಹುದು. ಅಷ್ಟು ಸುಲಭವಾಗಿ ಸೋಲೊಪ್ಪುವ ಜಿರಳೆಗಳಲ್ಲ ಇವು ಎಂಬ ರೂಪಕವಿರಬಹುದು.
- **Cockroach problem:** ಇದರ ಅರ್ಥ a recurring, difficult-to-kill issue that keeps coming back. ಈಗ ಈ ಜಿರಳೆಗಳು ದನಿಯೆತ್ತಿರುವ ಸಮಸ್ಯೆಗಳು ಕೂಡ ಎಷ್ಟೋ ವರ್ಷಗಳಿಂದ ಪರಿಹಾರ ಕಾಣದ ಸಮಸ್ಯೆಗಳಾಗಿಯೇ ಉಳಿದಿರುವುದು ಸತ್ಯ. ಮರುಕಳಿಸುವ ಈ ಸಮಸ್ಯೆಗಳಿಗೆ ನಮ್ಮ ಸದ್ಯದ ವ್ಯವಸ್ಥೆ ಯಾವುದೇ ಕಠಿಣ ಕ್ರಮ ಕೈಗೊಳ್ಳದೆ ಇರುವುದೇ ಈ ಆಂದೋಲನಕ್ಕೆ ಕಾರಣ ಎನ್ನಬಹುದು.
- **Scatter like cockroaches:** ಇದರ ಅರ್ಥ ಸರಕಾರ ಅಥವಾ ಪ್ರಬಲ ವ್ಯಕ್ತಿಯಿಂದ ಬರುವ ಬೆದರಿಕೆಗೆ ಹೆದರಿ ಓಡಿ ಹೋಗುವುದು ಎಂದು. ಒಂದು ವೇಳೆ ಈಗ ಶುರುವಾಗಿರುವ cockroach movement ಅಥಾರಿಟಿ ಗೋ ಅಥವಾ ಯಾರೋ ರಾಜಕೀಯ ನಾಯಕನಿಗೋ ಹೆದರಿ ಹಿಮ್ಮೆಟ್ಟಿದರೆ ಈ ಜಿರಳೆಗಳ ವಿಷಯದಲ್ಲಿ ಇದೇ ನಿಜವಾಗಿಬಿಡುತ್ತದೆ.
- **The cockroach effect:** ಒಂದು ಹೂತು ಹೋಗಿದ್ದ ಸಮಸ್ಯೆ ಹೊರ ಬಂದ ನಂತರ ಸಾಲಾಗಿ ಅಂಥ ಅನೇಕ ಸಮಸ್ಯೆಗಳು ಹೊರಬಂದು ಕಾಣಿಸಿಕೊಳ್ಳುವುದು ಎಂಬುದು ಈ ನುಡಿಗಟ್ಟಿನ ಅರ್ಥ. ಈ ಜಿರಳೆಗಳಿಂದಲೂ ಅಂಥ ಅನೇಕ ಸಮಸ್ಯೆಗಳು ಅನಾವರಣಗೊಳ್ಳುವುದನ್ನು ನಿರೀಕ್ಷಿಸಬಹುದೆ?
- **To have the cockroach:** ಇದರ ಅರ್ಥ being melancholic ಅಥವಾ ಖಿನ್ನತೆಗೆ ಜಾರುವುದು ಎಂದು. ಹಾಗೆ ಖಿನ್ನತೆಗೆ ಜಾರಿದ ಮತ್ತು ನೊಂದ ಜಿರಳೆಗಳೇ ಇಂದು ಬೀದಿಗಿಳಿದಿರುವುದು.
- **Cockroach theory:** ಇದೊಂದು ಬ್ಯುಸಿನೆಸ್ ಸಂಬಂಧಿತ ನುಡಿಗಟ್ಟು, ಒಂದು ಕಂಪನಿ ಆರ್ಥಿಕ ನಷ್ಟ ಅನುಭವಿಸಿದರೆ ತನ್ನ ಸ್ಪರ್ಧಿಗಳೂ ಅಂಥದ್ದೇ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ ಎಂದು ಈ ಥಿಯರಿ ಹೇಳುತ್ತದೆ. ನಮ್ಮ ಈ ಜಿರಳೆಗಳಿಗೆ ನಾವು 'ಹಿಟ್' ಹಾಕಿ ಹೊಡೆಯುತ್ತೇವೆ ಎಂದು ಮೂದಲಿಸಿದರೆ ನಾಳೆ ನಮಗೂ ಅದೇ ಸ್ಥಿತಿ ಬಂದರೆ ಗತಿಯೇನು?
- **As sound as a roach:** ಇದರ ಅರ್ಥ to be in excellent health and vitality. ನಮ್ಮ ಈ ಯುವ ಜಿರಳೆಗಳೂ young and energetic ಆಗಿದ್ದು, ಆರೋಗ್ಯಕರವಾಗಿವೆ ಎಂಬುದು ಅವರ ಆಂದೋಲನದ ಧನಾತ್ಮಕ ಅಂಶ.
- **Survive like a cockroach:** ಎಂಥದ್ದೇ ಕಷ್ಟದ, ಕಠಿಣ ಪರಿಸ್ಥಿತಿಯನ್ನಾದರೂ ಎದುರಿಸಿ ಅಸ್ತಿತ್ವ ಉಳಿಸಿಕೊಳ್ಳಬಲ್ಲ ಛಾತಿ ಜಿರಳೆಗಳಿಗಿದೆ ಎಂದು ಹೇಳುವ ಈ idiom ನಂತೆಯೇ 'ಸಿಜೆಪಿ' ಆಂದೋಲನದ ಜಿರಳೆಗಳಿಗೂ ಆ ಶಕ್ತಿ ಪ್ರಾಪ್ತವಾಗಲಿ. ಇದು ಮತ್ತೊಂದು ರಾಜಕೀಯ ಪ್ರಹಸನವಾಗದೆ ನಿಜಕ್ಕೂ Cockroach in the kitchen ಜತೆಗೆ ದೇಶದ ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ cockroach in the nation ಕೂಡ ಆಗಲಿ ಎಂದು ಆಶಿಸಬಹುದು. ಆ ಅರ್ಥದಲ್ಲಿ ನಿಜಕ್ಕೂ ಅವಿತಿರುವ ಒಂದು ಜಿರಳೆಯೂ ಭ್ರಷ್ಟ ಮತ್ತು ಜಡ್ಡುಗಟ್ಟಿದ ವ್ಯವಸ್ಥೆಗೆ ಅಪಾಯಕಾರಿಯಾಗಬಲ್ಲದು.

(ಲೇಖಕರು: ಕತೆಗಾರರು ಹಾಗೂ ಉಪನ್ಯಾಸಕರು)

ವಾಚಕರ ವಿಜಯ

ಬಿಟ್ಟರೂ ಬಿಡದೀ ಗೊಂದಲ

ಬಿಡದಿ ಟೌನ್‌ಶಿಪ್ ವಿಷಯದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೇಂದ್ರ ಸಚಿವರಾದ ಕುಮಾರಸ್ವಾಮಿಯವರ ನಡುವೆ ನಡೆಯುತ್ತಿರುವ ಸವಾಲ್– ಜವಾಬ್ ಜಟಾಪಟಿಯು ಕೇವಲ ಪತ್ರಿಕೆಗಳಿಗೆ ಮಾತ್ರ ಸೀಮಿತವಾಗಬಾರದು. ವಿಶೇಷವಾಗಿ, ನಮ್ಮ ಸಾಮಾನ್ಯ ಜನರಿಗೆ ಈ ಟೌನ್‌ಶಿಪ್ ಯೋಜನೆಯು ಉಪಯುಕ್ತವೋ ಅಥವಾ ಇಲ್ಲವೋ ಎಂಬ ವಿಚಾರವಾಗಿ ಇಬ್ಬರೂ ನೇರಾನೇರ ಮಾತುಕತೆ ನಡೆಸಿ, ಸಮಸ್ಯೆ ಪರಿಹರಿಸುವುದು ಸೂಕ್ತ. ಅದನ್ನು ಬಿಟ್ಟು, ಕೇವಲ ಪತ್ರಿಕೆಗಳಲ್ಲಿ ಹೇಳಿಕೆ ನೀಡಿ ಜಾರಿಕೊಳ್ಳುವುದು ಜಾಣತನವಲ್ಲ. 2007ರಲ್ಲಿ ಡಿಕೆಶಿ ಸಾಹೇಬರು ಇದನ್ನು ವಿರೋಧಿಸಿದ್ದು ಏಕೆ? ಆ ಸಮಯದಲ್ಲಿ ಕುಮಾರಸ್ವಾಮಿಯವರು ಇದನ್ನು ಸಮರ್ಥಿಸಿದ್ದು ಏಕೆ? ಈಗ ಕುಮಾರಸ್ವಾಮಿಯವರು ವಿರೋಧಿಸಿ ಹೇಳಿಕೆ ನೀಡುತ್ತಿರುವುದು ಏಕೆ? ಹಾಗೆಯೇ, ಡಿಕೆಶಿಯವರು ಹಠ ಹಿಡಿದು, ''ನಾನು ಇದನ್ನು ಮಾಡಿಯೇ ತೀರುತ್ತೇನೆ,'' ಎಂದು ಶಪಥ ತೊಟ್ಟಿರುವುದೇಕೆ? ಇದಕ್ಕೆಲ್ಲ ಉತ್ತರ ಬೇಕಿದೆ. ಟೌನ್‌ಶಿಪ್ ಯೋಜನೆಯು ಜನರಿಗೆ ಪೂರಕವೋ ಅಥವಾ ಮಾರಕವೋ ಎಂಬುದು ಸ್ಪಷ್ಟವಾಗಬೇಕು ಎಂಬುದು ಸಾಮಾನ್ಯ ಪ್ರಜೆಯ ಕಳಕಳಿ.

– ರಾಜೂರು ಸೋಮಶೇಖರ ಬೆಂಗಳೂರು

ಔಷಧದ ಹೆಸರಿನಲ್ಲಿ ಮಹಾವಂಚನೆ

ಔಷಧೀಯ ಗುಣಗಳ ಹೆಸರಿನಲ್ಲಿ ವಿಟಮಿನ್, ಖನಿಜಾಂಶಗಳು, ಮೆಲಟೋನಿನ್, ಒಮೇಗಾ–3 ಫಿಶ್ ಆಯಿಲ್, ಹಾರ್ಮೋನ್ ಮತ್ತು ಅಮೈನೋ ಆಸಿಡ್‌ಗಳು ಹಾಗೂ ಮೂಲಿಕೆ ಸಾರಗಳನ್ನು 'ಡಯೆಟರಿ ಸಪ್ಲಿಮೆಂಟ್ಸ್' ಎಂದು ದುಬಾರಿ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದೆ. ನಿಯಮಾವಳಿಗಳ ಲೋಪ ಬಳಸಿಕೊಂಡು ಪ್ಯಾಕೆಟ್‌ಗಳ ಮೇಲೆ ಅತ್ಯಂತ ಸಣ್ಣ ಅಕ್ಷರಗಳಲ್ಲಿ 'ಇದು ಔಷಧದ ಬಳಕೆಗೆ ಅಲ್ಲ' ಎಂದು ಬರೆದು ಜನರನ್ನು ಮೂರ್ಖರನ್ನಾಗಿಸಲಾಗುತ್ತಿದೆ. ಜನರು ಇವುಗಳನ್ನು ನಿಜವಾದ ದಿವ್ಯೌಷಧ ಎಂದು ನಂಬಿ ಮೋಸಹೋಗುತ್ತಿದ್ದಾರೆ. ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ ಮತ್ತು ಕೇಂದ್ರ ಆರೋಗ್ಯ ಸಚಿವಾಲಯವು ಈ ಮಾರುಕಟ್ಟೆಯ ಮಹಾ ಮೋಸವನ್ನು ಕೂಡಲೇ ನಿಯಂತ್ರಿಸಬೇಕು. ಇದು ಕೇವಲ ವ್ಯಾಪಾರವಲ್ಲ, ಜನರ ಆರೋಗ್ಯದ ಆಟವಾಡುತ್ತಿರುವ ಜಾಲ. ಸರಕಾರವು ತಕ್ಷಣವೇ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಇವು ಕೇವಲ ಪೂರಕ ಆಹಾರಗಳೇ ಹೊರತು ಕಾಯಿಲೆ ಗುಣಪಡಿಸುವ ಮದ್ದುಗಳಲ್ಲ ಎಂಬ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.

– ಡಾ. ವಿಜಯಕುಮಾರ್ ಎಚ್.ಕೆ. ರಾಯಚೂರು

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com,
ಇ–ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಕಚೇರಿ ವಿಳಾಸ:– ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು–560011.

Bennett & Coleman
THE TIMES OF INDIA
www.vijaykarnataka.com
ಬುಧವಾರ,24 ಜೂನ್ 2026 | ಪುಟಗಳು: 16 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 174
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಸಿಎಂ ವಿಜಯ್‌ಗೆ ಬರ್ತ್‌ಡೇ ವಿಶ್ ಮೂಲಕ ಬ್ರೇಕಪ್ ವದಂತಿಗಳಿಗೆ ತೆರೆ ಎಳೆದ ತ್ರಿಶಾ P08

ನವಿಲುಗರಿ ಕಿರಿಕಿರಿ

ಲವಲVK »ನೋಡಿ

ರಾಜ್ಯಸಭಾ ಸದಸ್ಯತ್ವ ಅಂತ್ಯ: ಕೇಂದ್ರ ಸಚಿವ ಸ್ಥಾನಕ್ಕೆ ಜಾರ್ಜ್ ಕುರಿಯನ್ ರಾಜೀನಾಮೆ P07

ದಿಲ್ಲಿಯಲ್ಲಿ ಅಶೋಕ್-ವಿಜಯೇಂದ್ರಗೆ 40 ನಿಮಿಷಗಳ ಕ್ಲಾಸ್ | ಅಡ್ಡ ಮತ ಹಾಕಿದವರ ಪತ್ತೆಗೆ ಹೈಕಮಾಂಡ್ ಖಡಕ್ ಸೂಚನೆ | ಧರ್ಮಸ್ಥಳ ಶಾಸಕಾಂಗ ಪಕ್ಷದ ಸಭೆಗೆ ಅಧ್ಯಕ್ಷರ ರೆಡ್ ಸಿಗ್ನಲ್

ಬಿಜೆಪಿ ಹೈಕಮಾಂಡ್ ವಾರ್ನಿಂಗ್

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಕೆಲ ಶಾಸಕರ ಅಡ್ಡ ಮತದಾನವನ್ನು ಗಂಭೀರವಾಗಿ ಪರಿಗಣಿಸಿರುವ ಹೈಕಮಾಂಡ್ ಈ ಬಗ್ಗೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ತರಾಟೆಗೆ ತೆಗೆದುಕೊಂಡಿದೆ. ಅಡ್ಡ ಮತದಾನ ಮಾಡಿದವರ ನಿಖರ ಸಂಖ್ಯೆ, ಹೆಸರನ್ನು ಪತ್ತೆ ಹಚ್ಚಿ ನಿಗಾ ವಹಿಸಬೇಕು. ತಮ್ಮ ಬಳಿಯೂ ಒಂದಿಷ್ಟು ಮಾಹಿತಿ ಇದ್ದು, ಸಕಾಲದಲ್ಲಿ ಹೈಕಮಾಂಡ್ ಸೂಕ್ತ ಕ್ರಮ ಜರುಗಿಸಲಿದೆ ಎಂದು ತಿಳಿಸಿರುವುದು ಅಡ್ಡ ಮತ ಹಾಕಿದವರಲ್ಲಿ ತಳಮಳ ಸೃಷ್ಟಿಸಿದೆ.

ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಜಯಗಳಿಸಿದ್ದು, ಬಿಜೆಪಿ ಹಾಗೂ ಜೆಡಿಎಸ್‌ನ ಒಟ್ಟು 11 ಶಾಸಕರು ಅಡ್ಡ ಮತದಾನ ಮಾಡಿರುವುದು ಕಂಡುಬಂದಿತ್ತು. ಬಿಜೆಪಿಯ ಒಂದು ಮತ ಅಸಿಂಧುವಾಗಿತ್ತು. ಇದರಿಂದ ಜೆಡಿಎಸ್ ಅಭ್ಯರ್ಥಿ ಸೋತಿರುವುದು ಮಾತ್ರವಲ್ಲದೆ ಎನ್‌ಡಿಎ ಮೈತ್ರಿ ಪಕ್ಷಗಳಿಗೆ ತೀವ್ರ ಮುಖಭಂಗವಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ವರಿಷ್ಠರು ರಾಜ್ಯ ನಾಯಕರಿಗೆ ಬುಲಾವ್ ನೀಡಿ ವಾಸ್ತವಾಂಶದ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದ್ದರು.

> ಅಗತ್ಯ ಶಾಸಕರ ಬಲವಿಲ್ಲದಿದ್ದರೂ ಆಡಳಿತ ಪಕ್ಷವು ತನ್ನ ಶಾಸಕರನ್ನು ಮುಂಚಿತವಾಗಿಯೇ ರೆಸಾರ್ಟ್‌ನಲ್ಲಿ ಇರಿಸಿ ಚುನಾವಣೆಯಲ್ಲಿ ಗೆದ್ದಿತು. ಇಂಥಾ ಎಚ್ಚರಿಕೆಯ ನಡೆಯನ್ನು ನೀವೇಕೆ ಪಾಲಿಸಲಿಲ್ಲ?
>
> **-ನಿತಿನ್ ನವೀನ್** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಅದರಂತೆ ದಿಲ್ಲಿಯಲ್ಲಿ ಮಂಗಳವಾರ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್, ಚುನಾವಣೆಯಲ್ಲಿ ಪಕ್ಷದ ಏಜೆಂಟ್ ಆಗಿದ್ದ ಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್, ಎಂಎಲ್ಸಿ ಕೆ.ಎಸ್.ನವೀನ್ ಅವರು ಭೇಟಿಯಾಗಿ ವಿವರಣೆ ನೀಡಿದರು. ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್, ರಾಷ್ಟ್ರೀಯ ಉಪಾಧ್ಯಕ್ಷ ಬೈಜಯಂತ್ ಜಯ್ ಪಾಂಡಾ ಕೂಡ ಇದ್ದರು.

ಸುಮಾರು 40 ನಿಮಿಷಗಳ ಕಾಲ ನಡೆದ ಚರ್ಚೆಯಲ್ಲಿ ಕಳೆದ ಜೂ.18ರಂದು ಮತದಾನ ದಿನ ನಡೆದ ಘಟನಾವಳಿ ಹಾಗೂ ಅದಕ್ಕೂ ಪೂರ್ವಭಾವಿಯಾಗಿ ನಡೆದಿರುವ ಬೆಳವಣಿಗೆ ಬಗ್ಗೆ ಸಭೆಯಲ್ಲಿ ರಾಜ್ಯ ನಾಯಕರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ನಾಯಕರ ನಡೆ ಬಗ್ಗೆಯೇ ರಾಷ್ಟ್ರೀಯ ನಾಯಕರು ಅಸಮಾಧಾನ ಹೊರ ಹಾಕಿದ್ದಾರೆ ಎಂದು ಗೊತ್ತಾಗಿದೆ.

»05

ನವೀನ್ 4 ನಿರ್ದೇಶನ

1 ವೈಮನಸ್ಸು ಮರೆತು ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಪಕ್ಷದ ಸಂಘಟನೆಗೆ ಬಲ ತುಂಬಿ

2 ಅಡ್ಡ ಮತದಾನ ಮಾಡಿದವರನ್ನು ಗೌಪ್ಯವಾಗಿ ಗುರುತಿಸಿ, ಅವರ ಚಟುವಟಿಕೆಗಳ ಮೇಲೆ ನಿಗಾ ವಹಿಸಿ

3 ಪ್ರಬಲ ಪ್ರತಿಪಕ್ಷವಾಗಿ ಕೆಲಸ ಮಾಡುವ ಮೂಲಕ ಮುಂದಿನ ಚುನಾವಣೆಯ ಗೆಲುವಿಗೆ ಸಿದ್ಧತೆ ಮಾಡಿಕೊಳ್ಳಿ

4 ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸುವುದು ಬೇಡ. ಇದನ್ನು ಆಂತರಿಕವಾಗಿಯೇ ಸರಿಪಡಿಸಿಕೊಳ್ಳಿ.

ಸಾಂದರ್ಭಿಕ ಸಾಕ್ಷ್ಯಗಳ ಬೆನ್ನತ್ತಿ ಪತ್ತೆಹಚ್ಚುತ್ತೇವೆ !

ಅಡ್ಡ ಮತದಾನದ ಬಗ್ಗೆ ರಾಜ್ಯ ನಾಯಕರು ತಮಗಿರುವ ಮಾಹಿತಿ ಹಂಚಿಕೊಂಡರು. ಗೌಪ್ಯ ಮತದಾನವಾಗಿದ್ದರಿಂದ ಅಡ್ಡ ಮತದಾನ ಮಾಡಿರುವ ಶಾಸಕರ ನಿಖರ ಸಂಖ್ಯೆ, ಹೆಸರು ಪತ್ತೆ ಹಚ್ಚುವುದು ಸ್ವಲ್ಪ ಕಷ್ಟದ ಕೆಲಸ. ಸಾಂದರ್ಭಿಕ ಸಾಕ್ಷ್ಯಗಳ ಆಧಾರದ ಮೇಲೆ ಕೆಲವರ ಬಗ್ಗೆ ಅನುಮಾನವಿದೆ. ಈ ಬಗ್ಗೆ ಇನ್ನಷ್ಟು ಪರಿಶೀಲನೆ, ನಿಗಾ ಮೂಲಕ ನಿಖರವಾಗಿ ಗುರುತಿಸಲು ಸಾಧ್ಯವಾಗಲಿದೆ ಎಂದು ರಾಜ್ಯ ನಾಯಕರು ಹೇಳಿದ್ದಾರೆ ಎನ್ನಲಾಗಿದೆ.

ನಿರ್ದಿಷ್ಟವಾಗಿ ಇಂತಹ ಶಾಸಕರೇ ಅಡ್ಡ ಮತ ಹಾಕಿದ್ದಾರೆಂದು ಹೇಳುವುದು ಸವಾಲೆನಿಸಿದೆ. ಹಾಗಾಗಿ ನಿಖರವಾಗಿ ಪತ್ತೆ ಹಚ್ಚಿ ಹೇಳಲು ಒಂದಿಷ್ಟು ಸಮಯಾವಕಾಶ ಬೇಕು ಎಂದು ರಾಜ್ಯ ನಾಯಕರು ಹೇಳಿದ್ದಾರೆ ಎಂದು ಗೊತ್ತಾಗಿದೆ.

ಬೆಳಕಿನ ಮಾರಾಟಕ್ಕೆ ಎಸ್ಕಾಂ ಆಕ್ಷೇಪ

ಕರ್ನಾಟಕದಲ್ಲಿ ವಿದ್ಯುತ್ ಜಾಲದ ಖಾಸಗೀಕರಣಕ್ಕೆ ತೀವ್ರ ವಿರೋಧ

ಟಾಟಾ ಪವರ್‌ಗೆ ಪರವಾನಗಿ ನೀಡದಂತೆ ಕೆಇಆರ್‌ಸಿಗೆ ಅಹವಾಲು

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ವಿದ್ಯುತ್ ವಿತರಣಾ ಜಾಲದ ಖಾಸಗೀಕರಣಕ್ಕೆ ವಿದ್ಯುತ್ ವಿತರಣಾ ಕಂಪನಿಗಳಿಂದಲೇ (ಎಸ್ಕಾಂ) ವಿರೋಧ ವ್ಯಕ್ತವಾಗಿದ್ದು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಸೇರಿದಂತೆ ಎಲ್ಲಾ ಎಸ್ಕಾಂಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಆಕ್ಷೇಪಣೆ ಸಲ್ಲಿಸಿವೆ.

ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಿಪಿಸಿಎಲ್) ರಾಜ್ಯದ ವಿವಿಧ ವಿದ್ಯುತ್ ವಿತರಣಾ ಕಂಪನಿಗಳ (ಎಸ್ಕಾಂ) ವ್ಯಾಪ್ತಿಯ 19 ಜಿಲ್ಲೆಗಳಲ್ಲಿ ವಿದ್ಯುತ್ ಸರಬರಾಜು ಮಾಡಲು ವಿತರಣಾ ಪರವಾನಗಿ ಕೋರಿ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿತ್ತು. ಪ್ರಮುಖವಾಗಿ ಬೆಸ್ಕಾಂ ವ್ಯಾಪ್ತಿಯ ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ವಿದ್ಯುತ್ ವಿತರಣೆಗೆ ಪರವಾನಗಿ ನೀಡುವಂತೆ ಕೋರಿತ್ತು. ಈ ಸಂಬಂಧ ಸಲಹೆ, ಆಕ್ಷೇಪಣೆ ಸಲ್ಲಿಕೆಗೆ ಸಾರ್ವಜನಿಕರು ಹಾಗೂ ಸಂಘ- ಸಂಸ್ಥೆಗಳಿಗೆ ಮಂಗಳವಾರದವರೆಗೆ (ಜೂ.23) ಕೆಇಆರ್‌ಸಿ ಕಾಲಾವಕಾಶ ನೀಡಿತ್ತು.

ಟಿಪಿಸಿಎಲ್‌ಗೆ ವಿದ್ಯುತ್ ಸರಬರಾಜಿಗೆ ವಿತರಣಾ ಪರವಾನಗಿ ನೀಡದಂತೆ ನೂರಾರು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಕೆಇಆರ್‌ಸಿಗೆ ಆಕ್ಷೇಪಣೆ ಸಲ್ಲಿಸಿದ್ದಾರೆ. ಈ ಮಧ್ಯೆ ಎಸ್ಕಾಂಗಳು ಸಹ ಇದಕ್ಕೆ ವಿರೋಧ ವ್ಯಕ್ತಪಡಿಸಿ, ಆಕ್ಷೇಪಣೆ ಸಲ್ಲಿಸಿವೆ. ಹಲವು ಗಂಭೀರ ಆಕ್ಷೇಪಣೆ ಎತ್ತಿರುವ ಬೆಸ್ಕಾಂ, ವಿದ್ಯುತ್ ಕಾಯಿದೆ-2003ರಡಿ ಅಗತ್ಯವಿರುವ ಕಾನೂನುಬದ್ಧ ಹಾಗೂ ಸಾರ್ವಜನಿಕ ಹಿತಾಸಕ್ತಿ ಸಂಬಂಧಿತ ಮಾನದಂಡಗಳನ್ನು ಪೂರೈಸುವ ಬಗ್ಗೆ ಟಾಟಾ ಸಂಸ್ಥೆಯು ಅರ್ಜಿಯಲ್ಲಿ ಪ್ರಸ್ತಾಪಿಸಿಲ್ಲ ಎಂದು ಹೇಳಿದೆ.

»10

ಜನಪರ ಯೋಜನೆ ಸ್ಥಗಿತದ ಆತಂಕ !

ಕರ್ನಾಟಕ ವಿದ್ಯುತ್ ಬಳಕೆದಾರರ ಒಕ್ಕೂಟ, ಕರ್ನಾಟಕ ವಿದ್ಯುತ್ ಮಂಡಳಿ ನೌಕರರ ಸಂಘಗಳ ಒಕ್ಕೂಟ, ರೈತ ಸಂಘಟನೆಗಳು, ಸಂಘ ಸಂಸ್ಥೆಗಳು ಕೆಇಆರ್‌ಸಿಗೆ ಆಕ್ಷೇಪಣೆ ಸಲ್ಲಿಸಿದ್ದು, ಟಾಟಾ ಕಂಪನಿಗೆ ಪರವಾನಗಿ ನೀಡಬಾರದು. ಈ ಸಂಬಂಧ ಸಲ್ಲಿಸಿರುವ ಪ್ರಸ್ತಾವನೆಯನ್ನು ತಿರಸ್ಕರಿಸಬೇಕು ಎಂದು ಒತ್ತಾಯಿಸಿವೆ.

ಖಾಸಗಿಯವರು ಲಾಭದ ಉದ್ದೇಶ ಇಟ್ಟುಕೊಂಡು ಕಾರ್ಯನಿರ್ವಹಿಸುತ್ತಾರೆ. ಬಹುಪಾಲು ಆದಾಯ ಖಾಸಗಿಯವರಿಗೆ ಹೋಗುವುದರಿಂದ ಮುಂದೆ ಸಬ್ಸಿಡಿ ಯೋಜನೆಗಳಿಗೆ ಅನುದಾನ ನೀಡುವುದು ಕಷ್ಟವಾಗಲಿದೆ. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ಗೃಹ ಜ್ಯೋತಿ, ಕುಟೀರ ಜ್ಯೋತಿ, ಭಾಗ್ಯ ಜ್ಯೋತಿ ಇತ್ಯಾದಿ ಯೋಜನೆಗಳು ಸ್ಥಗಿತವಾಗಬಹುದು ಎಂದು ಸಂಘಟನೆಗಳು ಆತಂಕ ವ್ಯಕ್ತಪಡಿಸಿವೆ.

ಟೆಲಿಗ್ರಾಂ ಆ್ಯಪ್ ನಿಷೇಧ ತೆರವು

ಹೊಸದಿಲ್ಲಿ: 'ನೀಟ್ ಯುಜಿ-2026' ಪ್ರಶ್ನೆಪತ್ರಿಕೆ ಸೋರಿಕೆಗೆ ಟೆಲಿಗ್ರಾಂ ಆ್ಯಪ್ ಬಳಕೆ ಆರೋಪದ ಹಿನ್ನೆಲೆಯಲ್ಲಿ, ಭಾರತದಲ್ಲಿ 'ಟೆಲಿಗ್ರಾಂ' ತಂತ್ರಾಂಶ ಬಳಕೆಯ ಮೇಲೆ ಹೇರಿದ್ದ ತಾತ್ಕಾಲಿಕ ನಿಷೇಧವನ್ನು ಕೇಂದ್ರ ಸರಕಾರ ಮಂಗಳವಾರ ಹಿಂಪಡೆದಿದೆ. ಇದರೊಂದಿಗೆ ಜನಪ್ರಿಯ ಇನ್‌ಸ್ಟಂಟ್ ಮೆಸೇಜಿಂಗ್ ತಂತ್ರಾಂಶದ ಸೇವೆಗಳು ಭಾರತದಲ್ಲಿ ಪುನಾರಂಭವಾಗಿವೆ.

ಜೂನ್ 21ರಂದು ನಡೆದ ನೀಟ್ ಮರು ಪರೀಕ್ಷೆಯ ಹಿನ್ನೆಲೆಯಲ್ಲಿ, ಸುರಕ್ಷತಾ ಕ್ರಮವಾಗಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಜೂನ್ 16 ರಿಂದ ಜೂನ್ 22 ರವರೆಗೆ ಈ ಆ್ಯಪ್ ಅನ್ನು ದೇಶದಲ್ಲಿ ನಿರ್ಬಂಧಿಸಿತ್ತು. ನಿಷೇಧ ವಾಪಸ್ ಹಿನ್ನೆಲೆಯಲ್ಲಿ ಪ್ರಸ್ತುತ ಟೆಲಿಗ್ರಾಂ ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಾಗಿದೆ.

'ಎಡಿಟ್' ಫೀಚರ್ ಸದ್ಯಕ್ಕಿಲ್ಲ: ಆದರೆ, ಮುನ್ನೆಚ್ಚರಿಕೆ ಕ್ರಮವಾಗಿ ಜೂನ್ 30ರವರೆಗೆ ಆ್ಯಪ್‌ನಲ್ಲಿನ 'ಮೆಸೇಜ್ ಎಡಿಟಿಂಗ್' (ಸಂದೇಶ ತಿದ್ದುಪಡಿ) ಫೀಚರ್‌ಅನ್ನು ನಿಷ್ಕ್ರಿಯಗೊಳಿಸಲಾಗಿದೆ. ವಂಚಕರು ಹಳೆಯ ಸಂದೇಶಗಳನ್ನು ಎಡಿಟ್ ಮಾಡಿ, ಪ್ರಶ್ನೆಪತ್ರಿಕೆ ಮೊದಲೇ ಸೋರಿಕೆಯಾಗಿದೆ ಎಂಬಂತೆ ಬಿಂಬಿಸಿ ವಿದ್ಯಾರ್ಥಿಗಳನ್ನು ಮತ್ತು ಅಧಿಕಾರಿಗಳನ್ನು ದಾರಿ ತಪ್ಪಿಸುವುದನ್ನು ತಡೆಯಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಚಿನ್ನದ ದರ 2 ತಿಂಗಳಲ್ಲೇ ಕನಿಷ್ಠ

ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ಸಂಘರ್ಷದ ವೇಳೆ ನಾಗಾಲೋಟದ ಮೂಲಕ ಸಾರ್ವಕಾಲಿಕ ದಾಖಲೆ

ಮಟ್ಟಕ್ಕೆ ಏರಿದ್ದ ಚಿನ್ನ-ಬೆಳ್ಳಿ ದರಗಳು, ಅಮೆರಿಕ-ಇರಾನ್ ಶಾಂತಿ ಒಪ್ಪಂದದ ಬೆನ್ನಲ್ಲೇ ಭಾರಿ ಪ್ರಮಾಣದಲ್ಲಿ ಇಳಿಯತೊಡಗಿವೆ. ಜಾಗತಿಕ ಪೇಟೆಯಲ್ಲಿ ಚಿನ್ನ-ಬೆಳ್ಳಿ ದರ ಸುಮಾರು 2 ತಿಂಗಳಲ್ಲೇ ಕನಿಷ್ಠ ಮಟ್ಟಕ್ಕೆ ಇಳಿದಿದ್ದು, ಮತ್ತಷ್ಟು ಅಗ್ಗವಾಗುವ ಸೂಚನೆ ಇದೆ ಎಂದು ತಜ್ಞರು ಹೇಳಿದ್ದಾರೆ. ವಿವಾಹ ಸಮಾರಂಭಗಳ ಋತು ಆರಂಭಕ್ಕೆ ಮುನ್ನ ಹಳದಿ ಲೋಹದ ಬೆಲೆ ಇಳಿಕೆಯು ಗ್ರಾಹಕರಲ್ಲಿ ಖುಷಿ ತಂದಿದೆ.

ಬೆಂಗಳೂರಿನಲ್ಲಿ ಅಪರಂಜಿ ಚಿನ್ನದ ಬೆಲೆ ಮಂಗಳವಾರ ಪ್ರತಿ 10 ಗ್ರಾಂಗೆ 3,380 ರೂ. ಕುಸಿಯುವ ಮೂಲಕ 14,460 ರೂ. ತಲುಪಿದೆ. ಆಭರಣ ಚಿನ್ನದ ದರವು ಪ್ರತಿ 10 ಗ್ರಾಂಗೆ 3,100 ರೂ. ಕುಸಿದು 13,255 ರೂ.ಗೆ ಇಳಿದಿದೆ. ಮತ್ತೊಂದೆಡೆ, ಬೆಳ್ಳಿ ದರ ಪ್ರತಿ ಕೆ.ಜಿ.ಗೆ 5,000 ರೂ. ಇಳಿಕೆ ಕಂಡು 2,45,000 ರೂ.ಗೆ ತಲುಪಿದೆ.

ಡಾಲರ್ ಎದುರು ರೂಪಾಯಿ ಮೌಲ್ಯ ಚೇತರಿಕೆ ಜತೆಗೆ, ಫೆಡರಲ್ ರಿಸರ್ವ್ ಬಡ್ಡಿದರ ಏರಿಕೆ ಭೀತಿಯು ದರ ಇಳಿಕೆಗೆ ಕಾರಣ.

ವಿವರ»06

ರಾಜ್ಯದ ವಿಜ್ಞಾನಿಗೆ ಪದ್ಮ ಗೌರವ

ಹೊಸದಿಲ್ಲಿಯ ರಾಷ್ಟ್ರಪತಿ ಭವನದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಬೆಂಗಳೂರು ಮೂಲದ ಬಾಹ್ಯಾಕಾಶ ವಿಜ್ಞಾನಿ ಡಾ. ಶುಭಾ ವೆಂಕಟೇಶ್ ಅಯ್ಯಂಗಾರ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 'ಪದ್ಮಶ್ರೀ' ಪ್ರಶಸ್ತಿ ಪ್ರದಾನ ಮಾಡಿದರು. ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಶುಭಾ ಅವರಿಗೆ ಈ ಪ್ರಶಸ್ತಿ ಒಲಿದಿದೆ. ವಿಮಾನಗಳ ಸುರಕ್ಷಿತ ಲ್ಯಾಂಡಿಂಗ್‌ಗಾಗಿ 'ದೃಷ್ಟಿ' ವ್ಯವಸ್ಥೆಯನ್ನು ದೇಶೀಯವಾಗಿ ಅಭಿವೃದ್ಧಿಪಡಿಸಿದ ಹೆಗ್ಗಳಿಕೆ ಇವರದ್ದು.

ವಿವರ»07

ಶ್ರೀ ಸಿ. ಆರ್. ಪಾಟೀಲ್ ಸನ್ಮಾನ್ಯ ಕೇಂದ್ರ ಜಲಶಕ್ತಿ ಸಚಿವರು ಭಾರತ ಸರ್ಕಾರ | **ಶ್ರೀ ಎನ್. ಚಂದ್ರಬಾಬು ನಾಯ್ಡು** ಸನ್ಮಾನ್ಯ ಮುಖ್ಯಮಂತ್ರಿಗಳು ಆಂಧ್ರಪ್ರದೇಶ ಸರ್ಕಾರ | **ಶ್ರೀ ಎ. ರೇವಂತ್ ರೆಡ್ಡಿ** ಸನ್ಮಾನ್ಯ ಮುಖ್ಯಮಂತ್ರಿಗಳು ತೆಲಂಗಾಣ ಸರ್ಕಾರ | **ಡಾ. ಜಿ. ಪರಮೇಶ್ವರ** ಮಾನ್ಯ ಉಪ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ | **ಶ್ರೀ ಕೆ. ಪವನ್ ಕಲ್ಯಾಣ್** ಮಾನ್ಯ ಉಪ ಮುಖ್ಯಮಂತ್ರಿಗಳು ಆಂಧ್ರಪ್ರದೇಶ ಸರ್ಕಾರ | **ಶ್ರೀ ಮಲ್ಲು ಭಟ್ಟಿ ವಿಕ್ರಮಾರ್ಕ** ಮಾನ್ಯ ಉಪ ಮುಖ್ಯಮಂತ್ರಿಗಳು ತೆಲಂಗಾಣ ಸರ್ಕಾರ | **ಶ್ರೀ ವಿ. ಸೋಮಣ್ಣ** ಮಾನ್ಯ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರು, ಭಾರತ ಸರ್ಕಾರ | **ಶ್ರೀ ರಾಜ ಭೂಷಣ್ ಚೌಧರಿ** ಮಾನ್ಯ ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವರು ಭಾರತ ಸರ್ಕಾರ

ಶ್ರೀ ಬಸವರಾಜ ಎಸ್. ಹೊರಟ್ಟಿ ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು | **ಶ್ರೀ ರಾಮಲಿಂಗಾ ರೆಡ್ಡಿ** ಮಾನ್ಯ ಸಚಿವರು, ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ | **ಶ್ರೀ ಬಸವರಾಜ ಬೊಮ್ಮಾಯಿ** ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಹಾಗೂ ಸಂಸದರು, ಹಾವೇರಿ-ಗದಗ ಲೋಕಸಭಾ ಕ್ಷೇತ್ರ | **ಡಾ. ನಿಮ್ಮಲ ರಾಮ ನಾಯ್ಡು** ಮಾನ್ಯ ಸಚಿವರು, ಜಲ ಸಂಪನ್ಮೂಲ ಇಲಾಖೆ ಆಂಧ್ರಪ್ರದೇಶ ಸರ್ಕಾರ | **ಶ್ರೀ ಪಯ್ಯವುಲ ಕೇಶವ್** ಮಾನ್ಯ ಸಚಿವರು, ಹಣಕಾಸು, ಯೋಜನೆ, ವಾಣಿಜ್ಯತೆರಿಗೆ & ಸಂಸದೀಯ ವ್ಯವಹಾರಗಳ ಖಾತೆ, ಆಂಧ್ರಪ್ರದೇಶ ಸರ್ಕಾರ | **ಶ್ರೀ ಎನ್. ಉತ್ತಮ್ ಕುಮಾರ್ ರೆಡ್ಡಿ** ಮಾನ್ಯ ಸಚಿವರು, ನೀರಾವರಿ ಇಲಾಖೆ & ಸಿಎಡಿ, ತೆಲಂಗಾಣ ಸರ್ಕಾರ | **ಶ್ರೀ ಸಲೀಂ ಅಹಮದ್** ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಹಾಗೂ ಶಾಸಕರು (ವಿಧಾನ ಪರಿಷತ್)

ಮುಖ್ಯ ಅತಿಥಿಗಳು

ಶ್ರೀ ಕೆ. ರಾಜಶೇಖರ ಹಿಟ್ನಾಳ್ ಮಾನ್ಯ ಸಂಸದರು ಕೊಪ್ಪಳ ಲೋಕಸಭಾ ಕ್ಷೇತ್ರ | **ಶ್ರೀ ಪಿ. ಸಿ. ಗದ್ದಿಗೌಡರ** ಮಾನ್ಯ ಸಂಸದರು ಬಾಗಲಕೋಟೆ ಲೋಕಸಭಾ ಕ್ಷೇತ್ರ | **ಶ್ರೀ ಈ. ತುಕಾರಾಮ್** ಮಾನ್ಯ ಸಂಸದರು ಬಳ್ಳಾರಿ ಲೋಕಸಭಾ ಕ್ಷೇತ್ರ | **ಡಾ. ಪ್ರಭಾ ಮಲ್ಲಿಕಾರ್ಜುನ್** ಮಾನ್ಯ ಸಂಸದರು ದಾವಣಗೆರೆ ಲೋಕಸಭಾ ಕ್ಷೇತ್ರ | **ಶ್ರೀ ಜಿ. ಕುಮಾರ್ ನಾಯಕ್** ಮಾನ್ಯ ಸಂಸದರು ರಾಯಚೂರು ಲೋಕಸಭಾ ಕ್ಷೇತ್ರ | **ಡಾ. ಸೈಯದ್ ನಾಸಿರ್ ಹುಸೇನ್** ಮಾನ್ಯ ರಾಜ್ಯಸಭಾ ಸದಸ್ಯರು ಬಳ್ಳಾರಿ

ಹಾಗೂ ಕೊಪ್ಪಳ, ವಿಜಯನಗರ, ಬಳ್ಳಾರಿ, ರಾಯಚೂರು ಮತ್ತು ಗದಗ ಜಿಲ್ಲಾ ವ್ಯಾಪ್ತಿಯ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು.

ಅಧ್ಯಕ್ಷತೆ

ಶ್ರೀ ಕೆ. ರಾಘವೇಂದ್ರ ಹಿಟ್ನಾಳ್ ಮಾನ್ಯ ಶಾಸಕರು, ಕೊಪ್ಪಳ ವಿಧಾನಸಭಾ ಕ್ಷೇತ್ರ

ಸ್ವಾಗತ ಕೋರುವವರು

ಶ್ರೀ ಗೌರವ್ ಗುಪ್ತ, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇಂಧನ ಮತ್ತು ಜಲಸಂಪನ್ಮೂಲ ಇಲಾಖೆ | **ಶ್ರೀ ಕೃಷ್ಣಮೂರ್ತಿ ಬಿ. ಕುಲಕರ್ಣಿ,** ಕೆ.ಇ.ಎಸ್. ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ | **ಶ್ರೀ ರಾಜೇಶ್ ಅಮ್ಮಿನಭಾವಿ,** ಕೆ.ಇ.ಎಸ್. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ | **ಶ್ರೀ ಎಸ್. ಎನ್. ಪಾಂಡೆ,** ಐ.ಇ.ಎಸ್. ಮಾನ್ಯ ಅಧ್ಯಕ್ಷರು, ತುಂಗಭದ್ರಾ ಮಂಡಳಿ

ಪ್ರಶ್ನೆ: ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದೇನೆ. ಇದರಿಂದ ಹೊರಬರುವುದು ಹೇಗೆ?

ಜನ್ಮ ದಿನಾಂಕ: 07.11.1983 **ನಕ್ಷತ್ರ:** ಪೂರ್ವಾಭಾದ್ರ

ಪರಿಹಾರ: ಆರನೇ ಮನೆಯಲ್ಲಿರುವ ಗುರುವು ಮಾನಸಿಕ ಸಮಸ್ಯೆಯನ್ನು ತಂದಿಡುತ್ತಾನೆ. ಅದು ರೋಗವಲ್ಲ, ಹತ್ತು-ಹಲವು ಚಿಂತೆಗಳಿಂದ ಕೆಲಸಗಳು ಕೈಗೂಡುವುದಿಲ್ಲ, ಗುರುವು ಸಪ್ತಮಕ್ಕೆ ಬಂದಾಗ ಎಲ್ಲ ಕೆಲಸಗಳೂ ಸರಾಗವಾಗಿ ನಡೆದು ಮಾನಸಿಕ ನೆಮ್ಮದಿಯೂ ಲಭಿಸುತ್ತದೆ. ಮೂರರಲ್ಲಿರುವ ಶನಿ ಸಹ ನಿಮ್ಮ ಕೆಲಸಗಳು ಕೈಗೂಡಲು ನೆರವಾಗುತ್ತಾನೆ. ಹೀಗಾಗಿ ಶನೈಶ್ಚರ ಪ್ರಾರ್ಥನೆ ಮತ್ತು ಶಿವಪೂಜೆ ಮಾಡುವುದು ಅತ್ಯಗತ್ಯ.

ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 24-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಜ್ಯೇಷ್ಠ.
ಪಕ್ಷ: ಶುಕ್ಲ. **ಮಳೆ ನಕ್ಷತ್ರ:** ಆರಿದ್ರಾ.
ನಿತ್ಯನಕ್ಷತ್ರ: ಚಿತ್ತಾ. **ತಿಥಿ:** ದಶಮಿ.
ಯೋಗ: ಪರಿಘಾ.
ಕರಣ: ಗರಜ.
ವಾರ: ಬುಧವಾರ.

ರಾಹು ಕಾಲ: ಮ. 12.00 - 1.30
ಗುಳಿಕ ಕಾಲ: ಬೆ. 10.30-12.00
ಯಮಗಂಡ ಕಾಲ: ಬೆ. 7.30-9.00
ಸೂರ್ಯ ಉದಯ: ಬೆ. 5.56
ಸೂರ್ಯ ಅಸ್ತ: ಸಂ. 6.47

ಅರ್ಜಿ ಸಲ್ಲಿಕೆ ದಿನಾಂಕ ವಿಸ್ತರಣೆ

ಬೆಂಗಳೂರು: ದ್ರಾವಿಡ ಭಾಷಾ ಟ್ರಾನ್ಸ್‌ಲೇಟರ್ಸ್ ಅಸೋಸಿಯೇಶನ್ (ಡಿಬಿಟಿಎ) ವತಿಯಿಂದ ನೀಡಲಾಗುವ 2026ನೇ ಸಾಲಿನ ಅನುವಾದ ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು 2026ರ ಜುಲೈ 15ರವರೆಗೆ ವಿಸ್ತರಿಸಲಾಗಿದೆ ಎಂದು ಸಂಘ ತಿಳಿಸಿದೆ. ದ್ರಾವಿಡ ಭಾಷೆಗಳಾದ ಮಲಯಾಳಂ, ಕನ್ನಡ, ತಮಿಳು ಹಾಗೂ ತುಳು ಭಾಷೆಗಳಿಂದ ತೆಲುಗು ಭಾಷೆಗೆ ಅನುವಾದಗೊಂಡ ಕಾದಂಬರಿಗಳಿಗೆ ಪ್ರಶಸ್ತಿ ನೀಡಲಾಗುವುದು. 2024 ಮತ್ತು 2025ರಲ್ಲಿ ಪ್ರಕಟವಾದ ಅನುವಾದ ಕೃತಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಅಧ್ಯಕ್ಷರು, ಡಿಬಿಟಿಎ, ಶ್ರೀ ಭೈರವೇಶ್ವರ ನಿಲಯ, ಇಮ್ಮಡಿಹಳ್ಳಿ ಮುಖ್ಯ ರಸ್ತೆ, ಹಗದೂರು, ವೈಟ್ ಫೀಲ್ಡ್, ಬೆಂಗಳೂರು 560066 ಈ ವಿಳಾಸಕ್ಕೆ ಕಳುಹಿಸಬೇಕು. 11,111 ರೂ. ನಗದು ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ಒಳಗೊಂಡಿದೆ ಎಂದು ಸಂಸ್ಥಾಪಕ ಅಧ್ಯಕ್ಷೆ ಡಾ. ಸುಷ್ಮಾ ಶಂಕರ್ ತಿಳಿಸಿದ್ದಾರೆ.

ಕೇರಳದಲ್ಲಿ ಸಿದ್ದರಾಮಯ್ಯ ವಿಶ್ರಾಂತಿ

ಬೆಂಗಳೂರು: ಮಾಜಿ ಸಿಎಂ ಸಿದ್ದರಾಮಯ್ಯ ತಮ್ಮ ಏಳೆಂಟು ಆಪ್ತರೊಂದಿಗೆ ಕೇರಳದ ಜಾರ್ಜ್ ರೆಸಾರ್ಟ್‌ನಲ್ಲಿ ವಿಹಾರ ಮತ್ತು ವಿಶ್ರಾಂತಿ ಪಡೆಯುತ್ತಿದ್ದಾರೆ. ಆಪ್ತರಾದ ಸಚಿವ ಕೆ.ಜೆ.ಜಾರ್ಜ್, ಮಾಜಿ ಸಚಿವರಾದ ಎಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್ ಸೇರಿ ಹಲವರು ಸಿದ್ದರಾಮಯ್ಯ ಅವರೊಂದಿಗೆ ಕೇರಳ ಪ್ರವಾಸದಲ್ಲಿದ್ದಾರೆ. ಆಪ್ತರೊಂದಿಗೆ ರಿಲ್ಯಾಕ್ಸ್ ಮೂಡ್‌ನಲ್ಲಿದ್ದು, ಜೂ.25 ರಂದು ಗುರುವಾರ ಬೆಂಗಳೂರಿಗೆ ಮರಳಲಿದ್ದಾರೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ | ವಿಜಯೇಂದ್ರ ಹೇಳಿಕೆಗೆ ಹೈಕಮಾಂಡ್, ಹಿರಿಯರ ಅಸಮ್ಮತಿ

ಹೈಕಮಾಂಡ್ ಗುದ್ದು, ಧರ್ಮಸ್ಥಳ ಶಾಸಕಾಂಗ ಸಭೆ ರದ್ದು

■ **ವಿಕ ಸುದ್ದಿಲೋಕ** ಬೆಂಗಳೂರು

ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಬಿಜೆಪಿ ಶಾಸಕರನ್ನು ಪತ್ತೆ ಹಚ್ಚಲು ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸಿ ಆಣೆ ಪ್ರಮಾಣ ಮಾಡುವಂತೆ ಮಾಡಲು ಸಜ್ಜಾಗಿದ್ದ ಬಿ.ವೈ.ವಿಜಯೇಂದ್ರ ನಿರ್ಧಾರಕ್ಕೆ ಸ್ವಪಕ್ಷೀಯ ಶಾಸಕರು, ಮುಖಂಡರ ಆಕ್ಷೇಪದ ಜತೆಗೆ ಹೈಕಮಾಂಡ್ ಸಮ್ಮತಿ ಸಿಗದ ಹಿನ್ನೆಲೆಯಲ್ಲಿ ಆ ಪ್ರಯತ್ನದಿಂದ ಹಿಂದೆ ಸರಿದಿದೆ.

ಶಿಸ್ತಿನ ಪಕ್ಷದಲ್ಲಿ ಅಶಿಸ್ತು ಪ್ರದರ್ಶಿಸುವ ಮೂಲಕ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಪಕ್ಷಕ್ಕೆ ಮುಖಭಂಗವಾಗಲು ಕಾರಣರಾದವರ ಪತ್ತೆಗೆ ಶಾಸಕರಿಂದ ಆಣೆ ಪ್ರಮಾಣ ಮಾಡಿಸುವ ಚಿಂತನೆಗೆ ಹೈಕಮಾಂಡ್ ಒಪ್ಪಿಗೆ ದೊರಕಿಲ್ಲ.

ರಾಜಕೀಯ ವಲಯದಲ್ಲಿನ ಘಟನಾವಳಿಗೆ ಸಂಬಂಧಪಟ್ಟಂತೆ ಧಾರ್ಮಿಕ ಕೇಂದ್ರದಲ್ಲಿ ಆಣೆ ಪ್ರಮಾಣದ ಮೊರೆ ಹೋಗುವುದು

ಸರಿಯಲ್ಲ ಎಂದು ಸ್ವಪಕ್ಷೀಯರೇ ಆಕ್ಷೇಪಿಸಿದ್ದರು. ಕೇಂದ್ರದ ವರಿಷ್ಠರು ಸಹ ಶಾಸಕರಿಂದ ಆಣೆ ಪ್ರಮಾಣ ಮಾಡಿಸುವಂತಹ ಪ್ರಯತ್ನ ಬೇಡ. ಶಿಸ್ತು ಉಲ್ಲಂಘಿಸಿ ಅಡ್ಡ ಮತದಾನ ಮಾಡಿದವರನ್ನು ಪತ್ತೆ ಹಚ್ಚಿ ಮಾಹಿತಿ ನೀಡಿ ಅವರ ಮೇಲೆ ನಿಗಾ ವಹಿಸಿದರೆ ಸಾಕು. ಪಕ್ಷ ಸೂಕ್ತ ಸಂದರ್ಭದಲ್ಲಿ ಕ್ರಮ ಜರುಗಿಸಲಿದೆ ಎಂದು ಸ್ಪಷ್ಟವಾಗಿ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.

ಬಹುತೇಕ ಶಾಸಕರು, ಮುಖಂಡರು ಸಹ ಪಕ್ಷದ ಬೆಳವಣಿಗೆಗಳಿಗೆ ಸಂಬಂಧಪಟ್ಟ ವಿಚಾರವಾಗಿ ಧರ್ಮಸ್ಥಳವನ್ನು ಎಳೆದು ತರುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಹಾಗಾಗಿ ಧರ್ಮಸ್ಥಳದಲ್ಲೇ ಶಾಸಕಾಂಗ ಪಕ್ಷದ ಸಭೆ ನಡೆಸಿ ಶಾಸಕರಿಂದ ಆಣೆ ಪ್ರಮಾಣ ಮಾಡಿಸಿ ಪಕ್ಷ ನಿಷ್ಠೆಯನ್ನು ತಿಳಿಯುವ ರಾಜ್ಯಾಧ್ಯಕ್ಷರ ಪ್ರಯತ್ನಕ್ಕೆ ಬ್ರೇಕ್ ಬಿದ್ದಿದೆ.

ದಿಲ್ಲಿಯಲ್ಲಿ ಮಂಗಳವಾರ ವರಿಷ್ಠರ ಭೇಟಿಗೂ ಮೊದಲೇ ಮಾಹಿತಿ ನೀಡಿದ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್, ''ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸುವ ಬಗ್ಗೆ ರಾಜ್ಯಾಧ್ಯಕ್ಷರು ಚರ್ಚಿಸಿದ್ದಾರೆ. ನಾನು ಕೂಡ ಈ ವಿಚಾರವಾಗಿ ಪಕ್ಷದ ಹಿರಿಯ ನಾಯಕರೊಂದಿಗೆ ಚರ್ಚೆ ನಡೆಸಿದ್ದೇನೆ. ಬಹುತೇಕ ಶಾಸಕರು ಬೇಡ ಎನ್ನುವ ಅಭಿಪ್ರಾಯ ಹೇಳಿದರು. ಈ ರೀತಿಯ ರಾಜಕೀಯ ಇದೇ ಮೊದಲ ಬಾರಿಗೆ ನಡೆದಿಲ್ಲ. ಧರ್ಮಸ್ಥಳವನ್ನು ಇದರಲ್ಲಿ ಎಳೆದು ತರುವುದು ಬೇಡ ಎಂದು ನಿರ್ಧರಿಸಿದ್ದೇವೆ. ಹಾಗಾಗಿ ಧರ್ಮಸ್ಥಳದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸುತ್ತಿಲ್ಲ,'' ಎಂದು ಸ್ಪಷ್ಟಪಡಿಸಿದರು.

ಪಕ್ಷಕ್ಕೆ ದ್ರೋಹ: ಕಠಿಣ ಕ್ರಮದ ಭರವಸೆ ನೀಡಿದ ವರಿಷ್ಠರು

ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಕೆಲವು ಶಾಸಕರು ಅಡ್ಡಮತದಾನ ಮಾಡಿ ವಿಪ್ ಉಲ್ಲಂಘಿಸಿರುವ ಬಗ್ಗೆ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರ ಗಮನಕ್ಕೆ ತಂದು ಸುಸ್ಪಷ್ಟವಾಗಿ ಮಾಹಿತಿ ನೀಡಿದ್ದು, ಪಕ್ಷಕ್ಕೆ ದ್ರೋಹ ಬಗೆದವರ ವಿರುದ್ಧ ಕಠಿಣ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ ಎಂದು ಶಾಸಕ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಹೊಸದಿಲ್ಲಿಯಲ್ಲಿ ಮಂಗಳವಾರ ನಿತಿನ್ ನಬಿನ್ ಅವರನ್ನು ಭೇಟಿಯಾದ ಬಳಿಕ ಪ್ರತಿಕ್ರಿಯಿಸಿದ ಅವರು, ''ರಾಷ್ಟ್ರೀಯ ಅಧ್ಯಕ್ಷರು ತಮ್ಮ ತಮ್ಮದೇ ಆದ ಮಾಹಿತಿ ಇದ್ದು ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಪಕ್ಷಕ್ಕೆ ಯಾರು ಅನ್ಯಾಯ ಮಾಡಿದ್ದಾರೋ, ದ್ರೋಹ ಎಸಗಿದ್ದಾರೋ ಅವರ ವಿರುದ್ಧ ಕಠಿಣ ನಿರ್ಣಯ ಮಾಡಲೇಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ. ಪಕ್ಷ ಬಲಪಡಿಸುವ ನಿಟ್ಟಿನಲ್ಲಿ ಸಂಘಟನಾತ್ಮಕ ಸಲಹೆಗಳನ್ನೂ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ನಿಟ್ಟಿನಲ್ಲಿ ಒಟ್ಟಾಗಿ ಸೇರಿ ಕೆಲಸ ಮಾಡುವಂತೆ ಸೂಚಿಸಿದ್ದಾರೆ,'' ಎಂದು ತಿಳಿಸಿದರು.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ''ಅಡ್ಡ ಮತದಾನದ ಕುರಿತ ಅಂಕಿಅಂಶಗಳು, ಯಾರು ಈ ರೀತಿ ಮಾಡಿರಬಹುದೆಂಬ ವಿವರಗಳು ರಾಷ್ಟ್ರೀಯ ಅಧ್ಯಕ್ಷರ ಬಳಿ ಇವೆ. ನಾವು ಕೊಟ್ಟ ಮಾಹಿತಿ ಮೇರೆಗೆ ತಪ್ಪು ಮಾಡಿದವರ ವಿರುದ್ಧ ಸರಿಯಾದ ಸಮಯಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಪಕ್ಷಕ್ಕೆ ದ್ರೋಹ ಬಗೆದವರಿಗೆ, ಮೋಸ ಮಾಡಿದವರಿಗೆ ಸರಿಯಾದ ಪಾಠ ಕಲಿಸುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ,'' ಎಂದು ಹೇಳಿದರು. ''ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸುವ ದೃಷ್ಟಿಯಿಂದ ಒಗ್ಗಟ್ಟಿನಿಂದ ಒಳ್ಳೆ ರೀತಿ ಮುನ್ನಡೆಯುವಂತೆ ಹೇಳಿದ್ದಾರೆ. ಅಡ್ಡ ಮತದಾನ ಮಾಡಿದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದಾಗಿ ಕೇಂದ್ರದ ನಾಯಕರು ಹೇಳಿದ್ದಾರೆ,'' ಎಂದು ತಿಳಿಸಿದರು.

ವರದಿ ಸಲ್ಲಿಕೆ ಬಳಿಕ ತೀರ್ಮಾನ

ಅಡ್ಡ ಮತದಾನ ಮಾಡಿದ ಶಾಸಕರ ಪತ್ತೆಗಾಗಿ ಮಾಜಿ ಸಚಿವರಾದ ಸಿ.ಟಿ.ರವಿ, ಎನ್.ಮಹೇಶ್ ಹಾಗೂ ಶಾಸಕ ಮಹೇಶ್ ಟೆಂಗಿನಕಾಯಿ ಅವರ ತಂಡ ರಚಿಸಿರುವ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು 'ಇದೇ 25ರೊಳಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಈ ಬಗ್ಗೆ ದಿಲ್ಲಿಯಲ್ಲಿ ಮಂಗಳವಾರ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಆರ್.ಅಶೋಕ್, ಬಿ.ವೈ.ವಿಜಯೇಂದ್ರ ಅವರು ಭೇಟಿಯಾದ ಸಂದರ್ಭದಲ್ಲೂ ಪ್ರಸ್ತಾಪವಾಯಿತು. ಸತ್ಯ ಶೋಧನಾ ಸಮಿತಿ ಸಲ್ಲಿಸುವ ವರದಿಯ ವಿವರವನ್ನು ಸಲ್ಲಿಸಬೇಕು. ಆ ಮಾಹಿತಿ ಹಾಗೂ ತಪ್ಪಿತಸ್ಥರ ವಿವರ ಪರಿಶೀಲಿಸಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ನಿತಿನ್ ನಬಿನ್ ಅವರು ತಿಳಿಸಿದ್ದಾರೆ ಎನ್ನಲಾಗಿದೆ.

ನೀಟ್ ಎಕ್ಸಾಂ ದಿನದಂದು ಟ್ರಾಫಿಕ್ ಜಾಮ್ ಆಗಿರಲಿಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿಯಲ್ಲಿ ಭಾನುವಾರ (ಜೂ.21) ನಡೆದಿದ್ದ ನೀಟ್ (ಯುಜಿ)-2026 ಮರು ಪರೀಕ್ಷೆಗೆ ವಿದ್ಯಾರ್ಥಿನಿಯೊಬ್ಬಳು ಕೇಂದ್ರಕ್ಕೆ ತಡವಾಗಿ ಹೋಗಿ ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತಳಾದ ಸಂಬಂಧ ಜಾಲತಾಣಗಳಲ್ಲಿ ಹರಿದಾಡುತ್ತಿರುವ

- ■ ಕಾಂಗ್ರೆಸ್ ಸಮಾರಂಭದಂದು ವಿದ್ಯಾರ್ಥಿನಿ ತಡವಾಗಿ ಬಂದಿದ್ದಕ್ಕೆ ಸಿಕ್ತು ಸಿಸಿಟಿವಿ ಸಾಕ್ಷ್ಯ
- ■ ನೀಟ್ ಪರೀಕ್ಷೆಸುತ್ತ ರಾಜಕೀಯ ರಂಗು: ಬಿಜೆಪಿ ಆರೋಪ ಸುಳ್ಳು ಎಂದ ಗೃಹ ಸಚಿವ

ವದಂತಿಗಳಿಗೆ ಬೆಂಗಳೂರು ನಗರ ಪೊಲೀಸ್ (ಬಿಸಿಪಿ) ಹಾಗೂ ನಗರ ಸಂಚಾರ ಪೊಲೀಸರು (ಬಿಟಿಪಿ) ಸ್ಪಷ್ಟನೆ ನೀಡಿದ್ದಾರೆ.

ನೀಟ್ ಮರು ಪರೀಕ್ಷೆಯ ದಿನ ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ ಆಯೋಜನೆಯಾಗಿದ್ದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್‌ರ ಪದಗ್ರಹಣ ಸಮಾರಂಭದ ಕಾರಣಕ್ಕೆ ಉಂಟಾದ ಟ್ರಾಫಿಕ್ ಜಾಮ್‌ನಿಂದಾಗಿ ವಿದ್ಯಾರ್ಥಿನಿಗೆ ಪರೀಕ್ಷೆ ಬರೆಯುವ ಅವಕಾಶ ಕೈತಪ್ಪಿತು ಎಂಬ ಆರೋಪವನ್ನು ಪೊಲೀಸರು ಫ್ಯಾಕ್ಟ್ ಚೆಕ್ ವರದಿ ಮೂಲಕ ನಿರಾಕರಿಸಿದ್ದಾರೆ.

ವಿದ್ಯಾರ್ಥಿನಿ ಮನೆಯಿಂದ ಹೊರಟ ನಿಖರ ಸಮಯ, ವಿದ್ಯಾರ್ಥಿನಿ ಮನೆ ಬಳಿಯ ಸಿ.ಸಿ ಕ್ಯಾಮೆರಾಗಳ ದೃಶ್ಯಾವಳಿ, ವಿದ್ಯಾರ್ಥಿನಿ ಮತ್ತು ಪೋಷಕರ ಸಂಭಾಷಣೆ, ಪ್ರಯಾಣಿಸಿದ ಮಾರ್ಗ ವಿಶ್ಲೇಷಣೆಯ ಆಧಾರದಲ್ಲಿ ಪೊಲೀಸರು ಅಧಿಕೃತ ಫ್ಯಾಕ್ಟ್ ಚೆಕ್ ವರದಿ ಬಿಡುಗಡೆ ಮಾಡಿದ್ದಾರೆ.

ವಿದ್ಯಾರ್ಥಿನಿಗೆ ಪರೀಕ್ಷೆ ಬರೆಯುವ ಅವಕಾಶ ಕೈತಪ್ಪಲು ವಾಹನ ದಟ್ಟಣೆ ಕಾರಣವಲ್ಲ, ಸಿ.ಸಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ವೇಳೆ ವಿದ್ಯಾರ್ಥಿನಿಯು ಪರೀಕ್ಷೆಗೆ ಹೊರಡುವ ಸಮಯದಲ್ಲಿ ವಾಹನ ಸಂಚಾರ ಸಾಮಾನ್ಯವಾಗಿತ್ತು. ಪೊಲೀಸರು ಅಗತ್ಯವಿರುವ ಕಡೆ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ವಿದ್ಯಾರ್ಥಿನಿ ಮನೆಯಿಂದ ತುಂಬಾ ತಡವಾಗಿ ಹೊರಟಿದ್ದು ಮತ್ತು ಪರೀಕ್ಷಾ ಕೇಂದ್ರಕ್ಕೆ ಹೋಗಲು ಆಯ್ಕೆ ಮಾಡಿಕೊಂಡ ಮಾರ್ಗವು ವಿಳಂಬಕ್ಕೆ ಪ್ರಮುಖ ಕಾರಣಗಳೆಂದು ಪೊಲೀಸರು ವರದಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಖಾಕಿ ಫ್ಯಾಕ್ಟ್ ಚೆಕ್ !

- ■ ನೀಟ್ ಕೇಂದ್ರವನ್ನು (ಆರ್.ಸಿ. ಕಾಲೇಜು) ಪ್ರವೇಶಿಸಲು ಮಧ್ಯಾಹ್ನ 1.30 ಅಂತಿಮ ಸಮಯವಾಗಿತ್ತು.
- ■ ವಿದ್ಯಾರ್ಥಿನಿಯು ಆರ್.ಟಿ. ನಗರದ ತನ್ನ ಮನೆಯಿಂದ ಹೊರಟಿದ್ದು ಮಧ್ಯಾಹ್ನ 12:57ಕ್ಕೆ.
- ■ ಅಂದರೆ ಪರೀಕ್ಷಾ ಕೇಂದ್ರದ ಗೇಟ್ ಮುಚ್ಚಲು ಕೇವಲ 33 ನಿಮಿಷ ಬಾಕಿ ಇರುವಾಗ ಮನೆ ಬಿಟ್ಟಿದ್ದಾಳೆ
- ■ ಪರೀಕ್ಷಾ ಕೇಂದ್ರಕ್ಕೆ ತಲುಪಲು ಹತ್ತಿರದ ದಾರಿಗಳಿದ್ದರೂ, ಲಾಂಗ್ ರೂಟ್ ಆಯ್ಕೆ ಮಾಡಿಕೊಂಡಿದ್ದಾಳೆ
- ■ ವಿದ್ಯಾರ್ಥಿನಿ ಆರ್.ಸಿ. ಕಾಲೇಜು ಕೇಂದ್ರದ ಬಳಿ ತಲುಪಿದಾಗ ಸಮಯ ಮಧ್ಯಾಹ್ನ 1.33
- ■ ನಿಯಮದಂತೆ 3 ನಿಮಿಷ ತಡವಾದ್ದರಿಂದ ಸಿಬ್ಬಂದಿ ಒಳಗೆ ಬಿಟ್ಟಿಲ್ಲ

ತೇಜಸ್ವಿಗೆ ಪ್ರಿಯಾಂಕ್ ಸವಾಲು

ಬೆಂಗಳೂರು: ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭದ ಟ್ರಾಫಿಕ್‌ನಿಂದಾಗಿಯೇ ವಿದ್ಯಾರ್ಥಿನಿ ಕಣ್ಣೀರು ಹಾಕುವಂತಾಯಿತು ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಖಡಕ್ ಕೌಂಟರ್ ನೀಡಿದ್ದಾರೆ.

ಪೊಲೀಸರ ಫ್ಯಾಕ್ಟ್ ಚೆಕ್ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ''ಮೂವರು ವಿದ್ಯಾರ್ಥಿಗಳು ಮಾತ್ರ ನೀಟ್ ಪರೀಕ್ಷೆ ಬರೆದಿಲ್ಲ. ಆರ್.ಟಿ.ನಗರದ ವಿದ್ಯಾರ್ಥಿನಿ ತಡವಾಗಿ ಮಧ್ಯಾಹ್ನ 12.57ಕ್ಕೆ ಮನೆಯಿಂದ ಹೊರಟು ಪರೀಕ್ಷಾ ಕೇಂದ್ರಕ್ಕೆ ಹೋಗಿದ್ದಾರೆ. ಮಾಗಡಿಯಿಂದ ಬಂದ ಮತ್ತೊಬ್ಬ ವಿದ್ಯಾರ್ಥಿ ಹಳೆ ಪ್ರವೇಶಪತ್ರ (ಹಾಲ್ ಟಿಕೆಟ್) ತಂದಿದ್ದರು. ಇದರಲ್ಲಿ ರಾಜ್ಯ ಸರಕಾರದ ತಪ್ಪೇನಿದೆ? ವಿದ್ಯಾರ್ಥಿಗಳು ಯಾವಾಗ ಮನೆ ಬಿಟ್ಟರು, ಯಾವಾಗ ಪರೀಕ್ಷಾ ಕೇಂದ್ರಕ್ಕೆ ಬಂದರು ಎಂಬುದಕ್ಕೆ ಸಿ.ಸಿ ಕ್ಯಾಮೆರಾ ದೃಶ್ಯಾವಳಿಯಿದೆ. ಹಳೆಯ ಹಾಲ್ ಟಿಕೆಟ್ ತಂದರೆ ಅದಕ್ಕೆ ಹರಿಪ್ರಸಾದ್ ಕಾರಣನಾ? ಬಿಜೆಪಿ ಸಂಸದ ತೇಜಸ್ವಿ ಸೂರ್ಯ ದಾಖಲೆ ಇದ್ದರೆ ಕೊಡಲಿ,'' ಎಂದು ಸವಾಲು ಹಾಕಿದ್ದಾರೆ.

ಆರ್.ಸಿ.ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ತಡವಾಗಿ ಬಂದಿದ್ದ ಆರ್.ಟಿ.ನಗರದ ವಿದ್ಯಾರ್ಥಿನಿಗೆ ಪ್ರವೇಶ ನಿರಾಕರಿಸಲಾಗಿತ್ತು. ಬಳಿಕ ಪರೀಕ್ಷಾ ಕೇಂದ್ರದ ಗೇಟ್ ಹತ್ತಿ ಒಳಗೆ ಹೋಗಲು ಯತ್ನಿಸಿದ್ದ ಆ ವಿದ್ಯಾರ್ಥಿನಿಯನ್ನು ಭದ್ರತಾ ಸಿಬ್ಬಂದಿ ತಡೆದು ವಾಪಸ್ ಕಳುಹಿಸಿದ್ದರು. ಈ ಕಾರಣಕ್ಕೆ ವಿದ್ಯಾರ್ಥಿನಿ ಪೋಷಕರು ಪರೀಕ್ಷಾ ಕೇಂದ್ರದ ಬಳಿ ಆಕ್ರೋಶ ವ್ಯಕ್ತಪಡಿಸಿದ್ದರು. ಮತ್ತೊಂದೆಡೆ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹಾಗೂ ಮುಖಂಡರು, ಕೆಪಿಸಿಸಿ ನೂತನ ಅಧ್ಯಕ್ಷರ ಪದಗ್ರಹಣ ಸಮಾರಂಭದ ಕಾರಣಕ್ಕೆ ಟ್ರಾಫಿಕ್ ಜಾಮ್ ಉಂಟಾಗಿ ವಿದ್ಯಾರ್ಥಿನಿಗೆ ಪರೀಕ್ಷಾ ಕೇಂದ್ರಕ್ಕೆ ಹೋಗಲು ಸಾಧ್ಯವಾಗದೆ ಪರೀಕ್ಷೆ ಕೈತಪ್ಪಿತು ಎಂದು ಆರೋಪಿಸಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಅನುಭವ ಮಿಸ್ ಎಂದ ಡಿಸಿಎಂ

ಬೆಂಗಳೂರು: ಸಂಪುಟದಲ್ಲಿ ಅವಕಾಶ ಮಿಸ್ ಮಾಡಿಕೊಂಡಿರುವ ಹಿರಿಯ ಶಾಸಕ ಎಚ್.ಕೆ.ಪಾಟೀಲ್‌ರನ್ನು ಡಿಸಿಎಂ ಡಾ. ಪರಮೇಶ್ವರ್ ಮಂಗಳವಾರ ಭೇಟಿ ಮಾಡಿ ಒಟ್ಟಿಗೇ ಉಪಹಾರ ಸೇವಿಸಿ ಬಹುಹೊತ್ತು ಚರ್ಚಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪರಮೇಶ್ವರ್, ''ನಾವಿಬ್ಬರೂ ಸಮಾನ ಮನಸ್ಕರು. ಮಾಜಿ ಸಿಎಂ ಮೊಯಿಲಿ ಕಾಲದಿಂದಲೂ ಸಂಪುಟದಲ್ಲಿ ಒಡನಾಡಿಗಳಾಗಿದ್ದವರು. ಪಾಟೀಲ್ ಅವರಿಗೆ ಇರುವ ರಾಜಕೀಯ ಜ್ಞಾನ, ಅನುಭವವು ರಾಜಕೀಯವಾಗಿ ಪಕ್ಷದ ಸರಕಾರಕ್ಕೆ ಬಹಳ ಸಂದರ್ಭದಲ್ಲಿ ಅನುಕೂಲವಾಗಿದೆ. ಅದನ್ನು ನಾವು ಮಿಸ್ ಮಾಡಿಕೊಳ್ಳುತ್ತಿದ್ದೇವೆ,'' ಎಂದು ಬೇಸರ ತೋಡಿಕೊಂಡರು.

ಅತೃಪ್ತಿ ತೋಡಿಕೊಂಡ ಪಾಟೀಲ್: ಸಿಎಂ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಅವಕಾಶ ಕೈತಪ್ಪಿರುವ ಬಗ್ಗೆ ಎಚ್.ಕೆ.ಪಾಟೀಲ್ ಅಸಮಾಧಾನ ತೋಡಿಕೊಂಡರು. ''ಸಚಿವ ಆಗಬೇಕು ಎಂಬುದು ಅಭಿಮಾನಿಗಳ ಅಪೇಕ್ಷೆ. ನನಗೆ ಸಚಿವ ಸ್ಥಾನ ಸಿಗದಿರುವ ಬಗ್ಗೆ ಸಿಎಂ ಮತ್ತು ಎಐಸಿಸಿ ಅಧ್ಯಕ್ಷರನ್ನು ಕೇಳಬಹುದು,'' ಎಂದು ಪ್ರತಿಕ್ರಿಯಿಸಿದರು. ''ಎಐಸಿಸಿ ಅಧ್ಯಕ್ಷರು ನನಗೆ ಆತ್ಮೀಯರು. ನನ್ನ ನಡುವಿನ ಸಂಬಂಧ ಬಹಳ ಹಳೆಯದು. ಹಿಂದೆಲ್ಲಾ ಜತೆಯಾಗಿ ಕೆಲಸ ಮಾಡಿದ್ದೇವೆ. ಅವರು ನನ್ನ ಹಿತೈಷಿಗಳೂ ಹೌದು. ಸಂಪುಟ ರಚನೆ ಸಂದರ್ಭದಲ್ಲಿ ಕೂಡ ಭೇಟಿಯಾಗಿದ್ದೆ,'' ಎಂದು ಪರೋಕ್ಷವಾಗಿ ಖರ್ಗೆ ಅವರ ಸಂಬಂಧವೂ ನೆರವಿಗೆ ಬಾರದ ಬಗ್ಗೆ ಬೇಸರಿಸಿಕೊಂಡರು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ,
ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3,
ನಾರಾಯಣಪೂರ
ತಾ:ಹುಣಸಗಿ

Office of the Executive Engineer,
KBJNL, Dam Safety Unit-3
Narayanpur-585219
Email: kbjnl_eedam@yahoo.in

KBJNL/DSU-3/PB/AWP/2026-27/404 Dated:- 22.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ ಅಡಿ ಅನುಮೋದನೆಗೊಂಡಿರುವ ಟೆಂಡರು ಪ್ರಕಟಣೆ ಸಂ.386 ದಿನಾಂಕ: 19.06.2026 ಈ ವಿಭಾಗದಡಿಯಲ್ಲಿ ಬರುವ ವಾರ್ಷಿಕ ನಿರ್ವಹಣೆ ಕಾಮಗಾರಿಗಾಗಿ Two E-Document System ನ ಟೆಂಡರ್‌ಗಾಗಿ ಇ-ಪೋರ್ಟಲ್ https://kppp.karnataka.gov.in ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದ್ದು, Qualification criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲೆಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ದರ್ಜೆ ಗುತ್ತಿಗೆದಾರರು ಭಾಗವಹಿಸತಕ್ಕದ್ದು. ಟೆಂಡರ್ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ.

ಕ್ರ.ಸಂ.	ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1)	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿ:23.06.2026 ರಿಂದ ದಿ:03.07.2026 ಸಂಜೆ 5.00 ಗಂಟೆಯವರೆಗೆ
2)	ಗುತ್ತಿಗೆದಾರರು ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	ದಿ: 03.07.2026 ಸಂಜೆ 5.00 ಗಂಟೆಯವರೆಗೆ
3)	ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ ಇವರ ಕಚೇರಿಯಲ್ಲಿ)	ದಿ: 04.07.2026 ಸಂಜೆ 5.15ಗಂಟೆಗೆ
4)	ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ ಇವರ ಕಚೇರಿಯಲ್ಲಿ)	ದಿ: 06.07.2026 ಬೆಳಿಗ್ಗೆ 11.00 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಗುತ್ತಿಗೆದಾರರು ಇ-ಪೋರ್ಟಲ್ https://kppp.karnataka.gov.in ಮುಖಾಂತರ ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/-
ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ-3, ನಾರಾಯಣಪೂರ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ - ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
ಮುಖ್ಯ ಯೋಜನಾಧಿಕಾರಿರವರ ಕಛೇರಿ, ಯೋಜನಾ ಅನುಷ್ಠಾನ ಘಟಕ,
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಲೋಕೋಪಯೋಗಿ ಇಲಾಖೆ ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ,
ಬೆಂಗಳೂರು-560001. ವೆಬ್‌ಸೈಟ್: www.shdpkar.in ಇ-ಮೇಲ್: cposhdp2020@gmail.com

ಸಂ: ಮುಯೋಅ/ರಾಹೆಅಯೋ/ತಾಂತ್ರಿಕ/ಸಕಾಇಂ-7/ಟೆಂಡರ್-ಡಿಪಿಆರ್/2026-27/834 ದಿನಾಂಕ: 23-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 04/2026-27 ದಿನಾಂಕ: 23.06.2026
ಅಲ್ಪಾವಧಿ ಟೆಂಡರ್ ಪ್ರಕಟಣೆ (2&3ನೇ ಕರೆ)

ಅಧೀಕ್ಷಕ ಅಭಿಯಂತರರು-1 & 2, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ಇವರು ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-5 ಘಟ್ಟ-2ರಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಲೋಕೋಪಯೋಗಿ ಇಲಾಖೆಯಡಿಯಲ್ಲಿನ ಹದಿಮೂರು (13) ವಿಭಾಗಗಳ ವ್ಯಾಪ್ತಿಯ 10 ಪ್ಯಾಕೇಜ್‌ನ (5 ಪ್ಯಾಕೇಜ್‌ಗಳಿಗೆ ಕರೆ-2 ಮತ್ತು 5 ಪ್ಯಾಕೇಜ್‌ಗಳಿಗೆ ಕರೆ-3) ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (DPR) ಸಿದ್ಧಪಡಿಸಲು ಕೆಳಕಂಡಂತೆ ಕೆಪಿಪಿ ಪೋರ್ಟಲ್ ಮೂಲಕ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ (KC-4) ಹಾಗೂ KTPP Act-1999 & Rules-2000 ಹಾಗೂ Request For Proposal (RFP) ಅನುಸಾರವಾಗಿ Quality & Cost Based Selection (QCBS) ನಡಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಪ್ಯಾಕೇಜ್ ಕಾಮಗಾರಿಗಳ ವಿವರ	ರಸ್ತೆ ಉದ್ದ	ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ (ಜಿಎಸ್‌ಟಿ ಹೊರತುಪಡಿಸಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
1	10 ಪ್ಯಾಕೇಜ್‌ಗಳು- ಕೆಪಿಪಿ ಪೋರ್ಟಲ್‌ನಲ್ಲಿ ವಿವರಗಳನ್ನು ಪಡೆದುಕೊಳ್ಳುವುದು	ಟೆಂಡರ್‌ಗಿಟ್ಟ ಪ್ಯಾಕೇಜ್‌ವಾರು ರಸ್ತೆಯ ಉದ್ದದ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳುವುದು	ರೂ. 20000/- ಪ್ರತಿ ಕಿಮೀ ಗೆ	ಕೆಪಿಪಿ ಪೋರ್ಟಲ್‌ನಲ್ಲಿ ಪ್ಯಾಕೇಜ್‌ವಾರು ಇ.ಎಂ.ಡಿ ವಿವರಗಳನ್ನು ಪಡೆದುಕೊಳ್ಳುವುದು	30 ದಿನಗಳು

➢ ವಿಭಾಗ/ಜಿಲ್ಲಾವಾರು ಉದ್ದೇಶಿತ ಪ್ಯಾಕೇಜ್ ಕಾಮಗಾರಿ, ಇಎಂಡಿ ಮತ್ತು ಟೆಂಡರ್ ವಿವರಗಳು ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಲಭ್ಯವಿರುತ್ತವೆ.

ಟೆಂಡರ್ ಪ್ರಕ್ರಿಯೆಯ ವಿವರಗಳು:- (1) ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ದಾಖಲಾತಿಗಳನ್ನು ದಿನಾಂಕ: 24.06.2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. (2) ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಪೂರ್ವಭಾವಿ ಸಭೆಯನ್ನು ದಿನಾಂಕ: 29.06.2026 ರಂದು ಬೆಳಿಗ್ಗೆ 11.30 ಗಂಟೆಗೆ ಈ ಕಛೇರಿಯಲ್ಲಿ ಕೈಗೊಳ್ಳಲಾಗುವುದು. (3) ಕೆಪಿಪಿ ಪೋರ್ಟಲ್‌ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 01.07.2026, 16-30 ಗಂಟೆವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 03.07.2026. (5) ತಾಂತ್ರಿಕ ಬಿಡ್ ಅನುಮೋದನೆಗೊಂಡ ಸಮಾಲೋಚಕರುಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16.07.2026. (6) ತಿದ್ದುಪಡಿ ಪ್ರಕಟಣೆಗಳು, ಮಾರ್ಪಾಡುಗಳ ಪ್ರಕಟಣೆಗಳು ಮತ್ತು ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಇನ್ನು ಮುಂದೆ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿತ ಸಮಾಲೋಚಕರುಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಮುಖ್ಯ ಯೋಜನಾಧಿಕಾರಿಯವರ ಕಛೇರಿ, ಯೋಜನಾ ಅನುಷ್ಠಾನ ಘಟಕ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ರವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್ ಸೈಟ್ ಮೂಲಕ: www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಕೆಪಿಪಿ ಪೋರ್ಟಲ್‌ನ ಸಹಾಯವಾಣಿ support@eprochelpdesk.com ದೂರವಾಣಿ ಸಂಖ್ಯೆ: +91-9240214000 / +91-9240214001.

ಸಹಿ/- ಅಧೀಕ್ಷಕ ಇಂಜಿನಿಯರ್-1 & 2,
ಯೋಜನಾ ಅನುಷ್ಠಾನ ಘಟಕ,
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು.

DIPR/CP/1320/SMCL/2026-27

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಎಚ್ಡಿಕೆ ರಾಜಕೀಯ: ಉಪ ಮುಖ್ಯಮಂತ್ರಿ ಪರಮೇಶ್ವರ್ ಕಿಡಿ

ಕುಮಾರಸ್ವಾಮಿ ವಿರುದ್ಧ ಮುಗಿಬಿದ್ದ ಕೈ ನಾಯಕರು

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸಕಾರಾತ್ಮಕ ಸಲಹೆ ನೀಡುವ ಬದಲು ರಾಜಕೀಯ ಟೀಕೆಯಲ್ಲಿ ತೊಡಗಿದ್ದಾರೆ ಎಂದು ಡಿಸಿಎಂ ಡಾ.ಜಿ.ಪರಮೇಶ್ವರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ರೈತರನ್ನು ಬಲವಂತವಾಗಿ ಒಕ್ಕಲೆಬ್ಬಿಸುವುದಿಲ್ಲ, ಅಹವಾಲುಗಳನ್ನು ಆಲಿಸಿ, ಸಂಧಾನದ ಮೂಲಕ ಯೋಜನೆ ಜಾರಿ ಮಾಡಲು ಸರಕಾರ ಪ್ರಯತ್ನ ಮಾಡಲಿದೆ ಎಂದು ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಬಿಡದಿ ಟೌನ್‌ಶಿಪ್ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿದೆ. ಯೋಜನೆಗೆ ಹುಡ್ಕೋ ಮೂಲಕ ಅನುದಾನ ಹೊಂದಿಸುವ ಬಗ್ಗೆಯೂ ವಿಸ್ತೃತವಾಗಿ ಚರ್ಚಿಸಲಾಗಿದೆ. ಯೋಜನೆ ವಿಚಾರದಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ,'' ಎಂದು ಹೇಳಿದರು.

''ಕುಮಾರಸ್ವಾಮಿ ಅವರು ಕಾಂಗ್ರೆಸ್ ನಾಯಕರ ಹಳೆಯ ಹೇಳಿಕೆಗಳನ್ನು ತೋರಿಸಿ, ರಾಜಕೀಯ ಮಾಡುತ್ತಿದ್ದಾರೆ. ಈ ರೀತಿ ಅಡ್ಡಿ ಮಾಡುವ ಬದಲು ಸಕಾರಾತ್ಮಕ ಸಲಹೆ ನೀಡಲಿ. ಪ್ರತಿಯೊಂದು ಅನುಮಾನ, ಆರೋಪಗಳಿಗೂ ಸೂಕ್ತ ಉತ್ತರ ಕೊಡಲು ಸರಕಾರ ಸಿದ್ಧವಿದೆ. ಅದನ್ನು ಬಿಟ್ಟು ಕುಮಾರಸ್ವಾಮಿ ಅವರು ಬೀದಿಗಿಳಿದು ಹೋರಾಟ ಮಾಡುತ್ತೇವೆ ಎಂದರೆ ರಾಜಕೀಯವಲ್ಲವೇ,'' ಎಂದು ಪ್ರಶ್ನಿಸಿದರು.

''ಕೆಲವು ರೈತರು ನಮ್ಮದು ಒಣ ಭೂಮಿಯಾಗಿದ್ದು, ಅನುಕೂಲವಿಲ್ಲ, ಭೂಮಿಯನ್ನು ಕೊಡಲು ಸಿದ್ಧರಿದ್ದೇವೆ. ಹೆಚ್ಚಿನ ಪರಿಹಾರ ಬೇಕು ಎಂದು ಕೇಳುತ್ತಿದ್ದಾರೆ,'' ಎಂದು ಸಮರ್ಥನೆ ಮಾಡಿಕೊಂಡರು.

ಕುಮಾರಸ್ವಾಮಿಗೆ ಕನಿಷ್ಠ ಜ್ಞಾನವಿಲ್ಲ: ಬಾಲಕೃಷ್ಣ

ಬಿಡದಿ ಟೌನ್‌ಶಿಪ್ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವ ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಕನಿಷ್ಠ ಜ್ಞಾನವಿಲ್ಲ. ರಾಜ್ಯದ ನಾನಾ ಭಾಗಗಳಲ್ಲಿ ಭೂಸ್ವಾಧೀನದ ಬಗ್ಗೆ ತುಟಿಬಿಚ್ಚದ ಕುಮಾರಸ್ವಾಮಿ ಮತ್ತು ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರು ಬಿಡದಿಯಲ್ಲಿ ಮಾತ್ರ ಏಕೆ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಟೌನ್‌ಶಿಪ್ ವಿರುದ್ಧ ಪ್ರತಿಭಟನೆಗೆ ಮಂಡ್ಯ, ಮೈಸೂರು ಭಾಗದಿಂದ ಕಾಸು ಕೊಟ್ಟು ಜನರನ್ನು ಕರೆಸಲಾಗಿದೆ. ರೈತರನ್ನು ಎತ್ತಿಕಟ್ಟಿ ರಾಜಕೀಯ ಮಾಡಲಾಗುತ್ತಿದೆ. ಹಾಸನಕ್ಕೆ ಐಐಟಿ ಕಾಲೇಜು ಮಂಜೂರಾಗುವ ಮುನ್ನವೇ 1,800 ಎಕರೆ ಭೂಸ್ವಾಧೀನ ಮಾಡಲಾಗುತ್ತಿದೆ. ಸರ್ಜಾಪುರ, ಚಿಕ್ಕಬಳ್ಳಾಪುರ, ಜಂಗಮಕೋಟೆ, ದೊಡ್ಡಬಳ್ಳಾಪುರದಲ್ಲಿ ನಾನಾ ಯೋಜನೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದೆ. ಈ ಯಾವುದೂ ಕುಮಾರಸ್ವಾಮಿ ಅವರಿಗೆ ಕಾಣುತ್ತಿಲ್ಲ, ಅಲ್ಲಿನವರು ರೈತರಲ್ಲವೇ?,'' ಎಂದು ತರಾಟೆಗೆ ತೆಗೆದುಕೊಂಡರು.

''ಯೋಜನೆ ಕುರಿತಂತೆ ಚರ್ಚೆಗೆ ಮುಖ್ಯಮಂತ್ರಿಗಳು ದಿನಾಂಕ ನಿಗದಿಪಡಿಸಿ, ಆಹ್ವಾನ ನೀಡಿದ ಬಳಿಕ ವಿಧಾನಸೌಧಕ್ಕೆ ಬರುವುದಿಲ್ಲ, ಭೈರಮಂಗಲಕ್ಕೆ ಬನ್ನಿ ಎಂದು ಕುಮಾರಸ್ವಾಮಿ ಅವರು ಹೇಳುತ್ತಿರುವುದು ಬಾಲಿಶ ವರ್ತನೆ. ಪ್ರಬುದ್ಧ ನಾಯಕರಿಗೆ ಇರಬೇಕಾದ ಕನಿಷ್ಠ ಜ್ಞಾನ ಕುಮಾರಸ್ವಾಮಿ ಅವರಿಗೆ ಇಲ್ಲ. ಮುಖ್ಯಮಂತ್ರಿಗಳು ಬೀದಿಯಲ್ಲಿ ಚರ್ಚೆಗೆ ನಿಲ್ಲಲು ಸಾಧ್ಯವೇ? ಹೆಚ್ಚು ಜನರ ಸೇರಿ ಮಾರಾಮಾರಿ ನಡೆದರೆ ಯಾರು ಹೊಣೆ? ಅಲ್ಲಿ ಗಲಾಟೆಯಾದರೆ ಕಾನೂನು -ಸುವ್ಯವಸ್ಥೆ ಸರಿ ಇಲ್ಲ ಎಂದು ಸರಕಾರದ ತಲೆಗೆ ಕಟ್ಟುವ ಹುನ್ನಾರ ಕುಮಾರಸ್ವಾಮಿ ಅವರದ್ದಾಗಿದೆ,'' ಎಂದು ದೂರಿದರು.

ನಿಖಿಲ್ ಜಮೀನು ಕೊಟ್ಟರೆ ಲೇಔಟ್

''ಬಿಡದಿ ಯೋಜನೆ ಕೈಬಿಟ್ಟರೆ ತಮ್ಮ 5 ಎಕರೆಯನ್ನು ಜನರಿಗೆ ನೀಡುವುದಾಗಿ ನಿಖಿಲ್ ಹೇಳಿದ್ದಾರೆ. ತಮ್ಮ ಮಾತಿನಂತೆ ಜಮೀನು ಬಿಟ್ಟುಕೊಟ್ಟರೆ ಅವರ ಹೆಸರಿನಲ್ಲೇ ಬಡಾವಣೆ ನಿರ್ಮಾಣ ಮಾಡಿ, ಹೋರಾಟ ಮಾಡುತ್ತಿರುವ ರೈತರಿಗೆ ಒಂದೊಂದು ನಿವೇಶನ ನೀಡುತ್ತೇವೆ,'' ಎಂದು ಬಾಲಕೃಷ್ಣ ಟಾಂಗ್ ನೀಡಿದರು. ''ಕುಮಾರಸ್ವಾಮಿ ಕುಟುಂಬದವರು ಬೇನಾಮಿ ಜಮೀನು ಮಾಡಿ, ಈಗ ಪರಿಹಾರ ಬೇನಾಮಿಗೆ ಹೋಗಬಾರದು ಎಂದು ನಾಟಕವಾಡುತ್ತಿದ್ದಾರೆ. 10 ಲಕ್ಷಕ್ಕೆ ಖರೀದಿಸಿದ್ದ ಜಮೀನು ಈಗ 2 ಕೋಟಿಗೆ ಹೋಗುತ್ತಿದೆ,'' ಎಂದರು.

ಸಾಬೀತುಪಡಿಸಿದರೆ ರಾಜೀನಾಮೆ

ಬಿಡದಿ ಟೌನ್‌ಶಿಪ್ ಯೋಜನೆಗೆ ಬೆಂಬಲ ನೀಡುವ ಶಾಸಕರಿಗೆ ಒಂದೊಂದು ನಿವೇಶನ ನೀಡಲಾಗುತ್ತಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ''ಕುಮಾರಸ್ವಾಮಿ ಅವರಿಗೆ ಮಾನ-ಮರ್ಯಾದೆ ಇದ್ದರೆ ದಾಖಲೆ ಸಮೇತ ಹೇಳಬೇಕು. ಕೇಂದ್ರದ ಸಚಿವರಾಗಿ ಈ ರೀತಿ ಕ್ಷುಲ್ಲಕ ಹೇಳಿಕೆ ನೀಡುವ ಚಿಲ್ಲರೆ ರಾಜಕಾರಣ ಬಿಡಲಿ. ಶಾಸಕರಿಗೆ ನಿವೇಶನದ ಆಫರ್ ಸಾಬೀತುಪಡಿಸಿದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ. ಇಲ್ಲವಾದರೆ ಕುಮಾರಸ್ವಾಮಿ ಅವರು ರಾಜಕೀಯ ನಿವೃತ್ತಿ ಪಡೆಯಲು ಸಿದ್ಧರಿದ್ದಾರಾ?'' ಎಂದು ನೇರವಾಗಿ ಸವಾಲು ಹಾಕಿದರು.

ವಿಧಾನಸೌಧವಲ್ಲ, ರೈತರ ನಡುವೆಯೇ ಚರ್ಚೆ ಆಗಲಿ: ಎಚ್ಡಿಕೆ



''ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ, ರೈತರ ಪರವಾಗಿ ನಾನು ಧ್ವನಿ ಎತ್ತಿದ್ದು, ಸಮಸ್ಯೆಯಲ್ಲಿರುವ ಜನರ ಮಧ್ಯೆಯೇ ಚರ್ಚೆ ಆಗಲಿ,'' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಯೋಜನೆ ಬಗ್ಗೆ ವಿಧಾನಸೌಧಕ್ಕೆ ಚರ್ಚೆಗೆ ಬನ್ನಿ ಎಂಬ ಮುಖ್ಯಮಂತ್ರಿಗಳ ಆಹ್ವಾನದ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ,''ಜೂ.26 ರಂದು ವಿಧಾನಸೌಧಕ್ಕೆ ಚರ್ಚೆಗೆ ಬನ್ನಿ ಎಂದು ಸಿಎಂ ಕರೆದಿದ್ದಾರೆ. ಆದರೆ, ತಿಂಗಳ ಮೊದಲೇ ಜೂ.26ಕ್ಕೆ ಮೂರು ಕಾರ್ಯಕ್ರಮಗಳು ಪೂರ್ವ ನಿಗದಿಯಾಗಿವೆ. ಹಾಗಾಗಿ, ಮರುದಿನ ಜೂ.27ಕ್ಕೆ ಚರ್ಚೆಗೆ ಬರಲು ಸಿದ್ಧ ಎಂದು ಪತ್ರ ಬರೆದಿದ್ದೇನೆ. ಮುಖ್ಯಮಂತ್ರಿಗಳಿಂದ ಉತ್ತರದ ನಿರೀಕ್ಷೆಯಲ್ಲಿದ್ದೇನೆ,'' ಎಂದು ತಿಳಿಸಿದರು. ''ಚರ್ಚೆಗೆ ನೀವು ಮತ್ತು ನಿಮ್ಮ ಐದಾರು ತಂಡದೊಂದಿಗೆ ವಿಧಾನಸೌಧಕ್ಕೆ ಬನ್ನಿ ಎಂದು ಸಿಎಂ ಪತ್ರದಲ್ಲಿ ತಿಳಿಸಿದ್ದಾರೆ. ಆದರೆ, ನನ್ನ ಬಳಿ ಇರುವುದು ಒಂದೇ ತಂಡ ಮತ್ತು ಅದು ರೈತರ ಪರವಾದ ತಂಡ. ಅದಕ್ಕಾಗಿ ವಿಧಾನಸೌಧ ಬದಲಿಗೆ ಬಿಡದಿ ಅಥವಾ ಭೈರಮಂಗಲದಲ್ಲಿ ಚರ್ಚೆ ಆಗಬೇಕು,'' ಎಂದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ
ದೂರವಾಣಿ ಸಂ: 08352-259855,
ಇ-ಮೇಲ್: ka.vijayapura.dudc@gmail.com
ವೆಬ್‌ಸೈಟ್: www.vijayapuradudc.mrc.gov.in
ಕ್ರ.ಸಂ:ಜಿನಕೊ-5/ಇಂದಿರಾ ಕ್ಯಾಂಟೀನ್/ಟೆಂಡರ್/2026-27
ದಿನಾಂಕ:22.06.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

ವಿಜಯಪುರ ಜಿಲ್ಲೆಯ ಮನಗೂಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿನ ಇಂದಿರಾ ಕ್ಯಾಂಟೀನ್‌ನಲ್ಲಿ ಉಪಹಾರ ಮತ್ತು ಊಟ ಸರಬರಾಜು ಮಾಡಲು KG ಟೆಂಡರ ಡಾಕ್ಯುಮೆಂಟ್ ಉಪಯೋಗಿಸಿ ನೊಂದಾಯಿತ ಅರ್ಹ ಗುತ್ತಿಗೆದಾರ/ ಸಪ್ಲೈರ ರವರಿಂದ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಇಂಡೆಂಟ್ ನಂ. DMA/2026-27/IND6377
ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 30.06.2026 ಸಮಯ 16.00.
ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರ ಸಪ್ಲೈರ ರವರು ಹೆಚ್ಚಿನ ವಿವರಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬಸೈಟ್ www.kppp.karnataka.gov.in ಮೂಲಕ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಕೆಲಸದ ಕುರಿತು ಯಾವುದೇ ವಿವರಗಳನ್ನು ಕಛೇರಿಯ ವೇಳೆಯಲ್ಲಿ ಕಾ.ಅ/ಸ.ಕಾ.ಅ ಇವರನ್ನು ಸಂಪರ್ಕಿಸಬಹುದು. ತಿದ್ದುಪಡಿ/ಸೇರ್ಪಡೆ ಇದ್ದಲ್ಲಿ ಇ-ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ- ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ವಾಸಾಸಂಇ/ವಿಜಯಪುರ/172/ಕೆಎಸ್‌ಎಂಸಿಎ/2026-27

ಕೆಐಎಡಿಬಿ ಹೊಸ ಸೂತ್ರಕ್ಕೆ ರೈತರು ಓಕೆ!

■ **ವಿಕ ಸುದ್ದಿಲೋಕ** ಬೆಂಗಳೂರು

ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ನಡೆಸುವ ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ಈಗ ದೊಡ್ಡ ಬದಲಾವಣೆಯೊಂದು ಕಂಡುಬರುತ್ತಿದ್ದು, ರೈತರು ನಗದು ಪರಿಹಾರದ ಬದಲಿಗೆ 'ಅಭಿವೃದ್ಧಿಪಡಿಸಿದ ನಿವೇಶನ' ಪಡೆಯಲು ಮುಗಿಬೀಳುತ್ತಿದ್ದಾರೆ.

ದೇವನಹಳ್ಳಿ ಸಮೀಪ ಐಟಿಐಆರ್ ಯೋಜನೆಗೆ ಮೊದಲ ಹಂತದಲ್ಲಿ ಭೂಸ್ವಾಧೀನ ಸಂದರ್ಭದಲ್ಲಿ ಹೆಚ್ಚಿನ ರೈತರು ನಗದು ಪರಿಹಾರ ಪಡೆದುಕೊಂಡಿದ್ದರು. ಬಹಳಷ್ಟು ಕಡಿಮೆ ಭೂಮಾಲೀಕರು ಅಭಿವೃದ್ಧಿ ಪಡಿಸಿದ ಜಾಗ ಆಯ್ಕೆ ಮಾಡಿಕೊಂಡಿದ್ದರು. ಈ ಆಸ್ತಿಗಳಿಗೆ ಚದರಡಿ ಲೆಕ್ಕದಲ್ಲಿ ಹಲವು ಪಟ್ಟು ದರ ಏರಿಕೆಯಾದ ಹಿನ್ನೆಲೆಯಲ್ಲಿ ಸದ್ಯ 4 ಮತ್ತು 5ನೇ ಹಂತದ ಯೋಜನೆಯಲ್ಲಿ ಲಿಂಗನಹಳ್ಳಿ, ರಬ್ಬನಹಳ್ಳಿ, ರಾಮನಾಥಪುರ ಮತ್ತು ಅರವನಹಳ್ಳಿ ಭಾಗದಲ್ಲಿ ಬಹುಪಾಲು ರೈತರು ಅಭಿವೃದ್ಧಿಗೊಂಡ ಭೂಮಿಗೇ ಬೇಡಿಕೆ ಸಲ್ಲಿಸುತ್ತಿದ್ದಾರೆ.

ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶಕ್ಕೆ ಅರವನಹಳ್ಳಿ, ದೊಡ್ಡಗೊಲ್ಲಹಳ್ಳಿ, ಚಪ್ಪರದಹಳ್ಳಿ ಮತ್ತು ಭೈರದೇವನಹಳ್ಳಿಯಲ್ಲಿ ಮೊದಲ ಹಂತದಲ್ಲಿ 867 ಎಕರೆ 37 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು, ಪ್ರತಿ ಎಕರೆಗೆ 1.35 ಕೋಟಿ ಪರಿಹಾರ ಮೊತ್ತ ನಿಗದಿಯಾಗಿತ್ತು. ಒಟ್ಟು 280 ಎಕರೆಯಷ್ಟು ಭೂಮಾಲೀಕರಿಂದ ಮಾತ್ರ ಅಭಿವೃದ್ಧಿ ಪಡಿಸಿದ ಭೂಮಿಗೆ ಕೋರಿಕೆ ಬಂದಿತ್ತು. ನಂತರ ಆದಿನಾರಾಯಣ ಹೊಸಹಳ್ಳಿ 2ನೇ ಹಂತಕ್ಕಾಗಿ ಆದಿನಾರಾಯಣ ಹೊಸಹಳ್ಳಿ, ನಾಗದೇನಹಳ್ಳಿ, ಕೊನಘಟ್ಟದಲ್ಲಿ 971 ಎಕರೆ 24 ಗುಂಟೆ ಭೂಮಿ ಸ್ವಾಧೀನಪಡಿಸಿಕೊಂಡು ಪ್ರತಿ ಎಕರೆಗೆ 1.70 ಕೋಟಿ ರೂ ಪರಿಹಾರ ನಿಗದಿಪಡಿಸಲಾಗಿತ್ತು. 520 ಎಕರೆಯಷ್ಟು ಭೂಮಾಲೀಕರಿಂದ ಅಭಿವೃದ್ಧಿಪಡಿಸಿದ ಭೂಮಿಗೆ ಕೋರಿಕೆ ಸ್ವೀಕೃತವಾಗಿದ್ದವು.



ಯಾವುದೇ ಕೈಗಾರಿಕಾ ಪ್ರದೇಶದಲ್ಲಿ ರೈತರು ತಾವು ಬಯಸಿದ ಜಾಗದಲ್ಲಿ ಅಭಿವೃದ್ಧಿ ಪಡಿಸಿದ ಭೂಮಿ ಆಯ್ಕೆ ಮಾಡಿಕೊಂಡ ಬಳಿಕವಷ್ಟೇ ಉದ್ದಿಮೆಗಳಿಗೆ ಭೂಮಿ ಕೊಡುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಅವಕಾಶ ಬಳಸಿಕೊಂಡು ರೈತ ಮಕ್ಕಳೂ ಉದ್ಯಮಿಗಳಾಗಬೇಕು ಮತ್ತು ಅವರ ಕುಟುಂಬಗಳೂ ಅಭಿವೃದ್ಧಿಯ ಭಾಗವಾಗಬೇಕು ಎಂಬುದು ಆಶಯ.
- ಎಂ.ಬಿ.ಪಾಟೀಲ್ ಕೈಗಾರಿಕೆ ಸಚಿವ

ಅಭಿವೃದ್ಧಿ ಪಡಿಸಿದ ಭೂಮಿಯಲ್ಲಿ ಪಾಲು ಪಡೆದುಕೊಂಡವರ ಆಸ್ತಿಗೆ ಏಳೆಂಟು ಪಟ್ಟು ಪರಿಹಾರ ಹೆಚ್ಚಳವಾದ ಹಿನ್ನೆಲೆಯಲ್ಲಿ ನಂತರದ ಹಂತದಲ್ಲಿ ರೈತರು ಈ ಆಯ್ಕೆಗೇ ಹೆಚ್ಚು ಒಲವು ತೋರಿದ್ದಾರೆ. ಲಿಂಗನಹಳ್ಳಿ, ರಬ್ಬನಹಳ್ಳಿ, ರಾಮನಾಥಪುರ ಮತ್ತಿತರ ಗ್ರಾಮಗಳ 1,097 ಎಕರೆ ಭೂಸ್ವಾಧೀನ ಮಾಡಿಕೊಳ್ಳಲಾಗಿದ್ದು, ಪ್ರತಿ ಎಕರೆಗೆ 1.83 ಕೋಟಿ ರೂ.ಪರಿಹಾರ ನಿಗದಿಯಾಗಿದೆ. ಆದರೆ, ಸುಮಾರು 750 ಎಕರೆಯಷ್ಟು ಭೂಮಿಯ ಮಾಲೀಕರು ಅಭಿವೃದ್ಧಿಪಡಿಸಿದ ಭೂಮಿ ಆಯ್ಕೆ ಮಾಡಿಕೊಂಡು ಕೆಐಎಡಿಬಿಗೆ ಅರ್ಜಿ ಸಲ್ಲಿಸಿದ್ದಾರೆ.

ಲಾಭದ ಲೆಕ್ಕಾಚಾರ ಏನು ?: ಎಕರೆಗೆ 1.35 ಕೋಟಿ ರೂ. ನಗದು ಪರಿಹಾರ ಪಡೆಯುವ ಬದಲು, ಅಭಿವೃದ್ಧಿಪಡಿಸಿದ ನಿವೇಶನ ಪಡೆದ ರೈತರಿಗೆ ಇಂದು ಪ್ರತಿ ಚದರ ಅಡಿಗೆ 7,000 ರೂ.ನಿಂದ 8,000 ರೂ.ವರೆಗೆ ಭಾರಿ ಮಾರುಕಟ್ಟೆ ಬೆಲೆ ಸಿಗುತ್ತಿದೆ!

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.174

ಕೆಎಎಸ್ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಕ್ಕೂ ಅನುಮತಿ ನೀಡದ ಹೈಕೋರ್ಟ್ | ನೇಮಕಾತಿ ಇನ್ನಷ್ಟು ವಿಳಂಬ ಸಾಧ್ಯತೆ

ಮೀಸಲು ಹೆಚ್ಚಳ, ಜು.15ರಿಂದ ಅಂತಿಮ ವಿಚಾರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಸಾಂದರ್ಭಿಕ ಚಿತ್ರ

ರಾಜ್ಯದಲ್ಲಿ ಸರಕಾರಿ ಉದ್ಯೋಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಒಟ್ಟು ಮೀಸಲು ಪ್ರಮಾಣವನ್ನು ಶೇ.50 ರಿಂದ 56ರಷ್ಟು ಹೆಚ್ಚಳ ಕುರಿತ ಮೇಲ್ಮನವಿಗಳ ಅಂತಿಮ ವಿಚಾರಣೆಯನ್ನು ಹೈಕೋರ್ಟ್ ಜು.15ಕ್ಕೆ ನಿಗದಿಪಡಿಸಿದೆ. ಇದರಿಂದಾಗಿ ರಾಜ್ಯ ಸರಕಾರ ನಡೆಸಲು ಉದ್ದೇಶಿಸಿರುವ 56 ಸಾವಿರಕ್ಕೂ ಅಧಿಕ ಹುದ್ದೆಗಳ ನೇಮಕ ಪ್ರಕ್ರಿಯೆ ಮತ್ತಷ್ಟು ವಿಳಂಬವಾಗುವ ಸಾಧ್ಯತೆಯಿದೆ.

ಮೀಸಲು ಅಧಿಸೂಚನೆ ರದ್ದು ಕೋರಿ ಡಾ. ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಮಹೇಂದ್ರ ಕುಮಾರ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಗೂ 2023ರಲ್ಲಿ ಹಿಂದಿನ ಬಿಜೆಪಿ ಸರಕಾರ ಜಾರಿಗೊಳಿಸಿದ್ದ ಕಾಯಿದೆ ರದ್ದುಗೊಳಿಸಿದ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ (ಕೆಎಸ್ಎಟಿ) ಆದೇಶದ ವಿರುದ್ಧ ಸರಕಾರ ಮತ್ತಿತರರು ಸಲ್ಲಿಸಿರುವ ಮೇಲ್ಮನವಿಗಳು ಮಂಗಳವಾರ ಸಿಜೆ ವಿಭು ಬಖ್ರು ಹಾಗೂ ನ್ಯಾ.ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದವು.

ಆಗ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ''ಮೇಲ್ಮನವಿಗಳ ಸಂಬಂಧ ಲಿಖಿತ ವಾದಾಂಶ ಸಲ್ಲಿಸಲಾಗಿದೆ. ಮುಂದಿನ ವಾರ ಯಾವುದೇ ದಿನ ವಿಚಾರಣೆಗೆ ನಿಗದಿ ಮಾಡಬಹುದು,'' ಎಂದು ಕೋರಿದರು. ಅದಕ್ಕೆ ನ್ಯಾಯಪೀಠ, ''ಕಳೆದ ವಿಚಾರಣೆ ವೇಳೆ ಸರಕಾರ ಯಾವುದೇ ಕಾರಣಕ್ಕೂ ವಿಚಾರಣೆ ಮುಂದೂಡಿಕೆಗೆ ಮನವಿ ಮಾಡುವುದಿಲ್ಲ ಎಂದು ಹೇಳಿತ್ತಲ್ಲಾ,'' ಎಂದು ಪ್ರಶ್ನಿಸಿತು.

ಆಗ ಅರ್ಜಿದಾರರ ಪರ ಹಿರಿಯ ವಕೀಲ ಪಿ.ಎಸ್.ರಾಜಗೋಪಾಲ್, ''ಮೀಸಲು ಹೆಚ್ಚಳಕ್ಕೆ ರಾಷ್ಟ್ರೀಯ ಆಯೋಗದೊಂದಿಗೆ ಚರ್ಚೆ ಮಾಡಿಲ್ಲ ಎಂಬ ಕಾರಣಕ್ಕೆ ನ್ಯಾಯಾಲಯ ನೇಮಕಾತಿಗೆ ತಡೆ ನೀಡಿದೆ. ರಾಷ್ಟ್ರೀಯ ಆಯೋಗದೊಂದಿಗೆ ಸಮಾಲೋಚನೆ ಕಡ್ಡಾಯವಾಗಿದೆ. ಇಲ್ಲಿ ಪ್ರಮುಖ ಪ್ರಶ್ನೆ ಎಂದರೆ, ಶೇ.50ರಷ್ಟು ಮೀಸಲು ಮೀರುವಂತಹ ವಿಶೇಷ ಸಂದರ್ಭಗಳು ಏನಿದ್ದವು ಎಂಬುದಾಗಿದೆ,'' ಎಂದರು.

''ಅಲ್ಲದೆ, ಇದು ನ್ಯಾಯಮೂರ್ತಿಗಳಾದ ಎಚ್.ಎನ್.ನಾಗಮೋಹನ್ ದಾಸ್ ಮತ್ತು ಸುಭಾಷ್ ಅಡಿ ನೇತೃತ್ವದ ವಿಚಾರಣಾ ಆಯೋಗಗಳ ನೇತೃತ್ವದ ವರದಿಗಳನ್ನು ಆಧರಿಸಿದೆ. ಹಾಗಾಗಿ, ಇದು ಅತ್ಯಂತ ಪ್ರಮುಖ ವಿಚಾರವಾಗಿದ್ದು, ಆ ಬಗ್ಗೆ ವಿಸ್ತೃತ ಸಮಾಲೋಚನೆ ನಡೆಸಬೇಕಿದೆ,'' ಎಂದು ಹೇಳಿದರು.

ಆಗ ನ್ಯಾಯಾಲಯ, ''ಸುಪ್ರೀಂ ಕೋರ್ಟ್ ಬಾಕಿ ಇರುವ ಅರ್ಜಿಗಳನ್ನು ಆದಷ್ಟು ಬೇಗ ಪರಿಗಣಿಸಿ ಎಂದು ಆದೇಶಿಸಿದೆ. ಹಾಗಾಗಿ, ಎಜಿ ಮನವಿ ಮೇರೆಗೆ ಅಂತಿಮ ವಿಚಾರಣೆಯನ್ನು ಜು.15ಕ್ಕೆ ನಿಗದಿಪಡಿಸಲಾಗುವುದು,'' ಎಂದು ಆದೇಶಿಸಿತು.

ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಕ್ಕೆ ಅನುಮತಿ ನಿರಾಕರಣೆ

ಈ ಮಧ್ಯೆ, ಕೆಪಿಎಸ್ಸಿ ಪರ ಹಾಜರಾದ ಎಎಜಿ ರೂಬೆನ್ ಜಾಕೋಬ್, ''2023–24ನೇ ಸಾಲಿನ 384 ಕೆಎಎಸ್ ಅಧಿಕಾರಿಗಳ ನೇಮಕ ಸಂಬಂಧ ಸಂದರ್ಶನ ಪ್ರಕ್ರಿಯೆ ಪೂರ್ಣಗೊಂಡಿದೆ. ಆದರೆ, ನ್ಯಾಯಾಲಯ ಫಲಿತಾಂಶ ಪ್ರಕಟಿಸುವಂತಿಲ್ಲ ಎಂದು ಮಧ್ಯಂತರ ಆದೇಶ ನೀಡಿರುವುದರಿಂದ ತೊಂದರೆಯಾಗುತ್ತಿದೆ. ಆದ್ದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲು ಅನುಮತಿ ನೀಡಬೇಕು,'' ಎಂದು ಕೋರಿದರು.

ಆದರೆ, ನ್ಯಾಯಾಲಯ ಅದಕ್ಕೆ ಒಪ್ಪಿಗೆ ನೀಡದೆ, ''ನಾವು ಎಲ್ಲಾ ಅರ್ಜಿಗಳ ವಿಚಾರಣೆ ನಡೆಸಲು ಸಿದ್ಧವಿದ್ದೇವೆ. ಸರಕಾರ ಸಿದ್ಧವೆಂದರೆ ನ್ಯಾಯಪೀಠ ಇಂದಿನಿಂದಲೇ ವಿಚಾರಣೆ ಕೈಗೆತ್ತಿಕೊಳ್ಳಲಿದೆ,'' ಎಂದು ಹೇಳಿತು.

ಕೊನೆಗೆ ನ್ಯಾಯಾಲಯ ಈ ಮೊದಲೇ ಹೇಳಿದಂತೆ ವಿಚಾರಣೆಯನ್ನು ಜು.15ಕ್ಕೆ ಮುಂದೂಡಿತು. ''ಅಂದಿನಿಂದ ಅಂತಿಮ ವಿಚಾರಣೆ ಕೈಗೊಳ್ಳಲಾಗುವುದು. ಎಲ್ಲರೂ ವಾದ-ಪ್ರತಿವಾದಕ್ಕೆ ಸಿದ್ಧರಾಗಿ ಬನ್ನಿ,'' ಎಂದು ಹೇಳಿ ವಿಚಾರಣೆಯನ್ನು ಮುಂದೂಡಿತು.

ಕಳೆದ ವಿಚಾರಣೆ ವೇಳೆ ಮುಂದಿನ ವಿಚಾರಣೆವರೆಗೆ ಹೊಸದಾಗಿ ನೇಮಕ ಸಂಬಂಧ ಯಾವುದೇ ಕ್ರಮ ಕೈಗೊಳ್ಳದಂತೆ ಹೈಕೋರ್ಟ್ ಸರಕಾರಕ್ಕೆ ನಿರ್ದೇಶನ ನೀಡಿತ್ತು.

ಪರಿಶಿಷ್ಟ ಜಾತಿಗೆ ಶೇ.15 ರಿಂದ 17 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ. 3ರಿಂದ ಶೇ.7ರವರೆಗೂ ಮೀಸಲು ಹೆಚ್ಚಳ ಮಾಡಿ ಒಟ್ಟು ಮೀಸಲನ್ನು 56ಕ್ಕೆ ಹೆಚ್ಚಿಸಿ ರಾಜ್ಯ ಸರಕಾರ 2023ರ ಜನವರಿ 12 ರಂದು ಹೊರಡಿಸಿದ್ದ ಕಾಯಿದೆಯ ಗೆಜೆಟ್ ಅಧಿಸೂಚನೆ ರದ್ದು ಕೋರಿ ಡಾ. ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಮಹೇಂದ್ರ ಕುಮಾರ್ ಸಲ್ಲಿಸಿದ್ದ ಅರ್ಜಿ ಸಂಬಂಧ ನ್ಯಾಯಾಲಯದ ಅನುಮತಿ ಇಲ್ಲದೆ ಯಾವುದೇ ನೇಮಕಾತಿ ಮಾಡಬಾರದು ಎಂದು ಸರಕಾರಕ್ಕೆ ನಿರ್ದೇಶನ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಅಲೆಮಾರಿ ಮೀಸಲು, ಸರಕಾರಕ್ಕೆ ನೋಟಿಸ್

ಬೆಂಗಳೂರು: ರಾಜ್ಯ ಸರಕಾರದ ಪರಿಶಿಷ್ಟ ಜಾತಿಗಳ ಒಳಮೀಸಲು ಹಂಚಿಕೆ ಮತ್ತು ವರ್ಗೀಕರಣ ಮಾಡಿ ಹೊರಡಿಸಿರುವ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ಸಂಬಂಧ ಹೈಕೋರ್ಟ್ ರಾಜ್ಯ ಸರಕಾರಕ್ಕೆ ಮಂಗಳವಾರ ನೋಟಿಸ್ ಜಾರಿ ಮಾಡಿದೆ.

ಪರಿಶಿಷ್ಟ ಜಾತಿಗಳ ಒಳಮೀಸಲು ವರ್ಗೀಕರಣ ಸಂಬಂಧ 2026ರ ಮೇ 8ರಂದು ಹೊರಡಿಸಿದ ಆದೇಶ ಪ್ರಶ್ನಿಸಿ ಕರ್ನಾಟಕ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಒಕ್ಕೂಟ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ಆಕ್ಷೇಪಣೆ ಸಲ್ಲಿಸಲು ಸೂಚಿಸಿ ವಿಚಾರಣೆ ಮುಂದೂಡಿದೆ.

ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠವು ಎಸ್‌ಸಿ ಒಳಮೀಸಲು ವರ್ಗೀಕರಣಕ್ಕೆ ಅನುಮತಿ ನೀಡಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರವು ಎಸ್‌ಸಿ ಸಮುದಾಯಗಳನ್ನು ಮೂರು ಪ್ರತ್ಯೇಕ ಗುಂಪುಗಳಾಗಿ (ಕ್ಯಾಟಗರಿ ಎ, ಬಿ, ಸಿ ಎಂದು ವಿಂಗಡಿಸಿ) ಆದೇಶ ಹೊರಡಿಸಿತ್ತು. ಇತ್ತೀಚಿನ ಆದೇಶದ ಪ್ರಕಾರ, ಶೇ.15ರಷ್ಟು ಮೀಸಲಿನಲ್ಲಿ 'ಸಿ' ಪ್ರವರ್ಗಕ್ಕೆ ಶೇ. 4.5 ರಷ್ಟು ಕೋಟಾ ನಿಗದಿಪಡಿಸಲಾಗಿದ್ದು, ಅದರಲ್ಲಿ 59 ಅಲೆಮಾರಿ ಮತ್ತು ಸೂಕ್ಷ್ಮ ಸಮುದಾಯಗಳಿಗೆ ಕೇವಲ ಶೇ.2ರಷ್ಟು ಆಂತರಿಕ ಮೀಸಲು ನೀಡಲಾಗಿದೆ. ಅಲ್ಲದೆ, ಒಳ ಮೀಸಲು ಸಂಬಂಧ ರಚನೆಯಾಗಿದ್ದ ನ್ಯಾ.ಎಚ್.ಎನ್.ನಾಗಮೋಹನದಾಸ್ ಆಯೋಗದ ಶಿಫಾರಸುಗಳನ್ನು ಬದಿಗಿಟ್ಟು ಅವೈಜ್ಞಾನಿಕವಾಗಿ ವರ್ಗೀಕರಣ ಮಾಡಿದೆ. ಆದ್ದರಿಂದ ಸರಕಾರದ ಆದೇಶ ರದ್ದುಪಡಿಸಬೇಕು,'' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಅಲ್ಲದೆ, ''ನಾಗಮೋಹನದಾಸ್ ಆಯೋಗವು ಅತ್ಯಂತ ಹಿಂದುಳಿದ 59 ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಪ್ರವರ್ಗ ರಚಿಸಿ ಶೇ.1ರಷ್ಟು ನೇರ ಮೀಸಲು ನೀಡುವಂತೆ ಶಿಫಾರಸು ಮಾಡಿತ್ತು. ಆದರೆ, ಸರಕಾರವು ಈ ಶಿಫಾರಸನ್ನು ಅಲ್ಲಗಳೆದಿದೆ. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಅತ್ಯಂತ ಶೋಷಿತ ಸ್ಥಿತಿಯಲ್ಲಿರುವ ಅಲೆಮಾರಿ ಸಮುದಾಯಗಳನ್ನು ತುಲನಾತ್ಮಕವಾಗಿ ಪ್ರಬಲವಾಗಿರುವ ಭೋವಿ ಮತ್ತು ಲಂಬಾಣಿ ಸಮುದಾಯಗಳ ಜತೆಗೆ 'ಸಿ' ಪ್ರವರ್ಗದಲ್ಲಿ ಒಟ್ಟಿಗೆ ಸೇರಿಸಿರುವುದು ತೀವ್ರ ಅನ್ಯಾಯಕ್ಕೆ ಕಾರಣವಾಗಿದೆ,'' ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಶಾಸಕ ಬಾಲಕೃಷ್ಣ ಕೇಸ್ ರದ್ದು

■ **ವಿಕ ಸುದ್ದಿಲೋಕ** ಬೆಂಗಳೂರು

2018ರ ವಿಧಾನಸಭಾ ಚುನಾವಣೆ ಸಮಯದಲ್ಲಿ ತಮ್ಮ ಪಕ್ಷದ ಕಾರ್ಯಕರ್ತರೊಂದಿಗೆ ಕಾನೂನುಬಾಹಿರವಾಗಿ ಸಭೆ ನಡೆಸಿ ಮದ್ಯ-ಬಿರಿಯಾನಿ ಹಂಚಿಕೆ ಮಾಡಿದ್ದಾರೆನ್ನಲಾದ ಆರೋಪ ಸಂಬಂಧ ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ಮಂಗಳವಾರ ರದ್ದುಪಡಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಎಚ್.ಸಿ.ಬಾಲಕೃಷ್ಣ ಮತ್ತು ಅವರ ಆಪ್ತ ಸಹಾಯಕ ರವಿ ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿದ ನ್ಯಾ.ಎಂ. ನಾಗಪ್ರಸನ್ನ ಅವರಿದ್ದ ಪೀಠ ಈ ಆದೇಶ ನೀಡಿದೆ.

ಅರ್ಜಿದಾರರ ಪರ ವಾದಿಸಿದ ವಕೀಲ ಎಸ್.ರಾಜು, ''ಅರ್ಜಿದಾರರ ವಿರುದ್ಧದ ಎಲ್ಲ ಆರೋಪಗಳು ಅಪರಾಧದ ತಳಹದಿ ಹೊಂದಿಲ್ಲ ಮತ್ತು ತನಿಖೆ ನಡೆಸುವ ಮುನ್ನ ಪೊಲೀಸರು ಮ್ಯಾಜಿಸ್ಟ್ರೇಟ್‌ರ ಪೂರ್ವಾನುಮತಿ ಪಡೆದಿಲ್ಲ, ಇದು ರಾಜಕೀಯ ದ್ವೇಷ ಮತ್ತು ಅರ್ಜಿದಾರರನ್ನು ತೇಜೋವಧೆ ಮಾಡುವ ದುರುದ್ದೇಶದಿಂದ ದಾಖಲಾಗಿರುವ ಪ್ರಕರಣವಾದ್ದರಿಂದ ವಿಚಾರಣೆ ರದ್ದುಪಡಿಸಬೇಕು,'' ಎಂದು ಕೋರಿದ್ದರು. ಆ ವಾದ ಮಾನ್ಯ ಮಾಡಿರುವ ನ್ಯಾಯಪೀಠ, ಪ್ರಕರಣ ರದ್ದುಗೊಳಿಸಿದೆ.



ಶ್ರೀಗಳ ಅಂತಿಮ ದರ್ಶನ ಪಡೆದ ಸಿಎಂ

ದೇಗುಲಮಠದ ಶಿವೈಕ್ಯ ಶ್ರೀಗಳಿಗೆ ಸರಕಾರಿ ಗೌರವ

ಕನಕಪುರದ ದೇಗುಲಮಠದ ಹಿರಿಯ ಶ್ರೀಗಳಿಗೆ ಅಂತಿಮ ನಮನ ಸಲ್ಲಿಸಿ, ರಾಷ್ಟ್ರಧ್ವಜವನ್ನು ಕಿರಿಯ ಶ್ರೀಗಳಿಗೆ ಹಸ್ತಾಂತರಿಸುವ ವೇಳೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾವುಕರಾದರು.

■ **ವಿಕ ಸುದ್ದಿಲೋಕ** ಕನಕಪುರ (ಬೆಂ.ದಕ್ಷಿಣ)

ಕನಕಪುರದ ದೇಗುಲ ಮಠದ ಪೀಠಾಧ್ಯಕ್ಷರಾಗಿದ್ದ ಮುಮ್ಮಡಿ ನಿರ್ವಾಣ ಸ್ವಾಮೀಜಿ ಲಿಂಗೈಕ್ಯರಾಗಿದ್ದು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ಸಚಿವ ಈಶ್ವರ ಖಂಡ್ರೆ ಸೇರಿದಂತೆ ಹಲವು ಗಣ್ಯರು ಅಂತಿಮ ದರ್ಶನ ಪಡೆದರು.

ಮಂಗಳವಾರ ಬೆಳಗ್ಗೆಯಿಂದಲೇ ದೇಗುಲ ಮಠದ ಆವರಣದಲ್ಲಿ ಶ್ರೀಗಳ ಪಾರ್ಥಿವ ಶರೀರವನ್ನು ಸಾರ್ವಜನಿಕರು ಹಾಗೂ ಭಕ್ತಾದಿಗಳ ಅಂತಿಮ ದರ್ಶನಕ್ಕಾಗಿ ಇರಿಸಲಾಗಿತ್ತು. ಹರ-ಗುರು ಚರಮೂರ್ತಿಗಳು, ನಾನಾ ಮಠಾಧೀಶರು ಹಾಗೂ ಸಹಸ್ರಾರು ಭಕ್ತರು ಸರತಿಯ ಸಾಲಿನಲ್ಲಿ ನಿಂತು ಪೂಜ್ಯರ ಅಂತಿಮ ದರ್ಶನ ಪಡೆದು ಭಾವಪೂರ್ಣ ನಮನ ಸಲ್ಲಿಸಿದರು.

ಸಿಎಂ ಡಿ.ಕೆ.ಶಿವಕುಮಾರ್ ಅವರು ಸ್ವಾಮೀಜಿಗಳ ಪಾರ್ಥಿವ ಶರೀರಕ್ಕೆ ಪುಷ್ಪ ನಮನ ಸಲ್ಲಿಸಿ, ನಂತರ ಪಾದುಕೆಗಳಿಗೆ ನಮಸ್ಕರಿಸಿದರು. ತದನಂತರ ಆರಕ್ಷಕ ಸಿಬ್ಬಂದಿ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ, ಸರಕಾರಿ ಗೌರವ ಸಲ್ಲಿಸಿದರು. ಬಳಿಕ ಮುಖ್ಯಮಂತ್ರಿಗಳು ದೇಗುಲಮಠದ ಕಿರಿಯ ಸ್ವಾಮೀಜಿಗಳಿಗೆ ರಾಷ್ಟ್ರಧ್ವಜವನ್ನು ಹಸ್ತಾಂತರಿಸಿದರು.

ಭಾವುಕರಾದ ಮುಖ್ಯಮಂತ್ರಿ: ಕಿರಿಯ ಶ್ರೀಗಳಿಗೆ ರಾಷ್ಟ್ರಧ್ವಜ ಹಸ್ತಾಂತರಿಸುವಾಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದುಃಖ ತಡೆಯಲಾರದೆ ಬಿಕ್ಕಿಬಿಕ್ಕಿ ಅತ್ತರು. ಶ್ರೀಗಳ ಪಾದುಕೆಗಳಿಗೆ ಹಾಗೂ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮಾತನಾಡಿ, ಈ ಹಿಂದೆ ಸ್ವತಃ ಅನಾರೋಗ್ಯದಿಂದ ಬಳಲುತ್ತಿದ್ದಾಗಲೂ ಶ್ರೀಗಳು ತಮಗೆ ಆಶೀರ್ವಾದ ರೂಪದಲ್ಲಿ ಚುನಾವಣಾ ಖರ್ಚಿಗೆ ಹಣದ ಕಟ್ಟು ನೀಡಿ ಧೈರ್ಯ ತುಂಬಿದ್ದನ್ನು ನೆನಪಿಸಿಕೊಂಡರು. ''ಭವಿಷ್ಯವನ್ನು ಮುನ್ಸೂಚಿಸುವ ಶಕ್ತಿ ಶ್ರೀಗಳಿಗಿತ್ತು. ನಮ್ಮ ಕುಟುಂಬಕ್ಕೂ ಮಠಕ್ಕೂ ನೂರಾರು ವರ್ಷಗಳ ಒಡನಾಟವಿದೆ. ನನಗೆ ಶಿವಕುಮಾರ್ ಎಂದು ಹೆಸರಿಡಲು ಈ ಮಠದ ಅನುಗ್ರಹವೇ ಕಾರಣ,'' ಎಂದು ತಿಳಿಸಿದರು.

ಶ್ರೀಗಳ ನಿಧನಕ್ಕೆ ಎಚ್‌ಡಿಕೆ ಸಂತಾಪ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಹ ದೇಗುಲ ಮಠಕ್ಕೆ ಭೇಟಿ ನೀಡಿ ಲಿಂಗೈಕ್ಯ ಶ್ರೀಗಳ ಅಂತಿಮ ದರ್ಶನ ಪಡೆದರು. ಬಳಿಕ ಮಾತನಾಡಿದ ಅವರು, ''ಪರಮ ಪೂಜ್ಯರು ಈ ಭಾಗದ ಬಡಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡುವ ನಿಟ್ಟಿನಲ್ಲಿ ಸರಕಾರಗಳಿಗಿಂತ ಹೆಚ್ಚಿನ ಕೊಡುಗೆ ನೀಡಿದ್ದಾರೆ,'' ಎಂದರು.

ನಮ್ಮ ಗೈಡ್ ಆನ್‌ಲೈನ್ ವೇದಿಕೆ

ಬೆಂಗಳೂರು: ರಾಜ್ಯದ ಪ್ರವಾಸೋದ್ಯಮ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸುವ ಹಾಗೂ ಪ್ರವಾಸಿಗರಿಗೆ ವಿಶ್ವದರ್ಜೆಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ 'ನಮ್ಮ ಗೈಡ್' ಆನ್‌ಲೈನ್ ವೇದಿಕೆ ಸಿದ್ಧಪಡಿಸಲು ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ.

ವಿದೇಶಗಳಲ್ಲಿ ಪ್ರವಾಸಿಗರು ತಮಗೆ ಬೇಕಾದ ಗೈಡ್‌ಗಳನ್ನು ಆನ್‌ಲೈನ್ ಮೂಲಕವೇ ಕಾಯ್ದಿರಿಸುವ ವ್ಯವಸ್ಥೆಗಳಿವೆ. ಇದೇ ಮಾದರಿಯ ಅತ್ಯಾಧುನಿಕ ಆನ್‌ಲೈನ್ ವೇದಿಕೆಯನ್ನು ಕರ್ನಾಟಕದಲ್ಲೂ ಪ್ರಾರಂಭಿಸುವುದು ಇಲಾಖೆಯ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಹೊಸದೊಂದು ವೆಬ್‌ಸೈಟ್ ಹಾಗೂ ಆ್ಯಪ್ ರಚಿಸಲು ನಿರ್ಧರಿಸಿದೆ.

ಈ ನೂತನ ಆನ್‌ಲೈನ್ ವೇದಿಕೆಯಿಂದ ಪ್ರವಾಸಿಗರಿಗೆ ಸ್ಥಳೀಯ ಗೈಡ್‌ಗಳನ್ನು ಸುಲಭವಾಗಿ ಸಂಪರ್ಕಿಸಲು ಮತ್ತು ಪ್ರವಾಸಿ ತಾಣಗಳನ್ನು ಸರಿಯಾಗಿ ವೀಕ್ಷಿಸಲು ಅನುಕೂಲವಾಗಲಿದೆ. ಈಗಾಗಲೇ ಇಲಾಖೆಯಲ್ಲಿ ನೊಂದಣಿಯಾಗಿರುವ ಗೈಡ್‌ಗಳಿಗೆ ಹೆಚ್ಚಿನ ಕೆಲಸವೂ ದೊರೆಯಲಿದೆ. ಈ ಯೋಜನೆಯನ್ನು ತ್ವರಿತವಾಗಿ ಸಾಕಾರಗೊಳಿಸಲು ರಾಜ್ಯದಲ್ಲಿರುವ ನವೋದ್ಯಮಗಳೂ ಸೇರಿದಂತೆ ತಂತ್ರಜ್ಞಾನದಲ್ಲಿ ಆಸಕ್ತಿ ಹೊಂದಿರುವ ಸಂಸ್ಥೆಗಳಿಗೆ ಆಹ್ವಾನ ನೀಡಲು ಇಲಾಖೆ ಕ್ರಮ ಕೈಗೊಳ್ಳಲಿದೆ.

ರಾಜ್ಯದ ಪ್ರವಾಸೋದ್ಯಮವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರಿಸುವಲ್ಲಿ ನಮ್ಮ ಸ್ಥಳೀಯ ಗೈಡ್‌ಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ. ವಿದೇಶಗಳಲ್ಲಿರುವಂತೆ 'ನಮ್ಮ ಗೈಡ್' ವೆಬ್‌ಸೈಟ್ ಹಾಗೂ ಆ್ಯಪ್ ಅಭಿವೃದ್ಧಿಪಡಿಸಲಾಗುವುದು. ಇದರಿಂದ ಪ್ರವಾಸಿಗರಿಗೆ ಅತ್ಯುತ್ತಮ ಮಾಹಿತಿ ಮತ್ತು ಉತ್ತಮ ಅನುಭವ ದೊರೆಯುವುದು. ಈ ವಿನೂತನ ವೇದಿಕೆ ನಿರ್ಮಾಣಕ್ಕಾಗಿ ರಾಜ್ಯದ ಪ್ರತಿಭಾವಂತ ನವೋದ್ಯಮಗಳಿಗೆ ಅವಕಾಶ ನೀಡಲಾಗುವುದು.

–ಕೆ.ಜೆ.ಜಾರ್ಜ್ ಸಚಿವರು, ಇಂಧನ ಮತ್ತು ಪ್ರವಾಸೋದ್ಯಮ

ಬಂಜರು ಭೂಮಿಗೆ ಬದುಕು ಕೊಟ್ಟ ಡಾಕ್ಟರ್

ಒಣ ಬೇಸಾಯದ ನೆಲದಲ್ಲಿ ಸಾವಯುವ ಪವಾಡ | ಆಟೋಮ್ಯಾಟಿಕ್ ಕೃಷಿಯ ಯಶೋಗಾಥೆ

■ **ನಾಗರಾಜ್ ನವೀಮನೆ** ಮೈಸೂರು
nagaraj.navimane@timesofindia.com

ಈ ಬಾರಿ ಎಲ್‌ನಿನೊ ಪ್ರಭಾವದಿಂದಾಗಿ ಮುಂಗಾರು ಮಳೆ ವಾಡಿಕೆಗಿಂತ ಕುಂಠಿತಗೊಳ್ಳುವ ಮುನ್ಸೂಚನೆ ರೈತರನ್ನು ಆತಂಕಕ್ಕೆ ದೂಡಿದೆ. ಆದರೆ, ಮೈಸೂರಿನ ಕೃಷಿ ತಜ್ಞ, ಪರಿಸರವಾದಿ ಡಾ. ರಾಮಕೃಷ್ಣಪ್ಪ ಅವರು ಒಣಬೇಸಾಯದ ನೆಲದಲ್ಲಿ ಬೇರೂರಿದ್ದ ಬದುಕನ್ನು ಪ್ರಕೃತಿಯ ಪರಮ ಸೇವಕನಾಗಿ ರೂಪಿಸಿಕೊಂಡು ತಮ್ಮ 8 ಎಕರೆ ಪ್ರದೇಶದಲ್ಲಿ 14 ಪರಿಸರ ಕೃಷಿ ಮಾದರಿಗಳನ್ನು ಅಭಿವೃದ್ಧಿಪಡಿಸಿ ನೆಮ್ಮದಿ ಕಂಡುಕೊಂಡಿದ್ದಾರೆ.

ಮೃದು ಮಣ್ಣು, ಸುತ್ತೆಲ್ಲ ಒಡ್ಡು. ಬೀಳುವ ಮಳೆ ನೀರು ಸುಲಭಕ್ಕೆ ಜಾರಿ ಹೋಗುವುದಿಲ್ಲ, ಸಮಗ್ರ ಹೀರಿಕೊಳ್ಳುತ್ತದೆ ಸಹಜ ಭೂಮಿ. ಬಾನಿನತ್ತ ಚಾಚುತ್ತಿರುವ ತರಹೇವಾರಿ ಮರಗಳು. ಮಧ್ಯದಲ್ಲಿ ರಾಗಿ, ತರಕಾರಿ ಸಸ್ಯ ಸಮೃದ್ಧಿ ಇಲ್ಲಿ ಕಾಣಸಿಗುವ ಸಹಜ ಸೊಬಗು. ತೇವ ನೆಲದಲ್ಲಿ ಒಮ್ಮೆ ನಾಟಿ ಮಾಡಿದರೆ ಸಾಕು, ಮರಳಿ ನೀರುಣಿಸುವ ಆಗತ್ಯ ಇಲ್ಲ, ತಮ್ಮಷ್ಟಕ್ಕೆ ತಾವೇ ಬೆಳೆಯುತ್ತಾ ಹೋಗುತ್ತವೆ. ಮಳೆಗಾಗಿಯೂ ಇವು ಬಾಯ್ತೆರೆಯುವುದಿಲ್ಲ, ಬಾಡುವುದೂ ಇಲ್ಲ, ಸಸಿಗಳಿಗೆ ಆಗತ್ಯ ಇದ್ದಷ್ಟು ತೇವಾಂಶವನ್ನು ಈ ಸಾವಯವ ಭೂಮಿ ಆಟೊಮಾದರಿಯಲ್ಲಿ ಒದಗಿಸುತ್ತಿರುವುದು ಪವಾಡವಲ್ಲ ಎನ್ನುತ್ತಾರೆ ಡಾ.ರಾಮಕೃಷ್ಣಪ್ಪ.

ಪರಿಸರಕ್ಕೆ ತನ್ನನ್ನು ತಾನು ಶೃಂಗರಿಸಿಕೊಂಡು ಸಾಗುವುದು ಗೊತ್ತು. ನೀರಾವರಿ, ಅತಿಯಾದ ಉಳುಮೆ, ರಾಸಾಯನಿಕ, ರಸಗೊಬ್ಬರಗಳೆಲ್ಲ ಇತ್ತೀಚಿನ ಆವಿಷ್ಕಾರ. ಇವುಗಳಿಂದಲೇ ಇಂದಿನ ಪ್ರಕೃತಿಯ ಸಂಕಷ್ಟಗಳು ಉಲ್ಬಣಿಸಿವೆ. ಆಹಾರ ಉತ್ಪನ್ನ ದ್ವಿಗುಣಗೊಳಿಸುವ ಧಾವಂತದಲ್ಲಿ ಮನುಷ್ಯ ಇಟ್ಟ ಹೆಜ್ಜೆಗಳಿಂದ ಸಾವಿರ ಸಂಕಷ್ಟ ಸೃಷ್ಟಿಯಾಗಿವೆ ಎನ್ನುವುದನ್ನು ರಾಮಕೃಷ್ಣಪ್ಪ ಅವರ ನೈಸರ್ಗಿಕ ಕೃಷಿ ಮಾದರಿ ಮನವರಿಕೆ ಮಾಡಿಕೊಡುತ್ತದೆ.

ನೆಲ, ನೀರು, ಮರ ಮತ್ತು ಮಣ್ಣಿನ ನಡುಪಿನ ಸಂಬಂಧವನ್ನು ತಮ್ಮ ಉಸಿರಾಗಿಸಿಕೊಂಡ ಜೀವನಯೋಗಿ ರಾಮಕೃಷ್ಣಪ್ಪ, ರಾಜ್ಯದ ತೋಟಗಾರಿಕೆ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಲೇ ಅಂಗಾಂಶ ಕೃಷಿ ತಂತ್ರಜ್ಞಾನದಂತಹ ನವೀನ ಮಾದರಿ ಕರ್ನಾಟಕಕ್ಕೆ ಪರಿಚಯಿಸಿದವರು. ದೇಶಕ್ಕೆ ಮೊದಲ ಬಾರಿಗೆ ಸಾವಯವ ಕೃಷಿ ನೀತಿಯನ್ನು ರೂಪಿಸಿದ ಪ್ರಮುಖ ಶಿಲ್ಪಿ. ಇವರು ರೂಪಿಸಿದ ಜೀವಸಾರ ಘಟಕಕ್ಕೆ ಅಂತಾರಾಷ್ಟ್ರೀಯ ಮನ್ನಣೆ ಕೂಡ ಲಭಿಸಿದೆ.

ಇವರ ತೋಟದಲ್ಲಿ 200ಕ್ಕೂ ಹೆಚ್ಚು ಬಗೆಯ ಹಣ್ಣಿನ ಮರಗಳಿವೆ. ಮಾವು, ಪಪ್ಪಾಯಿ, ಪ್ಲಂ, ಪೀಚ್, ಗೋಡಂಬಿ, ಅವಕಾಡೊ, ಪಾಲಕ್ ಸೊಪ್ಪು, ಅಪರೂಪದ ಮಸಾಲೆ ಬೆಳೆಗಳು, ಔಷಧೀಯ ಸಸ್ಯಗಳು ಸೇರಿದಂತೆ ಅನೇಕ ಬಗೆಯ ಬೆಳೆಗಳನ್ನು ಯಾವುದೇ ರಾಸಾಯನಿಕ ಗೊಬ್ಬರ ಅಥವಾ ಕೀಟನಾಶಕ ಬಳಕೆಯಿಲ್ಲದೆ ಬೆಳೆಸಲಾಗುತ್ತಿದೆ. ಪಂಚಗವ್ಯ ಮತ್ತು ಜೀವಾಮೃತದಂಥ ಸಾವಯವ ಗೊಬ್ಬರ ಉಣ್ಣಿಸಿಯೇ ಭೂಮಿಯನ್ನು ಇಷ್ಟೊಂದು ಫಲವತ್ತುಗೊಳಿಸಲಾಗಿದೆ. ಸಾವಯವ ಭೂಮಿಗೆ ಬರ ಎದುರಿಸುವ ಸಾಮರ್ಥ್ಯ ಹೆಚ್ಚಿರುತ್ತದೆ.

ನನ್ನ ಭೂಮಿ ಹೆಜ್ಜೆ — ವಿಕ ಅಭಿಯಾನ

ಬರಗಾಲಕ್ಕೆ ಸಲಹೆಗಳೇನು?

- ಒಣಬೇಸಾಯದಲ್ಲೂ ಬೆಳೆಯುವ ಹಣ್ಣಿನ ಗಿಡಗಳನ್ನು ಹಾಕಬೇಕು.
- ಗಿಡಗಳ ಸಂಯೋಜನೆ ತಿಳಿದಿರಬೇಕು.
- ಮಿಶ್ರಬೆಳೆಗಳಿಗೆ ಆದ್ಯತೆ ನೀಡಬೇಕು.
- ಸಾವಯವ ಗೊಬ್ಬರದ ಜತೆಗೆ ಬೆಳೆ ಪದ್ಧತಿ ಬಗ್ಗೆ ತಿಳಿದುಕೊಳ್ಳಿ,



ನಮ್ಮ ಫೌಂಡೇಷನ್ ಮೂಲಕ ಮರಗಿಡಗಳ ನಡುವೆ ಟೊಮೇಟೊ, ಜೋಳ, ಕ್ಯಾರೇಟ್. ಭತ್ತ, ಕಬ್ಬುಗಳನ್ನು ಹೇಗೆ ಬೆಳೆಯಬಹುದು ಎಂಬುದರ ಬಗ್ಗೆ ರೈತರಿಗೆ, ಯುವಸಮೂಹಕ್ಕೆ ಮಾಹಿತಿ ನೀಡಲಾಗುತ್ತಿದೆ.
-ಡಾ. ರಾಮಕೃಷ್ಣಪ್ಪ ಕೃಷಿಕರು

ನಿಮ್ಮ ಸುತ್ತಲೂ ಇಂತಹ ಪರಿಸರ ಸಂರಕ್ಷಣೆಯ ಕುತೂಹಲಕಾರಿ ಯಶೋಗಾಥೆಗಳು ಗಮನಕ್ಕೆ ಬಂದರೆ ಬರೆದು ಈ ನಂಬರ್‌ಗೆ ವಾಟ್ಸ್ಆ್ಯಪ್ ಮಾಡಿ.
63664 22240

ಪೋಕ್ಸೊ ಪ್ರಕರಣದಲ್ಲಿ ಸ್ವಾಮೀಜಿಗೆ ಸಂಕಟ | ಹೊಸದಾಗಿ ಜಾಮೀನು ಅರ್ಜಿ ಸಲ್ಲಿಸಲು ಸೂಚನೆ

ವಚನಾನಂದ ಶ್ರೀ ನಿರೀಕ್ಷಣಾ ಜಾಮೀನು ರದ್ದು?

■ **ವಿಕ ಸುದ್ದಿಲೋಕ** ಬೆಂಗಳೂರು

ಹರಿಹರದ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ತನಿಖಾಧಿಕಾರಿಗಳು ಆರೋಪಪಟ್ಟಿ ಸಲ್ಲಿಸಿರುವ ಹಿನ್ನೆಲೆಯಲ್ಲಿ



ವಿಚಾರಣಾ ನ್ಯಾಯಾಲಯ ನೀಡಿರುವ ನಿರೀಕ್ಷಣಾ ಜಾಮೀನು ರದ್ದುಪಡಿಸಲಾಗುವುದು. ಹೀಗಾಗಿ, ಸ್ವಾಮೀಜಿ ನಿಯಮಿತ ಜಾಮೀನು ಪಡೆದುಕೊಳ್ಳಬಹುದು ಎಂದು ಹೈಕೋರ್ಟ್ ಮೌಖಿಕವಾಗಿ ಹೇಳಿದೆ.

ವಚನಾನಂದ ಸ್ವಾಮೀಜಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ಆದೇಶ ರದ್ದು ಕೋರಿ ಸಂತ್ರಸ್ತ ಬಾಲಕನ ತಾಯಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ಕುರಿತು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಡಿ.ಆರ್.ರವಿಶಂಕರ್, "ಪ್ರಕರಣದ ಸಂಬಂಧ ವಿಚಾರಣಾ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಕೆಯಾಗಿದೆ," ಎಂದು ತಿಳಿಸಿದರು. ಅರ್ಜಿಯಲ್ಲಿ ಎರಡನೇ ಪ್ರತಿವಾದಿಯಾಗಿರುವ ಸ್ವಾಮೀಜಿ ಪರ ವಕೀಲರು, ವಕಾಲತ್ತು ಹಾಕಲು ಹಾಗೂ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸೋಮವಾರದವರೆಗೆ ಕಾಲಾವಕಾಶ ನೀಡುವಂತೆ ಮನವಿ ಮಾಡಿದರು.

ಈ ಹಂತದಲ್ಲಿ ನ್ಯಾಯಪೀಠ, "ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಕೆಯಾಗಿದ್ದರೆ ವಚನಾನಂದ ಸ್ವಾಮೀಜಿ ನಿಯಮಿತ ಜಾಮೀನು ಪಡೆದುಕೊಳ್ಳಲಿ. ಆರೋಪಪಟ್ಟಿ ಸಲ್ಲಿಕೆಯಾದರೆ ನಿರೀಕ್ಷಣಾ ಜಾಮೀನು ರದ್ದಾಗಬೇಕೆಂದಿಲ್ಲ, ಆದರೆ, ಜಾಮೀನು ಮಂಜೂರು ಮಾಡಿರುವ ವಿಧಾನ ಸರಿಯಲ್ಲ, ಆದ್ದರಿಂದ, ನಿರೀಕ್ಷಣಾ ಜಾಮೀನು ನೀಡಿ ವಿಚಾರಣಾ ನ್ಯಾಯಾಲಯ ಹೊರಡಿಸಿರುವ ಆದೇಶ ರದ್ದುಪಡಿಸಿ, ನಿಯಮಿತ ಜಾಮೀನು ಪಡೆದುಕೊಳ್ಳಲು ಸ್ವಾತಂತ್ರ್ಯ ಕಲ್ಪಿಸಲಾಗುವುದು. ಎರಡು ವಾರಗಳವರೆಗೆ ಸ್ವಾಮೀಜಿ ಅವರನ್ನು ಬಂಧಿಸದಂತೆ ಆದೇಶಿಸಲಾಗುವುದು," ಎಂದು ಹೇಳಿತು.

ವಿಶೇಷ ಸರಕಾರಿ ಅಭಿಯೋಜಕ ಬಿ.ಎನ್. ಜಗದೀಶ್, "ವಚನಾನಂದ ಸ್ವಾಮೀಜಿಗೆ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನು ರದ್ದತಿ ಕೋರಿ ವಿಚಾರಣಾ ನ್ಯಾಯಾಲಯದಲ್ಲಿ ಸರಕಾರ ಅರ್ಜಿ ಸಲ್ಲಿಸಿದೆ," ಎಂದು ಗಮನಸೆಳೆದರು.

ಆಗ ನ್ಯಾಯಮೂರ್ತಿಗಳು, "ಯಾವ ಕಾರಣಕ್ಕೂ ಈ ನಿರೀಕ್ಷಣಾ ಜಾಮೀನು ಆದೇಶ ಹಾಗೆಯೇ ಉಳಿಯಲು ಸಾಧ್ಯವಿಲ್ಲ, ಈ ರೀತಿಯ ಜಾಮೀನು ಮಂಜೂರು ಮಾಡಲು ಅವಕಾಶವಿಲ್ಲ, ಅದು ರದ್ದಾಗಲೇಬೇಕಿದೆ, ಆದರಲ್ಲಿ ಎರಡು ಮಾತಿಲ್ಲ, ಆದರೆ, ಅರ್ಜಿದಾರರು ಈಗಾಗಲೇ ನಿರೀಕ್ಷಣಾ ಜಾಮೀನಿನ ಲಾಭ ಪಡೆದಿರುವುದರಿಂದ 10-15 ದಿನಗಳ ಕಾಲಾವಕಾಶ ನೀಡಲಾಗುವುದು. ಸ್ವಾಮೀಜಿ ನಿಯಮಿತ ಜಾಮೀನು ಪಡೆದುಕೊಳ್ಳಲಿ," ಎಂದು ಮೌಖಿಕವಾಗಿ ಹೇಳಿದರು.

ಅಲ್ಲದೆ, "ಅಪ್ರಾಪ್ತ ಬಾಲಕಿಯರು ಸುರಕ್ಷಿತವಾಗಿಲ್ಲ ಎಂದುಕೊಂಡರೆ ಅಪ್ರಾಪ್ತ ಬಾಲಕರೂ ಸುರಕ್ಷಿತವಾಗಿಲ್ಲವೇ," ಎಂದು ನ್ಯಾಯಪೀಠ ಪ್ರಶ್ನಿಸಿತು. ಆದಕ್ಕೆ ಸ್ವಾಮೀಜಿ ಪರ ವಕೀಲರು, "ಇದೊಂದು ಸುಳ್ಳು ದೂರಾಗಿದ್ದು, ಆದನ್ನು ಸಾಬೀತುಪಡಿಸಲು ಕೆಲ ದಾಖಲೆಗಳನ್ನು ಒದಗಿಸಲಾಗುವುದು. ಆದನ್ನು ಪರಿಶೀಲಿಸಬಹುದು," ಎಂದರು. ಅಂತಿಮವಾಗಿ, ಸ್ವಾಮೀಜಿ ಪರ ವಕೀಲರ ಮನವಿ ಮೇರೆಗೆ ನ್ಯಾಯಪೀಠ ವಿಚಾರಣೆಯನ್ನು ಜೂ.25ಕ್ಕೆ ಮುಂದೂಡಿತು.

ಪ್ರಕರಣದ ಹಿನ್ನೆಲೆ: ಸಂತ್ರಸ್ತ ಬಾಲಕನ ತಾಯಿ 2026ರ ಮೇ 7ರಂದು ಗದಗ ಜಿಲ್ಲೆಯ ಲಕ್ಷ್ಮೇಶ್ವರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸರು ಪೋಕ್ಸೊ ಕಾಯಿದೆಯ ಸೆಕ್ಷನ್‌ಗಳಾದ 8 ಮತ್ತು 12 ಹಾಗೂ ಐಪಿಸಿ ಸೆಕ್ಷನ್‌ಗಳಾದ 323 ಮತ್ತು 506ರಡಿ ಜೀರೋ ಎಫ್‌ಐಆರ್ ದಾಖಲಿಸಿದ್ದರು. ಕೃತ್ಯ ಹರಿಹರದಲ್ಲಿ ನಡೆದಿದ್ದರಿಂದ ದೂರನ್ನು ಅಲ್ಲಿನ ಠಾಣೆಗೆ ವರ್ಗಾಯಿಸಲಾಗಿತ್ತು. ದೂರು ಆಧರಿಸಿ ಹರಿಹರ ಗ್ರಾಮಾಂತರ ಠಾಣೆ ಪೊಲೀಸರು ಮೇ 8ರಂದು ಪ್ರಕರಣ ದಾಖಲಿಸಿದ್ದರು.

2021-2024ರ ಅವಧಿಯಲ್ಲಿ ಮಠದಲ್ಲಿ ಮಕ್ಕಳು ಶಾಲೆಗೆ ಹೋಗುವ ಮುನ್ನ ಮಠದ ಸ್ನಾನ ಗೃಹದಲ್ಲಿ ಮಕ್ಕಳ ಬಟ್ಟೆ ಬಿಚ್ಚಿ ಬೆತ್ತಲೆ ಮಾಡಿ, ಸ್ವಾಮೀಜಿ ತಾವು ಸಹ ಬೆತ್ತಲೆಯಾಗಿ ಮಕ್ಕಳಿಂದ ತಮ್ಮ ದೇಹದ ಖಾಸಗಿ ಭಾಗ ಮಸಾಜ್ ಮಾಡಿಸಿಕೊಳ್ಳುವುದು ಹಾಗೂ ಮಕ್ಕಳ ಖಾಸಗಿ ಅಂಗಗಳನ್ನು ತಾವು ಮುಟ್ಟುತ್ತಾ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಮಕ್ಕಳು ಪ್ರತಿರೋಧ ಮಾಡಿದಾಗ ಅವರಿಗೆ ಹೊಡೆದಿದ್ದು, ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ಜೀವ ತೆಗೆಯುವುದಾಗಿ ಬೆದರಿಕೆ ಹಾಕಿ, ಊಟ ನೀಡದೇ ಸತಾಯಿಸಿದ್ದಾರೆ ಎಂದು ಸಂತ್ರಸ್ತ ಬಾಲಕನ ತಾಯಿ ನೀಡಿದ್ದ ದೂರಿನಲ್ಲಿ ಆರೋಪಿಸಿದ್ದರು.

ಮಲೆನಾಡು ಸಂರಕ್ಷಣೆಗೆ ಆಗ್ರಹ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕದ ಜೀವನಾಡಿ ಕಾವೇರಿ ನದಿಯ ಉಗಮ ಸ್ಥಳ ಹಾಗೂ ರಾಜ್ಯದ ಅತ್ಯಂತ ಅಮೂಲ್ಯವಾದ ನೈಸರ್ಗಿಕ ಸಂಪತ್ತಿನ ತಾಣವಾದ ಕೊಡಗನ್ನು ಯಾವುದೇ ಕಾರಣಕ್ಕೂ ಅತಿಯಾದ ನಗರೀಕರಣ ಮತ್ತು ವಿನಾಶಕಾರಿ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಹಾಳು ಮಾಡಬಾರದು. ರಾಜ್ಯದ 'ಹಸಿರು ಚಿನ್ನದ ಭಂಡಾರ' ವಾಗಿರುವ ಕೊಡಗು ಮತ್ತು ಮಲೆನಾಡು ಪ್ರದೇಶಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಕೊಡಗು-ಕಾವೇರಿ ರಕ್ಷಣಾ ವೇದಿಕೆ ಆಗ್ರಹಿಸಿದೆ.

ಗ್ರೀನ್ ಸೇಫ್ಟಿ ಕಾರಿಡಾರ್‌ಗೆ ಆಗ್ರಹ

"ಕೊಡಗು ಕೇವಲ ಒಂದು ಜಿಲ್ಲೆ ಮಾತ್ರವಲ್ಲ, ಅದು ಕರ್ನಾಟಕದ ಪರಿಸರ ಸಮತೋಲನವನ್ನು ಕಾಪಾಡುವ ಜೀವಾಳವಾಗಿದೆ. ಇಲ್ಲಿನ ಅರಣ್ಯ ಸಂಪತ್ತು, ಜೀವ ವೈವಿಧ್ಯತೆ ಹಾಗೂ ಜಲಮೂಲಗಳು ಮುಂದಿನ ಪೀಳಿಗೆಯ ಬದುಕಿಗೆ ಆಧಾರವಾಗಿವೆ. ಕೊಡಗು ಮತ್ತು ಮಲೆನಾಡು ಪ್ರದೇಶವನ್ನು ರಾಜ್ಯ ಸರಕಾರ 'ಗ್ರೀನ್ ಸೇಫ್ಟಿ ಕಾರಿಡಾರ್' (ಹಸಿರು ಸುರಕ್ಷತಾ ಕಾರಿಡಾರ್) ಎಂದು ಘೋಷಿಸಿ ವಿಶೇಷ ಪರಿಸರ ಸಂರಕ್ಷಣಾ ವಲಯವಾಗಿ ಅಭಿವೃದ್ಧಿಪಡಿಸಬೇಕು," ಎಂದು ವೇದಿಕೆಯ ಸಂಚಾಲಕ ನಿವೃತ್ತ ಕರ್ನಲ್ ಸಿ.ಪಿ. ಮುತ್ತಣ್ಣ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಒತ್ತಾಯಿಸಿದರು.

ಮಾತುಬಾರದ ಜೋಡಿಗೆ ಜಾಲತಾಣವೇ ಸೇತುವೆ

■ **ವಿಕ ಸುದ್ದಿಲೋಕ** ರಬಕವಿ-ಬನಹಟ್ಟಿ (ಬಾಗಲಕೋಟೆ)

ಪ್ರೇಮಾಂಕುರಕ್ಕೆ ಮಾತುಗಳೇ ಬೇಕಿಲ್ಲ, ಭಾವವಿದ್ದರೆ ಸಾಕು. ಭಾವನೆಗಳೇ ಪ್ರೇಮದ ನಿಜವಾದ ಭಾಷೆ ಎಂಬುದನ್ನು ಇಲ್ಲೊಂದು ಜೋಡಿ ಸಾಬೀತುಪಡಿಸಿದೆ. ಕಿವಿ ಕೇಳಿಸದಿದ್ದರೂ, ಮಾತು ಆಡಲಾಗದಿದ್ದರೂ ಪರಸ್ಪರರ ಮನಸ್ಸು ಅರ್ಥಮಾಡಿಕೊಂಡು ಪ್ರೀತಿ ಬಂಧನದಲ್ಲಿ ಒಂದಾದ ಈ ಜೋಡಿಯ ಕತೆ ಕುತೂಹಲಕಾರಿಯಾಗಿದೆ.

ಬನಹಟ್ಟಿಯ ಆದಿಬಣಜಿಗ ಸಮುದಾಯದ ಮಲ್ಲಿಕಾರ್ಜುನ ಮಿರ್ಜಿ(25) ಮತ್ತು ರಾಯಬಾಗ ತಾಲೂಕಿನ ನಿಪನ್ಯಾಳ ಗ್ರಾಮದ ಮರಾಠ ಸಮುದಾಯದ ಅಮೃತಾ ಕುರಣಿ(19) ಪ್ರೇಮ ವಿವಾಹವಾಗಿ ಸಮಾಜಕ್ಕೊಂದು ಉತ್ತಮ ಸಂದೇಶ ರವಾನಿಸಿದ್ದಾರೆ. ಯುವಕ ಮಲ್ಲಿಕಾರ್ಜುನ ಖಾಸಗಿ ಉದ್ಯೋಗ ಮಾಡುತ್ತಿದ್ದು, ಯುವತಿ ಅಮೃತಾ ಪದವಿ ಅಧ್ಯಯನ ಮಾಡುತ್ತಿದ್ದಾರೆ.

ವಿವಾಹದ ಸ್ವರೂಪ ಪಡೆದ ಶಾಲೆಯಲ್ಲಿನ ಪ್ರೇಮಾಂಕುರ

ಜಮಖಂಡಿಯ ಕಿವುಡ ಮತ್ತು ಮೂಕರ ವಸತಿ ವಿಶೇಷ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವಾಗ ಇವರಿಬ್ಬರ ನಡುವೆ ಪ್ರೇಮಾಂಕುರವಾಗಿತ್ತು. ನಂತರ ಮೈಸೂರಿನಲ್ಲಿ ವಿಶೇಷ ಪದವಿ ಕಾಲೇಜ್‌ಗೆ ಅಮೃತಾ ಸೇರಿಕೊಂಡಾಗ ಮಲ್ಲಿಕಾರ್ಜುನ ಅಲ್ಲಿಗೆ ಹೋಗಿ ಅವರನ್ನು ಭೇಟಿಯಾಗುತ್ತಿದ್ದರು. ಇದರಿಂದ ಇವರಿಬ್ಬರ ಮಧ್ಯದ ಪ್ರೀತಿ ಮತ್ತಷ್ಟು ಗಟ್ಟಿಯಾಗಿ ಈಗ ವಿವಾಹ ಮೂಲಕ ದಾಂಪತ್ಯದ ಸ್ವರೂಪ ಪಡೆದುಕೊಂಡಿದೆ. "ಎಮೋಜಿ ಹಾಗೂ ಪುಟ್ಟ ಸಂದೇಶಗಳ ಮೂಲಕ ವಾಟ್ಸ್ಆ್ಯಪ್‌ನಲ್ಲಿ ನಡೆಸುತ್ತಿದ್ದ ಪ್ರೀತಿಯ ಸಂಭಾಷಣೆಗಳೇ ನಮಗೆ ಪ್ರೇಮ ಪತ್ರಗಳಾಗಿದ್ದವು" ಎಂದು ಮೂಗಜೋಡಿ ಭಾವನೆಗಳ ಮೂಲಕ ಹೇಳಿಕೊಂಡಿದ್ದಾರೆ.

ವಿವಾಹ ನೋಂದಣಿ: ಮಾತು ಬಾರದೆ ಸಂಕಷ್ಟ ಎದುರಿಸುತ್ತಾ ಬೆಳೆದ ಇವರಿಬ್ಬರು ತಮ್ಮ ದೈಹಿಕ ನ್ಯೂನತೆ ಬಗ್ಗೆ ಎಂದೂ ಹಳಹಳಿಸಲಿಲ್ಲ, ಸಂಜ್ಞಾ ಭಾಷೆ, ಮುಖಭಾವ ಮತ್ತು ಹೃದಯದ ಭಾವನೆಗಳ ಮೂಲಕ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಸ್ನೇಹ ಬೆಳೆದಿದೆ. ಪಂಚರ ಸಮ್ಮುಖದಲ್ಲಿ ಮೇ 10 ರಂದು ತೇರದಾಳದ ಉಪನೋಂದಣಿ ಕಚೇರಿಯಲ್ಲಿ ವಿವಾಹ ನೋಂದಣಿ ಮಾಡಿಸಿಕೊಂಡ ಮೂಗ ಜೋಡಿ, ಉಭಯ ಕುಟುಂಬಗಳ ಪರಸ್ಪರ ಒಪ್ಪಿಗೆಯೊಂದಿಗೆ ಜೂ.25 ರಂದು ಬನಹಟ್ಟಿಯಲ್ಲಿ ಮದುವೆ ಹಮ್ಮಿಕೊಂಡಿದೆ.

ಆರ್‌ಎಸ್‌ಎಸ್ ವಿರುದ್ಧ ಕಾನೂನು ಸಮರ: ಪ್ರಿಯಾಂಕ್ ಖರ್ಗೆ ಸುಳಿವು

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿರುದ್ಧ ಕಾನೂನು ಸಮರ ಮುಂದುವರೆಸುವ ಸುಳಿವು ನೀಡಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ನೋಂದಣಿ ದಾಖಲೆ ಕೊಡದಿದ್ದರೆ ಕಾನೂನು ಕ್ರಮ ಖಚಿತ ಎಂದು ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, "ಆರ್‌ಎಸ್‌ಎಸ್ ನೋಂದಣಿ ಕುರಿತು ಪತ್ರ ಬರೆದು ಸ್ಪಷ್ಟೀಕರಣ ಕೇಳಿದ್ದೇನೆ. ಆರ್‌ಎಸ್‌ಎಸ್ ಬಳಿ ದಾಖಲೆ ಇದ್ದಿದ್ದರೆ ಬಹುಶಃ ಇಷ್ಟೊತ್ತಿಗೆ ನನ್ನ ಮುಖಕ್ಕೆ ಎಸೆಯುತ್ತಿದ್ದರು. ಆದರೂ, ತಾಳ್ಮೆಯಿಂದ ಕಾಯುತ್ತಿದ್ದೇನೆ. ದಾಖಲೆ ಕೊಡದಿದ್ದರೆ ಕಾನೂನು ಖಂಡಿತ," ಎಂದು ತಿಳಿಸಿದರು.

"ನೂರು ವರ್ಷದ ಹಳೆಯ ಸಂಸ್ಥೆಯಾದ ಕಾರಣ ನೋಂದಣಿ ದಾಖಲೆಯನ್ನು ಎಲ್ಲೋ ಇಟ್ಟಿರಬಹುದು. ನಾಗಪುರವೋ, ಕೇಶವಕೃಪದಲ್ಲೋ ಅಥವಾ ಯಾರೋ ಸರಸಂಚಾಲಕರ ಮನೆಯಲ್ಲಿ ಇಟ್ಟಿರುತ್ತಾರೆ. ದಾಖಲೆ ತರಬಹುದು ನೋಡೋಣ. ಆರ್‌ಎಸ್‌ಎಸ್‌ನವರು ಕಾನೂನು ಚೌಕಟ್ಟು ಮೀರಲು ನಾನು ಬಿಡಲ್ಲ," ಎಂದು ಸ್ಪಷ್ಟಪಡಿಸಿದರು.

"ಆರ್‌ಎಸ್‌ಎಸ್ ಬೆಂಬಲಿಗರು ಗೃಹ ಸಚಿವನಾದ ನನಗೇ ಬೆದರಿಕೆ ಹಾಕುತ್ತಿದ್ದಾರೆ. ಅದು ಯಾವ ಮಟ್ಟಕ್ಕೆ ಬೇರು ಬಿಟ್ಟಿದೆ ಎಂಬುದು ಇದರಿಂದಲೇ ಅರ್ಥವಾಗುತ್ತದೆ," ಎಂದು ಅಸಹನೆ ವ್ಯಕ್ತಪಡಿಸಿದರು.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ಇರ್ಫಾನ್ ಶೇಖ್ 8088815336
irfan.shekh@timesofindia.com

ಉದ್ಯೋಗ RECRUITMENT

SITUATION VACANT

ACADEMIC

TEACHER

HM,MATHS,SCIENCE, & Computer Teachers. Interview: 24th-28th @11:30am MOTHER'S TOUCH SCHOOL 9/2,1st main, LIC colony, 3rd blk, Jayanagar, B'lore-11. Contact: 8217270243

SJES GROUP OF INSTITUTIONS
Estd. 1979
Medahalli, Old Madras Road, K.R. Puram, Bangalore-49
FACULTY RECRUITMENT 2026
SJES POLYTECHNIC
DEPARTMENTS IN:
- Diploma in Mechanical Engineering
- Diploma in Civil Engineering
- Diploma in Computer Science Engineering
- Diploma in Electronics & Communication Engineering
- Diploma in Electrical & Electronics Engineering

POSITIONS OPEN
- PRINCIPAL • HEADS OF DEPARTMENT (HODs)
- LECTURERS • LAB INSTRUCTORS
- WORKSHOP INSTRUCTORS

Send your CV to hr@sjesinstitutions.ac.in www.sjesinstitutions.ac.in
ROUNAQH

ADMINISTRATION

EXECUTIVES

URGENTLY REQUIRED
Bangalore 150 years old Biggest Financial Industrial Group.
Part-Time or Full-Time OPPORTUNITIES only for Retired. GOVT. OFFICIALS/ BANKERS & TEACHERS
Age 50 years to 70 years
Huge Salary+ Incentive
For Appointment call: 98451 09777
ROUNAQH

RECEPTIONISTS & TEL OPERATORS

Required Fresher & Experienced Tele-Caller (F)
FOR CAR-&-HEALTH Insurance @ Hulimavu B.G. Road. Salary 16K to 25K. Contact: Amit: 9243452444

STENOGRAPHERS & TYPISTS

LADY Typist (Fresher)- Reqd Skills: 10.00am to 6.30pm, Kannada Reading English Typing / Computer Skills, Title Verification Work / Conveyance, Seshadripuram. Contact: 080-25361811/ 9844034104

LEGAL

ADVOCATE

WANTED:ADVOCATE/ Stenographer A reputed Advocate office at NEAR Nehru Circle, Sheshadripuram required a Junior Advocate with one or two experiences with computer typing and English knowledge to attend matters in High Court and Tribunals with drafting skills, also highly skilled Steno grapher or Experienced computer typists and with knowledge of Kannada and English typing. The ideal candidate will be responsible for transcribing dictation, typing, helping in filing cases etc., Contract Raghavendra G Gayatri. 9880033254/ 9019867320

MARKETING, ADVERTISING & SALES

SALES

MEDIA Company REQD. Sales & Support Executives ITI, Diploma, or Any Degree Exp 0 to 3 years. Send your resume to x9salesads@gmail.com

MEDICAL

MEDICAL

NEED Competent and Committed NM Physician. RSO desirable for MYSORE. Contact: Email - shruthi@newmedd.in, Mob: 76191 94791.

GREENVIEW MEDICAL CENTER(GVMC)
JOIN OUR GROWING TEAM
NABH Entry-Level & ISO 9001 Accredited Multispecialty Hospital
HSR Layout, Bengaluru | 22 Years of Trusted Healthcare
CURRENT OPENINGS
ADMIN & OPERATIONS
- Hospital Administrator
- Operations Manager
- HR In-Charge
- Shift Manager
- Accounts / Purchase Execs
- Digital Marketing Execs
- Marketing & Community Execs
- Front Office Execs (Day/Night)
- Billing & TPA Execs
- Patient Care Coordinator
- IT In-Charge & Tech Support
- Sr. Biomedical Engineer
- Facility Execs
- Maintenance Staff (Electrician/Plumber/Driver)

CLINICAL
- RMOs (Day/Night)
- Nursing Superintendent
- Nurses (Ward, Critical Care, ER& Scrub)
- Lab/IVF Lab In-Charge / Technicians
- Pharmacy Manager & Pharmacists

CONSULTANTS REQUIRED
- Pediatrician
- Radiologist
- General Surgeon
- General Physician / Diabetologist
- Orthopaedic Surgeon
- ENT Surgeon
- Gastroenterologist
- Urologist
- Neurologist
- Ophthalmologist

PREFERRED PROFILE
Strong ethics, integrity, relevant experience, patient-centric approach, Good communication & Computer skills. Preference for candidates residing near HSR
APPLY NOW
Email : gvmchr@gmail.com
: 080-67922777 Ext. 412
Mob : 99866 65807
93538 07308/ 9686115772
GREEN VIEW MEDICAL CENTER (GVMC)
Building the Future of Community Healthcare

OTHER VACANCIES

DRIVERS

ಆಚಾರ್ಯ ಶ್ರೀ ರಾಕುಂ ಪ್ರೌಢಶಾಲೆಯಲ್ಲಿ ಹೆಚ್.ವಿ ಲೈಸೆನ್ಸ್ ಹೊಂದಿರುವ ಶಾಲಾ ಬಸ್ ಚಾಲಕರು ಬೇಕಾಗಿದ್ದಾರೆ. ವೇತನ 20,000, ಉಚಿತ ಊಟ-ವಸತಿ, ಮಕ್ಕಳಿಗೆ 10ನೇ ತರಗತಿಯವರೆಗೆ ಉಚಿತ ಇಂಗ್ಲಿಷ್ ಶಿಕ್ಷಣ । ಸಂಪರ್ಕ: 98453 01354

GENERAL

WANTED legal/revenue coordinators for a real estate company, Attractive salary and incentives. Interested Candidates Pls send resume @ Karnasree.95@gmail.com

ಮನೆಯಿಂದಲೇ ಕೆಲಸ. ಡೇಟಾ ಎಂಟ್ರಿ, ಎಸ್.ಎಂ.ಎಸ್. ಸೆಂಡಿಂಗ್, ಪಾರ್ಕಿಂಗ್ ವರ್ಕ್, ಮಹಿಳೆಯರಿಗೆ, ಪುರುಷರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 20,000 - 25000/-. ಸಂ: 70900 72435.

WE are Hiring! Govt. Officials, Senior Citizens, Housewives. Part / Full Time work from Home. Age: 30 to 65, SSLC & Above. Free Training. Good Income + Incentives. 9448957455, 8073937989.

ನಾಯಕ ಮಹಿಳಾ ಅಡುಗೆ ಕೆಲಸ ಮಾಡುವವರು ಬೇಕಾಗಿದ್ದಾರೆ - ರಾಕುಮ್ ಶಾಲೆ, 421/ಐ, ಶ್ರೀ ಕೃಷ್ಣ ದೇವಸ್ಥಾನ ರಸ್ತೆ, ಇಂದಿರಾನಗರ, ಬೆಂಗಳೂರು. ವೇತನ ರೂ.20,000. ಊಟ ಹಾಗೂ ವಸತಿ ಸೌಲಭ್ಯವಿದೆ. ಸಂಪರ್ಕಿಸಿ: 98453 01354.

ಪ್ರೈವೇಟ್ ಲಿಮಿಟೆಡ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು 10th & PUC ಪಾಸ್ ಆಗಿರುವ 30 ವರ್ಷದೊಳಗಿನ ಯುವಕರು ಬೇಕಾಗಿದ್ದಾರೆ ರಾಜಾಜಿನಗರ ಸುತ್ತಮುತ್ತ ಇರುವವರಿಗೆ ಆದ್ಯತೆ ಮೊ: 9902891620 / 9845579620

ಅಡುಗೆಯವರು, ಸಹಾಯಕ ಅಡುಗೆಯವರು (ಸಸ್ಯಾಹಾರಿ) ಮತ್ತು ಕಚೇರಿ ಸಹಾಯಕರು ಬೇಕಾಗಿದ್ದಾರೆ.
ಬೆಂಗಳೂರಿನ ಹತ್ತಿರ ಇರುವ ಆಶ್ರಮಕ್ಕೆ ಬೇಕಾಗಿದ್ದಾರೆ. ಸೂಕ್ತ ಸಂಬಳ ಮತ್ತು ಉಚಿತ ವಸತಿ ಸೌಲಭ್ಯ ನೀಡಲಾಗುತ್ತದೆ. ಸಂಪರ್ಕಿಸಿ : +91 98808 55005

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

JOB WANTED

WANTED General Manager, Branch Manager & Project Manager with Real Estate Exp. Any qualif salary upto Rs.60k, Age 30+ yrs, Male or Female. Kannada,English,Hindi speak knowledge. Corporate ofc at Jayanagar, Branch ofc Sahakarnagar,Call: 7676302393

ಪ್ರವಾಸ TRAVEL

TOURS & TRAVELS

3/07/2026 ರಾಮೇಶ್ವರಂ ಮತ್ತು ಕನ್ಯಾಕುಮಾರಿ 6 ದಿನಗಳ ರೂ 7500 & ಕಾಶಿ ಮತ್ತು ಅಯೋಧ್ಯ 16 ದಿನಗಳ, ವೆಂಕಟೇಶ್ವರ ಟೂರ್ಸ್ ಪಾವಗಡ ರಾಮಾಂಜಿನಪ್ಪ 6362710105

ವ್ಯಾಪಾರ BUSINESS

DISTRIBUTORS

ನಮ್ಮಲ್ಲಿ ಬಿಸಿ ಮತ್ತು ಖಡಕ್ ಜೋಳದ ರೊಟ್ಟಿ ದೊರೆಯುತ್ತದೆ.ನಾಗರಬಾವಿ, ಕೆಂಗೇರಿ,ವಿಜಯನಗರ ಸುತ್ತ ಮುತ್ತ ನಿಮ್ಮ ಮನೆಬಾಗಿಲಿಗೆ ಡೆಲಿವರಿ. ಆರ್ಡರ್ ಮಾಡಿ 9742320171

personal

CHANGE OF NAME

I, SUJITH HALLUR s/o Sadanand Hallur, residing at Flat No 211, S S Swadhama Apartment, Ullal Main Road, Opp. Kodagu Samaja Kalyana Mantapa, 5th Block Vishweshwaraiah Layout, Ullalu, Bengaluru, Karnataka – 560110 hereby SUJITH HALLUR and SUJITH S HALLUR appearing in different documents refer to one and the same person vide affidavit dated 18/06/2026 sworn before notary, H G Venkataramu Bangalore

I, ALKA VIJ alias ALKA, W/o UDESH KUMAR VIJ, R/o H-206, 2nd Floor, Purva Venezia, Yelahanka New Town, Bengaluru, Karnataka, 560064, hereby state that the above name variations refer to one and the same person for all purposes.

I, MULLA DILSHAD BEGUM, W/o SHANAWAZ, R/o No. 84, Ground Floor and 1st Floor, Flour Mill Road Ashwathnagar, Near Anjaneya Temple, Bengaluru North, Bengaluru, Karnataka – 560094, have changed my name to DILSHAD.

I Lakshmi Sudeendra aged about 52 years w/o Sudeendra B V residing at No. 547, 6th Cross, Vidyamanyanagar, Vishwaneedam post, Bangalore 560091, M S Lakshmi, M S Lakshmi Sudeendra and Lakshmi Sudeendra where ever appearing refer to one and the same person that is myself. As per Aadhar card my name is Lakshmi Sudeendra. Vide affidavit dated 22/06/2026 sworn before notary N Nagappa.

I ,Kavya Venugopal Reddy C/O Madhukar G N ,Villa 63 Nambiar Ellegenza, 3rd Cross, Opposite Sapallama Temple, Gopasandra, PO:Muthanallur, DIST:Bengalur,Karnataka, 560099, have changed my name to Kavya Venugopal

14847563H NK/SHT Dinesh Patgar 427(1) Comp PL ASC my mother name records Vatsala Patgar to Vatsala Vingappa Patgar, for all purpose.

I, Tina Kumari Ashok Kumar (Old Name), W/o Sri. Amit K. Jain, aged about 37 years, residing at No.35, Janta Nivas, 2nd Cross, Surveyor Street, Near Butter Spounge Bakery, Basavanagudi, Bengaluru South, Bengaluru - 04, have changed my name to read as TINA KUMARI (New Name) vide affidavit dated 10.06.2026 sworn before Notary B. Chitra.

I, T K Naga Sudheer Bhardwaj, S/o Karanam Raghuram Thimmapuram, residing at G 02 Rashi Pride, BTM 6th Stage, Arekere, Bengaluru, Karnataka-560076, have changed my name from T K Naga Sudheer Bhardwaj to T K Naga Sudheer Bharadwaj vide Affidavit dated 16/06/2026 for all purposes.

I, Venkataswaran Murukesan, Aged 52 yrs, R/o. #129, 20th Main, 5th Cross, Opp. Varasiddi Vinayaka Temple, MICO L/o, Hongasandra, Blr-560068, have changed my name to SENTHIL KUMAR MURUKESAN PILLAI vide affidavit Dt: 22/06/26 before Notary M. Rajendra, Blr.

I Jigneshkuamr Hemrajbhai Nagrecha S/O, Hemrajbhai Bhagwanjibhai Nagrecha R/o Tower 5, Block D, Flat D-905, Uber Verdant Phase 2, Sarjapura Road, Doddakannelli, Bangalore, Karnataka - 560035 have changed my name to Jignesh Hemrajbhai Nagrecha.

I, Shilpa Vivekanandhan Resident. No.36/2, 3rd Cross, 10th Main Road, Mathikere Extension, Mathikere, Bengaluru-560054. Changed my name from Shilpa Kala Vivekanandhan to Shilpa Vivekanandhan to all further purposes.

I, Mahesh Kumar Birla, S/o. Tejpal Birla, R/o: Flat No. 115, B-Block,Sriven Luminous Amaltas,Doddathoguru,Electronic City, Phase-1, Bangalore-560100, have changed my name to MAHESH TEJPAL BIRLA vide affidavit Dt: 23/06/26 before Notary M. Rajendra, Blr.

I, SYED IBRAHIM, R/o #1996/A, 2nd floor, 1st cross, 4th main, LBS Nagar, Bangalore-560017, do hereby declare that in my SSLC marksheet my name is wrongly spelled as SAIYAD IBRAHIM instead of SYED IBRAHIM, my father's name is wrongly spelled as SAIYAD SADIKSAB instead of SYED SADIQ and mother's name is wrongly spelled as JULEKHA B instead of JULEKABI. All three correct names should be used for all future purposes and records.

I, Manjunath R/o Vasundara Skyscape FF-10 No 53/3 5th Main Kuvempu Nagar B'lore-560062 have changed my name to Manjunath Warad.

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು/ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

I, Abdul Rasheed Abdul Hameed S/o Abdul Rasheed R/o No. 8, Shaikh Nath Lane, Payappa Lane, Shivaji Nagar, HKP Road, Bengaluru 560051 have changed my name as ABDUL HAMEED

I, Mohit Khattri, father of minor Ansh Khattri, resident of Bengaluru, declare that my child's name has been changed from Aayansh Khattri to Ansh Khattri. Henceforth, he shall be known as Ansh Khattri for all purposes.

I SWATI KEDIA, W/o DEVESH AGARWAL R/o D1-063, SNN Raj Etternia, Silver County Road, Sai Meadows, Bengaluru-560068 Shall Be Known as SWATI K KEDIA for all Purpose

14864288K SEP Bhabhor Arjunbhai Kalu Bhai 1ATC my father name service records Bhabhor Kalubhai to Bhabhor Kalubhai Bhurabhai, for all purpose.

I, Jareen Taj W/o Shaikh Babu R/o 126, B Block, Subhash Nagar West Side Bangalore-560068 have changed my name to Zareen Taj for all purposes.

I, Suraj Singh, residing at Block E room no.407, skandagiri Apartment, kondasapura, whitefield, karnataka 560049, have changed my name to Suraj Kumar Singh vide affidavit dated 22/06/2026 sworn before Notary Manjunath.T

I Tony Jose Thundiyil, S/o, Jose Joseph, Residing at, B307, Sbb Sapphire, Victorian View Lyt,Borewell Road,Nallurahalli, Whitefield, Bengaluru 560066, have changed my name to Tony Jose for all purposes

I, Sanjiv Kumar Ruhela S/O, Chandar Pal Singh R/o No9, G2, Slv Regency, 1st Cross, Vyalikaval Layout, Bengaluru, 560040 have changed my name to Sanjeev Ruhela for all purposes.

I Tabbassum W/O, Junaid Ulla Khan R/o No 115 1st Floor 5th Cross 5th Main Road Rahamathnagar Bangalore North R T Nagar Bangalore 560032 have changed my name to Mehreen Taj.

I, 649457N, Nk, Mahaveer Prasad of 1 ATC my mother changed name Gomti Devi to Gomati Devi, for all purpose.

I Harish.M.S R/o Hari Nivas, 1st cross, shivananda kaloni, Arsikere,Hassan 573103 karnataka have changed my name to Hareesh.M.S for all purposes.

I Yasa Ur Rehman, S/o Fazlur Rehman R/o H.No: 243, Opp Delhi Public School Gate 4, Konanakunte, Bengaluru Shall Be Known as Yasa Fazlur Rehman for all Purpose.

14864288K SEP Bhabhor Arjunbhai Kalu Bhai 1ATC my mother name service records Bhabhor Champa Ben to Champaben Kalubhai Bhabhor, for all purpose.

I KALIM AHMED MALABAR R/@ No 165 Old Post Office Road Soraba Shivamogga 577429 has changed my name to KALIM AHAMED for all purposes

I, K. Prathiba R/o 17,B Cross, Indira Nagar Second Stage, Bangalore - 560038 have changed my minor daughter's name from M. Merlin Theresa to M. Nithya for all purposes

I, Jagat Ram Minj, F/o 6496437F–Hav/ASH–Jeewan Masih Minj, R/o, Barjor, Kansabel, Jashpur, Chhattisgarh, changed name to Jagat Minj, for all purpose.

I Akthar Begum W/O, Jabbar Khan R/o No 16/7 Patel Cross Rahamath Nagar Bangalore North R T Nagar Bangalore 560032 have changed my name to Asma Taj.

I, Sathyanarayan Rao, s/o Ranoji Rao #70, Nisarga marg, Pramod lyt, Nandi nagar, Nayandahalli, Bangalore-560039 have changed my name to R Sathyanarayana rao

I, TK SUJATA Having Address # 66/1.,1st Main Road Pushpaginnagar,Near Hebbar Condiments, Hoskerehalli, Banshankari 3rd Stage, Bangluru , Karnataka -560085. I hereby Declare That the names T K SUJATA and SUJATHA VIJAYA KUMAR T K SUJATA One And Same Person. Vide Affidavit Dated 15/06/2026 Sworn To Before ARUNA V Advocate And Notary Bangalore

I, Muntaha R/o No 84 9th Cross Haadi Masjid Devasandra Bangalore 560036 Have Changed My Name to Muntaha Asif for All Purposes

I SHAIK KHADER VALLI R/@ S-1-g-45 Saidapeta Madanapalle Chittoor 517325 has changed my name to SHAIK KHADAR VALLI for all purposes

LOST & FOUND

ನಾನು Bhargavi B G ಸಹ-ಮಾಲೀಕಿ,ನನ್ನ ದಿವಂಗತ ತಂದೆ B Govind Bhat ಅವರು Ramalakshmamma ಅವರಿಂದ 23 May 1988 ರಲ್ಲಿ , ಸಂಪುಟ 600 , ಪುಟ 112 -116 , ಡಾಕ್ಯುಮೆಂಟ್ ನಂಬರ್ 183 /88 - 89 ಖರೀದಿಸಿದ್ದ ಬಾಗೇಪಲ್ಲಿ ಟೌನ್ ಆಸ್ತಿಯ ಅಸಲಿ ಕ್ರಯ ಪತ್ರ ನನ್ನ ತಾಯಿಯವರಾದ Smt Sunanda B ರವರ ವಶದಲ್ಲಿರುವುದಿಲ್ಲ , ಕಳೆದು ಹೋಗಿರುತ್ತದೆ. ಪೊಲೀಸ್ ಲಾಸ್ಟ್ ವರದಿ ಸಂಖ್ಯೆ: 2266812/2026, ದಿನಾಂಕ: 21/06/2026 .ಆಕ್ಷೇಪಣೆಗಳಿದ್ದಲ್ಲಿ 15 ದಿನದೊಳಗೆ ಸೂಕ್ತ ಪುರಾವೆಗಳೊಂದಿಗೆ ಇಮೇಲ್ ಮಾಡಿ: ravibhat66@yahoo.in , ತಪ್ಪಿದ್ದಲ್ಲಿ ಭವಿಷ್ಯದ ಯಾವುದೇ ಕ್ಲೈಮ್ ಪುರಸ್ಕರಿಸಲಾಗುವುದಿಲ್ಲ ಮತ್ತು ಆ ಅಸಲಿ ಕ್ರಯ ಪತ್ರವು ಕಾನೂನುಬದ್ಧವಾಗಿ ಅನೂರ್ಜಿತ, ರದ್ದು ಹಾಗು ಸಂಪೂರ್ಣ ಅಮಾನ್ಯ ಎಂದು ಪರಿಗಣಿಸಲಾಗುವುದು

ದಾಖಲೆ ಕಳೆದಿದೆ ಜಿ.ಕೆ.ಹುಸೇನ್ ಆದ ನಾನು ನಂ.14 ಅಫಾ ಅಬ್ದುಲ್ಲಾ ರಸ್ತೆ, ರಿಚ್ಮಂಡ್ ಟೌನ್, ಬೆಂಗಳೂರು-560025 ಇಲ್ಲಿನ ವಾಸಿಯಾಗಿದ್ದು , ಕೋಲಾರ ಜಿಲ್ಲೆ, ಕಸಬಾ ಹೋಬಳಿ, ತೊರಣಹಳ್ಳಿ ಗ್ರಾಮದಲ್ಲಿರುವ ಹಾಗೂ ಮಾಲೂರು ಉಪ ನೋಂದಣಿ ಕಚೇರಿಯಲ್ಲಿ ನೋಂದಾಯಿಸಲ್ಪಟ್ಟ ಸ್ವತ್ತಿನ ದಾಖಲೆ ಸಂಖ್ಯೆ MLR-1-01538-2012-13 ದಿನಾಂಕ 15.06. 2012ರ ಮೂಲ ಮಾರಾಟ ಪತ್ರ ಬೆಂಗಳೂರಿನ ಶಾಂತಿ ನಗರದ ಕಾನ್ಸಿಡೆಂಟ್ ಲ್ಯಾಂಗ್‌ಫೋರ್ಡ್ ಟೌನ್‌ನ ಕಚೇರಿಯಲ್ಲಿ ಕಳೆದುಹೋಗಿರುತ್ತದೆ. ಈ ಸಂಬಂಧ ಅಶೋಕ್ ನಗರ ಪೊಲೀಸ್ ಠಾಣೆಯಲ್ಲಿ ದೂರು (ಎಲ್.ಆರ್.ನಂ. 2257724 /2026) ದಾಖಲಿಸಿರುತ್ತೇನೆ. ಸದರಿ ದಾಖಲೆ ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ವಿಳಾಸ ಅಥವಾ ಮೊಬೈಲ್ 98867 15469 ಸಂಖ್ಯೆಗೆ ಸಂಪರ್ಕಿಸುವಂತೆ ಕೋರಲಾಗಿದೆ.

WE, SUNDARI BALASUBRAMANIAN and Balasubramanian Pondoor Gopalan R/at No.82/1 Annayappa Garden Behind Ganesha Temple Thippasandra Bangalore- 560075 do hereby inform the general public that I have lost the Share Certificate No.5108580 FOLIO NO. HLL1943150 DIST NO: 99535081 to 99535580 Document No/ Identification No of Shares 500 Issued By Hindustan Unilever Limited I have lodged a Complaint regarding lost of documents Lost Report No: 2263909/2026 Finder may Contact me in the above mentioned address.

I, K Rahul, S/o M Kannan, R/o #30, Near Rama Temple,Shanthipura, Electronic City phase - 2, Bangalore-560100 have lost my Original 10th marksheet with Document No-TW 30038387, Roll No-1244523/018, Unique No-8118118 which was issued in year-2024. if found Please contact on 9880173280.

SYEDUNNISA Shamsuddin d/o Jamal N Abdul, Lost original sale deed of 2126, 5th B sector, Yelahanka 3rd phase, yelahanka If found kindly return to 597, LIG 707, Yelahanka 4th phase-560064

OBITUARY

DEATH ANNIVERSARY

REMEMBRANCE



CHIKKA THAYAMMA (MADAKKA)
DOD: 24-06-2014
Deeply mourned by:
P. RAMIAH & ALL FAMILY MEMBERS
Challagatta Village, Yemalur post, HAL Bangalore - 37

CAUTION NOTICE
Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

ಸಣ್ಣ ಉದ್ಯಮಗಳಿಗೆ ಬಿಗ್ ಶಾಕ್; ಆರ್ಥಿಕತೆ ಗತಿ ಏನು?

50ನೇ ವಯಸ್ಸಿಗೆ ನಿವೃತ್ತಿ ಹೊಂದಲು ಎಷ್ಟು ದುಡ್ಡಿರಬೇಕು?

ಭಾನುವಾರದ ಸಂಚಿಕೆಯಲ್ಲಿ ತಪ್ಪದೆ ಓದಿ!

ವಿಕ ಮನಿ

ಅಲ್ಪಾವಧಿಯಲ್ಲಿಯೇ ಜನಮೆಚ್ಚಿದ ಕನ್ನಡದ ಮೊದಲ ಹಣಕಾಸು ವಾರಪತ್ರಿಕೆ

ಪತ್ರಿಕೆಗಾಗಿ ಸಂಪರ್ಕಿಸಿ 72594 58080

ನೌಕರರ ನಿರಾಸಕ್ತಿ, ನೇಕಾರಿಕೆ ನಿಸ್ತೇಜ

ಖಾದಿ ಉತ್ತೇಜನ ಕ್ರಮ ಸುತ್ತೋಲೆಗಷ್ಟೇ ಸೀಮಿತ | ಸ್ವದೇಶಿ ಚಿಂತನೆಗೆ ಸಿಗದ ಸೂಕ್ತ ಸ್ಪಂದನೆ

■ **ರವಿಭಾರತಿ ಗೋಸಾವಿ** ಬೆಳಗಾವಿ
ravi.gosavi@timesofindia.com

ಸಾಂದರ್ಭಿಕ ಚಿತ್ರ

ಸರಕಾರಿ ನೌಕರರು ಪ್ರತಿ ತಿಂಗಳ ಮೊದಲ ಶನಿವಾರ ಕಚೇರಿಗೆ ಖಾದಿ ವಸ್ತ್ರ ಧರಿಸಿ ಬರಬೇಕು ಎಂದು ಸರಕಾರ ಆದೇಶಿಸಿ ಆರು ತಿಂಗಳು ಕಳೆದರೂ, ಅನುಷ್ಠಾನವಾಗಿಲ್ಲ. ನೇಕಾರಿಕೆಗೆ ಆಸರೆಯಾಗಬೇಕು ಮತ್ತು ಸ್ವದೇಶಿ ಚಿಂತನೆಗೆ ಬಲ ಸಿಗಬೇಕು ಎಂಬ ಉದ್ದೇಶದ ಖಾದಿ ಉತ್ತೇಜನ ಕ್ರಮ ಸುತ್ತೋಲೆಗಷ್ಟೇ ಸೀಮಿತಗೊಂಡಂತಿದೆ.

ಸರಕಾರಿ ಇಲಾಖೆ, ಅನುದಾನಿತ ಸಂಸ್ಥೆ, ನಿಗಮ, ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯದ ಸಿಬ್ಬಂದಿ ಪ್ರತಿ ತಿಂಗಳ ಮೊದಲ ಶನಿವಾರ ಸ್ವಯಂಪ್ರೇರಿತವಾಗಿ ಖಾದಿ ಉಡುಪು ಧರಿಸಬೇಕು ಎಂದು ಸರಕಾರ ಆದೇಶಿಸಿದ್ದರಿಂದ ಖಾದಿ ಉತ್ಪನ್ನಗಳ ಬೇಡಿಕೆ ಹೆಚ್ಚಾಗಿ ನೇಕಾರರ ಆದಾಯದಲ್ಲಿ ಏರಿಕೆಯಾಗಲಿದೆ ಎಂಬ ನಿರೀಕ್ಷೆ ಇತ್ತು. ಆದರೆ, ಆದೇಶ ಹೊರಬಿದ್ದು ಅರ್ಧ ವರ್ಷ ಕಳೆದರೂ ಖಾದಿ ಖರೀದಿಯಲ್ಲಿ ಬದಲಾವಣೆ ಕಂಡುಬಂದಿಲ್ಲ. ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟದ ಹೆಚ್ಚಿನ ಸರಕಾರಿ ಕಚೇರಿಗಳಲ್ಲಿ ಮೊದಲ ಶನಿವಾರ ಖಾದಿ ಧರಿಸುವ ಪರಿಪಾಠ ಕಾಣುತ್ತಿಲ್ಲ. ರಾಷ್ಟ್ರೀಯ ಹಬ್ಬಗಳು ಹಾಗೂ ಸರಕಾರಿ ಕಾರ್ಯಕ್ರಮಗಳಲ್ಲೂ ಖಾದಿ ಉಡುಪು ಧರಿಸುವ ಅಧಿಕಾರಿ ಮತ್ತು ಸಿಬ್ಬಂದಿ ವಿರಳ. ಕೆಲವರಿಗೆ ಸುತ್ತೋಲೆಯ ಬಗ್ಗೆ ಅರಿವೇ ಇಲ್ಲ!

ವಿಕ ವಿಶೇಷ

ಮೇಲ್ವಿಚಾರಣೆ ಇಲ್ಲ: ರಾಜ್ಯದಲ್ಲಿ ಒಟ್ಟು 4.50 ಲಕ್ಷಕ್ಕೂ ಹೆಚ್ಚು ನೇಕಾರರಿದ್ದು, 176ಕ್ಕೂ ಅಧಿಕ ಖಾದಿ ಸಂಘ, ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಕೋವಿಡ್ ನಂತರ ವರ್ಷಕ್ಕೆ ವ್ಯಾಪಾರ-ವಹಿವಾಟು ಕುಂಠಿತಗೊಂಡು, ಉತ್ಪಾದನಾ ವೆಚ್ಚ ಹೆಚ್ಚಳ ಮತ್ತು ಮಾರುಕಟ್ಟೆ ಅನಿಶ್ಚಿತತೆಯಿಂದ ನೇಕಾರಿಕೆ ಕ್ಷೇತ್ರ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಸಾಲದ ಹೊರೆ ತಾಳಲಾರದೇ ರಾಜ್ಯದಲ್ಲಿ ಈವರೆಗೆ 56 ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಖಾದಿ ಉತ್ತೇಜನದ ಸರಕಾರಿ ಆದೇಶ ನೇಕಾರರಲ್ಲಿ ಹೊಸ ಆಶಾಭಾವನೆ ಮೂಡಿಸಿತ್ತು. ಆದರೆ, ಆದೇಶದ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಕೊರತೆಯಿಂದ ನೇಕಾರಿಕೆ ಕಷ್ಟ ಇನ್ನಷ್ಟು ಹೆಚ್ಚಿದೆ.

''ಖಾದಿ ಸ್ವದೇಶಿ ಚಳವಳಿಯ ಪ್ರತೀಕ ಹಾಗೂ ಗ್ರಾಮೀಣ ಆರ್ಥಿಕತೆಯ ಜೀವನಾಡಿ. ರಾಜ್ಯದ ಸಾವಿರಾರು ಕುಟುಂಬಗಳು ನೇಯ್ಗೆ ಹಾಗೂ ಖಾದಿ ಉತ್ಪಾದನೆಯನ್ನೇ ಅವಲಂಬಿಸಿವೆ. ಸರಕಾರಿ ನೌಕರರು ಖಾದಿ ಬಳಕೆಗೆ ಮುಂದಾದರೆ ಖಾದಿ ಉತ್ಪನ್ನಗಳಿಗೆ ಸ್ಥಿರ ಮಾರುಕಟ್ಟೆ ಸಿಗುವ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ ಎಂಬ ಲೆಕ್ಕಾಚಾರವಿತ್ತು. ಈ ನಿಟ್ಟಿನಲ್ಲಿ ಸರಕಾರದ ಉತ್ತೇಜನ ಕಾರ್ಯಕ್ರಮಗಳು ಪರಿಣಾಮಕಾರಿ ಜಾರಿಯಾದರೆ ಮಾತ್ರ ಖಾದಿ ಕ್ಷೇತ್ರಕ್ಕೆ ಹೊಸ ಚೈತನ್ಯ ಸಿಗಲಿದೆ,'' ಎಂದು ನೇಕಾರ ಬಸವರಾಜ ಇಂಚಲ ಅಭಿಪ್ರಾಯಪಟ್ಟರು.

> ಕೇಂದ್ರ ಮತ್ತು ರಾಜ್ಯ ಸರಕಾರಗಳು ಉತ್ತಮ ನೀತಿಗಳನ್ನೇನೋ ರೂಪಿಸುತ್ತಿವೆ. ಆದರೆ ಅವುಗಳ ಅನುಷ್ಠಾನಕ್ಕೆ ಮುತುವರ್ಜಿ ತೋರುತ್ತಿಲ್ಲ. ಸರಕಾರದ ಉನ್ನತ ಅಧಿಕಾರಿಗಳ ಆದೇಶವೇ ಪಾಲನೆಯಾಗದಿದ್ದರೆ ಹೇಗೆ?
>
> **- ಶಿವಲಿಂಗ ಟಿರಕಿ**, ಅಧ್ಯಕ್ಷ, ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘ

> ಪ್ರತಿ ತಿಂಗಳ ಮೊದಲ ಶನಿವಾರ ಖಾದಿ ಧರಿಸುವ ಕುರಿತ ರಾಜ್ಯ ಸರಕಾರದ ಆದೇಶ ಪಾಲಿಸುವಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಸರಕಾರದ ಆಶಯದಂತೆ ಖಾದಿ ಬಳಕೆ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.
>
> **- ಮೊಹಮ್ಮದ್ ರೋಷನ್** ಜಿಲ್ಲಾಧಿಕಾರಿ, ಬೆಳಗಾವಿ

ಎಇಇ ಬಳಿ 12 ನಿವೇಶನ!

ಬಳ್ಳಾರಿಯ ಆರ್‌ಡಿಪಿಆರ್ ಎಇಇ ತಿಪ್ಪೇಸ್ವಾಮಿ ಅವರ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ ವೇಳೆ ಪತ್ತೆಯಾದ ಚಿನ್ನಾಭರಣಗಳು.

■ **ವಿಕ ಸುದ್ದಿಲೋಕ** ಬಳ್ಳಾರಿ

ಆದಾಯ ಮೀರಿ 174% ಆಸ್ತಿ

8 ಎಕರೆ ಜಮೀನು 50 ಲಕ್ಷ ರೂ. ಪತ್ತೆ

ಆದಾಯ ಮೀರಿ ಆಸ್ತಿ ಗಳಿಕೆ ಆರೋಪ ಹಿನ್ನೆಲೆಯಲ್ಲಿ ಇಲ್ಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ತಿಪ್ಪೇಸ್ವಾಮಿ ಅವರ ಮನೆ, ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿ 2.20 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆಹಚ್ಚಿದ್ದಾರೆ.

ಹನುಮನಗರದ ಮನೆ, ಕುಡತಿನಿಯಲ್ಲಿರುವ ನಿವಾಸ ಹಾಗೂ ಸಿರುಗುಪ್ಪದಲ್ಲಿರುವ ಕಚೇರಿಯ ಮೇಲೆ ಏಕಕಾಲಕ್ಕೆ ಲೋಕಾಯುಕ್ತ ಎಸ್ಪಿ ಎನ್.ವಾಸುದೇವರಾಮ ನೇತೃತ್ವದ ಮೂರು ತಂಡಗಳು ದಾಳಿ ನಡೆಸಿವೆ. ಬಳ್ಳಾರಿ, ಸಂಡೂರು ಸೇರಿ ನಾನಾ ಭಾಗದಲ್ಲಿದ್ದ 8 ಎಕರೆ ಜಮೀನು ಮತ್ತು 12 ನಿವೇಶನದ ಪತ್ರಗಳು, ನಗದು ಸೇರಿ ಬ್ಯಾಂಕ್ ಉಳಿತಾಯ ಖಾತೆಯಲ್ಲಿದ್ದ 50 ಲಕ್ಷ ರೂ., 290 ಗ್ರಾಂ ಚಿನ್ನಾಭರಣಗಳು, ಕಾರು, ದ್ವಿಚಕ್ರ ವಾಹನ ಸೇರಿ 8 ವಾಹನಗಳು ಒಳಗೊಂಡಂತೆ ಒಟ್ಟು 2.20 ಕೋಟಿ ರೂ. ಮೌಲ್ಯದ ಆಸ್ತಿ ಪತ್ತೆ ಹಚ್ಚಲಾಗಿದೆ.

ಈ ಬಾರಿ ಕೊಯ್ನಾ ನೀರು ಸಾಧ್ಯತೆ ಕಡಿಮೆ: ಸತೀಶ್

ಬೆಳಗಾವಿ: ನೆರೆಯ ಮಹಾರಾಷ್ಟ್ರದಲ್ಲೂ ಈ ಬಾರಿ ಮಳೆಯಾಗಿಲ್ಲ. ತೀವ್ರ ಅಭಾವದ ಕಾರಣ ಕೊಯ್ನಾ ಜಲಾಶಯದಿಂದ ಕರ್ನಾಟಕಕ್ಕೆ ನೀರು ಬಿಡುಗಡೆ ಮಾಡುವ ಸಾಧ್ಯತೆ ಬಗ್ಗೆ ಈಗಾಗಲೇ ಅಲ್ಲಿನ ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು. ಮುಂಗಾರು ಮಳೆ ಕೊರತೆ ಹಿನ್ನೆಲೆಯಲ್ಲಿ ಸಂಭವನೀಯ ಕುಡಿಯುವ ನೀರು ಸಮಸ್ಯೆ ಹಾಗೂ ಕೃಷಿ ಚಟುವಟಿಕೆಗಳ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ಸಭೆ ನಡೆಸಿದರು. ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಮಹಾರಾಷ್ಟ್ರದ ಉನ್ನತ ಮಟ್ಟದ ಸಭೆಯಲ್ಲಿಯೇ ಅಧಿಕಾರಿಗಳು ನೀರಿನ ಕೊರತೆ ತೀವ್ರವಾಗಿರುವುದರಿಂದ ಕರ್ನಾಟಕಕ್ಕೆ ನೀರು ಬಿಡಲು ಸಾಧ್ಯವಿಲ್ಲ ಎಂದಿದ್ದಾರೆ. ಈ ಹಿಂದೆಯೂ ಸ್ಪಂದಿಸಿರಲಿಲ್ಲ. ಕೊಯ್ನಾ ಜಲಾಶಯ ಭರ್ತಿಯಾಗಿದ್ದ ಸಂದರ್ಭದಲ್ಲಿಯೂ ನೀರು ಬಿಡುಗಡೆ ಮಾಡದ ಉದಾಹರಣೆಗಳಿವೆ,'' ಎಂದರು.

2 ತಿಂಗಳು ಸಾಕಾಗುವಷ್ಟು ನೀರಿದೆ: ''ಹಿಡಕಲ್ ಜಲಾಶಯದಲ್ಲಿ ಇನ್ನೂ ಎರಡು ತಿಂಗಳಿಗೆ ಸಾಕಾಗುವಷ್ಟು ನೀರಿನ ಸಂಗ್ರಹವಿದೆ. ಪ್ರತಿ ವರ್ಷ ಈ ಅವಧಿಯಲ್ಲಿ ಮಳೆಯಿಂದಾಗಿ ಒಳಹರಿವು ಇರುತ್ತಿತ್ತು. ಈ ಬಾರಿ ಜಲಾಶಯಕ್ಕೆ ಇನ್ನೂ ಒಳಹರಿವು ಆರಂಭವಾಗಿಲ್ಲ. ಜುಲೈ ಅಂತ್ಯದವರೆಗೆ ಆತಂಕಪಡುವ ಅಗತ್ಯವಿಲ್ಲ,'' ಎಂದು ಸ್ಪಷ್ಟಪಡಿಸಿದರು.

ನಾಯಿ ಪತ್ತೆ ಹಚ್ಚಿದ್ದಕ್ಕೆ ಸಿಕ್ತು 50 ಸಾವಿರ ರೂ. ಇನಾಮು!



ಪುತ್ತೂರು(ದ.ಕ.): ನಾಪತ್ತೆಯಾಗಿದ್ದ ನಾಯಿ ಪತ್ತೆ ಹಚ್ಚಿ ಕೊಟ್ಟ ಕೂಲಿ ಕಾರ್ಮಿಕರೊಬ್ಬರಿಗೆ 50 ಸಾವಿರ ರೂ. ಇನಾಮು ದೊರಕಿದೆ.

ಪೋಳ್ಯದ ಗಣೇಶ್ ಕೇರ ನಾನಾ ಜಾತಿಯ 30 ನಾಯಿಗಳನ್ನು ಸಾಕುತ್ತಿದ್ದಾರೆ. ಅವರ ಶ್ವಾನ ಪರಿವಾರದಲ್ಲಿ ದೇಸೀ ತಳಿಯ 'ಚಿನ್ನು' ಎಂಬ ನಾಯಿ ಇದ್ದಕ್ಕಿದ್ದಂತೆ ನಾಪತ್ತೆಯಾಯಿತು.

ಎಷ್ಟು ಹುಡುಕಿದರೂ ಸಿಗದೇ ಹೋದಾಗ ಅವರು, ನಾಯಿ ಹುಡುಕಿ ಕೊಟ್ಟವರಿಗೆ ಅಥವಾ ಇರುವಿಕೆಯ ಸುಳಿವು ನೀಡಿದವರಿಗೆ 50 ಸಾವಿರ ರೂ. ನಗದು ಬಹುಮಾನ ಘೋಷಿಸಿದರು. ಈ ಬಗ್ಗೆ ತಮ್ಮ ಊರಿನಲ್ಲಿ ಬ್ಯಾನರ್ ಕೂಡ ಹಾಕಿದ್ದರು. ಗಣೇಶ್ ಕೇರ ಅವರ ಈ ಪ್ರಕಟಣೆ ಗಮನಿಸಿದ ಕೂಲಿ ಕಾರ್ಮಿಕ ಪುರಂದರ ನಾಯಿಯನ್ನು ಹುಡುಕಿ ತಂದು ಮಾಲೀಕರಿಗೆ ಒಪ್ಪಿಸಿದರು. ಕಳೆದುಕೊಂಡ ನಾಯಿ ಸಿಕ್ಕಿದ ಖುಷಿಯಲ್ಲಿ ಗಣೇಶ್ ಅವರು ಕೊಟ್ಟ ಮಾತಿನಂತೆ 50 ಸಾವಿರ ರೂ. ಚೆಕ್ ನೀಡಿ ಪುರಂದರ ಅವರನ್ನು ಗೌರವಿಸಿದರು.

ಕನ್ನೇರಿ ಶ್ರೀಗಳಿಗೆ ಹಲವು ಷರತ್ತು

ಕಲಬುರಗಿ: ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ನಡೆಸಲು ಉದ್ದೇಶಿಸಿರುವ 'ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ'ದ ಅನುಮತಿ ಕುರಿತ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್‌ನ ಕಲಬುರಗಿ ಪೀಠ ಕನ್ನೇರಿ ಶ್ರೀಗಳಿಗೆ ಹಲವು ಷರತ್ತುಗಳ ಕುರಿತು ಅಫಿಡವಿಟ್ ಸಲ್ಲಿಸಲು ಸೂಚಿಸಿ, ವಿಚಾರಣೆಯನ್ನು ಜೂನ್ 24ರ ಮಧ್ಯಾಹ್ನಕ್ಕೆ ಮುಂದೂಡಿದೆ.

ಮಠಾಧೀಶರ ಒಕ್ಕೂಟ, ಹಿಂದೂ ಸರ್ವ ಸಮಾಜಗಳ ಒಕ್ಕೂಟ ಜಂಟಿಯಾಗಿ ಜೂನ್ 28ರಂದು ಬಸವಕಲ್ಯಾಣದಲ್ಲಿ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಿದ್ದವು. ಇದಕ್ಕೆ ತಾಲೂಕು ಆಡಳಿತ ಅನುಮತಿ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಸಮಾವೇಶದ ಆಯೋಜಕ ಗುಂಡುರೆಡ್ಡಿ ಕಮಲಾಪುರೆ ಹೈಕೋರ್ಟ್‌ನ ಕಲಬುರಗಿ ಪೀಠದ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ಆರ್.ಕೃಷ್ಣಕುಮಾರ್ ಹಲವು ಷರತ್ತುಗಳನ್ನು ಮತ್ತು ಈ ಕುರಿತು ಅಫಿಡವಿಟ್ ಸಲ್ಲಿಕೆಗೆ ಸೂಚಿಸಿದ್ದಾರೆ.

''ಕಾರ್ಯಕ್ರಮದಲ್ಲಿ ಕನ್ನೇರಿ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ ಭಾಷಣ ಮಾಡದಿದ್ದರೆ ನಡೆಯುತ್ತದೆಯೇ,'' ಎಂದು ಪ್ರಶ್ನಿಸಿದ ನ್ಯಾಯಮೂರ್ತಿಗಳು, ''ಅದರಂತೆ ಅಫಿಡವಿಟ್‌ನಲ್ಲಿ ಉಲ್ಲೇಖಿಸಬೇಕು,'' ಎಂದು ಸೂಚನೆ ನೀಡಿದರು. ಇದರ ಜತೆಗೆ ''ಕನ್ನೇರಿ ಸ್ವಾಮೀಜಿ ಸಮ್ಮುಖದಲ್ಲಿ ಬೇರೆಯವರು ಕೂಡ ಪ್ರಚೋದನಕಾರಿ ಮಾತಾಡಬಾರದು ಹಾಗೂ ಕಾನೂನು ಸುವ್ಯವಸ್ಥೆ ಹಾಳಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾದರೆ ಅದಕ್ಕೆ ಕಾರ್ಯಕ್ರಮ ಆಯೋಜಕರೇ ಹೊಣೆ ಹೊರುತ್ತೀರಾ,'' ಎಂದು ನ್ಯಾಯಮೂರ್ತಿ ಪ್ರಶ್ನಿಸಿದರು.

ಅನುಮತಿ ಬೇಡ ಎಂದ ಎಜಿ

ಸರಕಾರದ ಪರವಾಗಿ ಎ.ಜಿ ಶಶಿಕಿರಣ್ ಶೆಟ್ಟಿ ಅವರು ವಾದ ಮಂಡಿಸಿ, ''ಈ ಹಿಂದೆ ಕನ್ನೇರಿ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಭಾಷಣದಲ್ಲಿ ಹಲವು ಅಸಾಂವಿಧಾನಿಕ ಪದಗಳನ್ನು ಬಳಸಿದ್ದಾರೆ. ಕಾನೂನು ಸುವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತದೆ ಎಂದು ಈಗಾಗಲೇ ಪೊಲೀಸ್ ವರದಿ ನೀಡಿದೆ. ತಾಲೂಕು ಆಡಳಿತ ಅನುಮತಿ ನಿರಾಕರಣೆ ಮಾಡಿದೆ. ತಾವೂ ಕೂಡ ಅನುಮತಿ ನೀಡಬಾರದು,'' ಎಂದು ವಾದ ಮಂಡಿಸಿದರು.

ಹೆಸ್ಕಾಂ, ಕಂದಾಯ ಇಲಾಖೆ ಅಧಿಕಾರಿಗಳು ಲೋಕಾ ಬಲೆಗೆ

ಮುಂಡಗೋಡ (ಉ.ಕನ್ನಡ): ಪಟ್ಟಣದ ಎರಡು ಸರಕಾರಿ ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ನಡೆಸಿದ ಪ್ರತ್ಯೇಕ ದಾಳಿಯಲ್ಲಿ ಹೆಸ್ಕಾಂ ಎಂಜಿನಿಯರ್ ಹಾಗೂ ಕಂದಾಯ ನಿರೀಕ್ಷಕರು ಸಿಕ್ಕಿಬಿದ್ದಿದ್ದಾರೆ.

ಹೆಸ್ಕಾಂ ಪ್ರಭಾರ ಎಇಇ ಧರ್ಮರಾಜ ಕ್ಲಾಸ್-1 ಗುತ್ತಿಗೆದಾರ ಶಿವಯೋಗಿ ಕುಡ್ಲಮಠ ಎಂಬುವವರಿಗೆ 5 ಲಕ್ಷ ರೂ. ವೆಚ್ಚದ ಗುತ್ತಿಗೆ ಕಾಮಗಾರಿ ನೀಡಲು 75 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮಂಗಳವಾರ ಹೆಸ್ಕಾಂ ಕಚೇರಿಯಲ್ಲಿ 65 ಸಾವಿರ ರೂ ಪಡೆಯುತ್ತಿದ್ದ ವೇಳೆ ಗುತ್ತಿಗೆದಾರರ ದೂರಿನ ಅನ್ವಯ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಎಇಇ ಅನ್ನು ವಶಕ್ಕೆ ಪಡೆದರು.

ಪಟ್ಟಣದ ನಾರಾಯಣ ಅರೆಜೊಗಿ ಎಂಬುವವರಿಗೆ ಫಾರ್ಮ್‌ಹೌಸ್ ನಿರ್ಮಿಸಲು ಅನುಮತಿ ನೀಡಲು ಕಂದಾಯ ನಿರೀಕ್ಷಕ ಬಸವರಾಜ ಬಿಸನಾಳ 15 ಸಾವಿರ ರೂ. ಲಂಚ ಕೇಳಿದ್ದರು. ಬಸವರಾಜ ಬಿಸನಾಳ ಹಣ ಪಡೆಯುವಾಗ ಲೋಕಾಯುಕ್ತ ಡಿವೈಎಸ್‌ಪಿ ಧನ್ಯಾ ನಾಯ್ಕ ನೇತೃತ್ವದ ತಂಡ ದಾಳಿ ನಡೆಸಿ ಹಣ ಹಾಗೂ ಕಂದಾಯ ನಿರೀಕ್ಷಕರನ್ನು ವಶಕ್ಕೆ ಪಡೆಯಿತು.

ಜೀತಕ್ಕಿದ್ದ 18 ಮಂದಿಗೆ ಪುನರ್ವಸತಿ

ಮೈಸೂರು: ತಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿಯ ಬೇವಿನಹಳ್ಳಿಯಲ್ಲಿ ಅನಧಿಕೃತವಾಗಿ ನಡೆಯುತ್ತಿದ್ದ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಜೀತಕ್ಕಿದ್ದ 18 ಮಂದಿಗೆ ತಾತ್ಕಾಲಿಕ ಪುನರ್ವಸತಿ ಕಲ್ಪಿಸಲಾಗಿದೆ. ಸಂತ್ರಸ್ತರಿಗೆ ತಲಾ 30 ಸಾವಿರ ರೂ. ಪರಿಹಾರದೊಂದಿಗೆ ಜೀತ ಪದ್ಧತಿ ಮುಕ್ತಿ ಪ್ರಮಾಣಪತ್ರ ನೀಡಲಾಯಿತು.

ಮೈಸೂರಿನ ಉಪವಿಭಾಗಾಧಿಕಾರಿ ಆಶಪ್ಪ ಮಂಗಳವಾರ ಸಂತ್ರಸ್ತರನ್ನು ಭೇಟಿ ಮಾಡಿ ಸಮಸ್ಯೆ ಆಲಿಸಿದ ಬಳಿಕ ಜಿಲ್ಲಾಡಳಿತದ ಸಂಚಿತ ನಿಧಿಯಿಂದ ಪ್ರತಿಯೊಬ್ಬರಿಗೂ ತಲಾ 30 ಸಾವಿರ ರೂ. ಪರಿಹಾರ ವಿತರಿಸಿದರು. ಜತೆಗೆ ಸಂತ್ರಸ್ತರಿಗೆ ಪ್ರಮಾಣಪತ್ರ ನೀಡುವ ಮೂಲಕ ಸರಕಾರದ ಅಗತ್ಯ ಸೌಲಭ್ಯ ಕಲ್ಪಿಸಲು ನೆರವಾದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸೂಚನೆ ಮೇರೆಗೆ ನಡೆದ ದಾಳಿಯಲ್ಲಿ ತಿ.ನರಸೀಪುರ ತಾಲೂಕು ಆಡಳಿತವು ಮಡಿಲು, ಐಜೆಎಂ(ಇಂಟರ್ ನ್ಯಾಷನಲ್ ಜಸ್ಟೀಸ್ ಮಿಷನ್)ಸ್ವಯಂ ಸೇವಾ ಸಂಸ್ಥೆಗಳ ನೆರವಿನಲ್ಲಿ ಬೇವಿನಹಳ್ಳಿ ಜಮೀನಿನಲ್ಲಿದ್ದ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಜೀತಕ್ಕಿದ್ದ ಮುತ್ತಣ್ಣ, ಅವರ ಪತ್ನಿ ಜ್ಯೋತಿ, ಮುತ್ತಣ್ಣ ಅವರ 11 ಮತ್ತು 13 ವರ್ಷದ ಇಬ್ಬರು ಪುತ್ರರು, ಚೆನ್ನಮ್ಮ, ಆರ್ಮುಗಂ (22), ಗಣೇಶ್ (25), ಪತ್ನಿ ರಾಜೇಶ್ವರಿ (22), ನಾಗಮ್ಮ (32), ಮಲ್ಲಿಕಾ (40), ಸುರೇಶ್ (27), ಪತ್ನಿ ಪ್ರೇಮಾ (23), ಸತೀಶ್ (26), ಪತ್ನಿ ಲಕ್ಷ್ಮೀ (24), ಚಂದ್ರು (60), ಪತ್ನಿ ಚೆನ್ನಮ್ಮ (52), ಅಮುದಾ (34), ವೇಲುವನಾದ (32) ಅವರನ್ನು ಸೋಮವಾರ ಬೆಳಗ್ಗೆ ರಕ್ಷಣೆ ಮಾಡಲಾಗಿತ್ತು. ಮಾಲೀಕರಿಂದ ಹಲ್ಲೆಗೊಳಗಾಗಿದ್ದ ಮುತ್ತಣ್ಣ ಮತ್ತು ಜ್ಯೋತಿ ದಂಪತಿಗೆ ಬನ್ನೂರಿನ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಎಲ್ಲ ಸಂತ್ರಸ್ತರ ಆರೋಗ್ಯ ಪರೀಕ್ಷೆ ಬಳಿಕ ತಿ.ನರಸೀಪುರದಲ್ಲಿನ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನಲ್ಲಿ ತಾತ್ಕಾಲಿಕವಾಗಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ'' ಎಂದು ತಹಸೀಲ್ದಾರ್ ಸುರೇಶಾಚಾರ್ ಮಾಹಿತಿ ನೀಡಿದರು.

ಕೆಐಎಡಿಬಿ ಭೂ ಮಾಡೆಲ್!

» ಮೊದಲ ಪುಟದಿಂದ

ಸರಕಾರದ ಆಶಯ !: ಯಾವುದೇ ಕೈಗಾರಿಕಾ ಪ್ರದೇಶದಲ್ಲಿ ರೈತರು ತಾವು ಬಯಸಿದ ಜಾಗದಲ್ಲಿ ಅಭಿವೃದ್ಧಿ ಪಡಿಸಿದ ಭೂಮಿ ಆಯ್ಕೆ ಮಾಡಿಕೊಂಡ ಬಳಿಕವಷ್ಟೇ ಉದ್ದಿಮೆಗಳಿಗೆ ಭೂಮಿ ಕೊಡುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಅವಕಾಶ ಬಳಸಿಕೊಂಡು ರೈತ ಮಕ್ಕಳೂ ಉದ್ಯಮಿಗಳಾಗಬೇಕು ಮತ್ತು ಅವರ ಕುಟುಂಬಗಳೂ ಅಭಿವೃದ್ಧಿಯ ಭಾಗವಾಗಬೇಕು ಎಂಬುದು ನಮ್ಮ ಆಶಯ ಎಂದು ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ವಿಜಯ ಕರ್ನಾಟಕಕ್ಕೆ ತಿಳಿಸಿದರು. ''ತಮಗೆ ಹಂಚಿಕೆಯಾದ ಭೂಮಿಯಲ್ಲಿ ಜಂಟಿ ಪಾಲುದಾರಿಕೆ ಬಯಸುವ ರೈತರಿಗೆ ಅಗತ್ಯ ನೆರವು, ಸಹಾಯ ನೀಡುವುದಕ್ಕೂ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ,'' ಎಂದು ಅವರು ವಿವರಿಸಿದರು.

ಕುಡುಕ ಪ್ರಯಾಣಿಕನ ಕಿತಾಪತಿ 18 ಪ್ರಯಾಣಿಕರು ಆಸ್ಪತ್ರೆಗೆ!

■ **ವಿಕಸುದ್ದಿಲೋಕ** ಬೀದರ್

ಪ್ರಯಾಣಿಕನೊಬ್ಬ ಏಕಾಏಕಿ ಸ್ಟೇರಿಂಗ್ ತಿರುಗಿಸಿದ್ದರಿಂದ ಬಸ್ ಮರಕ್ಕೆ ಡಿಕ್ಕಿ ಹೊಡೆದು 18 ಜನರಿಗೆ ತೀವ್ರ ಗಾಯಗಳಾಗಿರುವ ಘಟನೆ ಶಹಾಪುರ ಗೇಟ್ ಬಳಿ ಸೋಮವಾರ ಸಂಭವಿಸಿದೆ.

ಮಹಾರಾಷ್ಟ್ರ ಸಾರಿಗೆ ಸಂಸ್ಥೆಗೆ ಸೇರಿದ ಈ ಬಸ್ ಹೈದರಾಬಾದ್‌ನಿಂದ ಉದಗೀರ್ ಕಡೆಗೆ ಹೋಗುತ್ತಿತ್ತು. ಬೀದರ್ ಹೊರವಲಯದ ಶಹಾಪುರ ಗೇಟ್ ಬಳಿ ಬಂದಾಗ ಪ್ರಯಾಣಿಕನೊಬ್ಬ ವಾಹನ ಚಾಲಕನ ಕ್ಯಾಬಿನ್‌ಗೆ ನುಗ್ಗಿ, ಏಕಾಏಕಿ ಸ್ಟೇರಿಂಗ್ ತಿರುಗಿಸಿದ. ಇದರಿಂದ ಬಸ್ ಮರಕ್ಕೆ ಡಿಕ್ಕಿ ಹೊಡೆಯಿತು. ಬಸ್‌ನಲ್ಲಿದ್ದ ಎಲ್ಲರೂ ಗಾಯಗೊಂಡಿದ್ದಾರೆ, ಕೆಲವರಿಗೆ ಗಂಭೀರ ಗಾಯಗಳಾಗಿವೆ ಎಂದು ಎಂಎಸ್‌ಆರ್‌ಟಿಸಿ ಸಂಸ್ಥೆಯ ಬಸ್ ನಿರ್ವಾಹಕ ಅಮುಲ್ ತಿಳಿಸಿದ್ದಾರೆ. ಗಂಭೀರವಾಗಿ ಗಾಯಗೊಂಡವರನ್ನು ಬ್ರಿಮ್ಸ್‌ಗೆ ದಾಖಲಿಸಲಾಗಿದೆ.

ಸ್ಟೇರಿಂಗ್ ತಿರುಗಿಸಿದ ಪ್ರಯಾಣಿಕ ಮದ್ಯ ಸೇವಿಸಿದ್ದ. ಅಲ್ಲದೆ, ತನ್ನ ಪತ್ನಿ ಜತೆ ಜಗಳವಾಡುತ್ತಲೇ ಬರುತ್ತಿದ್ದ ಎನ್ನಲಾಗಿದೆ.

ಬಸ್ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡು ಬೀದರ್‌ನ ಬ್ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್ ಚಾಲಕ.

ಬಿಜೆಪಿ ಹೈಕಮಾಂಡ್ ವಾರ್ನಿಂಗ್

» ಮೊದಲ ಪುಟದಿಂದ

ರಾಷ್ಟ್ರೀಯ ಅಧ್ಯಕ್ಷರಿಂದ ತರಾಟೆ: ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರು ರಾಜ್ಯ ನಾಯಕರ ನಡೆಗೆ ತೀವ್ರ ಅಸಮಾಧಾನ ಹೊರ ಹಾಕಿದರು. ಅಗತ್ಯ ಶಾಸಕರ ಬಲವಿಲ್ಲದಿದ್ದರೂ ಆಡಳಿತ ಪಕ್ಷ ಶಾಸಕರನ್ನು ಮುಂಚಿತವಾಗಿಯೇ ರೆಸಾರ್ಟ್‌ನಲ್ಲಿ ಇರಿಸಿ ಚುನಾವಣೆಯಲ್ಲಿ ಗೆದ್ದಿತು. ಆ ರೀತಿಯ ಎಚ್ಚರಿಕೆಯ ನಡೆಯನ್ನು ಅನುಸರಿಸದಿರಲು ಕಾರಣವೇನು? ಮತದಾನದ ಹಿಂದಿನ ದಿನದ ಬದಲಿಗೆ ಮುಂಚಿತವಾಗಿಯೇ ಶಾಸಕಾಂಗ ಪಕ್ಷದ ಸಭೆ ಏಕೆ ನಡೆಸಲಿಲ್ಲ. ಪರಿಷತ್ ಚುನಾವಣೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿದಂತಿಲ್ಲ ಎಂಬುದಾಗಿ ರಾಷ್ಟ್ರೀಯ ಅಧ್ಯಕ್ಷರು ತರಾಟೆಗೆ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ.

ಒಂದು ಹಂತದಲ್ಲಿ ಶಾಸಕಾಂಗ ಪಕ್ಷ ಸಭೆ ಪರಿಣಾಮಕಾರಿಯಾಗಿ ನಡೆದಿತ್ತೇ ಎಂದು ರಾಷ್ಟ್ರೀಯ ಅಧ್ಯಕ್ಷರು ಪ್ರಶ್ನಿಸಿದ್ದಾರೆ. ಮತದಾನದ ಹಿಂದಿನ ದಿನ ಶಾಸಕಾಂಗ ಪಕ್ಷದ ಸಭೆ ನಡೆಸಿ ಮತದಾನ ವಿಧಾನದ ಬಗ್ಗೆ ಅರಿವು ಮೂಡಿಸಲಾಗಿತ್ತು. ಪಕ್ಷದ ಉಭಯ ಅಭ್ಯರ್ಥಿಗಳಿಗೆ ತಲಾ 30 ಶಾಸಕರನ್ನು ಹಂಚಿಕೆ ಮಾಡಲಾಗಿತ್ತು. ಉಳಿಕೆ ಮೂರು ಮತಗಳನ್ನು ಜೆಡಿಎಸ್‌ಗೆ ಹಂಚಿಕೆ ಮಾಡಿದ್ದ ಕುರಿತಂತೆಯೂ ದೊಡ್ಡನಗೌಡ ಪಾಟೀಲ್ ಸೇರಿದಂತೆ ಇತರರು ವಿವರಿಸಿದ್ದಾರೆ.

ಆಗ ರಾಜ್ಯ ನಾಯಕರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೂ ಸಭೆ ನಡೆಸಿ ಕಾರ್ಯತಂತ್ರ ರೂಪಿಸಲಾಗಿತ್ತು. ಶಾಸಕರನ್ನು ವಿಶ್ವಾಸದಲ್ಲಿಟ್ಟುಕೊಂಡು ಚುನಾವಣೆಗೆ ಸಜ್ಜಾಗಿದ್ದೆವು. ಆದರೂ ಕೆಲವರು ದ್ರೋಹ ಬಗೆದಿದ್ದಾರೆ ಎಂದು ವಿವರಿಸಿದರು ಎಂದು ಹೇಳಲಾಗಿದೆ.

VK ಜಾಬ್ಸ್ ಗೆಲುವಿನ ಮೆಟ್ಟಿಲು

PM SHRI JAWAHAR NAVODAYA VIDYALAYA
Gollahally-572140, Tumkur District.
WALK-IN INTERVIEW NOTIFICATION
Candidates are invited for the following post on contractual Basis for the year 2026-27

Sl. No.	Post	Qualification	Vacant Post	Consolidated Payment
1.	TGT-Social Science	B.A. with History or Geography & B.Ed. Degree & Pass in CTET/TET	1	Rs. 34,125/-
2.	TGT-Computer Science	BCA/BE/B.Tech (Computer Science/Information Technology) from a recognized University with 50% marks in aggregate in the relevant subject with B.Ed Degree Pass in CTET/TET	1	Rs. 34,125/-
3.	PGT-Geography	M.Sc., Geography from a recognized University with 50% marks in aggregate in the relevant subject, with B.Ed Degree	1	Rs. 35,750/-
4.	PGT-Chemistry	M.Sc., Chemistry from a recognized University with 50% marks in aggregate in the relevant subject, with B.Ed Degree	1	Rs. 35,750/-

01. Candidates should have completed PG in their respective subject. 02. Fluency in English & Hindi is must. 03. Experience in CBSE is preferred. 04. Age limit is below 50 years as on 01.06.2026

Eligible & interested candidates are hereby invited to directly appear for Walk-in Interview physically on **29.06.2026 at 11.00 a.m** along with resume, original documents & attested copies of relevant educational certificates at **PM Shri Jawahar Navodya Vidyalaya, Gollahalli, Tumkur District-572140. Ph: 9481707188** or send your resume to **jnvtumkuru@gmail.com**

Sd/- Principal

गृह मंत्रालय MINISTRY OF HOME AFFAIRS
ರಾಷ್ಟ್ರೀಯ ವಿಧಿ ವಿಜ್ಞಾನ ವಿಶ್ವವಿದ್ಯಾಲಯ, ಧಾರವಾಡ ಕ್ಯಾಂಪಸ್
राष्ट्रीय न्यायालयिक विज्ञान विश्वविद्यालय, धारवाड कैम्पस
National Forensic Sciences University, Dharwad Campus
(An Institution of National Importance Ministry of Home Affairs, Government of India)

ADMISSION NOTICE FOR THE ACADEMIC YEAR 2026-27

National Forensic Sciences University (NFSU), Dharwad Campus, invites applications for admission to vacant seats remaining after the National Level Counselling Rounds (CUET, GATE & JEE Mains).

Candidates who have not appeared for the National Level Entrance Tests are also eligible to apply. The available programmes are as follows:

- B.Sc. - M.Sc. Forensic Science (5-Year Integrated Programme)
- B.Tech. - M.Tech. Computer Science and Engineering (Cyber Security) (5-Year Integrated Programme)
- M.Sc. Forensic Science (2-Year Programme)
- M.Tech. Cyber Security (2-Year Programme)
- M.Pharm. Forensic Pharmacy (2-Year Programme)

Scan Here to Apply

Last date for submission of the online application form is July 02, 2026.
For detailed eligibility criteria & registration: https://nfsu.ac.in/CSAS

admissions_dharwad@nfsu.ac.in | 9481515684

Date: 23/06/2026 | -Sd- Campus Director NFSU Dharwad Campus

BEML LIMITED ಬೀ ಈ ಎಮ ಎಲ BEML
(A Govt. of India Undertaking) (Schedule 'A' Company under Ministry of Defence)
Regd. Office: "BEML SOUDHA", 23/1, 4th Main Road, Sampangirama Nagar, Bengaluru-560 027 India

BEML Limited is a diversified Central Public Sector Company, known for its innovation, Inclusion and Integration across the various Business Verticals as a pathway of success. BEML has attained the requisite competitive edge by developing its in-house capabilities in Product-design, Manufacturing & servicing as a part of the Business Ecosystem & has become the Flag-bearer of India's Engineering Sector. It supplies global standard products to multi-Sectors such as Defence & Aerospace, Mining & Construction, Rail & Metro across India and overseas.

BEML is looking for energetic personnel for its Business Operations towards the following positions:

Sl	Position	Advt Ref
1.	Non-Executive personnel on Tenure basis (ITI with NAC) / Electrician, Fitter, Machinist, Turner, Welder	KP/S/10/2026 DT:17.06.26

Interested candidates may please visit the career page on BEML website "www.bemlindia.in" for detailed advertisement and application process. The last date for online application is 10.07.2026, 18:00 Hrs.

VK ಜಾಬ್ಸ್ ಜಾಹೀರಾತಿಗಾಗಿ ಸಂಪರ್ಕಿಸಿ
(080) 40877 543 40877 666

WANTED
CET / NEET / JEE
Training Specialists
Natasha Knowledge Center
Recruiting Specialists to Train Plus 2 Students for Board & National Entrance Examinations
An initiative of Dayananda Sagar Institutions and Dayananda Sagar University, Bengaluru.

Natasha Knowledge Center (NKC) is a premier initiative dedicated to training Plus 2 students for Board examinations and national entrance tests (**CET,NEET,JEE,NDA,CLAT, etc.**). We invite applications from specialist faculty and professionals with skills, education and experience to guide students towards excellence.

Positions Available
- Board Exam Faculty- Subject experts for PU syllabus teaching.
- Entrance Exam Trainers- specialists in **CET, NEET, JEE, NDA, CLAT.**
- Content Developers- Study material, mock tests, digital resources.
- Tech Support Experts – AI –enabled learning platforms & digital classrooms.
- Students Acquisition Executives /officers- admissions & outreach.
- Partnership Managers- PU College & School Collaborations.
- Sports Coaches
- English / Communication trainers

Candidate Profile
- Proven expertise in Board/Entrance exam coaching.
- Experience in content creation, EdTech, or academic leadership.
- Passion for student success and institutional growth.

Candidates with exceptional work experience in the coaching field are also encouraged to apply for being considered at senior levels.

Apply Now Please send your CV by 30th June 2026
email: infonkc2026@gmail.com | Ph: 080 42161759
Shavige Malleswara Hills, Kumaraswamy Layout, Bengaluru - 560111

SUNDARAM FINANCE
Enduring values. New age thinking.

WALK-IN INTERVIEWS
BUILD A CAREER THAT LASTS DECADES IN THE MOST RESPECTED NBFC IN INDIA
OPPORTUNITIES WAITING FOR YOU
• BRANCH MANAGER - SME • BUSINESS DEVELOPMENT MANAGER - SME
• BUSINESS DEVELOPMENT EXECUTIVE - SME

WALK-IN DETAILS:
DATES: 25, 26, 27 JUNE, 2026
TIME: 10:00 AM - 04:00 PM

Venue: Keya complex site no.5, sy no.253, 254/13, 11th main road, 3rd phase, Peenya small industries, Bengaluru urban - 560058

Contact: Kishore Kumar V A - 99161 06423
Anandamurali S - 90360 04902

www.sundaramfinance.in

ಜೈವಿಕ ಲೆಕ್ಕಾಚಾರಿ ಈ ಬುರುಡೆ!



1943ರಲ್ಲಿ Warren McCulloch ಎಂಬ ನರವಿಜ್ಞಾನಿ ಹಾಗೂ Walter Pitts ಎನ್ನುವ ತರ್ಕಶಾಸ್ತ್ರಜ್ಞ ಇಬ್ಬರೂ ಸೇರಿ ಸಂಶೋಧನಾ ಪ್ರಬಂಧವೊಂದನ್ನು ಪ್ರಕಟಿಸಿದರು. ಮೊತ್ತ ಮೊದಲ ಬಾರಿಗೆ ನಮ್ಮ ಮಿದುಳು ಜೈವಿಕವಷ್ಟೇ ಅಲ್ಲ,ಅದೊಂದು ಗಣಕಯಂತ್ರ; ತರ್ಕ (ಲಾಜಿಕ್) ದಿಂದ ಅದು ಕಲಿಯುತ್ತದೆ ಎಂದು ಸಮೀಕರಣದ ಮೂಲದ ಇದು ಸಾಭೀತುಪಡಿಸಿತ್ತು. ನಮ್ಮ ವಿಸ್ಮಯಕಾರಿ ಮಿದುಳನ್ನು ಚಿಕ್ಕ ಚಿಕ್ಕ ನರಕೋಶಗಳಾಗಿ ವಿಂಗಡಿಸಿ, ಅದರ ಕಾರ್ಯವೈಖರಿಯನ್ನು ವಿವರಿಸಿದ್ದೂ ಇವರೇ. ಇನ್ನೂ ಮುಂದಕ್ಕೆ ಹೋಗಿ AND, OR, NOT ಈ ಮೂರು ಲಾಜಿಕ್‌ಗಳ ಮೂಲಕ ಜಗತ್ತಿನ ಮೊತ್ತ ಮೊದಲ ಕೃತಕ ನ್ಯೂರಾನ್ ಮಾದರಿಯನ್ನು ರೂಪಿಸಿದ್ದೂ ಇದೇ ಸಂಶೋಧನೆ; ಅದಕ್ಕೆ McCulloch-Pitts ನ್ಯೂರಾನ್ ಇಲ್ಲವೇ MCP ನ್ಯೂರಾನ್ ಎಂದು ಹೆಸರು. ಒಂದು ನ್ಯೂರಾನ್ ಇನ್ನೊಂದು ನ್ಯೂರಾನ್ ಮೂಲಕ 0 ಅಥವಾ 1 ಎನ್ನುವ ಇನ್‌ಪುಟ್ ಪಡೆಯುತ್ತದೆ, ಅದರ ನಿರ್ಧರಿತ ಮಿತಿಯು ಮೀರಿದಾಗ ಸಕ್ರಿಯವಾಗುತ್ತದೆ ಎಂದು ಗಣಿತ ಮೂಲಕ ವಿಸ್ತರಿಸಿದ್ದು MCP ದ್ವಯರು. ಇವತ್ತಿನ ಡೀಪ್ ಲರ್ನಿಂಗ್, ಜೆನ್- GI ಎಲ್ಲದರ ಮೂಲ ವಂಶ MCP ನ್ಯೂರಾನ್! ಇದು, ಮಿದುಳು ಕಲಿಯುವುದು, ನೆನಪಿನಲ್ಲಿಡುವುದು ಎಲ್ಲವನ್ನೂ ನಕಲಿ ಮಾಡಿ ಕೃತಕ ಬುದ್ಧಿಮತ್ತೆಯ ಅಭಿವೃದ್ಧಿಗೆ ತೆರೆವು ಮಾಡಿಕೊಟ್ಟ ಅತ್ಯದ್ಭುತ ಸಂಶೋಧನೆ!

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ ವಿಕ್ರಂ ಜೋಶಿ
ಎಐ ವಿಶ್ಲೇಷಕರು

ಸಂಸ್ಕರಿಸಿದ ಆಹಾರ ರಫ್ತು ಇತಿಹಾಸದಲ್ಲೇ ಹೊಸ ಮೈಲುಗಲ್ಲು

ಐರೋಪ್ಯ ದೇಶಗಳಿಗೆ ಮೊಟ್ಟೆ ಪುಡಿ ರಫ್ತು

ಯಾವುದಕ್ಕೆಲ್ಲ ಬಳಕೆ?

- ಕೇಕ್, ಬಿಸ್ಕತ್ತು, ಪೇಸ್ಟ್ರಿ ಕುಕೀಸ್ ಮತ್ತು ಬ್ರೆಡ್ ತಯಾರಿಕೆಯಲ್ಲಿ ಮೊಟ್ಟೆ ಪ್ರಮುಖ ಕಚ್ಚಾವಸ್ತು. ಇದು ಹಿಟ್ಟಿಗೆ ಮೃದುತ್ವ ಮತ್ತು ಉತ್ತಮ ಬಣ್ಣ ನೀಡುತ್ತದೆ.
- ನೂಡಲ್ಸ್, ಪಾಸ್ತಾ, ಮೇಯೋನೀಸ್, ಸಲಾಡ್ ಡ್ರೆಸ್ಸಿಂಗ್ ಮತ್ತು ಸಿದ್ಧ ಆಹಾರ ತಯಾರಿಕೆಯಲ್ಲಿ ಬಳಕೆ.
- ಜಿಮ್‌ಗೆ ಹೋಗುವವರಿಗಾಗಿ ಪ್ರೊಟೀನ್ ಶೇಕ್, ನ್ಯೂಟ್ರಿಷನ್ ಬಾರ್ ಮತ್ತು ಪೌಷ್ಟಿಕಾಂಶದ ಸಪ್ಲಿಮೆಂಟ್‌ಗಳಲ್ಲಿ ಹೆಚ್ಚಿರುತ್ತದೆ.

12 ತಿಂಗಳುಗಳ ಕಾಲ ಮೊಟ್ಟೆಯ ಪುಡಿಯನ್ನು ಸಾಮಾನ್ಯ ತಾಪಮಾನದಲ್ಲಿ ಕೆಡದಂತೆ ಸಂಗ್ರಹಿಸಿಡಬಹುದು

84 1 ಕೆ.ಜಿ ಮೊಟ್ಟೆ ಪುಡಿಯು ಸುಮಾರು 84 ತಾಜಾ ಮೊಟ್ಟೆಗಳಿಗೆ ಸಮಾನವಾಗಿರುತ್ತದೆ

520 ಕೋಟಿ ರೂ. ಭಾರತದಲ್ಲಿ ಮೊಟ್ಟೆ ಪುಡಿ ಉತ್ಪಾದನೆಯ ವಾರ್ಷಿಕ ವಹಿವಾಟು

6% ಭಾರತದಲ್ಲಿ ಮೊಟ್ಟೆ ಪುಡಿ ವಹಿವಾಟಿನ ವಾರ್ಷಿಕ ಬೆಳವಣಿಗೆ ಪ್ರಮಾಣ

ಹೊಸದಿಲ್ಲಿ: ಇದೇ ಮೊದಲ ಬಾರಿಗೆ ಐರೋಪ್ಯ ದೇಶಗಳಿಗೆ ಭಾರತದಿಂದ ಒಣಗಿಸಿದ ಕೋಳಿ ಮೊಟ್ಟೆ ಪುಡಿಯನ್ನು ರಫ್ತು ಮಾಡಲಾಗಿದೆ. ಇದು ಭಾರತದ ಮೌಲ್ಯವರ್ಧಿತ ಕೃಷಿ ಮತ್ತು ಸಂಸ್ಕರಿಸಿದ ಆಹಾರ ರಫ್ತು ಇತಿಹಾಸದಲ್ಲೇ ಮಹತ್ವದ ಸಾಧನೆಯಾಗಿದೆ! ಈ ರಫ್ತು ಪ್ರಕ್ರಿಯೆಯನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧೀನದಲ್ಲಿನ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ಅಭಿವೃದ್ಧಿ ಪ್ರಾಧಿಕಾರ (ಎಪಿಇಡಿಎ) ಯಶಸ್ವಿಯಾಗಿ ನಿರ್ವಹಿಸಿದೆ. ಬರೋಬ್ಬರಿ 22.6 ಮೆಟ್ರಿಕ್ ಟನ್ ಮೊಟ್ಟೆಪುಡಿಯನ್ನು ರಫ್ತು ಮಾಡಲಾಗಿದೆ.

ಆಸ್ಟ್ರಿಯಾ ಸೇರಿದಂತೆ ಐರೋಪ್ಯ ಒಕ್ಕೂಟದ ಹಲವು ದೇಶಗಳು ವೈವಿಧ್ಯಮಯ ಆಹಾರ ಮತ್ತು ಕೈಗಾರಿಕಾ ಬಳಕೆಗಾಗಿ ಭಾರತದಿಂದ ಮೊಟ್ಟೆಪುಡಿಯನ್ನು ಆಮದು ಮಾಡಿಕೊಳ್ಳುತ್ತಿವೆ. ಇದು ಭಾರತದ ಉತ್ತಮ ಗುಣಮಟ್ಟದ ಆಹಾರ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಿಕ್ಕ ದೊಡ್ಡ ಮನ್ನಣೆಯಾಗಿದೆ. ಸಾಗಣೆ ಸುಲಭ ಹಾಗೂ ಹಲವು ಹತ್ತು ತಿಂಡಿ ಉತ್ಪನ್ನಗಳಿಗೆ ಮೂಲ ಸಾಮಗ್ರಿಯಾಗಿದೆ. ಇದನ್ನು ಬೇಕರಿಗಳು, ಸಿಹಿ ತಿನಿಸು ತಯಾರಿಕೆ ಹಾಗೂ ಔಷಧ ವಲಯಗಳಲ್ಲಿ ಬಳಸಲಾಗುತ್ತದೆ.

ಭಾರತದಲ್ಲಿ ಮೊಟ್ಟೆ ಪುಡಿ ತಯಾರಿಕೆ ಉದ್ಯಮವು ಕೆಲವು ವರ್ಷಗಳಲ್ಲಿ ವೇಗದ ಬೆಳವಣಿಗೆ ಕಾಣುತ್ತಿದೆ. ದಕ್ಷಿಣ ಭಾರತದ ಆಂಧ್ರಪ್ರದೇಶ, ತಮಿಳುನಾಡು (ವಿಶೇಷವಾಗಿ ನಾಮಕ್ಕಲ್ ಪ್ರದೇಶ) ಮತ್ತು ತೆಲಂಗಾಣ ರಾಜ್ಯಗಳಲ್ಲಿ ದೊಡ್ಡಮಟ್ಟದ ಎಗ್ ಪೌಡರ್ ಉತ್ಪಾದನಾ ಘಟಕಗಳಿವೆ. ಅಲ್ಲಿ ಉತ್ಪಾದನೆಯಾಗುವ ಮೊಟ್ಟೆ ಪುಡಿಯನ್ನು ದೇಶೀಯ ಉದ್ಯಮಗಳು ಬಳಸುತ್ತವೆ.

ಪುಡಿ ತಯಾರಿಕೆ ಹೇಗೆ?: ಕೋಳಿ ಮೊಟ್ಟೆಗಳನ್ನು ಸ್ವಚ್ಛಗೊಳಿಸಿದ ಬಳಿಕ ನಾಜೂಕಿನಿಂದ ಅದರಲ್ಲಿನ ಬಿಳಿ ಮತ್ತು ಹಳದಿ ದ್ರಾವಣಗಳನ್ನು ಹೊರ ತೆಗೆಯಲಾಗುತ್ತದೆ. ಚಿಪ್ಪು ದ್ರಾವಣದಲ್ಲಿ ಸೇರದಂತೆ ಎಚ್ಚರವಹಿಸಲಾಗುತ್ತದೆ. ಕೆಲವು ಕಂಪನಿಗಳು ಎರಡನ್ನೂ ಮಿಶ್ರ ಮಾಡಿ, ಪುಡಿ ತಯಾರಿಸುತ್ತವೆ. ಇನ್ನು ಕೆಲವು ಕಂಪನಿಗಳು ಪ್ರತ್ಯೇಕವಾಗಿಯೂ ಸಿದ್ಧಪಡಿಸುತ್ತವೆ. ಮಿಶ್ರ ಮಾಡುವುದಾದರೆ ಹೋಮೋಜೆನೈಸೇಶನ್ ಅಥವಾ ಏಕರೂಪೀಕರಣ ಮತ್ತು ಪ್ಯಾಶ್ಚರೀಕರಣ ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ನಂತರ ದ್ರಾವಣವನ್ನು ಅತ್ಯಾಧುನಿಕ 'ಸ್ಪ್ರೇ-ಡ್ರೈಯಿಂಗ್' ತಂತ್ರಜ್ಞಾನ ಮೂಲಕ ಒಣಗಿಸಿ ಪುಡಿಯನ್ನು ತಯಾರಿಸಲಾಗುತ್ತದೆ. ಇದು ದೀರ್ಘಕಾಲ ಬಾಳಿಕೆ ಬರುತ್ತದೆ.

ಆರ್‌ಬಿಐನಿಂದ ಬ್ಯಾಂಕ್‌ಗಳಿಗೆ ₹1.41 ಲಕ್ಷ ಕೋಟಿ ಹರಿವು

ಮುಂಬಯಿ: ಭಾರತೀಯ ರಿಸರ್ವ್ ಬ್ಯಾಂಕ್ ಮಂಗಳವಾರ ದೇಶದ ಬ್ಯಾಂಕಿಂಗ್ ವ್ಯವಸ್ಥೆಗೆ 1.41 ಲಕ್ಷ ಕೋಟಿ ರೂ. ಒದಗಿಸಿದೆ. ಬ್ಯಾಂಕ್‌ಗಳು ತಾವು ತೆಗೆದುಕೊಳ್ಳುವ ಮೊತ್ತಕ್ಕೆ ಹರಾಜಿನಲ್ಲಿ ಬಡ್ಡಿ ದರ ನಿಗದಿಯಾಗುತ್ತದೆ. ಇದು ರೆಪೊ ದರಕ್ಕಿಂತ ಬೇರೆಯಾಗಿರುತ್ತದೆ. ಇದನ್ನು ವೇರಿಯಬಲ್ ರೇಟ್ ರೆಪೊ(ವಿಆರ್ ಆರ್) ಎಂದು ಕರೆಯಲಾಗುತ್ತದೆ. ಸರಾಸರಿ ಬಡ್ಡಿದರ ಶೇ.5.26 ರಷ್ಟಿರುತ್ತದೆ.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ದ್ರವ್ಯತೆಯು ಜೂನ್ 21 ರಂದು 30,685.11 ಕೋಟಿ ರೂ. ಹೆಚ್ಚುವರಿ ಇತ್ತು. ಆದರೆ ಜೂನ್ 22ರ ವೇಳೆಗೆ 19,971.89 ಕೋಟಿ ರೂ. ಕೊರತೆಗೆ ತಿರುಗಿದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಗಳಿಂದಾಗಿ ಬ್ಯಾಂಕ್‌ಗಳಿಂದ ಹಣ ಹೊರಹೋದದ್ದು ವ್ಯವಸ್ಥೆಯಲ್ಲಿ ನಗದು ದ್ರವ್ಯತೆ ಕಡಿಮೆಯಾಗಲು ಕಾರಣವಾಗಿದೆ ಎಂದು ವಿಶ್ಲೇಷಕರು ತಿಳಿಸಿದ್ದಾರೆ. ದ್ರವ್ಯತೆಯು ಕುಸಿತವು ಏಕಾಏಕಿ ಹಣದ ಮಾರುಕಟ್ಟೆ ದರಗಳ ಮೇಲೆ ಒತ್ತಡವನ್ನು ತಂದಿದ್ದರಿಂದ ಆರ್‌ಬಿಐ ಈ ಕ್ರಮ ಕೈಗೊಂಡಿದೆ.

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹೊರಹರಿವಿನಿಂದ ಬ್ಯಾಂಕಿಂಗ್ ದ್ರವ್ಯತೆಯು ಅತಿಯಾಗಿ ಬಿಗಿಗೊಂಡರೆ, ಅಲ್ಪಾವಧಿಯ ಹಣದ ಮಾರುಕಟ್ಟೆ ದರಗಳು ಆರ್‌ಬಿಐನ ಪ್ರಮಾಣಿತ ರೆಪೊ ದರಕ್ಕಿಂತ ಹೆಚ್ಚಾಗಬಹುದು. ಹಣದ ಸೇರ್ಪಡೆ ಮೂಲಕ ಮಧ್ಯಪ್ರವೇಶಿಸುವ ಆರ್‌ಬಿಐ, ಅಲ್ಪಾವಧಿಯ ಧನಸಹಾಯದ ಒತ್ತಡಗಳನ್ನು ನಿವಾರಿಸುತ್ತದೆ ಮತ್ತು ಆರ್ಥಿಕ ಮಂದಗತಿಯನ್ನು ಪ್ರತಿರೋಧಿಸದೆ ಹಣಕಾಸು ವ್ಯವಸ್ಥೆಯುದ್ದಕ್ಕೂ ಸಾಲದ ಹರಿವು ಸರಾಗವಾಗಿ ಮುಂದುವರಿಯುವುದನ್ನು ಖಚಿತಪಡಿಸುತ್ತದೆ. ತೆರಿಗೆ ಹೊರಹರಿವು, ಮುಂಗಡ ತೆರಿಗೆ ಪಾವತಿಗಳು ಅಥವಾ ಕಾಲೋಚಿತ ಸಾಲದ ಬೇಡಿಕೆಯಿಂದ ಉಂಟಾಗುವ ಅಲ್ಪಾವಧಿಯ ಕೊರತೆಗಳನ್ನು ನಿರ್ವಹಿಸಲು ಆರ್‌ಬಿಐ ನಿಯಮಿತವಾಗಿ ಬ್ಯಾಂಕಿಂಗ್ ವ್ಯವಸ್ಥೆಗೆ ತಾತ್ಕಾಲಿಕ ಮತ್ತು ದೀರ್ಘಕಾಲೀನ ದ್ರವ್ಯತೆಯನ್ನು ಒದಗಿಸುತ್ತದೆ.

ಹೂಡಿಕೆದಾರರ ನಿರುತ್ಸಾಹ, ಷೇರುಪೇಟೆ ಇಳಿಮುಖ

ಸೆನ್ಸೆಕ್ಸ್	76,200.68 ↓ 893.39
ನಿಫ್ಟಿ	23,824.10 ↓ 278.80
ಬೆಳ್ಳಿ (1 ಕೆ.ಜಿ) ಬೆಂಗಳೂರು	₹ 2,45,000
ಯುಎಸ್ $	94.73
ಪೆಟ್ರೋಲ್	₹110.93
ಡೀಸೆಲ್	₹ 98.80

ಮುಂಬಯಿ: ವಿದೇಶಿ ಸಾಂಸ್ಥಿಕ ಹೂಡಿಕೆದಾರರು 635.91 ಕೋಟಿ ರೂ. ಮೌಲ್ಯದ ಈಕ್ವಿಟಿಗಳನ್ನು ಮಾರಾಟ ಮಾಡಿದ್ದಾರೆ. ಐಟಿ ಕಂಪನಿಗಳ ಷೇರುಗಳ ಮಾರಾಟದ ಭರಾಟೆ, ರೂಪಾಯಿ ಮೌಲ್ಯದಲ್ಲಿ ಇಳಿಕೆ, ವಿದೇಶಿ ನಿಧಿ ಹೊರ ಹರಿವು ಹಾಗೂ ಜಾಗತಿಕ ಪೇಟೆಗಳ ಅನಿಶ್ಚಿತತೆಯಿಂದ ಷೇರುಪೇಟೆಯಲ್ಲಿ ಮಂಗಳವಾರ ಉತ್ಸಾಹ ಕಾಣಲಿಲ್ಲ.

ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 893.39 (ಶೇ.1.16) ಅಂಕ ಕುಸಿದು 76,200.68ರಲ್ಲಿ ವಹಿವಾಟು ಮುಗಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 278.80 (ಶೇ. 1.16) ಅಂಕ ಇಳಿದು 23,824.10ರಲ್ಲಿ ಸ್ಥಿರಗೊಂಡಿತು. ಇನ್ಫೋಸಿಸ್, ಟಿಸಿಎಸ್ ಕಂಪನಿಗಳ ಷೇರುಗಳು ಶೇ. 3ರಷ್ಟು ಇಳಿದವು. ಭಾರತ್ ಎಲೆಕ್ಟ್ರಾನಿಕ್ಸ್, ಟಾಟಾ ಸ್ಟೀಲ್, ಅದಾನಿ ಪೋರ್ಟ್ಸ್, ಎಚ್‌ಸಿಎಲ್ ಟೆಕ್, ಎಸ್‌ಬಿಐ ಷೇರುಗಳು ನಷ್ಟಕ್ಕೀಡಾದವು. ಪವರ್ ಗ್ರಿಡ್, ಎಕ್ಸಿಸ್ ಬ್ಯಾಂಕ್, ಸನ್ ಫಾರ್ಮಾ ಮತ್ತು ಮಾರುತಿ ಸುಜುಕಿ ಹೆಚ್ಚು ಲಾಭ ಗಳಿಸಿದವು. ಕಳೆದ ವಾರ ಒಟ್ಟು 5 ವಹಿವಾಟು ದಿನಗಳಲ್ಲಿ 4 ದಿನ ಷೇರುಪೇಟೆ ಏರಿಕೆ ಟ್ರೆಂಡ್ ತೋರಿತ್ತು.

ಏಷ್ಯಾದ ಮಾರುಕಟ್ಟೆಗಳ ಪೈಕಿ ದಕ್ಷಿಣ ಕೊರಿಯಾದ ಕೊಸ್ಪಿ, ಇಂಡೆಕ್ಸ್, ಶಾಂಘೈನ ಎಸ್‌ಎಸ್‌ಇ ಕಾಂಪೋಸಿಟ್ ಇಂಡೆಕ್ಸ್, ಹಾಂಕಾಂಗ್‌ನ ಹ್ಯಾಂಗ್‌ಸೆಂಗ್ ಇಂಡೆಕ್ಸ್ ಭಾರಿ ಇಳಿಕೆ ಕಂಡವು. ಐರೋಪ್ಯ ಮಾರುಕಟ್ಟೆ ಕೂಡ ನಕಾರಾತ್ಮಕವಾಗಿತ್ತು. ಜಾಗತಿಕ ತೈಲ ಸೂಚ್ಯಂಕವಾದ ಬ್ರೆಂಟ್ ಕಚ್ಚಾ ತೈಲ ದರವು ಶೇ.0.67ರಷ್ಟು ಕುಸಿದು ಬ್ಯಾರೆಲ್‌ಗೆ 77.46 ಡಾಲರ್‌ಗೆ ಆಗಿದೆ.

ಇನ್ನೂ ನಾಲ್ಕೈದು ವಾರ ಕುಸಿತ | ಹಬ್ಬದ ಹಂಗಾಮಿನಲ್ಲಿ ಧಾರಣೆ ಏರಿಕೆ

ಚಿನ್ನ, ಬೆಳ್ಳಿ ಇಳಿಕೆ ಟ್ರೆಂಡ್ ಮುಂದುವರಿಕೆ ಸಾಧ್ಯತೆ

ಹೊಸದಿಲ್ಲಿ: ಸದ್ಯಕ್ಕೆ ಹಬ್ಬದ ಹಂಗಾಮು ಇಲ್ಲದೇ ಇರುವುದರಿಂದ ದೇಶೀಯವಾಗಿ ಚಿನ್ನ ಮತ್ತು ಬೆಳ್ಳಿಗೆ ಹೆಚ್ಚು ಬೇಡಿಕೆ ಇಲ್ಲ. ಹೀಗಾಗಿ ಇನ್ನೂ ಕೆಲವಾರ ಚಿನ್ನ, ಬೆಳ್ಳಿ ಬೆಲೆ ಇಳಿಕೆಯ ಹಾದಿಯಲ್ಲೇ ಸಾಗಲಿದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

''ಆಭರಣ ತಯಾರಕರು ಮತ್ತು ಮಾರಾಟ ಮಾಡುವವರಿಗೆ ಲಾಭದ ಪ್ರಮಾಣ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ. ಅವರು ಕೂಡ ಹಬ್ಬ ಮತ್ತು ಭರ್ಜರಿ ಮದುವೆ ಋತುವಿನ ನಿರೀಕ್ಷೆಯಲ್ಲಿದ್ದಾರೆ. ಹೀಗಾಗಿ ಮುಂಬರುವ ದಿನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಭಾರಿ ಏರಿಕೆ ನಿರೀಕ್ಷಿಸಲಾಗದು. ಇದಲ್ಲದೆ ಅಮೆರಿಕದ ಫೆಡರಲ್ ರಿಸರ್ವ್‌ನಿಂದ ಹೆಚ್ಚಿನ ಬಡ್ಡಿದರ ನಿರೀಕ್ಷೆಯಿಂದ ಬಂಗಾರ ಮತ್ತು ಬೆಳ್ಳಿ ಮೇಲಿನ ಬೆಲೆಗಳ ಮೇಲೆ ಒತ್ತಡ ಉಂಟಾಗಿದೆ,''ಎಂದು ಹೂಡಿಕೆ ತಜ್ಞ ಸೌಮಿಲ್ ಗಾಂಧಿ ಪ್ರತಿಪಾದಿಸಿದ್ದಾರೆ.

''ಆಗಸ್ಟ್ -ಅಕ್ಟೋಬರ್ ಹಬ್ಬದ ಋತು. ಅದೇ ಅವಧಿಯಲ್ಲಿ ಮದುವೆಯಂತಹ ಶುಭ ಕಾರ್ಯಗಳೂ ಹೆಚ್ಚಾಗಿ ನಡೆಯುತ್ತವೆ. ಸಹಜವಾಗಿಯೇ ಆಗ ಚಿನ್ನ ಮತ್ತು ಬೆಳ್ಳಿ ಬೆಲೆಯಲ್ಲಿ ಏರಿಕೆಯ ಟ್ರೆಂಟ್ ಕಂಡುಬರುತ್ತದೆ. ಆ ಹೊತ್ತಿಗೆ ಅಮೆರಿಕ-ಇರಾನ್ ನಡುವೆ ಶಾಂತಿ ಒಪ್ಪಂದ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದರೆ ರಫ್ತು ಪ್ರಮಾಣ ಕೂಡ ವೃದ್ಧಿಯಾಗುತ್ತದೆ. ಬೆಲೆಗಳು ಏರುಗತಿಯನ್ನು ಪಡೆಯುತ್ತವೆ,'' ಎಂದು ಮಲ್ಟಿ ಕಮಾಡಿಟಿ ಎಕ್ಸ್‌ಚೇಂಜ್(ಎಂಸಿಎಕ್ಸ್) ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಸದ್ಯಕ್ಕೆ ಬೇರೆ ಹೂಡಿಕೆ ಬೆಸ್ಟ್

ದೇಶೀಯವಾಗಿ ಚಿನ್ನ, ಬೆಳ್ಳಿ ತಾತ್ಕಾಲಿಕವಾಗಿ ಬೇಡಿಕೆ ಕಳೆದುಕೊಂಡಿದೆ. ಇನ್ನೊಂದೆಡೆ, ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಬಡ್ಡಿ ದರಗಳನ್ನು ಏರಿಸುವ ನಿರೀಕ್ಷೆ ಇದೆ. ಹೀಗಾಗಿ ಸದ್ಯದ ಸ್ಥಿತಿಯಲ್ಲಿ ಚಿನ್ನ, ಬೆಳ್ಳಿ ಮೇಲೆ ಹೂಡಿಕೆ ಮಾಡುವುದಕ್ಕಿಂತ ಬ್ಯಾಂಕ್‌ನಲ್ಲಿ ನಿಶ್ಚಿತ ಅವಧಿಯ ಠೇವಣಿ ಮತ್ತು ಬಾಂಡ್‌ಗಳು, ನಿಶ್ಚಿತ ಬಡ್ಡಿ ದರ ಇರುವ ಯೋಜನೆಗಳಲ್ಲಿ ಹೂಡಿಕೆ ಮಾಡುವುದರಿಂದ ಹೆಚ್ಚು ಲಾಭ ಗಳಿಸಬಹುದು,'' ಮಾರುಕಟ್ಟೆ ತಜ್ಞ ಕಾಲಿನ್ ಶಾ ಸಲಹೆ ನೀಡಿದ್ದಾರೆ.

ಎರಡು ತಿಂಗಳ ಕನಿಷ್ಠ ಮಟ್ಟಕ್ಕೆ ಚಿನ್ನ, ಬೆಳ್ಳಿ ದರ

ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ಸಂಘರ್ಷದ ವೇಳೆ ನಾಗಾಲೋಟದ ಮೂಲಕ ಸಾರ್ವಕಾಲಿಕ ದಾಖಲೆ ಮಟ್ಟಕ್ಕೆ ಏರಿದ್ದ ಚಿನ್ನ-ಬೆಳ್ಳಿ ದರಗಳು, ಅಮೆರಿಕ-ಇರಾನ್ ಶಾಂತಿ ಒಪ್ಪಂದದ ಬೆನ್ನಲ್ಲೇ ಭಾರಿ ಪ್ರಮಾಣದಲ್ಲಿ ಇಳಿಯತೊಡಗಿವೆ. ಜಾಗತಿಕ ಪೇಟೆಯಲ್ಲಿ ಚಿನ್ನ-ಬೆಳ್ಳಿ ದರ ಸುಮಾರು 2 ತಿಂಗಳಲ್ಲೇ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಬೆಂಗಳೂರಿನಲ್ಲಿ ಅಪರಂಜಿ ಚಿನ್ನದ ಬೆಲೆ ಮಂಗಳವಾರ ಪ್ರತಿ 10 ಗ್ರಾಂಗೆ 3,380 ರೂ. ಕುಸಿಯುವ ಮೂಲಕ 1,44,600 ರೂ. ತಲುಪಿದೆ. ಆಭರಣ ಚಿನ್ನದ ದರವು ಪ್ರತಿ 10 ಗ್ರಾಂಗೆ 3,100 ರೂ. ಕುಸಿದು 1,32,550 ರೂ.ಗೆ ಇಳಿದಿದೆ. ಮತ್ತೊಂದೆಡೆ, ಬೆಳ್ಳಿ ದರ ಪ್ರತಿ ಕೆ.ಜಿ.ಗೆ 5,000 ರೂ. ಇಳಿಕೆ ಕಂಡು 2,45,000 ರೂ.ಗೆ ತಲುಪಿದೆ.

ಶ್ರೀನಿವಾಸ ವಿವಿಗೆ 3 ಅಂತಾರಾಷ್ಟ್ರೀಯ ಪ್ರಶಸ್ತಿ

ಮಂಗಳೂರು: ಉನ್ನತ ಶಿಕ್ಷಣ, ಸಂಶೋಧನೆ, ಕೌಶಲಾಭಿವೃದ್ಧಿ ಹಾಗೂ ಉದ್ಯೋಗಮುಖಿ ಶಿಕ್ಷಣ ಕ್ಷೇತ್ರಗಳಲ್ಲಿ ಮುಂದಿರುವ ಶ್ರೀನಿವಾಸ ವಿಶ್ವವಿದ್ಯಾಲಯವು ಮೂರು ಪ್ರತಿಷ್ಠಿತ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದೆ. ಇತ್ತೀಚೆಗೆ ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ನಡೆದ ಜಾಗತಿಕ ಶಿಕ್ಷಣ ಶೃಂಗದಲ್ಲಿ ಪ್ರಶಸ್ತಿ ನೀಡಲಾಯಿತು. ಶ್ರೀನಿವಾಸ ವಿವಿಗೆ ಗ್ಲೋಬಲ್ ಎಕ್ಸಲೆನ್ಸ್ ಅವಾರ್ಡ್ ಇನ್ ಹೈಯರ್ ಎಜುಕೇಶನ್ ಆ್ಯಂಡ್ ರೀಸರ್ಚ್,ಶ್ರೀನಿವಾಸ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಎಕ್ಸಲೆನ್ಸ್ ಇನ್ ಇಂಡಸ್ಟ್ರಿ ,ಇಂಟಿಗ್ರೇಟೆಡ್ ಟೆಕ್ನಿಕಲ್ ಎಜುಕೇಶನ್ ಅವಾರ್ಡ್ ಹಾಗೂ ಡಾ. ಡಿ. ಶ್ರೀನಿವಾಸ ಮಯ್ಯಗೆ ವಿಷನರಿ ಎಜುಕೇಶನ್ ಲೀಡರ್ ಅವಾರ್ಡ್‌ಗಳನ್ನು ಪ್ರದಾನ ಮಾಡಲಾಯಿತು. ಈ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ಡಾ.ಡಿ.ಶ್ರೀನಿವಾಸ ಮಯ್ಯ ಹಾಗೂ ಡಾ.ಧೀರಜ್ ಹೆಬ್ರಿ ಅವರು ಪ್ರಶಸ್ತಿ ಸ್ವೀಕರಿಸಿದರು. ''ಈ ಪ್ರಶಸ್ತಿಗಳನ್ನು ಶಿಕ್ಷಣ, ಸಂಶೋಧನೆ ಮತ್ತು ಉದ್ಯಮ ಹಾಗೂ ಉದ್ಯೋಗ ಸ್ನೇಹಿ ಕಲಿಕೆ ಕಾರಣಕ್ಕೆ ನೀಡಲಾಗಿದೆ,'' ಎಂದು ಶ್ರೀನಿವಾಸ ವಿವಿ ಕುಲಾಧಿಪತಿ ಡಾ. ಶ್ರೀನಿವಾಸ ರಾವ್ ತಿಳಿಸಿದ್ದಾರೆ.

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಶ್ರೀರಾಂಪುರ ಕ್ರಾಸ್, ಜಕ್ಕೂರು, ಬೆಂಗಳೂರು-560 064.
ಸಂ.ಎಂಜಿಐ/ಕೇಟರಿಂಗ್/13/2026-27 ದಿನಾಂಕ: 23.06.2026

ಇ-ಟೆಂಡರ್ ಪ್ರಕಟಣೆ

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಗೆ 2026-27ನೇ ಸಾಲಿಗೆ ಉತ್ತಮ ಗುಣಮಟ್ಟದ ರುಚಿ ಶುಚಿಯಾದ ಊಟೋಪಚಾರದ ಸೇವೆಯನ್ನು ಒದಗಿಸಲು ನೋಂದಾಯಿತ ಗುತ್ತಿಗೆದಾರರಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ವೀಕ್ಷಿಸಿ ದಿನಾಂಕ 23.06.2026 ರಿಂದ 10.07.2026 ರೊಳಗಾಗಿ ಸದರಿ ಟೆಂಡರ್‌ನಲ್ಲಿ ಭಾಗವಹಿಸಬಹುದು.
ದೂರವಾಣಿ : 080-23626359 / 23626493
ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು

WENDT ವೆಂಡ್ಟ್ (ಇಂಡಿಯಾ) ಲಿಮಿಟೆಡ್
CIN: L85110KA1980PLC003913
ನೋಂದಾಯಿತ ಕಚೇರಿ: ಪ್ಲಾಟ್ ನಂ.105, 1ನೇ ಮಹಡಿ, ಕಾವೇರಿ ಬ್ಲಾಕ್, ನ್ಯಾಶನಲ್ ಗೇಮ್ಸ್ ಹೌಸಿಂಗ್ ಕಾಂಪ್ಲೆಕ್ಸ್, ಕೋರಮಂಗಲ, ಬೆಂಗಳೂರು -560047, ಫೋನ್: +91-4344-405500
ಇ-ಮೇಲ್: investorservices@Wendtindia.com, ವೆಬ್‌ಸೈಟ್:: www.wendtindia.com

ಸದಸ್ಯರಿಗೆ ನೋಟಿಸ್

ವೆಂಡ್ಟ್ (ಇಂಡಿಯಾ) ಲಿಮಿಟೆಡ್‌ನ (ದಿ ಕಂಪನಿ) 44ನೇ ವಾರ್ಷಿಕ ಮಹಾಸಭೆಯನ್ನು (AGM) ಜುಲೈ 24, 2026, ಶುಕ್ರವಾರ ಭಾರತೀಯ ಕಾಲಮಾನ ಮಧ್ಯಾಹ್ನ 03:00 ಗಂಟೆಗೆ ವಿಡಿಯೋ ಕಾನ್ಫರೆನ್ಸಿಂಗ್ (VC) ಅಥವಾ ಇತರ ಆಡಿಯೋ ವಿಧಾನಗಳ (`OAVM') ಮೂಲಕ ನಡೆಸಲು ನಿರ್ಧರಿಸಲಾಗಿದೆ ಎಂಬುದನ್ನು ಸದಸ್ಯರು ಗಮನಿಸಲು ಕೋರಲಾಗಿದೆ. ಕಂಪನಿ ಕಾಯ್ದೆ, 2013ರ ನಿಬಂಧನೆಗಳು ಮತ್ತು ಅದರಡಿ ರೂಪಿಸಿದ ನಿಯಮಗಳು ಹಾಗೂ ಭಾರತದ ಸೆಕ್ಯೂರಿಟೀಸ್ ಮತ್ತು ಎಕ್ಸಚೇಂಜ್ ಮಂಡಳಿ (ಯಾದಿಯ ಬಾಧ್ಯತೆ ಮತ್ತು ಬಹಿರಂಗಪಡಿಸುವಿಕೆ ಅಗತ್ಯಗಳು) ನಿಯಂತ್ರಣಗಳು, 2015 (ಯಾದಿಯ ನಿಯಮಗಳು) ಮತ್ತು ವಾರ್ಷಿಕ ಮಹಾಸಭೆ ನೋಟಿಸ್‌ನಲ್ಲಿ (AGM) ನಿಗದಿಪಡಿಸಿದ ವ್ಯವಹಾರ ನಿರ್ವಹಣೆಗೆ ಕಾಲ ಕಾಲಕ್ಕೆ ಹೊರಡಿಸಲಾದ ಸುತ್ತೋಲೆಗಳ ಪ್ರಕಾರ ಮಹಾಸಭೆ ನಡೆಸಲಾಗುವುದು.

ಎಜಿಎಂ ನೋಟಿಸ್, ವಾರ್ಷಿಕ ವರದಿ ಮತ್ತು ಇತರ ವರದಿ /ದಾಖಲೆಗಳನ್ನು (ಎಜಿಎಂ ದಾಖಲೆಗಳು) ಷೇರುಗಳನ್ನು ಡಿಮೆಟೀರಿಯಲೈಸ್ಡ್ ಮೋಡ್‌ನಲ್ಲಿ ಹೊಂದಿದ್ದ ಪ್ರಕರಣದಲ್ಲಿ ಸದಸ್ಯರು ತಮ್ಮ ಇ-ಮೇಲ್ ವಿಳಾಸಗಳನ್ನು ತಮ್ಮ ಆಯಾ ಭಾಗವಹಿಸುವ ಠೇವಣಿದಾರರ ಯಾದಿಯಲ್ಲಿ (DPs') ಅಥವಾ ಕಂಪನಿಯ ರಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸಫರ್ ಏಜೆಂಟ್ (ಆರ್‌ಟಿಎ) ಅಂದರೆ ಮೆ॥ KFin Technologies Limitedನಲ್ಲಿ ಇ-ಮೇಲ್ ವಿಳಾಸ ನೋಂದಾಯಿಸಿದ ಸದಸ್ಯರಿಗೆ ಮಾತ್ರ ವಿದ್ಯುನ್ಮಾನ ವಿಧಾನದ ಮೂಲಕ ಕಳುಹಿಸಲಾಗುತ್ತದೆ. ಇದಲ್ಲದೇ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸದೇ ಇರುವ ಷೇರುದಾರರಿಗೆ 2025-26ನೇ ಹಣಕಾಸು ವರ್ಷದ ವಾರ್ಷಿಕ ಮಹಾಸಭೆಯ (AGM) ದಾಖಲೆಗಳನ್ನು ಪಡೆಯಲು ವೆಬ್‌ಲಿಂಕ್ ಇರುವ ಪತ್ರವನ್ನು ಕಳುಹಿಸಲಾಗುತ್ತದೆ. ಆದರೂ ಲಿಸ್ಟಿಂಗ್ (ಯಾದಿ) ನಿಯಂತ್ರಣಗಳ 36ನೇ ನಿಯಂತ್ರಣ ಪ್ರಕಾರ ವಿಶೇಷವಾಗಿ ಮನವಿ ಮಾಡುವ ಸದಸ್ಯರಿಗೆ ಎಜಿಎಂ ದಾಖಲೆಗಳ ಹಾರ್ಡ್ ಪ್ರತಿಯನ್ನು ಕಳುಹಿಸಲಾಗುವುದು. ಆದರೆ ಎಜಿಎಂ ದಾಖಲೆಗಳ ಹಾರ್ಡ್ ಕಾಪಿ ಸ್ವೀಕರಿಸುವುದಕ್ಕೆ ಸಂಬಂಧಿಸಿದಂತೆ ಸದಸ್ಯರು ತಮ್ಮ ಇ-ಮೇಲ್ ವಿಳಾಸವನ್ನು ತಮ್ಮ ಪೊಲಿಯೋ ವಿವರ ಉಲ್ಲೇಖಿಸಿ einward.ris@kfintech.com ಅಥವಾ investorservices@wendtindia.com ನಲ್ಲಿ ದಾಖಲಿಸಬೇಕು.

ಎಜಿಎಂ ದಾಖಲೆಗಳನ್ನು ಕಂಪನಿಯ ವೆಬ್‌ಸೈಟ್ www.wendtindia.com ಹಾಗೂ ಷೇರು ವಿನಿಮಯ ಕೇಂದ್ರಗಳಾದ ಬಿಎಸ್‌ಇ ಲಿಮಿಟೆಡ್‌ನ www.bseindia.com, ಭಾರತದ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದ www.nseindia.com ಮತ್ತು ಇ-ವೋಟಿಂಗ್ ಸೇವೆ ಒದಗಿಸುವ ನ್ಯಾಶನಲ್ ಸೆಕ್ಯೂರಿಟೀಸ್ ಡಿಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್)ನ https://www.evoting.nsdl.com/eVotingWeb/SearchDownloadsAction.do ಗಳಲ್ಲಿ ಕೂಡಾ ಪ್ರಕಟಿಸಲಾಗುವುದು.

ಸೆಬಿಯ ಮಾಸ್ಟರ್ ಸುತ್ತೋಲೆ ನಂ. HO/38/13/(4)2026-MIRSD-POD/I/4298/2026 ತಾರೀಖು 06ನೇ ಫೆಬ್ರವರಿ, 2026ರ ಪ್ರಕಾರ ಭೌತಿಕವಾಗಿ ಭದ್ರತಾ ಪತ್ರಗಳನ್ನು ಹೊಂದಿರುವವರು ತಮ್ಮ ಪ್ಯಾನ್, ಇ-ಮೇಲ್ ವಿಳಾಸ, ಮೊಬೈಲ್ ನಂಬರ್, ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸುವುದು ಹಾಗೂ ಕಂಪನಿಯಲ್ಲಿ ಹೊಂದಿರುವ ಷೇರುಗಳಿಗೆ ನಾಮ ನಿರ್ದೇಶನ ಮಾಡುವುದು ಅಥವಾ ಆಯ್ಕೆಯಿಂದ ಹೊರಗುಳಿಯುವುದನ್ನು ಘೋಷಿಸುವುದು ಕಡ್ಡಾಯವಾಗಿದೆ. ಕಂಪನಿ/ಆರ್‌ಟಿಎ ದಲ್ಲಿ ತಮ್ಮ ಇ-ಮೇಲ್ ವಿಳಾಸ ನೋಂದಾಯಿಸದ ಭೌತಿಕವಾಗಿ ಷೇರುಗಳನ್ನು ಹೊಂದಿರುವ ಸದಸ್ಯರು ಇ-ಮೇಲ್ ವಿಳಾಸ, ಮೊಬೈಲ್ ಸಂಖ್ಯೆ, ಸ್ವಯಂ ದೃಢೀಕೃತ ಪ್ಯಾನ್ ಮತ್ತು ವಿಳಾಸದ ಪುರಾವೆ ಮತ್ತು ಷೇರು ಪ್ರಮಾಣ ಪತ್ರ (ಗಳು) ಸೇರಿದಂತೆ ಕೆವೈಸಿ ನವೀಕರಿಸಲು ಫಾರ್ಮ್ ISR-1 ಅನ್ನು 'ಖುದ್ದಾಗಿ ವೈಯಕ್ತಿಕ ಪರಿಶೀಲನೆ' (ಐಪಿವಿ) ಮೂಲಕ ಕಂಪನಿ/ಆರ್‌ಟಿಎ ಗೆ ಅಥವಾ ಅಂಚೆ ಮೂಲಕ ಮೆ: KFin ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ ನಂ.31 ಮತ್ತು 32, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡಾ, ಸೆರಿಲಿಂಗಮಪಲ್ಲಿ ಮಂಡಳ, ಹೈದರಾಬಾದ -500032 ಗೆ ಅಥವಾ ಇ-ಸಹಿಯೊಂದಿಗೆ ವಿದ್ಯುನ್ಮಾನ ವಿಧಾನದ ಮೂಲಕ einward.ris@kfintech.com ಅಥವಾ investorservices@wendtindia.com ಗೆ ಕಳುಹಿಸಬೇಕು. ತಮ್ಮ ಇ-ಮೇಲ್ ವಿಳಾಸವನ್ನು ನೊಂದಾಯಿಸದ ಮತ್ತು ಸಾಕಾರಗೊಳಿಸದ (dematerialized) ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಎಜಿಎಂ ದಾಖಲೆಗಳನ್ನು ವಿದ್ಯುನ್ಮಾನದಿಂದ ಸ್ವೀಕರಿಸಲು ತಮ್ಮ ತಮ್ಮ ಡಿಪಿಗಳಲ್ಲಿ ತಮ್ಮ ಇ-ಮೇಲ್ ವಿಳಾಸವನ್ನು ನೊಂದಾಯಿಸಿಕೊಳ್ಳಬೇಕು.

ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ (ಎಜಿಎಂ) VC/OAVM ಮೂಲಕ ಭಾಗವಹಿಸಬಹುದು ಅವರ ಹಾಜರಾತಿಯನ್ನು ಕಂಪನಿ ಕಾಯ್ದೆ,2013ರ ಕಲಮ್ 103ರ ಅಡಿ ಕೋರಂ ನಿರ್ಧರಿಸಲು ಗಣನೆಗೆ ತೆಗೆದುಕೊಳ್ಳಲಾಗುವುದು. ಸದಸ್ಯರಿಗೆ ಎಜಿಎಂ ನೋಟಿಸ್‌ನಲ್ಲಿ ಸೂಚಿಸಿದ ಎಲ್ಲ ಗೊತ್ತುವಳಿಗಳ ಮೇಲೆ ರಿಮೋಟ್ ಇ-ಮತದಾನ ಅಲ್ಲದೇ ಎಜಿಎಂ ಕಾಲಕ್ಕೆ ಇ-ಮತದಾನ ಮಾಡಲು ಸೌಲಭ್ಯ ಒದಗಿಸಲಾಗುವುದು. 44ನೇ ವಾರ್ಷಿಕ ಮಹಾಸಭೆಯಲ್ಲಿ VC/OAVM ಮೂಲಕ ಭಾಗವಹಿಸಲು ಮತ್ತು ವಿದ್ಯುನ್ಮಾನವಾಗಿ ಮತ ಚಲಾಯಿಸುವ ಬಗ್ಗೆ ವಿವರವಾದ ಸೂಚನೆಗಳನ್ನು ವಾರ್ಷಿಕ ಮಹಾಸಭೆಯ ನೋಟಿಸ್‌ನಲ್ಲಿ ನೀಡಲಾಗಿದ್ದು ಕಂಪನಿಯ ವೆಬ್‌ಸೈಟ್‌ನಲ್ಲಿ ಕೂಡಾ ನೀಡಲಾಗುವುದು.

ಎಪ್ರಿಲ್ 24, 2026 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯು 2024-25ನೇ ಸಾಲಿನ ಹಣಕಾಸು ವರ್ಷಕ್ಕೆ ಸದಸ್ಯರ ಅನುಮೋದನೆಗಾಗಿ ರೂ.10 ಮುಖಬೆಲೆಯ ಪ್ರತಿ ಷೇರಿಗೆ ರೂ.10/- ರಂತೆ ಲಾಭಾಂಶ ಶಿಫಾರಸು ಮಾಡಿದೆ. ಮೇಲೆ ತಿಳಿಸಿದ SEBI ಮಾಸ್ಟರ್ ಸುತ್ತೋಲೆ ಪ್ರಕಾರ, ಷೇರುಗಳನ್ನು ಹೊಂದಿರುವ ಸದಸ್ಯರು ಯಾವುದೇ ಮನವಿಯನ್ನು ಪ್ರಕ್ರಿಯೆಗೊಳಿಸುವ ಮೊದಲು ತಮ್ಮ ಪಾನ್, ಕೆವೈಸಿ, ಬ್ಯಾಂಕ್ ಮತ್ತು ನಾಮ ನಿರ್ದೇಶನ ವಿವರಗಳನ್ನು ನವೀಕರಿಸಬೇಕಾಗುತ್ತದೆ. ಭೌತಿಕವಾಗಿ ಷೇರುಗಳನ್ನು ಹೊಂದಿರುವ ಮತ್ತು ನಾಮನಿರ್ದೇಶನವನ್ನು ಹೊರತುಪಡಿಸಿ ಮೇಲೆ ತಿಳಿಸಲಾದ KYC ವಿವರಗಳನ್ನು RTA/ಕಂಪನಿಯಲ್ಲಿ ಇನ್ನೂ ನೊಂದಾಯಿಸದಿರುವ ಸದಸ್ಯರು ಲಾಭಾಂಶವನ್ನು ಎಪ್ರಿಲ್ 1, 2024 ರಿಂದ ಜಾರಿಗೆ ಬರುವಂತೆ ವಿದ್ಯುನ್ಮಾನ ರೂಪದಲ್ಲಿ ಮಾತ್ರ ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ ನಿಮ್ಮ ಬ್ಯಾಂಕ್ ಖಾತೆಗಳಿಗೆ ಲಾಭಾಂಶವು ಸುರಕ್ಷಿತವಾಗಿ ಸಂದಾಯವಾಗಲು ಸ್ವಯಂ ದೃಢೀಕರಿಸಿದ ಪಾನ್ ಪ್ರತಿ, ವಿಳಾಸದ ಪುರಾವೆ, ರದ್ದುಗೊಳಿಸಿದ ಚೆಕ್ ಮತ್ತು ಷೇರು ಪ್ರಮಾಣ ಪತ್ರ (ಗಳನ್ನು) ದೊಂದಿಗೆ ಸರಿಯಾಗಿ ಭರ್ತಿ ಮಾಡಿದ ಫಾರ್ಮ್ ISR-1, ಫಾರ್ಮ್ ISR-2 ಮತ್ತು ಫಾರ್ಮ್ SH-13 /ಫಾರ್ಮ್ ISR-3 ಗಳನ್ನು 'ವೈಯಕ್ತಿಕ ಪರಿಶೀಲನೆ' (IPV) ಮೂಲಕ ಒದಗಿಸಲು ವಿನಂತಿಸಲಾಗಿದೆ. ಅಥವಾ ಅಂಚೆ ಮೂಲಕ ಮೆ: KFin ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಟವರ್-ಬಿ, ಪ್ಲಾಟ್ ನಂ.31 ಮತ್ತು 32, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡಾ, ಸೆರಿಲಿಂಗಮಪಲ್ಲಿ ಮಂಡಳ, ಹೈದರಾಬಾದ -500032 ಈ ವಿಳಾಸಕ್ಕೆ ಅಥವಾ ಇ-ಸಹಿಯೊಂದಿಗೆ ವಿದ್ಯುನ್ಮಾನ ವಿಧಾನದ ಮೂಲಕ einward.ris@kfintech.com ಅಥವಾ investorservices@wendtindia.com ಗೆ ಕಳುಹಿಸಬೇಕು. ಡಿಮೆಟೀರಯಲೈಸ್ಡ್ ರೂಪದಲ್ಲಿ ಷೇರು ಹೊಂದಿರುವ ಸದಸ್ಯರು ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ಆಯಾ ಡಿಪಿಗಳೊಂದಿಗೆ ನವೀಕರಿಸಬೇಕಾಗುತ್ತದೆ.

ಎಪ್ರಿಲ್ 1, 2020 ರಿಂದ ಜಾರಿಗೆ ಬರುವ ಲಾಭಾಂಶದ ಆದಾಯವು ಷೇರುದಾರರ ಕೈಯಲ್ಲಿ ಆದಾಯ ತೆರಿಗೆಗೆ ಒಳಪಡುತ್ತದೆ. ಆದ್ದರಿಂದ ಸದಸ್ಯರು ಸೂಕ್ತ ದರದಲ್ಲಿ ತೆರಿಗೆ ಕಡಿತ ಮಾಡಲು ಇಲ್ಲವೆ ವಿನಾಯತಿ ಪಡೆಯಲು ಆದಾಯ ತೆರಿಗೆ ಕಾಯ್ದೆ, 1961ರ ಪ್ರಕಾರ ತಮ್ಮ ವಸತಿ ವಿಳಾಸ, ಪಾನ್ ಮತ್ತು ನಿಮ್ಮ ದರ್ಜೆಯನ್ನು ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದರೆ, RTA/ಕಂಪನಿಯಲ್ಲಿ ಒಂದು ವೇಳೆ ಷೇರುಗಳನ್ನು ಡಿಮಾಟ್ ರೂಪದಲ್ಲಿ ಹೊಂದಿದ್ದರೆ ತಮ್ಮ DP ಯಲ್ಲಿ ನವೀಕರಿಸಲು ವಿನಂತಿಸಲಾಗಿದೆ.

ವೆಂಡ್ಟ್ (ಭಾರತ) ಲಿಮಿಟೆಡ್ ಪರವಾಗಿ
ಸಹಿ/-
ಅರ್ಜುನ ರಾಜ ಎಚ್,
ಕಂಪನಿ ಕಾರ್ಯದರ್ಶಿ
ದಿನಾಂಕ: ಜೂನ್ 24, 2026
ಸ್ಥಳ: ಬೆಂಗಳೂರು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಸಂಖ್ಯೆ: ಬೆವಿಕಂ/ಮುಪ್ರವ್ಯ(ಯೋ)/ಉಪ್ರವ್ಯ-1/ಸಪ್ರವ್ಯ-1/ಬಿಸಿ-14/26-27/ ಸಿವೈಎಸ್-109
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಿಂದ ತುಮಕೂರು ವಿಭಾಗದ, ನಿಟ್ಟೂರು ಉಪವಿಭಾಗದಲ್ಲಿರುವ ಸಕ್ರಮಗೊಳಿಸಿದ ಐ ಪಿ ಸೆಟ್‌ಗಳಿಗೆ 11 ಕೆವಿ ಮಾರ್ಗವನ್ನು ಹಾಗೂ 25 ಕೆವಿಎ ಪರಿವರ್ತಕವನ್ನು ಸ್ಥಾಪಿಸಿ ಮತ್ತು ಎಲ್ ಟಿ ಮಾರ್ಗಗಳನ್ನು ವಿಸ್ತರಿಸಿ ವಿದ್ಯುತ್ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳಿಗೆ ಶೇಖಡಾವಾರು ಆಧಾರದಲ್ಲಿ, ಭಾಗಶಃ ಗುತ್ತಿಗೆ ಆಧಾರದಲ್ಲಿ (25 ಕೆವಿಎ ಪರಿವರ್ತಕವನ್ನು ಬೆವಿಕಂ ನಿಂದ ಸರಬರಾಜು ಮಾಡಲಾಗುವುದು) ಟೆಂಡರನ್ನು ಮರು ಆಹ್ವಾನಿಸಲಾಗಿದೆ, ವಿವರಗಳು ಕೆಳಕಂಡಂತಿದೆ.
ಟೆಂಡರ್ ವಿಚಾರಣೆ ಸಂಖ್ಯೆ: BESCOM/2025-26/EL/WORK_INDENT898/CALL-2
ಬಿಡ್ ದಸ್ತಾವೇಜುಗಳ ಲಭ್ಯತೆ: 25.06.2026 ನಂತರದಲ್ಲಿ.
ಬಿಡ್‌ಗೆ ಸಂಬಂಧಿಸಿದ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.06.2026, 17:00 ಗಂಟೆಯ ಮೊದಲು. ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 01.07.2026, 11:00 ಗಂಟೆಗೆ. ಸ್ಥಳ: ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ), ಯೋಜನೆಗಳು, ರವರ ಕಛೇರಿ, 403, ನಿಗಮ ಕಛೇರಿ, ಕೆ ಆರ್ ವೃತ್ತ, ಬೆವಿಕಂ, ಬೆಂಗಳೂರು-560001. ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 06.07.2026, 15:00 ಗಂಟೆ. ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 07.07.2026, 15:30 ಗಂಟೆಗೆ.
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಬಿಡ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಅಗತ್ಯ ನೆರವನ್ನು ಪಡೆದುಕೊಳ್ಳಬಹುದು. ಇ-ಪ್ರೊಕ್ಯೂರ್‌ಮೆಂಟ್ ಸಹಾಯ ಸಂಪರ್ಕ ಸಂಖ್ಯೆ: +91-8046010000, +91-8068948777 ಮತ್ತು ಇ-ಮೇಲ್: support@eprochelpdesk.com
ಆಸಕ್ತ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡು ಕಛೇರಿ ಕೆಲಸದ ಸಮಯದಲ್ಲಿ ಸಹಾಯ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ), ಯೋಜನೆಗಳು, ಬೆವಿಕಂ.
ಇ ಮೇಲ್: cgmproject.bescom@gmail.com
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರ್, ವಿಜನಿನಿ. ರವರ ಕಛೇರಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾ, ತುಮಕೂರು ಜಿಲ್ಲೆ-572137
Phone/Fax No: 08135-200763 E.Mail I.D.: ubpee.9@gmail.com
ಸಂಖ್ಯೆ:ವಿಜನಿನಿ/ಭಮೇಯೋ/ಕಾಇಂ/ವಿ-9/ಶಿರಾ/
ಟೆಂಡರ್ ಪ್ರಕಟಣೆ-02/2026-27/303 ದಿನಾಂಕ: 18.06.2026

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನೋಂದಾಯಿತ ಕಛೇರಿ, ನಂ.148, ಎಂಜಿಸಿ ಸ್ಟೇ, ಇನ್‌ಫೆಂಟ್ರಿ ರೋಡ್, ಬೆಂಗಳೂರು-560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರಮೆಂಟ್ ಪೋರ್ಟಲ್‌ನಲ್ಲಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾ ಕಛೇರಿ ವ್ಯಾಪ್ತಿಯ 2026-27ನೇ ಸಾಲಿನ ಲೆಕ್ಕಶೀರ್ಷಿಕೆ-4701 ರಡಿಯಲ್ಲಿ ರೂ.25.34 ರಿಂದ 38.10 ಲಕ್ಷಗಳ 05 ಕಾಮಗಾರಿಗಳನ್ನು (ಇಂಡೆಂಟ್ ನಂ.510, 511, 512, 513 & 514) KW-2 ನಲ್ಲಿ ದ್ವಿ ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಇ-ಪ್ರೊಕ್ಯೂರ್‌ಮೆಂಟ್‌ನ www.eproc.Karnataka.gov.in/eportal/index.seam ವೆಬ್‌ಸೈಟ್‌ನಿಂದ ಖಾಲಿ ಟೆಂಡರ್ ದಾಖಲೆಗಳನ್ನು ದಿನಾಂಕ: 19-06-2026 ರಿಂದ 04-07-2026 ರ ಸಂಜೆ 4.30 ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ನ್ನು ಸಲ್ಲಿಸಬಹುದು. ನಿಗಧಿ ಪಡಿಸಿದ ಇ.ಎಂ.ಡಿ ಮೊತ್ತ / ಟೆಂಡರ್ ನಿಯಮ/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ www.eproc.karnataka.gov.in/eportal/index.seam ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ, ಸಮಯದಲ್ಲಿ ದಿನಾಂಕ: 19-06-2026 ರಿಂದ 04-07-2026 ರ ಕಛೇರಿಯ ಅವಧಿಯಲ್ಲಿ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್ ಬಿಡ್‌ಗಳನ್ನು ದಿನಾಂಕ: 06-07-2026 ರ ಬೆಳಿಗ್ಗೆ 11.00 ಗಂಟೆಯ ನಂತರ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.9, ಶಿರಾರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಅರ್ಹ ಗುತ್ತಿಗೆದಾರರು (www.eproc.Karnataka.gov.in/eportal/index.seam) ಅಂತರ್‌ಜಾಲದಿಂದ ಎಲ್ಲಾ ವಿವರಗಳನ್ನು ಪಡೆದು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು,
ವಿಜನಿನಿ, ಭ.ಮೇ.ಯೋ. ವಿಭಾಗ ನಂ.09,
ಶಿರಾ, ತುಮಕೂರು ಜಿಲ್ಲೆ.
DIPR/TUM/RO-59/26-27/Oysters

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು-560011.
ಸಂಖ್ಯೆ: ಕಾಇಂ/ಸನೀ/ಸ.ಇಂ-1/ಟೆಂಡರ್ ಪ್ರಕಟಣೆ ಸಂ.04/2026-27 ದಿನಾಂಕ: 23.06.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರು ಲೆಕ್ಕ ಶೀರ್ಷಿಕೆ ಹೊಸಕೋಟೆ ಪ್ರಾಧಿಕಾರ ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳಿಗೆ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-4 ರ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಕೆಪಿಪಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸುವುದು, ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.
ಕಾಮಗಾರಿಯ ಹೆಸರು :- ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕಿನಲ್ಲಿ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನೊಳಗೊಂಡಂತೆ **ಒಟ್ಟು 4 ಕಾಮಗಾರಿಗಳು.**
ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : ರೂ.197.92 (ಕನಿಷ್ಠ) & ರೂ.395.35 (ಗರಿಷ್ಠ)
ಇಎಂಡಿ: ರೂ.2,96,900/- (ಕನಿಷ್ಠ) & ರೂ.5,93,100/- (ಗರಿಷ್ಠ).
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 9 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)
(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: 23.06.2026 ಸಂಜೆ 16.00 ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: 07.07.2026 ಸಂಜೆ 16.00 ಗಂಟೆಯವರೆಗೆ. (3) ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 01.07.2026 ಮಧ್ಯಾಹ್ನ 15.00 ಗಂಟೆಗೆ, (4) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07.07.2026 ಸಂಜೆ 16.30 ಗಂಟೆಯವರೆಗೆ, (5) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 09.07.2026 ಬೆಳಗ್ಗೆ 11.30 ಗಂಟೆಗೆ, (6) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ
ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಟ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ- 4 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
ವಾಸಾಸಂಇ/ವಾ.ಪ್ರ/1308/ಶಿರಡಿ ಸಾಯಿ/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
KPTCL
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)-2/2026-27/3008-21 ದಿನಾಂಕ:23.06.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣಾ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಗಳ ವಿವರ
ಕೆಪಿಟಿಸಿಎಲ್/2026-27/ಎಸ್‌ಎಸ್/ವರ್ಕ್_ಇಂಡೆಂಟ್3917
ಸಂಯೋಜಿತ ಪ್ಯಾಕೇಜ್ ಅಡಿಯಲ್ಲಿ: **ಕಾಮಗಾರಿ-ಎ:** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ **ನರಸಿಂಹಗಿರಿ (ಬೆಳ್ಳಿಗಟ್ಟ)** ಗ್ರಾಮದಲ್ಲಿ 2x20MVA, 66/11kV ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಅದಕ್ಕೆ ಸಂಬಂಧಿಸಿದ **0.679ಕಿ.ಮೀಗಳ** ಉದ್ದದ ವಿದ್ಯುತ್ ಮಾರ್ಗವನ್ನು ನಿರ್ಮಿಸುವುದು. **ಕಾಮಗಾರಿ-ಬಿ:** ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿರುವ ಪ್ರಸ್ತುತ 66ಕೆವಿ **ವೆಂಕಟಾಪುರ** ಉಪಕೇಂದ್ರಕ್ಕೆ, ಪ್ರಸ್ತುತ ಇರುವ 66ಕೆವಿ MSD (ಮುನಿರಾಬಾದ್-ಸೊಕ್ಕೆ-ದಾವಣಗೆರೆ) ವಿದ್ಯುತ್ ಮಾರ್ಗದಿಂದ **0.952ಕಿ.ಮೀಗಳ** ಉದ್ದದ 66ಕೆವಿ LILO (Line In Line Out) ಮಾರ್ಗ ನಿರ್ಮಾಣ ಹಾಗೂ ಪ್ರಸ್ತುತ 66ಕೆವಿ ವೆಂಕಟಾಪುರ ಉಪಕೇಂದ್ರದಲ್ಲಿ ಎರಡು (02) ಟರ್ಮಿನಲ್ ಬೇಗಳ ನಿರ್ಮಾಣ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ: 29.06.2026 ರಂದು 15:00 ಗಂಟೆ ಅಥವಾ ನಂತರದಿಂದ ಪಡೆಯಬಹುದು. **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/- ಮುಖ್ಯ ಇಂಜಿನಿಯರ್ (ವಿದ್ಯುತ್),
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 9ನೇ ಮಹಡಿ,
ಇಂಧನ ಭವನ, ಆನಂದ್ ರಾವ್ ವೃತ್ತ, ಬೆಂಗಳೂರು-560009.

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಉಪ ಆಯುಕ್ತರವರ ಕಚೇರಿ (ಜಾಹೀರಾತು), 3ನೇ ಮಹಡಿ,
ಜಯನಗರ, 4ನೇ ಬ್ಲಾಕ್ ಶಾಪಿಂಗ್ ಕಾಂಪ್ಲೆಕ್ಸ್, ಬೆಂಗಳೂರು-560041
ನಂ. ಡಿಸಿ ಜಾಹೀರಾತು/ಬೆಂದನಪಾ/ಟೆಂಡರ್/01/2026-27/3ನೇ ಕರೆ ದಿನಾಂಕ : 23.06.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಉಪ ಆಯುಕ್ತರು, (ಜಾಹೀರಾತು), (ಬೆಂದನಪಾ) ರವರು ಗ್ರೇಟರ್ ಬೆಂಗಳೂರು ಪ್ರದೇಶ (ಜಾಹೀರಾತು) ನಿಯಮಗಳು 2026 ರ ಅನುಸಾರವಾಗಿ ವಲಯ 1 ಮತ್ತು 2 ರಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳನ್ನು ನಿಯೋಜಿಸಲು ಯಾವುದೇ ಇತರ ಬೆಂಗಳೂರು ದಕ್ಷಿಣ ನಗರ ಪಾಲಿಕೆಯೊಂದಿಗೆ ಅರ್ಹ ಪರವಾನಗಿ ಪಡೆದ / ನೋಂದಾಯಿತ ಜಾಹೀರಾತುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವಲಯ-1 ರಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ಹಂಚಿಕೆ.
2.	ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವಲಯ-2 ರಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ಹಂಚಿಕೆ.

ಟೆಂಡರ್‌ನ ಕಾರ್ಯಸೂಚಿ: (1) ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (https://kppp.karnataka.gov.in) ಮೂಲಕ ಬಿಡ್ ದಾಖಲೆ ಡೌನ್‌ಲೋಡ್ ಮಾಡಬಹುದಾದ **ದಿನಾಂಕ: 25.06.2026 ರಿಂದ** (2) ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ ಮತ್ತು ಸ್ಥಳ: **07.07.2026 ರಂದು ಮಧ್ಯಾಹ್ನ 15.00 ಗಂಟೆಗೆ,** ಉಪ ಆಯುಕ್ತರವರ ಕಚೇರಿ, (ಜಾಹೀರಾತುಗಳು), ಬೆಂದನಪಾ, 3ನೇ ಮಹಡಿ, ಜಯನಗರ 4ನೇ ಬ್ಲಾಕ್, ಶಾಪಿಂಗ್ ಕಾಂಪ್ಲೆಕ್ಸ್, ಬೆಂಗಳೂರು -560041 (3) ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ : **07.07.2026 ರಂದು 16.00 ಗಂಟೆಗಳು** (4) ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೇದಿಕೆಯಲ್ಲಿ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **04.08.2026 ರಿಂದ 17.00 ಗಂಟೆಗಳು** (5) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕ ಬಿಡ್ ಮತ್ತು ತಾಂತ್ರಿಕ ಮೌಲ್ಯಮಾಪನ: 05.08.2026 ರಂದು 16.00 ಗಂಟೆಗಳು** (6) ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕವಾಗಿ ಅರ್ಹ ಬಿಡ್ಡರ್‌ಗಳ ವಾಣಿಜ್ಯ ಬಿಡ್ (ಸಾಧ್ಯವಾದರೆ) : ತಕ್ಷಣವೇ ತಾಂತ್ರಿಕ ಮೌಲ್ಯಮಾಪನದ ನಂತರ.** (7) ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ: ಉಪ ಆಯುಕ್ತರು (ಜಾಹೀರಾತುಗಳು). ಮೊಬೈಲ್: 9686577404, ಇ-ಮೇಲ್: Dcmarketadvert@gmail.com (8) ಟೆಂಡರ್ ತೆರೆಯುವ ಸ್ಥಳ ಮತ್ತು ವಿಳಾಸ: **ಉಪ ಆಯುಕ್ತರವರ ಕಚೇರಿ (ಜಾಹೀರಾತುಗಳು), 3ನೇ ಮಹಡಿ, ಜಯನಗರ 4ನೇ ಬ್ಲಾಕ್, ಶಾಪಿಂಗ್ ಕಾಂಪ್ಲೆಕ್ಸ್, ಬೆಂಗಳೂರು -560041** (9) ಇಎಂಡಿ ಮೊತ್ತ: **ಬೆಂಗಳೂರು ರೂ.20 ಲಕ್ಷ (ಅದರಲ್ಲಿ ರೂ. 16 ಲಕ್ಷ ಬ್ಯಾಂಕ್ ಗ್ಯಾರಂಟಿ ಮತ್ತು ಉಳಿದ ರೂ.4 ಲಕ್ಷ ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಾವತಿಸಲಾಗಿದೆ). ಪ್ರತಿ ವಲಯವಾರು ಬಿಡ್‌ಗೆ.**
ಸಹಿ/- ಉಪ ಆಯುಕ್ತರು, ಬೆಂದನಪಾ

ಕರುನಾಡ ಪದ್ಮ ಸಾಧಕರಿಗೆ ಸನ್ಮಾನ

ಕಲೆ, ಸಾಹಿತ್ಯ, ಕ್ರೀಡೆ, ಸಮಾಜಸೇವೆ ಸೇರಿದಂತೆ ವಿವಿಧ ಕ್ಷೇತ್ರದ 65 ಸಾಧಕರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೊಸದಿಲ್ಲಿಯಲ್ಲಿ ಮಂಗಳವಾರ ಪದ್ಮ ವಿಭೂಷಣ, ಪದ್ಮ ಭೂಷಣ ಹಾಗೂ ಪದ್ಮಶ್ರೀ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಡಾ.ಪ್ರಭಾಕರ್ ಕೋರೆ

ಡಾ. ಸುರೇಶ್ ಹನಗವಾಡಿ

ಟಿಟಿಕೆ ಸಂಸ್ಥಾಪಕ ಜಗನ್ನಾಥನ್ (ಮರಣೋತ್ತರ) ಅವರ ಪರವಾಗಿ ಕುಟುಂಬ ಸದಸ್ಯರು ಪ್ರಶಸ್ತಿ ಸ್ವೀಕರಿಸಿದರು.


ಶಶಿ ಶೇಖರ್ ವೇಂಪತಿ.

ಕ್ರಿಕೆಟಿಗ ರೋಹಿತ್ ಶರ್ಮಾ.

ಹಸೆಮಣೆ ಏರಬೇಕಿದ್ದವಳೇ ಮಸಣಕ್ಕೆ ಕಳಿಸಿದಳು

ಲೋಹಗಢ ಕೋಟೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಸಾವಿನ ಪ್ರಕರಣಕ್ಕೆ ಮಹತ್ವದ ತಿರುವು

ಪುಣೆ: ನಗರದ ಸಮೀಪದ ಲೋಹಗಢ ಕೋಟೆಯಲ್ಲಿ ಸಂಭವಿಸಿದ ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರ ಪುತ್ರ ಕೇತನ್ ವಿಶಾಲ್ ಅಗರ್ವಾಲ್ (26) ಸಾವಿನ ಪ್ರಕರಣ ಹೊಸ ತಿರುವು ಪಡೆದುಕೊಂಡಿದೆ.

ಫೋಟೊ ತೆಗೆಯುವಾಗ ಕಾಲುಜಾರಿ ಆಕಸ್ಮಿಕವಾಗಿ ಪ್ರಪಾತಕ್ಕೆ ಬಿದ್ದು ಕೇತನ್ ಮೃತಪಟ್ಟಿದ್ದರು ಎಂದು ಭಾವಿಸಲಾಗಿದ್ದ ಪ್ರಕರಣದಲ್ಲಿ ಈಗ ಆತನ ಭಾವಿ ಪತ್ನಿಯೇ ವಿಲನ್. ಅಗರ್ವಾಲ್ ಜತೆ ನಿಶ್ಚಿತಾರ್ಥವಾಗಿದ್ದ ಯುವತಿಯು ತನ್ನ ಪ್ರಿಯಕರನ ಜತೆ ಸೇರಿ ಸಿನಿಮೀಯ ರೀತಿಯಲ್ಲಿ ಭಾವಿ ಪತಿಯನ್ನು 400 ಅಡಿ ಆಳದ ಪ್ರಪಾತಕ್ಕೆ ತಳ್ಳಿ ಕೊಲೆ ಮಾಡಿರುವುದು ಪೊಲೀಸ್ ತನಿಖೆಯಿಂದ ಬಯಲಾಗಿದೆ.

ಇಡೀ ಪ್ರಕರಣವು ಎರಡೂ ಕುಟುಂಬಗಳನ್ನು ಹಾಗೂ ತನಿಖಾಧಿಕಾರಿಗಳನ್ನು ಬೆಚ್ಚಿಬೀಳಿಸಿದೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಕೇತನ್ ವಿಶಾಲ್ ಅಗರ್ವಾಲ್ ಅವರ ಪತ್ನಿಯಾಗಬೇಕಿದ್ದ ಸಿಯಾ ಗೋಯಲ್ (20) ಮತ್ತು ಆಕೆಯ ಪ್ರಿಯಕರ ಚೇತನ್ ಬಾಬುಲಾಲ್ ಚೌಧರಿ (22)ಯನ್ನು ಬಂಧಿಸಿ ಕೊಲೆ ಪ್ರಕರಣ ದಾಖಲಿಸಿದ್ದಾರೆ.

ಏನಿದು ಘಟನೆ?

ಸಿಯಾ ಗೋಯಲ್ ಮತ್ತು ಕೇತನ್ ಅಗರ್ವಾಲ್ ಇಬ್ಬರಿಗೂ ಪೋಷಕರು ನಿಶ್ಚಿತಾರ್ಥ ನೆರವೇರಿಸಿ ಈ ವರ್ಷದ ನವೆಂಬರ್‌ನಲ್ಲಿ ಅದ್ದೂರಿ ಮದುವೆ ಮಾಡಲು ನಿಶ್ಚಯಿಸಿದ್ದರು. ಆದರೆ ಸಿಯಾಗೆ ಈ ಮದುವೆ ಇಷ್ಟವಿರಲಿಲ್ಲ. ಇದೇ ಕಾರಣಕ್ಕೆ ತನ್ನ ಭಾವಿ ಪತಿಯನ್ನು ಮುಗಿಸಲು ಯೋಜನೆ ರೂಪಿಸಿದ್ದಳು. ಸಿಯಾ ತನ್ನ ಜನ್ಮದಿನದ ನೆಪ ಮಾಡಿ ಜೂನ್ 18ರ ಗುರುವಾರ ಅಗರ್ವಾಲ್ ನನ್ನು ಲೋಹಗಢ ಕೋಟೆಗೆ ಟ್ರೆಕ್ಕಿಂಗ್‌ಗೆ ಕರೆತಂದಿದ್ದಳು. ಪೂರ್ವ ಯೋಜನೆಯಂತೆ ಪ್ರಿಯಕರ ಚೇತನ್‌ನನ್ನೂ ಆಕೆ ಅಲ್ಲಿಗೆ ಕರೆಸಿಕೊಂಡಿದ್ದಳು. ಕೋಟೆಯ ತುದಿಯಲ್ಲಿ ಕೇತನ್ ಫೋಟೊ ತೆಗೆಯುತ್ತಿದ್ದ ವೇಳೆ ಇಬ್ಬರೂ ಆತನನ್ನು ಪ್ರಪಾತಕ್ಕೆ ತಳ್ಳಿದ್ದರು.

ಆರಂಭದಲ್ಲಿ ಫೋಟೊಗೆ ಪೋಸ್ ನೀಡುವಾಗ ಅಗರ್ವಾಲ್ ಕಾಲು ಜಾರಿ ಕಂದಕಕ್ಕೆ ಬಿದ್ದು ಮೃತಪಟ್ಟಿದ್ದಾನೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದಳು. ಮೂರು ಗಂಟೆಗಳ ಕಾರ್ಯಾಚರಣೆ ನಂತರ ರಕ್ಷಣಾ ತಂಡವು ಮೃತದೇಹವನ್ನು ಹೊರತೆಗೆದಿತ್ತು. ಆದರೆ, ಲೋನಾವಾಲಾ ಗ್ರಾಮಾಂತರ ಪೊಲೀಸರು ತನಿಖೆ ವೇಳೆ ಹಲವು ಅನುಮಾನಾಸ್ಪದ ಸಂಗತಿಗಳನ್ನು ಪತ್ತೆಹಚ್ಚಿದರು. ಮೊಬೈಲ್ ಡೇಟಾ, ಕರೆ ದಾಖಲೆಗಳು ಮತ್ತು ಸ್ಥಳದಲ್ಲಿದ್ದ ಜನರ ಹೇಳಿಕೆಗಳು ಸಂಶಯವನ್ನು ಹುಟ್ಟುಹಾಕಿದ್ದವು. ತಕ್ಷಣವೇ ಪೊಲೀಸರು ಸಿಯಾ ಮತ್ತು ಆಕೆಯ ಪ್ರೇಮಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ವಿಚಾರಣೆ ವೇಳೆ ಇಬ್ಬರೂ ಆರೋಪಿಗಳು ಕೇತನ್ ಅಗರ್ವಾಲ್ ಕೊಲೆಗೆ ಸಂಚು ರೂಪಿಸಿದ್ದನ್ನು ಒಪ್ಪಿಕೊಂಡಿದ್ದಾರೆ.

₹17 ಕೋಟಿ ಪ್ಯಾಲೆಸ್ ಬುಕ್ ಮಾಡಿದ್ದರು!

ಕೇತನ್ ಮಹಾರಾಷ್ಟ್ರದ ಪುಣೆ ಸಮೀಪದ ಪಿಂಪ್ರಿ-ಚಿಂಚವಾಡದ ಪ್ರಸಿದ್ಧ ರಿಯಲ್ ಎಸ್ಟೇಟ್ ಉದ್ಯಮಿ ವಿಶಾಲ್ ಅಗರ್ವಾಲ್ ಅವರ ಪುತ್ರ. ಸಿಯಾ ಮತ್ತು ಕೇತನ್ ವಿವಾಹವು ನವೆಂಬರ್‌ನಲ್ಲಿ ರಾಜಸ್ಥಾನದ ಉದಯಪುರದಲ್ಲಿ ನಡೆಯಬೇಕಿತ್ತು. ಕುಟುಂಬಸ್ಥರು ಜೈಪುರದಲ್ಲಿ 17 ಕೋಟಿ ರೂಪಾಯಿ ವೆಚ್ಚದಲ್ಲಿ ಅರಮನೆಯನ್ನು ಬುಕ್ ಮಾಡಿದ್ದರು. ಅತಿಥಿಗಳನ್ನು ಕರೆತರಲು ಎರಡು ಖಾಸಗಿ ವಿಮಾನಗಳ ವ್ಯವಸ್ಥೆಯನ್ನೂ ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಮೊದಲ ಯತ್ನದಲ್ಲಿ ಹಾವಿನ ನೆಪ ಹೇಳಿ ಬಚಾವಾಗಿದ್ದಳು

ಕೇತನ್ ಅಗರ್ವಾಲ್ ಲೋಹಗಢ ಕೋಟೆಯಲ್ಲಿ ಜೂನ್ 18ರಂದು ಕೊಲೆಗೀಡಾಗುವ ಮುನ್ನ ಅದೇ ಸ್ಥಳದಲ್ಲಿ ನಾಲ್ಕು ದಿನ ಮೊದಲು ಅಂದರೆ ಜೂನ್ 14ರಂದು ಕೊಲೆಗೆ ಯತ್ನ ನಡೆದಿತ್ತು. ಆದರೆ, ಕೂದೆಳೆ ಅಂತರದಲ್ಲಿ ಬದುಕುಳಿದಿದ್ದರು. ಜೂನ್ 14ರಂದು ಇದೇ ಕೋಟೆಯ ತುದಿಯಲ್ಲಿ ಕೇತನ್ ಅಗರ್ವಾಲ್ ನನ್ನು ಸಿಯಾ ತಳ್ಳಿದ್ದಳು. ಆದರೆ, ಅಲ್ಲಿನ ಮರವೊಂದು ಆತನನ್ನು ತಡೆಹಿಡಿದಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದರು. ಆ ಸಮಯದಲ್ಲಿ ಸಿಯಾ, ಕೋಟೆಯ ತುದಿಯಲ್ಲಿ ಹಾವು ಇದ್ದದ್ದು ತನ್ನ ಗಮನಕ್ಕೆ ಬಂದಿತ್ತು. ಹಾವಿನ ಕಡಿತದಿಂದ ಕೇತನ್‌ನನ್ನು ರಕ್ಷಿಸುವ ಉದ್ದೇಶದಿಂದ ತಳ್ಳಿದ್ದಾಗಿ ಸುಳ್ಳಿನ ಕಥೆ ಹೇಳಿ ನಂಬಿಸಿದ್ದಳು ಎಂದು ಅಗರ್ವಾಲ್ ಕುಟುಂಬಸ್ಥರು ಆರೋಪಿಸಿದ್ದಾರೆ.

ತುಕ್ಡೆ ತುಕ್ಡೆ ಗ್ಯಾಂಗ್‌ನ 'ಬಿ' ಟೀಮ್ ಸಿಜೆಪಿ

ಜಿರಳೆ ಪಾರ್ಟಿ ವಿರುದ್ಧ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಕಿಡಿ

ಹೊಸದಿಲ್ಲಿ: ನೀಟ್ ಯುಜಿ-2026 ಮರುಪರೀಕ್ಷೆಯು ಯಶಸ್ವಿಯಾದ ಬೆನ್ನಿಗೇ ತಮ್ಮ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಸಿಜೆಪಿ ವಿರುದ್ಧ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ವಾಗ್ದಾಳಿ ನಡೆಸಿದ್ದಾರೆ. ''ಸಿಜೆಪಿ ಚಳವಳಿಯು ದೇಶವನ್ನು ಒಡೆಯಲು ಯತ್ನಿಸುವ ತುಕ್ಡೆತುಕ್ಡೆ ಗ್ಯಾಂಗ್‌ನ 'ಬಿ' ತಂಡವಾಗಿದೆ,'' ಎಂದು ಕಿಡಿಕಾರಿದ್ದಾರೆ.

ನೀಟ್ ಮರುಪರೀಕ್ಷೆಯ ಯಶಸ್ವಿ ಸಿದ್ಧತೆಗಳ ಕುರಿತು ವಿಶೇಷ ಸಂದರ್ಶನವೊಂದರಲ್ಲಿ ಮಾತನಾಡಿದ ಸಚಿವರು, ''ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಕೆಲವು ಶಿಕ್ಷಕರ ಮೇಲೆ ಅಪಾರ ನಂಬಿಕೆ ಇಟ್ಟಿತ್ತು. ಆದರೆ ಜವಾಬ್ದಾರಿ ಹೊತ್ತಿದ್ದವರೇ ತಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದಾರೆ. ರಕ್ಷಕರೇ ಭಕ್ಷಕರಾದರು ಎಂದು ಬೇಸರ ವ್ಯಕ್ತಪಡಿಸಿದರು. ಈ ಬಾರಿ ದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಯಾವುದೇ ಅನ್ಯಾಯವಾಗದಂತೆ ನ್ಯಾಯೋಚಿತ ಮತ್ತು ಸುರಕ್ಷಿತ ಪ್ರಕ್ರಿಯೆಯನ್ನು ಖಾತ್ರಿಪಡಿಸುವುದು ಕೇಂದ್ರ ಸರಕಾರ ಮೊದಲ ಆದ್ಯತೆಯಾಗಿತ್ತು. ನಮ್ಮ ದೇಶದ ವಿದ್ಯಾರ್ಥಿಗಳು ಮರುಪರೀಕ್ಷೆಯನ್ನು ಅತ್ಯಂತ ಚೆನ್ನಾಗಿ ಬರೆದಿದ್ದು, ಉತ್ತಮ ಅಂಕಗಳನ್ನು ಗಳಿಸಲಿದ್ದಾರೆ ಎಂಬ ವಿಶ್ವಾಸವಿದೆ,'' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಬಾರಿ ಪರೀಕ್ಷೆಯಲ್ಲಿದ್ದ ಅತಿ ದೊಡ್ಡ ಸವಾಲೆಂದರೆ ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದಾಗಿತ್ತು. ಇದನ್ನು ಎದುರಿಸಲು ಕೇಂದ್ರ ಸರಕಾರವು ಕೈಗೊಂಡ ಕಠಿಣ ಕ್ರಮಗಳನ್ನು ಸಚಿವರು ವಿವರಿಸಿದ್ದಾರೆ. ''ತಜ್ಞರ ವಿಶೇಷ ತಂಡಗಳನ್ನು ರಚಿಸಿ, ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಪ್ರಕ್ರಿಯೆಯ ವ್ಯಾಪ್ತಿಯನ್ನು ವಿಸ್ತರಿಸಲಾಗಿತ್ತು. ಕೊನೆಯ ಕ್ಷಣದವರೆಗೂ ಯಾವ ಪ್ರಶ್ನೆಪತ್ರಿಕೆಯ ಸೆಟ್ ಅಂತಿಮಗೊಳ್ಳಲಿದೆ ಎಂಬುದು ಯಾರಿಗೂ ತಿಳಿದಿರಲಿಲ್ಲ. ಪ್ರಶ್ನೆಪತ್ರಿಕೆ ಸಿದ್ಧಪಡಿಸುವಲ್ಲಿ ಭಾಗಿಯಾಗಿದ್ದ ಎಲ್ಲಾ ಶಿಕ್ಷಕರನ್ನು ಹಲವು ದಿನಗಳ ಕಾಲ ಸಂಪೂರ್ಣವಾಗಿ ಐಸೊಲೇಶನ್‌ನಲ್ಲಿ ಇಡಲಾಗಿತ್ತು. ಈ ಅವಧಿಯಲ್ಲಿ ಅವರಿಗೆ ಇಂಟರ್ನೆಟ್ ಸೇರಿದಂತೆ ಯಾವುದೇ ಬಾಹ್ಯ ಸಂಪರ್ಕ ಸಾಧನಗಳನ್ನು ಬಳಸಲು ಅವಕಾಶವಿರಲಿಲ್ಲ. ಪರೀಕ್ಷೆಯ ಸುಗಮ ನಿರ್ವಹಣೆಗಾಗಿ ಸಶಸ್ತ್ರ ಪಡೆಗಳು ಮತ್ತು ರಾಜ್ಯ ಪೊಲೀಸ್ ಘಟಕಗಳನ್ನು ವ್ಯಾಪಕ ಭದ್ರತೆಗೆ ನಿಯೋಜಿಸಲಾಗಿತ್ತು,'' ಎಂದು ವಿವರಿಸಿದ್ದಾರೆ.

> ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶದ ಜನರಿಂದ ಸಂಪೂರ್ಣವಾಗಿ ತಿರಸ್ಕರಿಸಲ್ಪಟ್ಟವರು ಈಗ ವೇಷ ಬದಲಿಸಿಕೊಂಡು 'ಕಾಕ್ರೋಚ್ ಜನತಾ ಪಾರ್ಟಿ' ಹೆಸರಿನಲ್ಲಿ ಇಡೀ ವ್ಯವಸ್ಥೆಯನ್ನು ಹಾಳು ಮಾಡಲು ಹೊರಟಿದ್ದಾರೆ. ಈ ರೀತಿ ವ್ಯವಸ್ಥಿತವಾಗಿ ಸಂಚು ರೂಪಿಸುತ್ತಿರುವವರು ಯಾರು ಎಂಬುದನ್ನು ಈಗಾಗಲೇ ಪತ್ತೆ ಹಚ್ಚಲಾಗಿದೆ.
> - **ಧರ್ಮೇಂದ್ರ ಪ್ರಧಾನ್** ಶಿಕ್ಷಣ ಸಚಿವ

ಕೇಂದ್ರ ಸಚಿವ ಕುರಿಯನ್ ರಾಜೀನಾಮೆ

ಹೊಸದಿಲ್ಲಿ: ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಹಾಯಕ ಸಚಿವ ಜಾರ್ಜ್ ಕುರಿಯನ್ ಅವರು ಸಚಿವ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದು, ರಾಷ್ಟ್ರಪತಿ ಅದನ್ನು ಅಂಗೀಕರಿಸಿದ್ದಾರೆ. ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹಾಲು ಉತ್ಪಾದನೆ ಖಾತೆಗಳ ಸಹಾಯಕ ಸಚಿವರಾಗಿದ್ದ ಕುರಿಯನ್ ಅವರ ರಾಜ್ಯಸಭಾ ಸದಸ್ಯತ್ವದ ಅವಧಿ ಜೂನ್ 21ರಂದು ಮುಗಿದಿದೆ. ಹೀಗಾಗಿ ಅವರು ರಾಜೀನಾಮೆ ನೀಡಿದ್ದಾರೆ. ಕುರಿಯನ್ ಅವರು ಕೇಂದ್ರ ಸಚಿವ ಸಂಪುಟದಲ್ಲಿ ಕ್ರೈಸ್ತ ಸಮುದಾಯಕ್ಕೆ ಸೇರಿದ ಏಕೈಕ ಸಚಿವರಾಗಿದ್ದರು. 65 ವರ್ಷದ ಕುರಿಯನ್ ಬಿಜೆಪಿ ಸ್ಥಾಪನೆ ಆದಾಗಿನಿಂದ ಪಕ್ಷದ ಸದಸ್ಯರಾಗಿದ್ದಾರೆ. ಅವರು ಪಕ್ಷದಲ್ಲಿ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯ, ಯುವ ಮೋರ್ಚಾ ರಾಷ್ಟ್ರೀಯ ಉಪಾಧ್ಯಕ್ಷ ಹಾಗೂ ಕೇರಳ ಬಿಜೆಪಿ ಘಟಕದ ಉಪಾಧ್ಯಕ್ಷ ಸೇರಿದಂತೆ ಹಲವು ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ವಕೀಲರಾಗಿಯೂ ಸೇವೆ ಸಲ್ಲಿಸಿದ್ದರು. 2024ರ ಜೂನ್ 9ರಂದು ಕೇಂದ್ರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಇದಕ್ಕೂ ಮೊದಲು ಅವರು ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಉಪಾಧ್ಯಕ್ಷರಾಗಿದ್ದರು.

ಸುಪ್ರೀಂ ಅಂಗಳಕ್ಕೆ ಮಂದಿರ ದೇಣಿಗೆ ಅಕ್ರಮ

ಲಖನೌ: ಅಯೋಧ್ಯೆಯ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನಲ್ಲಿ ನಡೆದಿದೆ ಎನ್ನಲಾದ ದೇಣಿಗೆ ಅವ್ಯವಹಾರ ಪ್ರಕರಣವು ಸುಪ್ರೀಂ ಕೋರ್ಟ್ ಅಂಗಳ ತಲುಪಿದೆ. ಮಂದಿರಕ್ಕೆ ಭಕ್ತರು ನೀಡಿದ ಕಾಣಿಕೆ ಮತ್ತು ಧನಸಹಾಯದ ನಿರ್ವಹಣೆಯಲ್ಲಿ ಭಾರಿ ಪ್ರಮಾಣದ ಆರ್ಥಿಕ ಅಕ್ರಮಗಳು ನಡೆದಿವೆ ಎಂಬ ಗಂಭೀರ ಆರೋಪಗಳು ಕೇಳಿಬಂದಿದ್ದು, ಈ ಕುರಿತು ಕೇಂದ್ರೀಯ ತನಿಖಾ ಸಂಸ್ಥೆಯಿಂದ (ಸಿಬಿಐ) ಸಮಗ್ರ ತನಿಖೆ ನಡೆಸುವಂತೆ ಕೋರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸಲ್ಲಿಸಲಾಗಿದೆ. ಸೂಕ್ಷ್ಮ ಪ್ರಕರಣದ ನೈಜತೆಯನ್ನು ಹೊರತರಲು ಸ್ವತಂತ್ರ ಸಂಸ್ಥೆಯ ತನಿಖೆ ಅತ್ಯಗತ್ಯ ಎಂದು ಅರ್ಜಿಯಲ್ಲಿ ಒತ್ತಾಯಿಸಲಾಗಿದೆ.

ವೈದ್ಯಕೀಯ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್ ಹಂತಹಂತವಾಗಿ ಬಂದ್

ಹೊಸದಿಲ್ಲಿ: ದೇಶದಲ್ಲಿ ವೈದ್ಯಕೀಯ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳನ್ನು ಹಂತಹಂತವಾಗಿ ಸ್ಥಗಿತಗೊಳಿಸಲಾಗುವುದು. ಅವುಗಳ ಬದಲಿಗೆ ಎಂಡಿ ಹಾಗೂ ಎಂಎಸ್‌ನಂತಹ ಪದವಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುವುದು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ತಿಳಿಸಿದೆ.

2026-27ರ ಶೈಕ್ಷಣಿಕ ವರ್ಷವು ಸ್ನಾತಕೋತ್ತರ ಡಿಪ್ಲೊಮಾ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಾತಿಗೆ ಕೊನೆಯ ವರ್ಷವಾಗಿರುತ್ತದೆ. 2027-28ರ ಶೈಕ್ಷಣಿಕ ವರ್ಷದಿಂದ ಪಿಜಿ ಡಿಪ್ಲೊಮಾ ಕೋರ್ಸ್‌ಗಳಿಗೆ ಯಾವುದೇ ಪ್ರವೇಶಾತಿಗಳು ಇರುವುದಿಲ್ಲ ಎಂದು ಎನ್‌ಎಂಸಿ ಪ್ರಕಟಣೆಯಲ್ಲಿ ತಿಳಿಸಿದೆ. ಪಿಜಿ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುತ್ತಿರುವ ಮತ್ತು ಆ ಕೋರ್ಸ್‌ಗಳನ್ನು ಪಿಜಿ ಪದವಿ ಕೋರ್ಸ್‌ಗಳಾಗಿ ಪರಿವರ್ತಿಸಲು ಇಚ್ಛಿಸುವ ಎಲ್ಲಾ ವೈದ್ಯಕೀಯ ಕಾಲೇಜುಗಳು/ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಆನ್‌ಲೈನ್ ಪೋರ್ಟಲ್ ಮೂಲಕ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮಂಡಳಿಗೆ ಅರ್ಜಿಗಳನ್ನು ಸಲ್ಲಿಸುವಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ನೋಟಿಸ್‌ನಲ್ಲಿ ನಿರ್ದೇಶಿಸಲಾಗಿದೆ. ಎಲ್ಲಾ ವೈದ್ಯಕೀಯ ಕಾಲೇಜುಗಳು ಮತ್ತು ಸಂಸ್ಥೆಗಳು ಈ ನಿರ್ದೇಶನಗಳನ್ನು ಪಾಲಿಸುವಂತೆ ಎನ್‌ಎಂಸಿ ಸೂಚಿಸಿದೆ.

ಕೋಚಿಂಗ್ ಸೆಂಟರ್ ಅಗ್ನಿ ದುರಂತ ನಾಲ್ವರು ಅಧಿಕಾರಿಗಳು ಸಸ್ಪೆಂಡ್

ಕಟ್ಟಡದಲ್ಲಿ ಸುರಕ್ಷಾ ನಿಯಮಗಳ ನಿರ್ಲಕ್ಷ್ಯ

ಅಗ್ನಿ ಅವಘಡದಲ್ಲಿ ಮೃತರಿಗೆ ಸ್ಥಳೀಯರು ಶ್ರದ್ಧಾಂಜಲಿ ಸಲ್ಲಿಸಿದರು.

ಲಖನೌ: ಹದಿನೈದು ವಿದ್ಯಾರ್ಥಿಗಳ ಸಾವಿಗೆ ಕಾರಣವಾದ ಉತ್ತರಪ್ರದೇಶದ ಲಖನೌದ ಕೋಚಿಂಗ್ ಸೆಂಟರ್ ಅಗ್ನಿ ದುರಂತಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರನ್ನು ಸಾಕುಪ್ರಾಣಿ ಅಂಗಡಿ ಮಾಲೀಕ ರಾಮಕೃಷ್ಣ ಉಪಾಧ್ಯಾಯ, ಕಟ್ಟಡದ ಮಾಲೀಕ ವಿರೇಂದ್ರ ಪ್ರಸಾದ್ ಶುಕ್ಲಾ, ಅನಿಮೇಷನ್ ಸೆಂಟರ್ ಆಪರೇಟರ್ ತುಷಾರ್ ಕೃಷ್ಣ ಜೈಸ್ವಾಲ್ ಮತ್ತು ಸುರೇಶ್ ಕುಮಾರ್ ಸಾಹು ಎಂದು ಗುರುತಿಸಲಾಗಿದೆ.

ಕರ್ತವ್ಯ ಲೋಪದ ಆಧಾರದ ಮೇರೆಗೆ ಲಖನೌ ಅಭಿವೃದ್ಧಿ ಪ್ರಾಧಿಕಾರ, ಅಗ್ನಿ ಶಾಮಕ ದಳ ಮತ್ತು ವಿದ್ಯುತ್ ಇಲಾಖೆಯ ನಾಲ್ವರು ಅಧಿಕಾರಿಗಳನ್ನು ಸರಕಾರ ಅಮಾನತುಗೊಳಿಸಿದೆ. ಸರಕಾರ ರಚಿಸಿರುವ ಎಸ್ಐಟಿಯೂ ದುರಂತ ಕುರಿತು ತನಿಖೆ ಚುರುಕುಗೊಳಿಸಿದೆ.

ವಸತಿ ಕಟ್ಟಡಕ್ಕೆಂದು ಅನುಮತಿ ಪಡೆದು ಅದರಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು. ಕಟ್ಟಡಕ್ಕೆ ಒಂದೇ ಪ್ರವೇಶ ಮತ್ತು ನಿರ್ಗಮನ ದ್ವಾರವಿತ್ತು. ಹೊಗೆ ಹೊರಹೋಗಲು ಯಾವುದೇ ವ್ಯವಸ್ಥೆಯೂ ಇರಲಿಲ್ಲ, ತುರ್ತು ನಿರ್ಗಮನ ದ್ವಾರವೂ ಇರಲಿಲ್ಲ, ಅಗ್ನಿ ಸುರಕ್ಷತಾ ನಿಯಮಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತು ಎಂದು ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳು ಮತ್ತು ಉತ್ತರಪ್ರದೇಶ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಾಯಿದೆಯ ನಿಬಂಧನೆಗಳಡಿ ಎಫ್ಐಆರ್ ದಾಖಲಿಸಲಾಗಿದೆ. ದುರಂತ ಸ್ಥಳಕ್ಕೆ ವಿಧಿವಿಜ್ಞಾನ ಪ್ರಯೋಗಾಲಯದ ತಂಡವು ಮಂಗಳವಾರ ಭೇಟಿ ಕೊಟ್ಟು ಪರಿಶೀಲನೆ ನಡೆಸಿತು.

2016ರಲ್ಲೇ ಆದೇಶವಿತ್ತು: ದುರಂತ ಸಂಭವಿಸಿದ ಕಟ್ಟಡವನ್ನು ಅನಧಿಕೃತವಾಗಿ ನಿರ್ಮಿಸಲಾಗಿದ್ದು, ಅದನ್ನು ಕೆಡವುವಂತೆ ಲಖನೌ ಅಭಿವೃದ್ಧಿ ಪ್ರಾಧಿಕಾರವು 2016ರಲ್ಲೇ ಆದೇಶ ನೀಡಿತ್ತು. ಆದರೆ ಎರಡು ತಿಂಗಳೊಳಗೆ ಅದನ್ನು ರದ್ದುಗೊಳಿಸಿತ್ತು.

ಅಗತ್ಯ ಬಿದ್ದರೆ ಹರ್ಮುಜ್‌ಗೆ ದಿಗ್ಬಂಧನ

ಸಾಮಾಜಿಕ ಜಾಲತಾಣದಲ್ಲಿ ಇರಾನ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ

ಜಲಸಂಧಿಯಲ್ಲಿ ಮುಕ್ತ ಸಂಚಾರಕ್ಕೆ ಆಗ್ರಹ

ವಾಷಿಂಗ್ಟನ್: ವಿಶ್ವದ ಪ್ರಮುಖ ಜಲಮಾರ್ಗ ಹರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಮುಕ್ತವಾಗಿರಬೇಕು ಎನ್ನುವುದು ನಮ್ಮ ನಿಲುವು. ಆದರೆ, ಅಗತ್ಯ ಬಿದ್ದರೆ ನೌಕಾ ದಿಗ್ಬಂಧನ ಹೇರಲೂ ಹಿಂದೇಟು ಹಾಕುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್‌ಗೆ ಎಚ್ಚರಿಸಿದ್ದಾರೆ.

ತಮ್ಮ ಸಾಮಾಜಿಕ ಜಾಲತಾಣದ ಟ್ರೂಥ್‌ನಲ್ಲಿ ಟ್ರಂಪ್, ''ಇರಾನ್ ಜತೆಗಿನ ಮಾತುಕತೆಯು ಸಕಾರಾತ್ಮಕ ಹಾದಿಯಲ್ಲಿ ಸಾಗುತ್ತಿದೆ. ಹರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತವಾಗಿ ಇರಿಸುವುದಕ್ಕೆ ನನ್ನ ಒಪ್ಪಿಗೆ ಇದೆ. ಸದ್ಯಕ್ಕೆ ಯಾವುದೇ ನೌಕಾ ದಿಗ್ಬಂಧನ ಹೇರುವುದಿಲ್ಲ. ಆದರೆ, ಅಮೆರಿಕದ ನೌಕಾಪಡೆಗಳು ಇದೇ ವಲಯದಲ್ಲಿ ನಿಯೋಜನೆಗೊಂಡಿದ್ದು, ಅಗತ್ಯಬಿದ್ದರೆ ಮತ್ತೆ ನೌಕಾ ದಿಗ್ಬಂಧನ ಹೇರಬಹುದು,'' ಎಂದು ಇರಾನ್‌ಗೆ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ.

''ಇರಾನ್ ಭವಿಷ್ಯದಲ್ಲಿ ಸುದೀರ್ಘ ಅವಧಿಯವರೆಗೆ ಅತ್ಯುನ್ನತ ಮಟ್ಟದ ಪರಮಾಣು ತಪಾಸಣೆಗಳಿಗೆ ಸಂಪೂರ್ಣವಾಗಿ ಒಪ್ಪಿಕೊಂಡಿದೆ. ಈ ಕ್ರಮವು 'ಪರಮಾಣು ಪ್ರಾಮಾಣಿಕತೆ'ಯನ್ನು (ನ್ಯೂಕ್ಲಿಯರ್ ಹಾನೆಸ್ಟಿ) ಖಚಿತಪಡಿಸುತ್ತದೆ,'' ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ.

''ಅಂತಾರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆಯ (ಐಎಇಎ) ತಪಾಸಣಾಧಿಕಾರಿಗಳು ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮಗಳನ್ನು ಪರಿಶೀಲಿಸಲು ಟೆಹರಾನ್ ಒಪ್ಪಿಕೊಂಡಿದೆ,'' ಎಂಬ ಅಮೆರಿಕ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್ ಅವರ ಹೇಳಿಕೆಯನ್ನು ಇರಾನ್ ತಿರಸ್ಕರಿಸಿದ ಬೆನ್ನಲ್ಲೇ ಟ್ರಂಪ್ ಅವರಿಂದ ಮತ್ತೊಮ್ಮೆ ಇಂಥದ್ದೊಂದು ಹೇಳಿಕೆ ಹೊರಬಿದ್ದಿದೆ.

ಹೆಜ್ಬೊಲ್ಲಾ ಇರುವವರೆಗೂ ಲೆಬನಾನ್‌ನಲ್ಲಿ ಇಸ್ರೇಲ್ ಸೇನೆ



ಜೆರುಸಲೇಂ: ''ಲೆಬನಾನ್‌ನಲ್ಲಿ ಹೆಜ್ಬೊಲ್ಲಾ ಬಂಡುಕೋರ ಪಡೆ ಇರುವವರೆಗೂ ನಮ್ಮ ಸೇನೆಯನ್ನು ಹಿಂಪಡೆಯುವುದಿಲ್ಲ,'' ಎಂದು ಇಸ್ರೇಲ್ ಘೋಷಿಸಿದೆ.

''ದಕ್ಷಿಣ ಲೆಬನಾನ್‌ನಲ್ಲಿ ತಾನು ಸ್ವಯಂ ಘೋಷಿಸಿಕೊಂಡಿರುವ 'ಭದ್ರತಾ ವಲಯ'ವನ್ನು ಇಸ್ರೇಲ್ ರಕ್ಷಣಾ ಪಡೆ ಮುಂದುವರಿಸಲಿದೆ,'' ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಂಗಳವಾರ ಹೇಳಿದ್ದಾರೆ.

''ನಮ್ಮ ಸೈನಿಕರು ಮತ್ತು ನಮ್ಮ ನಾಗರಿಕರ ಮೇಲಿನ ಬೆದರಿಕೆಗಳನ್ನು ನಿಷ್ಕ್ರಿಯಗೊಳಿಸಲು, ಭಯೋತ್ಪಾದಕ ಮೂಲಸೌಕರ್ಯಗಳನ್ನು ಧ್ವಂಸಗೊಳಿಸಲು ಮತ್ತು ದಕ್ಷಿಣ ಲೆಬನಾನ್‌ನಲ್ಲಿ 'ಭದ್ರತಾ ವಲಯ' ಕಾಯ್ದುಕೊಳ್ಳಲು ಐಡಿಎಫ್ ದೃಢತೆಯಿಂದ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತದೆ,'' ಎಂದು ನೆತನ್ಯಾಹು ಅವರು ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಅವರೊಂದಿಗಿನ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಮೆರಿಕ ಮೇಲೆ ಅವಲಂಬನೆ ತಗ್ಗಿಸಬೇಕು

ಇರಾನ್ ವಿರುದ್ಧದ ಸೇನಾ ಕಾರ್ಯಾಚರಣೆ ಇನ್ನೂ ಮುಗಿದಿಲ್ಲ ಎಂದು ಹೇಳಿರುವ ಬೆಂಜಮಿನ್ ನೆತನ್ಯಾಹು, ''ಅಮೆರಿಕದ ಮೇಲಿನ ಸೇನಾ ಅವಲಂಬನೆಯನ್ನು ಇಸ್ರೇಲ್ ತಗ್ಗಿಸಬೇಕಿದೆ,'' ಎಂದು ಪ್ರತಿಪಾದಿಸಿದ್ದಾರೆ.

ವೆಸ್ಟ್‌ಬ್ಯಾಂಕ್‌ನಲ್ಲಿ ಸೇನಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ''ಅಮೆರಿಕದ ಸ್ನೇಹಿತರಿಂದ ಇಷ್ಟು ವರ್ಷಗಳಲ್ಲಿ ನಾವು ಪಡೆದಿರುವ ಮತ್ತು ಖಾತ್ರಿಪಡಿಸಿಕೊಂಡಿರುವ ಬೆಂಬಲವನ್ನು ಪ್ರೀತಿಯಿಂದ ಗೌರವಿಸುತ್ತೇನೆ. ಆದರೆ, ಇಂದು ನಮಗೆ ನಮ್ಮದೇ ಆದ ಸ್ವತಂತ್ರ ಶಸ್ತ್ರಾಸ್ತ್ರ ಉತ್ಪಾದನಾ ವ್ಯವಸ್ಥೆಯ ಅಗತ್ಯವಿದೆ. ನಾವು ನಮ್ಮದೇ ಆದ ಯುದ್ಧೋಪಕರಣಗಳನ್ನು ತಯಾರಿಸಬೇಕು. ಇರಾನ್ ಮತ್ತು ಅದರ ಬೆಂಬಲಿತ ಗುಂಪುಗಳನ್ನು ಎದುರಿಸಲು ಇಸ್ರೇಲ್ ಸ್ವತಂತ್ರವಾದ ಶಸ್ತ್ರಾಸ್ತ್ರ ಉತ್ಪಾದನಾ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಅಗತ್ಯವಿದೆ,'' ಎಂದು ಹೇಳಿರುವುದಾಗಿ 'ದಿ ಟೈಮ್ಸ್ ಆಫ್ ಇಸ್ರೇಲ್' ವರದಿ ಮಾಡಿದೆ.

43% ಮುಂಗಾರು ಕೊರತೆ, 111 ಜಿಲ್ಲೆಗೆ ಅಪಾಯ

ಕರ್ನಾಟಕ ಸೇರಿ ವಿವಿಧ ರಾಜ್ಯಗಳ 315 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಸಾಧ್ಯತೆ

ಹೊಸದಿಲ್ಲಿ: ಎಲ್ ನಿನೋ ಪ್ರಭಾವದಿಂದ ಶೇ. 43ರಷ್ಟು ಮುಂಗಾರು ಮಳೆ ಕೊರತೆಯಾಗಿದ್ದು, ಇದು ಮುಂಗಾರು ಅವಧಿಯ ಬಿತ್ತನೆ ಮೇಲೆ ಪರಿಣಾಮ ಬೀರಿದೆ. ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳ 315 ಜಿಲ್ಲೆಗಳಲ್ಲಿ ತೀವ್ರ ಮಳೆ ಕೊರತೆಯಾಗಬಹುದು ಎಂದು ಕೇಂದ್ರ ಸರಕಾರ ಎಚ್ಚರಿಸಿದೆ. ಅದರಲ್ಲೂ 111 ಜಿಲ್ಲೆಗಳನ್ನು ಅತ್ಯಂತ ಸೂಕ್ಷ್ಮ/ಅಪಾಯದ ಪಟ್ಟಿಗೆ ಸೇರಿಸಲಾಗಿದೆ.

ಮಂಗಳವಾರ ನಡೆದ ಮುಂಗಾರು ಪ್ರಗತಿ ಪರಿಶೀಲನಾ ಸಭೆ ನಂತರ ಸುದ್ದಿಗಾರರ ಜತೆ ಮಾಡಿದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು, ''ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನ, ಕರ್ನಾಟಕ, ಬಿಹಾರ, ಜಾರ್ಖಂಡ್, ತೆಲಂಗಾಣ, ಆಂಧ್ರಪ್ರದೇಶ ಮತ್ತು ಒಡಿಶಾ ರಾಜ್ಯಗಳ 315 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೃಷಿ ಸಚಿವಾಲಯ ಗುರುತಿಸಿದೆ. ಸದ್ಯದ ಹವಾಮಾನ ನೋಡಿದರೆ, ದುರ್ಬಲ ಮುಂಗಾರು ಪರಿಸ್ಥಿತಿಯು ಜುಲೈ 2ರವರೆಗೆ ಮುಂದುವರಿಯುವ ಸಾಧ್ಯತೆಯಿದೆ,'' ಎಂದು ಮಾಹಿತಿ ನೀಡಿದರು.

ಮಳೆ ಕೊರತೆಯ ಪರಿಸ್ಥಿತಿಗೆ ಅನುಗುಣವಾಗಿ ಪರ್ಯಾಯ ಬೆಳೆಗಳನ್ನು ಶಿಫಾರಸು ಮಾಡುವ ರಾಜ್ಯವಾರು ತುರ್ತು ಯೋಜನೆಗಳನ್ನು ಸಚಿವಾಲಯ ಸಿದ್ಧಪಡಿಸಿದೆ. ಕಡಿಮೆ ನೀರಿನ ಅವಶ್ಯಕತೆ ಇರುವ ಬೇಳೆಕಾಳುಗಳು, ಎಣ್ಣೆಕಾಳುಗಳು ಮತ್ತು ಸಿರಿಧಾನ್ಯಗಳನ್ನು ಬೆಳೆಯಲು ರೈತರಿಗೆ ಉತ್ತೇಜಿಸುವಂತೆ ರಾಜ್ಯಗಳಿಗೆ ಸಚಿವಾಲಯ ಈಗಾಗಲೇ ಸೂಚನೆ ನೀಡಿದೆ. ನೈಜ-ಸಮಯದ ಮೇಲ್ವಿಚಾರಣೆ ಮತ್ತು ಸಲಹೆಗಳಿಗಾಗಿ ಕೃಷಿ ಸಚಿವಾಲಯವು 'ಎಲ್ ನಿನೋ ಮಾನಿಟರಿಂಗ್ ಸೆಲ್' ಮತ್ತು 'ಕ್ರಾಪ್ ವೆದರ್‌ವಾಚ್ ಗ್ರೂಪ್' ಅನ್ನು ಸ್ಥಾಪಿಸಿದೆ.

''ಎಲ್ಲವನ್ನೂ ಅರ್ಥಪೂರ್ಣವಾಗಿಸುವ ವ್ಯಕ್ತಿ ವಿಜಯ್''

ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ಫೋಟೊ ಪೋಸ್ಟ್ ಮಾಡಿರುವ ನಟಿ ತ್ರಿಶಾ ಅವರು ತಮಿಳುನಾಡು ಸಿಎಂ ಜೋಸೆಫ್ ವಿಜಯ್ ಅವರಿಗೆ ಜನ್ಮದಿನದ ಶುಭಾಶಯ ಕೋರಿದ್ದಾರೆ.

ಪೆರಿಯಾರ್‌ರ ಎಲ್ಲ ವಿಚಾರ ಒಪ್ಪಲ್ಲ, ದೇವರ ಮೇಲೆ ನಂಬಿಕೆ ಇದೆ

ವಿಧಾನಸಭೆಯಲ್ಲಿ ತಮಿಳುನಾಡು ಸಿಎಂ ವಿಜಯ್ ಸ್ಪಷ್ಟನೆ

ಚೆನ್ನೈ: ''ದ್ರಾವಿಡ ರಾಜಕಾರಣದ ಪಿತಾಮಹ ಎಂದು ಕರೆಯಲಾಗುವ ಪೆರಿಯಾರ್ ಇ.ವಿ. ರಾಮಸ್ವಾಮಿ ಅವರ ವಿಶಾಲ ಸಾಮಾಜಿಕ ತತ್ವಗಳನ್ನು ನಮ್ಮ ಪಕ್ಷವು ಅಳವಡಿಸಿಕೊಂಡಿದೆ. ಆದರೆ, ನಾಸ್ತಿಕತೆ ಮತ್ತು ಧಾರ್ಮಿಕ ನಂಬಿಕೆಗಳ ತಿರಸ್ಕಾರದ ಬಗೆಗಿನ ಅವರ ನಿಲುವನ್ನು ಪಕ್ಷವು ಒಪ್ಪುವುದಿಲ್ಲ,'' ಎಂದು ಟಿವಿಕೆ ಮುಖ್ಯಸ್ಥ ಹಾಗೂ ತಮಿಳುನಾಡು ಸಿಎಂ ಸಿ.ಜೋಸೆಫ್ ವಿಜಯ್ ಹೇಳಿದರು.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ವಿಜಯ್, ಪೆರಿಯಾರ್ ಅವರ ವೈಚಾರಿಕ ನಿಲುವು ಮತ್ತು ತಮ್ಮ ಪಕ್ಷದ ಧೋರಣೆ ನಡುವಿನ ವ್ಯತ್ಯಾಸದ ಎಳೆಯನ್ನು ಸ್ಪಷ್ಟಪಡಿಸಿದರು.

''ಧಾರ್ಮಿಕ ನಂಬಿಕೆಗಳನ್ನು ತಿರಸ್ಕರಿಸುವ ಪೆರಿಯಾರ್ ಅವರ ವಿಚಾರಧಾರೆಯನ್ನು ನಮ್ಮ ಪಕ್ಷವು ಒಪ್ಪಿಕೊಂಡಿಲ್ಲ, ಆದರೆ, ಅವರ ವಿಶಾಲ ಸಾಮಾಜಿಕ ತತ್ವಗಳ ಬೋಧನೆಯನ್ನು ನಾವು ಸ್ವೀಕರಿಸಿದ್ದೇವೆ ಮತ್ತು ಅಳವಡಿಸಿಕೊಂಡಿದ್ದೇವೆ. ನಾವು ದೇವರನ್ನು ನಂಬುವವರು ಎಂಬುದನ್ನೂ ಸ್ಪಷ್ಟಪಡಿಸಿದ್ದೇವೆ. ಒಂದಂತೂ ಸತ್ಯ, ನಾವು ಯಾರ ಸಿದ್ಧಾಂತಕ್ಕೂ ವಿರುದ್ಧವಾಗಿಲ್ಲ,'' ಎಂದರು.

''ನಮ್ಮ ಸರಕಾರವು ಪೆರಿಯಾರ್, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ತಮಿಳುನಾಡಿನ ಮಾಜಿ ಸಿಎಂ ಕೆ. ಕಾಮರಾಜ್ ಸೇರಿದಂತೆ ವಿವಿಧ ನೇತಾರರ ಸೈದ್ಧಾಂತಿಕ ವಿಚಾರಗಳ ಮಿಶ್ರಣದಿಂದ ಪ್ರೇರಣೆ ಪಡೆದಿದೆ. ನಾವು ಅಂಬೇಡ್ಕರ್ ಅವರ ಸಮಾನ ಅವಕಾಶ ಮತ್ತು ಸಾಮಾಜಿಕ ನ್ಯಾಯದ ಆದರ್ಶಗಳನ್ನು ಒಪ್ಪಿಕೊಂಡಿದ್ದೇವೆ. ಕಾಮರಾಜ್ ಅವರ ಪ್ರಾಮಾಣಿಕ ಆಡಳಿತದ ಮಾದರಿಯನ್ನು ನಮ್ಮ ಮಾರ್ಗದರ್ಶಿ ಸೂತ್ರವಾಗಿ ಅಳವಡಿಸಿಕೊಂಡಿದ್ದೇವೆ,'' ಎಂದರು. ತಮ್ಮ ಪಕ್ಷ ಎದುರಿಸಿದ ಸವಾಲುಗಳ ಬಗ್ಗೆ ಮಾತನಾಡಿದ ವಿಜಯ್, ತಮ್ಮ ಆಡಳಿತವನ್ನು ಸಿ.ಎನ್. ಅಣ್ಣಾದೊರೈ ಮತ್ತು ಎಂ.ಜಿ. ರಾಮಚಂದ್ರನ್ ನೇತೃತ್ವದ ಸರಕಾರಗಳಿಗೆ ಹೋಲಿಸಿದರು.

ನೀಟ್‌ಗೆ ವಿರೋಧ

''ಪ್ರಶ್ನೆಪತ್ರಿಕೆ ಸೋರಿಕೆ ಸೇರಿ ಹಲವು ಅಕ್ರಮಗಳಿಂದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ವಿಶ್ವಾಸಾರ್ಹತೆ ಕುಂದಿದ್ದು, ವಿದ್ಯಾರ್ಥಿಗಳ ಮೇಲೆ ಒತ್ತಡ ಸೃಷ್ಟಿಸಿದೆ. ಅಸಮಾನತೆ ಸೃಷ್ಟಿಸುವ ನೀಟ್ ರದ್ದುಗೊಳಿಸಿ 12ನೇ ತರಗತಿ ಅಂಕಗಳ ಆಧಾರದ ಮೇಲೆ ವೈದ್ಯಕೀಯ ಕಾಲೇಜು ಪ್ರವೇಶ ನೀಡಬೇಕು ಎಂಬ ನಿಲುವನ್ನು ಸರಕಾರ ಪುನರುಚ್ಚರಿಸುತ್ತದೆ. ಹಾಗೆಯೇ ರಾಜ್ಯದಲ್ಲಿ ದ್ವಿಭಾಷಾ ನೀತಿ ಮುಂದುವರಿಸಲು ನಾವು ಬದ್ಧರಾಗಿದ್ದೇವೆ,'' ಎಂದು ಸಿಎಂ ಜೋಸೆಫ್ ವಿಜಯ್ ಸ್ಪಷ್ಟಪಡಿಸಿದರು.

ಕೈ ಸನ್ನೆ, ಡಿಎಂಕೆ ಸಭಾತ್ಯಾಗ

ಭಾಷಣದ ಒಂದು ಹಂತದಲ್ಲಿ ಹಿಂದಿನ ಸರಕಾರದ ಅವಧಿಯಲ್ಲಿ 'ಪಕ್ಷದ ನಿಧಿ' ಹೆಸರಿನಲ್ಲಿ ದೊಡ್ಡ ಪ್ರಮಾಣದ ಭ್ರಷ್ಟಾಚಾರ ನಡೆದಿದೆ ಎಂದು ವಿಜಯ್ ಆರೋಪಿಸಿದರು. ಇದೇ ವೇಳೆ ಅವರು ಮಾಡಿದ ಕೈ ಸನ್ನೆಯು ಪ್ರತಿಪಕ್ಷ ಡಿಎಂಕೆ ಸದಸ್ಯರ ಸಭಾತ್ಯಾಗಕ್ಕೆ ಕಾರಣವಾಯಿತು. ಈ ವರ್ಷದ ಆರಂಭದಲ್ಲಿ ಡಿಎಂಕೆ ಪ್ರಧಾನ ಕಚೇರಿಯಲ್ಲಿ ಕಾಂಗ್ರೆಸ್ ಜತೆಗಿನ ಸೀಟು ಹಂಚಿಕೆ ಮಾತುಕತೆ ಪೂರ್ಣಗೊಂಡ ನಂತರ, ಮಾಜಿ ಸಿಎಂ ಎಂ.ಕೆ. ಸ್ಟಾಲಿನ್ ಮಾತುಕತೆ ಯಶಸ್ವಿಯಾಗಿದೆ ಎಂದು ಸಾರಲು ಮಾಧ್ಯಮಗಳತ್ತ ಕೈ ಎತ್ತಿ ಸನ್ನೆ ಮಾಡಿದ್ದರು. ಈಗ ವಿಜಯ್ ಅವರು ವಿಧಾನಸಭೆಯಲ್ಲಿ ಅದೇ ರೀತಿ ಕೈ ಸನ್ನೆ ಮಾಡಿರುವುದು ರಾಜಕೀಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಪಾಕ್ ನಾಟಕ ಬಯಲು, ನಮ್ಮ 36 ರಫೇಲ್ ಸೇಫ್

ಹೊಸದಿಲ್ಲಿ: ಆಪರೇಷನ್ ಸಿಂದೂರ ಸಂದರ್ಭದಲ್ಲಿ ಭಾರತೀಯ ವಾಯುಪಡೆಯ ರಫೇಲ್ ಯುದ್ಧ ವಿಮಾನಗಳನ್ನು ಹೊಡೆದು ಉರುಳಿಸಿದ್ದೇವೆ ಎಂದು ಜಾಗತಿಕ ವೇದಿಕೆಗಳಲ್ಲಿ ಸತತವಾಗಿ ಸುಳ್ಳು ಪ್ರಚಾರ ಮಾಡುತ್ತಿದ್ದ ಪಾಕಿಸ್ತಾನಕ್ಕೆ ಭಾರಿ ಮುಖಭಂಗವಾಗಿದೆ. ಫ್ರಾನ್ಸ್‌ನಿಂದ ಭಾರತ ಖರೀದಿಸಿದ್ದ ಎಲ್ಲಾ 36 ರಫೇಲ್ ಯುದ್ಧ ವಿಮಾನಗಳೂ ಸುರಕ್ಷಿತವಾಗಿದ್ದು, ಸಂಪೂರ್ಣವಾಗಿ ಕಾರ್ಯಾಚರಣೆಯಲ್ಲಿವೆ ಎಂದು ಭಾರತೀಯ ವಾಯುಪಡೆಯ ಅಧಿಕೃತ ದಾಖಲೆಗಳು ಸಾಬೀತುಪಡಿಸಿವೆ.

ಜೂನ್ 15ರಂದು ವಾಯುಪಡೆ ಪ್ರಧಾನ ಕಚೇರಿಯ ಎಂಜಿನಿಯರಿಂಗ್ ನಿರ್ದೇಶನಾಲಯವು ಫ್ರಾನ್ಸ್‌ನ ರಫೇಲ್ ವಿಮಾನದ ಎಂಜಿನ್ ತಯಾರಕ ಸಂಸ್ಥೆ ಸಫ್ರಾನ್ ಏರ್‌ಕ್ರಾಫ್ಟ್ ಎಂಜಿನ್ಸ್‌ಗೆ ತಾಂತ್ರಿಕ ಬೆಂಬಲ ಪ್ಯಾಕೇಜ್‌ಗಾಗಿ ಪ್ರಸ್ತಾಪ ಸಲ್ಲಿಸಿದೆ. ಈ ಅಧಿಕೃತ ದಾಖಲೆಯಲ್ಲಿ, 2016 ರ ಭಾರತ-ಫ್ರಾನ್ಸ್ ಒಪ್ಪಂದದಡಿ ಖರೀದಿಸಲಾದ ಎಲ್ಲಾ 36 ರಫೇಲ್ ಯುದ್ಧ ವಿಮಾನಗಳನ್ನು ಭಾರತೀಯ ವಾಯುಪಡೆಯು ಸಕ್ರಿಯವಾಗಿ ಬಳಸುತ್ತಿರುವುದನ್ನು ಉಲ್ಲೇಖಿಸಲಾಗಿದೆ. ಅಷ್ಟೇ ಅಲ್ಲದೆ, 2026ರ ಸೆಪ್ಟೆಂಬರ್ ನಂತರವೂ ರಫೇಲ್ ಫ್ಲೀಟ್‌ನ ನಿರಂತರ ಕಾರ್ಯಾಚರಣೆಗಾಗಿ ತಾಂತ್ರಿಕ ಮತ್ತು ನಿರ್ವಹಣಾ ಬೆಂಬಲದ ಅಗತ್ಯವಿದೆ ಎಂದು ಈ ದೀರ್ಘಕಾಲದ ಯೋಜನಾ ಪತ್ರದಲ್ಲಿ ತಿಳಿಸಲಾಗಿದೆ. ಮುಂದಿನ ಐದು ತಿಂಗಳ ಅವಧಿಯಲ್ಲಿ ಎಲ್ಲಾ 36 ರಫೇಲ್ ಯುದ್ಧ ವಿಮಾನಗಳ ಕಾರ್ಯಾಚರಣೆಯ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಈ ತಾಂತ್ರಿಕ ಪ್ಯಾಕೇಜ್ ಅನ್ನು ರೂಪಿಸಲಾಗಿದೆ.

ಟೆಂಡರ್ ಪತ್ರದ ಪ್ರಕಾರ, ಪ್ರತಿ ರಫೇಲ್ ವಿಮಾನವು ವಾರ್ಷಿಕವಾಗಿ ಸರಾಸರಿ 150 ಗಂಟೆಗಳ ಕಾಲ ಹಾರಾಟ ನಡೆಸುವ ನಿರೀಕ್ಷೆಯಿದೆ. ಈ ಲೆಕ್ಕಾಚಾರದ ಆಧಾರದ ಮೇಲೆ, ಐದು ತಿಂಗಳ ಅವಧಿಯಲ್ಲಿ ಇಡೀ ರಫೇಲ್ ಫ್ಲೀಟ್ ಒಟ್ಟಾರೆಯಾಗಿ ಸುಮಾರು 2,250 ಗಂಟೆಗಳ ಕಾಲ ಹಾರಾಟ ನಡೆಸಲು ಯೋಜಿಸಲಾಗಿದೆ.

ಜುಲೈಗೆ 31.24 ಟಿಎಂಸಿ ನೀರು ಹರಿಸಿ: ತಮಿಳುನಾಡು ಒತ್ತಡ

ಹೊಸದಿಲ್ಲಿ: ಕರ್ನಾಟಕದಲ್ಲಿ ಮುಂಗಾರು ಮಳೆ ಕೊರತೆ ಎದುರಾಗಿರುವ ಬೆನ್ನಿಗೇ ಕಾವೇರಿ ನೀರಿನ ವಿಚಾರವಾಗಿ ತಮಿಳುನಾಡು ಕ್ಯಾತೆ ತೆಗೆದಿದೆ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಜೂನ್ ತಿಂಗಳ ನೀರಿನ ಜತೆಗೆ ಜುಲೈನಲ್ಲಿ 31.24 ಟಿಎಂಸಿ ನೀರು ಹರಿಸಲು ನಿರ್ದೇಶನ ನೀಡುವಂತೆ ತಮಿಳುನಾಡು ತೀವ್ರ ಒತ್ತಡ ಹಾಕಿದೆ. ಜೂನ್ ತಿಂಗಳಲ್ಲಿ 9.19 ಟಿಎಂಸಿ ನೀರು ಹರಿಸಬೇಕಿತ್ತು. ಈವರೆಗೂ 2.6 ಟಿಎಂಸಿ ನೀರು ಮಾತ್ರ ಹರಿಸಲಾಗಿದೆ. ಈವರೆಗೂ ನಾಲ್ಕು ಟಿಎಂಸಿ ನೀರು ಕಡಿಮೆ ಹರಿಸಿದೆ. ನಮ್ಮ ಜಲಾಶಯಗಳಲ್ಲಿ ನೀರಿಲ್ಲ ಎನ್ನುವ ಕರ್ನಾಟಕದ ವಾದ ಒಪ್ಪಲು ಸಾಧ್ಯವಿಲ್ಲ. ಫೆಬ್ರವರಿಯಿಂದ ಮೇವರೆಗೂ ಹೆಚ್ಚಿನ ನೀರು ಕರ್ನಾಟಕ ಬಳಕೆ ಮಾಡಿದೆ. ಹೀಗಾಗಿ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿದೆ ಎಂದು ತಮಿಳುನಾಡು ವಾದಿಸಿದೆ. ಇದರಿಂದಾಗಿ ಜೂನ್ ತಿಂಗಳ ನೀರಿನ ಜತೆಗೆ ಜುಲೈ ತಿಂಗಳ 31.24 ಟಿಎಂಸಿ ನೀರು ಹರಿಸಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ತಮಿಳುನಾಡು ಸರಕಾರದ ಪ್ರತಿನಿಧಿಗಳು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮನವಿ ಮಾಡಿದ್ದಾರೆ. ಸಭೆಯಲ್ಲಿ ತಮಿಳುನಾಡು, ಕರ್ನಾಟಕ, ಪುದುಚೆರಿ, ಕೇರಳದ ಪ್ರತಿನಿಧಿಗಳು ಭಾಗಿಯಾಗಿದ್ದರು.

ನಗರಸಭಾ ಕಾರ್ಯಾಲಯ ಹೊಸಪೇಟೆ.

No:60095/CMC HOSPETE/TENDER/2026-27

Dated: 22-06-2026

ಟೆಂಡರಿಗಾಗಿಆಹ್ವಾನ (ಐ.ಎಫ್.ಟಿ.) ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೋಕ್ಯೂರಮೆಂಟ್ ಮುಖಾಂತರ)

2022-23 ನೇ ಸಾಲಿನ ಡಿಎಂಎಫ್ ನಿಧಿಅನುದಾನದಡಿಯಲ್ಲಿಈ ಕೆಳಗಿನ ಕೆಲಸಕ್ಕಾಗಿಸೂಕ್ತ ದರ್ಜೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಗುತ್ತಿಗೆದಾರರುತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ-ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ- ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:29-06-2026 ಸಂಜೆ 5.00 ಗಂಟೆ ವರೆಗೆ,ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:30-06-2026 ಸಂಜೆ 5.30ಗಂಟೆ ವರೆಗೆಟೆಂಡರ್‌ಗಳನ್ನು ತೆರೆಯುವ ಸ್ಥಳನಗರಸಭೆ, ಹೊಸಪೇಟೆ. ಕಾಮಗಾರಿಯ ವಿವರ: Providing and Laying HDPE Pipe line Balance Network for Siddalingappa Chowki, Rajajinagar, Sameer Layout, Aravind Nagar, Valisab layout, Meenakshi Layout and other Lanes At Ward No 09 in Hosapete City.(DMA/2026-27/WT/WORK_INDENT60095) ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 50.00 ಗಳು

ಸಹಿ/-ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನಗರಸಭೆ, ಹೊಸಪೇಟೆ. | ಸಹಿ/-ಪೌರಾಯುಕ್ತರು ನಗರಸಭೆ, ಹೊಸಪೇಟೆ

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/152

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು,

ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ, ಗದಗ

ಕಾ.ಇ: ಗ್ರಾ.ಕು.ನೀ&ನೈ.ವಿ/ಗದಗ/ ಕಿ.ಇಂ/ಟೆಂಡರ್/2026-27/419 | ದಿನಾಂಕ: 23.06.2026

ಟೆಂಡರ್ ಪ್ರಕಟಣೆ

ಪಂಚಾಯತ ರಾಜ್ ಇಂಜಿನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಈ ಕೆಳಗಿನ ಕಾಮಗಾರಿಯ ಟೆಂಡರನ್ನು "ಇ ಪ್ರೊಕ್ಯುರಮೆಂಟ್-2" ಮುಖಾಂತರ ಕರೆಯಲಾಗಿದೆ.

ಕ. ಸಂ	ಇಂಡೆಂಟ್ ಸಂಖ್ಯೆ/ಕಾಮಗಾರಿಯ ಹೆಸರು	ಟೆಂಡರಗಿಟ್ಟ ಮೊತ್ತ	ಮುಂಗಡ ಠೇವಣಿ ಮೊತ್ತ
1	RWSSD/2026-27/RT/WORK_INDENT10252	246.74 ಲಕ್ಷಗಳು	247000.00

ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ ಪ್ರೋಕ್ಯೂರಮೆಂಟ್ " ವೆಬ್‌ಸೈಟ್ **https://KPPP.karnataka.gov.in** ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ: **24.06.2026**, ಪೂರ್ವಭಾವಿ ಸಭೆ ದಿನಾಂಕ **29.06.2026**, ಪ್ರಶ್ನೋತ್ತರದ ಕೊನೆಯ ದಿನಾಂಕ : **07.07.2026** ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **08.07.2026** ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕ: **10.07.2026** ಆರ್ಥಿಕ ಟೆಂಡರ ಬಿಡ್ ತೆರೆಯುವ ದಿನಾಂಕ: **13.07.2026.**

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,

ವಾಸಾಸಂಇ/ಗದಗ/135/ಕೆಎಸ್ಎಂಸಿಎ/2026-27 | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಆಯುಕ್ತರ ಕಾರ್ಯಾಲಯ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18, ದೂರವಾಣಿ:26709689/ 26706775, Email: endowmentcommissioner@gmail.com.

ಸಂಖ್ಯೆ: HRICE-ADM0ADM8/51/2026/E-2047124 | ದಿನಾಂಕ : 22.06.2026

ಪ್ರಕಟಣೆ

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಕಲಂ 25 ಅನ್ವಯ ರಚಿಸಲಾಗಿದ್ದ ಈ ಕೆಳಕಂಡ 01 "ಎ" ಪ್ರವರ್ಗದ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅವಧಿಯು ಸದರಿ ದೇವಾಲಯದ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಮುಕ್ತಾಯವಾಗಿರುವುದರಿಂದ ಸದರಿ ದೇವಾಲಯಕ್ಕೆ ಹೊಸದಾಗಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಸಲುವಾಗಿ ಸಾರ್ವಜನಿಕ / ಭಕ್ತಾಧಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಪ್ರಕಟಣೆ ಹೊರಡಿಸಲು **ದಿನಾಂಕ:17.03.2025**ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 8ನೇ ಸಭೆಯ ವಿಷಯ ಸೂಚಿ ಸಂಖ್ಯೆ:(3)ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ವಿಳಾಸ	ಮೂರು ವರ್ಷಗಳ ವ್ಯವಸ್ಥಾಪನಾ ಸಮಿತಿಯ ಅವಧಿಯು ಮುಕ್ತಾಯವಾದ ದಿನಾಂಕ
1	ಕೋಲಾರ ಜಿಲ್ಲೆ, ಬಂಗಾರಪೇಟೆ, ಗುಟ್ಟಹಳ್ಳಿ ಗ್ರಾಮ, ಬಂಗಾರುತಿರುಪತಿ, ಶ್ರೀ ವೆಂಕಟರಮಣ ಸ್ವಾಮಿ ದೇವಾಲಯ.	17.12.2025

ಈ ಕೆಳಕಂಡ 01 ಸಂಯುಕ್ತ ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯ ಅವಧಿಯು ಸಹ ಸದರಿ ಸಂಸ್ಥೆಯ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಮುಕ್ತಾಯವಾಗಿರುವುದರಿಂದ ಸದರಿ ಸಂಸ್ಥೆಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಕಲಂ 25(1)ರಡಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಈ ಎರಡೂ ಧರ್ಮದ ಭಕ್ತಾಧಿಗಳು ಮತ್ತು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ, ಪ್ರಕಟಣೆ ಹೊರಡಿಸಲು **ದಿನಾಂಕ:17.03.2026ರಂದು** ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 11ನೇ ಸಭೆಯ ವಿಷಯ ಸೂಚಿ ಸಂಖ್ಯೆ:(8)ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ವಿಳಾಸ	ಮೂರು ವರ್ಷಗಳ ವ್ಯವಸ್ಥಾಪನಾ ಸಮಿತಿಯ ಅವಧಿಯು ಮುಕ್ತಾಯವಾದ ದಿನಾಂಕ
2	ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಐ.ಡಿ ಪೀಠ, ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ.	17.12.2025

ಹಾಗೂ ಈ ಕೆಳಕಂಡ 13 ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸುವ ಸಂಬಂಧ ಅರ್ಜಿ ಆಹ್ವಾನಿಸಿ ಹೊರಡಿಸಿದ ಪ್ರಕಟಣೆಗೆ ನಿಗದಿತ ಅವಧಿಯಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾದ ಕಾರಣ ಎರಡನೇ ಬಾರಿ ಮರು ಪ್ರಕಟಣೆ ಹೊರಡಿಸಿ ಅರ್ಜಿ ಆಹ್ವಾನಿಸಲು ಮತ್ತು ಪ್ರಕಟಣೆಯನ್ನು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಚುರ ಪಡಿಸುವಂತೆ **ದಿನಾಂಕ:17.03.2026** ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯ ವಿಷಯ ಸೂಚಿ ಸಂಖ್ಯೆ:(8)ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ವಿಳಾಸ
3	ಬೆಂಗಳೂರು ನಗರ ಜಿಲ್ಲೆ, ನಗರ್ತರಪೇಟೆ, ಶ್ರೀ ವೆಂಕಟರಣಸ್ವಾಮಿ ದೇವಾಲಯ.
4	ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ದೊಡ್ಡದಾಳವಟ್ಟ ಗ್ರಾಮದ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ದೇವಾಲಯ.
5	ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಎತ್ತಿನಬೂದಿಹಾಳ್, ಶ್ರೀ ಕಟ್ಟೆ ಬಸವೇಶ್ವರ ಸ್ವಾಮಿ ದೇವಾಲಯ,
6	ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ಮಾಲೇಕಲ್, ತಿರುಪತಿ, ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ.
7	ತುಮಕೂರು ಜಿಲ್ಲೆ, ಮಧುಗಿರಿ ಟೌನ್, ಶ್ರೀ ದಂಡಿನ ಮಾರಮ್ಮ ದೇವಾಲಯ.
8	ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ರಜತಾದ್ರಿಪುರ, ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಾಲಯ
9	ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಪಾಂಡೇಶ್ವರ, ಶ್ರೀ ಮಹಾ ಲಿಂಗೇಶ್ವರ ಸ್ವಾಮಿ ದೇವಾಲಯ.
10	ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಡಿಂಕಾ, ಶ್ರೀ ಡಿಂಕದಮ್ಮ ದೇವಾಲಯ.
11	ಮಂಡ್ಯ ಜಿಲ್ಲೆ, ಕೆ.ಆರ್ ಪೇಟೆ ತಾಲ್ಲೂಕು, ಸಾಸಲು ಗ್ರಾಮ, ಶ್ರೀ ಸೋಮೇಶ್ವರ ಮತ್ತು ಶಂಭುಲಿಂಗೇಶ್ವರ ಸ್ವಾಮಿ ದೇವಾಲಯ.
12	ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಲ್ಲುವೀರನಹಳ್ಳಿ ಗ್ರಾಮ, ಶ್ರೀ ಮತ್ತಿ ತಾಳೇಶ್ವರ ಸ್ವಾಮಿ ದೇವಾಲಯ,
13	ಶ್ರೀ ಗವಿರಂಗನಾಥಸ್ವಾಮಿ ದೇವಾಲಯ, ಬಿಲ್ಲೇನಹಳ್ಳಿ, ಕೆ.ಆರ್ ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
14	ವಿಜಯನಗರ ಜಿಲ್ಲೆ, ಮರಿಯಮ್ಮನಹಳ್ಳಿ, ಶ್ರೀಲಕ್ಷ್ಮೀ ನಾರಾಯಣ ದೇವಾಲಯ.
15	ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಶ್ರೀ ಕೋಟೆ ಮಲ್ಲೇಶ್ವರ ಸ್ವಾಮಿ ದೇವಾಲಯ,

ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಗಳ ನಿರ್ಣಯಗಳಂತೆ ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆಗೊಂಡಿರುವಂತೆ ಈ ಮೇಲ್ಕಂಡ ಒಟ್ಟು 15 "ಎ" ಪ್ರವರ್ಗದ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ 25 ರಂತೆ ಪ್ರಸ್ತಾಪಿತ ದೇವಾಲಯಗಳಿಗೆ 09 ಮಂದಿ ಮಹನೀಯರು / ಮಹಿಳೆಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಸಂಬಂಧ ಸಮಿತಿಗೆ ಸದಸ್ಯತ್ವ ಬಯಸುವ ಆಸಕ್ತ ಭಕ್ತಾಧಿಗಳು /ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ, ಪ್ರಕಟಣೆ ಹೊರಡಿಸಿದೆ.

ಸದರಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಗೆ ಕನಿಷ್ಟ 25 ವರ್ಷಕ್ಕಿಂತ ಮೇಲ್ಪಟ್ಟ ಆಸ್ತಕ ಭಕ್ತಾಧಿಗಳು ಸದಸ್ಯತ್ವ ಕೋರಿ, ಅರ್ಜಿಯನ್ನು ನಿಗದಿತ ನಮೂನೆ-1(ಬಿ)(22ನೇ ನಿಯಮ) ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯನ್ನು **ದಿನಾಂಕ:13.07.2026**ರೊಳಗಾಗಿ **"ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018**" ಇಲ್ಲಿಗೆ ನೇರವಾಗಿ ಸಲ್ಲಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ನಿಗದಿತ ಅವಧಿಯ ನಂತರದಲ್ಲಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ನಿಗದಿತ ಅರ್ಜಿ ನಮೂನೆಯು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು **www.itms.kar.gov.in**ನಲ್ಲಿ ಲಭ್ಯವಿರುತ್ತದೆ.

ಸಹಿ/-

ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ತು ಹಾಗೂ ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

ವಾಸಾಸಂಇ/ವಾ.ಪ್ರ/1309/ಎಸ್ಎಸ್‌ಸಿ/2026-27

ಟ್ರಾಮಾಕೇರ್ ಮತ್ತು ತುರ್ತು ಚಿಕಿತ್ಸಾ ಕೇಂದ್ರ

(ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ)

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

ವಿಶೇಷಾಧಿಕಾರಿಗಳ ಕಛೇರಿ, ಬೆಂಗಳೂರು - 560002.

ವೆಬ್‌ಸೈಟ್: www.teccbmcri.karnataka.gov.in ದೂ: 080-26802725

ಇ-ಮೇಲ್: sploffrtc@gmail.com

No: TCC/Tender/E-Notification /01/2025-26 | Date: 22-06-2026

ಇ-ಟೆಂಡರ್ ಅಧಿಸೂಚನೆ

ಅಪಘಾತ ಮತ್ತು ತುರ್ತು ಚಿಕಿತ್ಸಾ ಕೇಂದ್ರ, ಬೆಂಗಳೂರು ಈ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಸೇವೆಗಳಿಗೆ ಈ ಕೆಳಕಂಡ ಸೇವೆಗಳಿಗೆ ಇ-ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ	ವಿವರ	ವೇಳಾಪಟ್ಟಿ
01	DME/2025-26/ SE0669-CALL 2	ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಕಾರ್ಯ ಸೇವೆ	➢ಇ-ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ: 22.06.2026
02	DME/2025-26/ SE0670-CALL 2	ಹೊರಗುತ್ತಿಗೆ ಆಧಾರದ ಮೇಲೆ ವಾರ್ಡ್ ಅಟೆಂಡರ್‌ಗಳ ಸೇವೆ	➢ಇ-ಟೆಂಡರ್ ಕುರಿತು ಪ್ರಿ-ಬಿಡ್ ಮೀಟಿಂಗ್ ದಿನಾಂಕ: 29.06.2026 ಮಧ್ಯಾಹ್ನ 3.00 ಗಂಟೆಗೆ
03	DME/2025-26/ SE0671-CALL 2	ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆ	➢ಇ-ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 07.07.2026 ಸಂಜೆ 5.00 ಗಂಟೆವರೆಗೆ
04	DME/2025-26/ SE0672-CALL 2	ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇವೆ	➢ಇ-ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.07.2026 ಬೆಳಿಗ್ಗೆ 11.00 ಗಂಟೆಗೆ

ಟೆಂಡರ್ ವಿವರಗಳನ್ನು https://www.kppp.karnataka.gov.in ಈ ವೆಬ್‌ಸೈಟಿನಲ್ಲಿ ವೀಕ್ಷಿಸಿ, ಟೆಂಡರ್‌ಗಳನ್ನು ಸಲ್ಲಿಸಬಹುದು ಮತ್ತು ಹೆಚ್ಚಿನ ವಿವರಗಳಿಗಾಗಿ ವಿಶೇಷಾಧಿಕಾರಿಗಳು, ಅಪಘಾತ ಮತ್ತು ತುರ್ತು ಚಿಕಿತ್ಸಾ ಕೇಂದ್ರ, ಬಿಎಂಸಿಆರ್ಐ, ದೂರವಾಣಿ: 080-26802725. ಇ-ಮೇಲ್: sploffrtcc@gmail.com ವೆಬ್‌ಸೈಟ್: https://teccbmcri.karnataka.gov.in ಇಲ್ಲಿ ಸಂಪರ್ಕಿಸಬಹುದು.

ಸಹಿ/- ವಿಶೇಷಾಧಿಕಾರಿಗಳು, ಅಪಘಾತ ಮತ್ತು ತುರ್ತು ಚಿಕಿತ್ಸಾ ಕೇಂದ್ರ, ಬಿಎಂಸಿಆರ್ಐ

DIPR/CP/SMCL/1311/26-27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.2, 2/1 & 2/3, ಕಾಳಿದಾಸ ಮಾರ್ಗ, 1ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು - 560009. ದೂರವಾಣಿ ಸಂ. 080-22265383 website: www.kiadb.in

ಸಂಖ್ಯೆ:ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-03/0364/2026-27 | ದಿನಾಂಕ:23-06-2026

ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಮತ್ತು ಕೆಸಿಇಐ/ಕೆಪಿಡಬ್ಲ್ಯೂಡಿಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಹೆಸರು: (1) ರಾಯಚೂರು ಜಿಲ್ಲೆಯ ರಾಯಚೂರು ಗ್ರೋಥ್ ಕೇಂದ್ರದಲ್ಲಿ ಹಾಲಿಯಿರುವ 160ಕೆವಿಎ ಟ್ರಾನ್ಸ್‌ಫಾರ್ಮರ್ ಪರಿವರ್ತಕ ಯಾರ್ಡ್‌ನಲ್ಲಿ ಹದಗೆಟ್ಟಿರುವ ಟ್ರಾನ್ಸ್‌ಫಾರ್ಮರ್ ಪರಿವರ್ತಕ ಸಲಕರಣೆಗಳು ಮತ್ತು ದೋಷಪೂರಿತ ಕೇಬಲ್‌ಗಳನ್ನು ದುರಸ್ಥಿ ಮತ್ತು ಮರುಸ್ಥಿತಿಗೊಳಿಸುವ ಕಾಮಗಾರಿ. (ಇತರೆ) (2) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕು, ಕಣಗಾಲ ಕೈಗಾರಿಕಾ ಪ್ರದೇಶದಲ್ಲಿ 5 ಎಂಎಲ್‌ಡಿ ನೀರು ಸರಬರಾಜು ಮಾಡಲು ಬಲ್ಕ್‌ಫ್ಲೋ ಮೀಟರ್ (ಬಲ್ಕ್ ನೀರು ಸಂಪರ್ಕ) ಅಳವಡಿಕೆ ಮತ್ತು ಕಾರ್ಯಾಚರಣೆಗೊಳಿಸುವ ಕಾಮಗಾರಿ (ವರ್ಗ-1). (3) ವಿಜಯಪುರ ಜಿಲ್ಲೆಯ ಅಲಿಯಾಬಾದ್ 1ನೇ ಹಂತದ ಕೈಗಾರಿಕಾ ಪ್ರದೇಶದ ಪ್ಲಾಟ್ ಸಂಖ್ಯೆ.69ಕ್ಕೆ ವಿದ್ಯುತ್ ಸರಬರಾಜು ಒದಗಿಸುವ ಕಾಮಗಾರಿ. (ಇತರೆ). (4) ಧಾರವಾಡ ಜಿಲ್ಲೆಯ ಧಾರವಾಡ ನೋಡ್ ಕೈಗಾರಿಕಾ ಪ್ರದೇಶದಲ್ಲಿ ನೀರು ಸರಬರಾಜು ಕಾರ್ಯಕ್ಕಾಗಿ ಜ್ಯಾಕ್‌ವೆಲ್ ಪಂಪ್‌ಹೌಸ್ ನಿರ್ಮಾಣಕ್ಕಾಗಿ ಹಿಡಕಲ್ ಅನೆಕಟ್ಟಿನಲ್ಲಿ 33ಕೆವಿ ಮತ್ತು 11ಕೆವಿ ಹೆಚ್‌ಟಿ/ಎಲ್‌ಟಿ ಲೈನ್‌ಗಳ ಸ್ಥಳಾಂತರ/ಮರು-ಮಾರ್ಗೀಕರಣಗೊಳಿಸುವ ಕಾಮಗಾರಿ. (ಇತರೆ) (5) ಯಾದಗಿರಿ ಜಿಲ್ಲೆಯ ಕಡೆಚೂರು ಕೈಗಾರಿಕಾ ಪ್ರದೇಶದಲ್ಲಿ ಪ್ರವೇಶ ದ್ವಾರ ಮತ್ತು ಭದ್ರತಾ ಕೊಠಡಿ ನಿರ್ಮಾಣ ಮಾಡುವ ಕಾಮಗಾರಿ. {ವರ್ಗ-2(ಎ)} (6) ಧಾರವಾಡ ಜಿಲ್ಲೆಯ ಕೆಐಎಡಿಬಿ ವಲಯ ಕಚೇರಿಯ ಆವರಣದಲ್ಲಿ ಪ್ರಸ್ತುತವಿರುವ ದಾಖಲೆಗಳು ಮತ್ತು ಸ್ಟೋರ್ ಕೊಠಡಿಯ ದುರಸ್ಥಿ ಮತ್ತು ನವೀಕರಣ, ವಲಯ ಕಚೇರಿಗೆ ಪೀಠೋಪಕರಣಗಳನ್ನು ಒದಗಿಸುವುದು, ಹೊಸ ದಾಖಲಾತಿ ಕೊಠಡಿ ನಿರ್ಮಾಣ ಮಾಡುವ ಕಾಮಗಾರಿ (ಪ.ಪಂ). (7) ಬೆಳಗಾವಿ ಜಿಲ್ಲೆಯ ಕಣಗಾಲ 1ನೇ ಹಂತ ಮತ್ತು ವಿಜಯಪುರ ಜಿಲ್ಲೆಯ ಮುಲ್ವಾಡ 1ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿನ ಬೀದಿ ದೀಪಗಳ ಮರು-ಸ್ಥಿತಿಕರಣ, ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿ. (ಪ.ಜಾ)

- ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:**20-07-2026**ರ ಸಂಜೆ **4:00** ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯ ಅಭಿಯಂತರರು-2, ಕೆಐಎಡಿಬಿ, ಬೆಂಗಳೂರು

ಡಿಐಪಿಆರ್/ಸಿಪಿ/1318/ಸಿಸಿಎಲ್/2026-27

MINISTRY OF
PORTS, SHIPPING
AND WATERWAYS
Government of India
सत्यमेव जयते

12 ವರ್ಷಗಳ ಕಡಲ ಪರಿವರ್ತನೆ

ಸಾಗರದಿಂದ ಸಮೃದ್ಧಿ ಜಲಮಾರ್ಗದಿಂದ ಅಭಿವೃದ್ಧಿ

ಜಲದಿಂದ ರೂಪುಗೊಂಡ ರಾಷ್ಟ್ರವು ಹೊಸ ದಿಟ್ಟ ಭವಿಷ್ಯದತ್ತ ಏರುತ್ತಿದೆ

"ಭಾರತೀಯರಾದ ನಾವು ಅದ್ಭುತ ಕಡಲ ಪರಂಪರೆಯ ವಾರಸುದಾರರು ಮತ್ತು ಜಾಗತಿಕ ಕಡಲ ಕ್ಷೇತ್ರದಲ್ಲಿ ರಾಷ್ಟ್ರದ ಶ್ರೇಷ್ಠ ಸ್ಥಾನವನ್ನು ಪುನಃಸ್ಥಾಪಿಸುವುದು ನಮ್ಮ ಸರ್ಕಾರದ ಪ್ರಯತ್ನವಾಗಿದೆ.

- ನರೇಂದ್ರ ಮೋದಿ, ಪ್ರಧಾನಮಂತ್ರಿ

12 ವರ್ಷಗಳ ಸಾಧನೆಯ ಅಂಕಿಗಳು

- **1,668 ಎಂಎಂಟಿ** — ಭಾರತೀಯ ಬಂದರುಗಳಲ್ಲಿ ನಿರ್ವಹಿಸಲಾದ ಒಟ್ಟು ಸರಕು, 1,052 MMT ನಿಂದ ಶೇ.59ರಷ್ಟು ಏರಿಕೆ
- **2,818 ಎಂಎಂಟಿ** — ಒಟ್ಟು ಬಂದರು ಸಾಮರ್ಥ್ಯ, 1,561 MMTನಿಂದ ಶೇ.81ರಷ್ಟು ಹೆಚ್ಚಳ
- **218 ಎಂಎಂಟಿ** — ರಾಷ್ಟ್ರೀಯ ಜಲಮಾರ್ಗಗಳಲ್ಲಿ ಸರಕು ಸಾಗಣೆ, ಕೇವಲ 29 MMTನಿಂದ ಶೇ.652ರಷ್ಟು ಏರಿಕೆ
- **3.23 ಲಕ್ಷ** — ಜಾಗತಿಕವಾಗಿ ಭಾರತೀಯ ನಾವಿಕರ ನಿಯೋಜನೆ, 1.27 ಲಕ್ಷದಿಂದ ಶೇ.155ರಷ್ಟು ಹೆಚ್ಚಾಗಿದೆ, ಮಹಿಳಾ ನಾವಿಕರ ಸಂಖ್ಯೆ ಶೇ.340ರಷ್ಟು ಹೆಚ್ಚಾಗಿದೆ
- **₹26,583 ಕೋಟಿ** — ಪ್ರಮುಖ ಬಂದರುಗಳ ವಾರ್ಷಿಕ ಆದಾಯ, ರೂ.11,760 ಕೋಟಿಯಿಂದ ಶೇ.126ರಷ್ಟು ಏರಿಕೆ

ಹಡಗು ಮರುಬಳಕೆಯಲ್ಲಿ ಭಾರತ ವಿಶ್ವದ ನಂ.1

ಮಾರಿಟೈಮ್ ಇಂಡಿಯಾ ವಿಷನ್ 2030ರ ಗುರಿಯನ್ನು ನಿಗದಿತ ಸಮಯಕ್ಕಿಂತ ಐದು ವರ್ಷ ಮೊದಲೇ ಸಾಧಿಸಲಾಗಿದೆ

ಪರಿವರ್ತನೆಯ ಸ್ತಂಭಗಳು

ಬಂದರುಗಳು
ಬಿಗ್ಗರ್ & ಸ್ಮಾರ್ಟರ್

- ರೂ.15,000 ಕೋಟಿ ವಾರ್ಷಿಕ ಕಡಲ ಬಂಡವಾಳ ಹೂಡಿಕೆ, 2014ರಿಂದ ಶೇ.362ರಷ್ಟು ಹೆಚ್ಚಳವಾಗಿದೆ
- ಕೇವಲ ಪಿಪಿಪಿ ಹೂಡಿಕೆಯಿಂದ ಶೇ.836ರಷ್ಟು ಹೆಚ್ಚಾಗಿ ರೂ.8,000 ಕೋಟಿಗೆ ತಲುಪಿದೆ
- ಕರಾವಳಿ ಸರಕು ಸಾಗಣೆ ದುಪ್ಪಟ್ಟಾಗಿ, 74 ರಿಂದ 177 MMTಗೆ ಏರಿದೆ

ಜಲಮಾರ್ಗಗಳು
ಕ್ರಾಂತಿ ಪ್ರಗತಿಯಲ್ಲಿದೆ

- 2014ರಲ್ಲಿ 5 ರಾಷ್ಟ್ರೀಯ ಜಲಮಾರ್ಗಗಳಿದ್ದದ್ದು , ಈಗ 111 ರಾಷ್ಟ್ರೀಯ ಜಲಮಾರ್ಗಗಳಿಗೆ ಅಧಿಸೂಚನೆ ಹೊರಡಿಸಲಾಗಿದೆ
- ಕಾರ್ಯಾಚರಣೆಯಲ್ಲಿರುವ ಜಲಮಾರ್ಗಗಳು 3 ರಿಂದ 32ಕ್ಕೆ ಏರಿಕೆ
- ಪ್ರತಿ ವರ್ಷ 10 ಕೋಟಿಗೂ ಅಧಿಕ ಪ್ರಯಾಣಿಕರು ಒಳನಾಡು ಜಲಮಾರ್ಗಗಳ ಮೂಲಕ ಪ್ರಯಾಣಿಸುತ್ತಾರೆ



ಹಡಗು ನಿರ್ಮಾಣ
ವಿಶ್ವಮಟ್ಟಕ್ಕೆ ಏರುತ್ತಿದೆ

- ಮೆಗಾ ಹಡಗು ನಿರ್ಮಾಣ ಉತ್ತೇಜನ: ರೂ.70,000 ಕೋಟಿ
- ಕೊಚ್ಚಿನ್ ಶಿಪ್‌ಯಾರ್ಡ್‌ನಲ್ಲಿನ ಹೊಸ ಡ್ರೈ ಡಾಕ್ 2024ರಲ್ಲಿ ಉದ್ಘಾಟನೆಗೊಂಡಿತು
- ದೇಶಿ ನೌಕಾಪಡೆ ಸ್ವಾಧೀನ ಯೋಜನೆ: ರೂ.2.2 ಲಕ್ಷ ಕೋಟಿ ಮೌಲ್ಯದ 437 ಹಡಗುಗಳು

ಹಸಿರು ಸಂಕ್ರಮಣ
ಸ್ವಚ್ಛ ಸಮುದ್ರಗಳು, ಸ್ವಚ್ಛ ನದಿಗಳು

- 2014ರಿಂದ ಪ್ರಮುಖ ಬಂದರುಗಳಲ್ಲಿ ನವೀಕರಿಸ ಬಹುದಾದ ಇಂಧನ ಬಳಕೆ 30ಪಟ್ಟು ಹೆಚ್ಚಳ
- ಭಾರತದ ಮೊದಲ ಹೈಡ್ರೋಜನ್ ಚಾಲಿತ ದೋಣಿ ವಾರಣಾಸಿ ಯಲ್ಲಿ ಡಿಸೆಂಬರ್ 2025ರಲ್ಲಿ ಉದ್ಘಾಟನೆಗೊಂಡಿತು
- ಗ್ರೀನ್ ಟಗ್ ಟ್ರಾನ್ಸಿಷನ್ ಪ್ರೋಗ್ರಾಮ್ 2040ರ ವೇಳೆಗೆ ಎಲ್ಲಾ ಪ್ರಮುಖ ಬಂದರುಗಳಲ್ಲಿ ಶೂನ್ಯ ಹೊರಸೂಸುವಿಕೆ ಟಗ್‌ನ ಗುರಿಯಿದೆ

ಮಹತ್ವದ ಯೋಜನೆಗಳು

- **ಜಲಮಾರ್ಗ ವಿಕಾಸ ಯೋಜನೆ-** NW-1 ಹಲ್ದಿಯಾದಿಂದ ವಾರಣಾಸಿಗೆ ರೂಪಾಂತರಗೊಳ್ಳುತ್ತಿದೆ, ರೂ.5,061 ಕೋಟಿ
- **ಜೋಗಿಘೋಪಾ ಐಡಬ್ಲ್ಯೂಟಿ ಟರ್ಮಿನಲ್, ಅಸ್ಸಾಂ-** ಈಶಾನ್ಯ ಭಾರತದ ಟ್ರೇಡ್ ಕಾರಿಡಾರ್‌ನ ಹೊಸ ದ್ವಾರ
- **ಮುಂಬೈ ಮರೀನಾ:** 424 ವಿಹಾರ ನೌಕಾಬರ್ತ್‌ಗಳು, ರೂ.887 ಕೋಟಿ, 2028ಕ್ಕೆ ಭಾರತದ ಮೊದಲ ವಿಶ್ವದರ್ಜೆಯ ಮರೀನಾ
- **ವಾಢ್ವಾನ್ ಬಂದರು, ಮಹಾರಾಷ್ಟ್ರ:** ಭಾರತ ಭವಿಷ್ಯದ ಅತಿದೊಡ್ಡ ಕಂಟೇನರ್ ಬಂದರು, ರೂ.76,000 ಕೋಟಿ ಹೂಡಿಕೆ
- **ರಾಷ್ಟ್ರೀಯ ಕಡಲ ಪರಂಪರೆ ಸಂಕೀರ್ಣ, ಲೋಥಲ್:** ವಿಶ್ವದ ಅತಿದೊಡ್ಡ ಕಡಲ ವಸ್ತುಸಂಗ್ರಹಾಲಯವೆಂದು ಕಲ್ಪಿಸಲಾಗಿದೆ
- **ಟ್ಯೂನ ಟೆಕ್ರಾ ಕಂಟೇನರ್ ಟರ್ಮಿನಲ್, ಗುಜರಾತ್:** ವಾರ್ಷಿಕ 2.19 ಮಿಲಿಯನ್ ಟಿಇಯು ವಾರ್ಷಿಕ ಸಾಮರ್ಥ್ಯ

ಸುಧಾರಣೆಗಳು & ಮೈಲಿಗಲ್ಲುಗಳು

- **ಜಾಗತಿಕ ಪಟ್ಟಿ 30ರಲ್ಲಿ 3 ಭಾರತೀಯ ಬಂದರುಗಳು:** ಜಾಗತಿಕ ಪಟ್ಟಿ 100ರಲ್ಲಿ 7 (ವರ್ಲ್ಡ್ ಬ್ಯಾಂಕ್ ಕಂಟೇನರ್ ಪೋರ್ಟ್ ಪರ್ಫಾಮೆನ್ಸ್ ಇಂಡೆಕ್ಸ್ 2025)
- **ಸಾಗರಮಾಲಾ ಕಾರ್ಯಕ್ರಮ:** ಭಾರತದಾದ್ಯಂತ 7,100+ ಕಿ.ಮೀ. ಬಂದರು ಸಂಪರ್ಕ ಮೂಲಸೌಕರ್ಯ
- **11 ಮಹತ್ವದ ಕಾಯ್ದೆಗಳು ಜಾರಿ:** ಪುರಾತನ ಕಾಲದ ಕಾನೂನುಗಳನ್ನು ಬದಲಾಯಿಸುವ ಮರ್ಚೆಂಟ್ ಶಿಪ್ಪಿಂಗ್ ಆಕ್ಟ್ 2025 ಮತ್ತು ಭಾರತೀಯ ಬಂದರು ಕಾಯ್ದೆ 2025 ಸೇರಿವೆ
- **ಒಂದು ರಾಷ್ಟ್ರ ಒಂದು ಬಂದರು ಪ್ರಕ್ರಿಯೆ:** ಎಲ್ಲಾ 12 ಪ್ರಮುಖ ಬಂದರುಗಳಲ್ಲಿ ದಾಖಲಾತಿ ವ್ಯವಹಾರಗಳು ಶೇ.39ಕ್ಕೂ ಹೆಚ್ಚು ತಗ್ಗಿವೆ
- **ಸಮುದ್ರ ವಿಹಾರ ಪ್ರಯಾಣಿಕರ ಸಂಖ್ಯೆ ಶೇ.328ರಷ್ಟು ಏರಿಕೆ:** 1.08 ಲಕ್ಷದಿಂದ 4.62 ಲಕ್ಷಕ್ಕೆ ಹೆಚ್ಚಳ
- **ಮಾರಿಟೈಮ್ ಅಮೃತ್ ಕಾಲ್ ವಿಷನ್ 2047:** 10,000 MMTPA ಬಂದರು ಸಾಮರ್ಥ್ಯದ ಗುರಿಯ 300+ ಉಪಕ್ರಮಗಳು

12 Saal Vishwas ke, Vikas ke, Jan-kalyan ke

ಕಡಲ ಶ್ರೇಷ್ಠತೆಯ ಮೂಲಕ ಭಾರತದ ವಿಕಾಸಯಾತ್ರೆಯನ್ನು ಮುನ್ನಡೆಸುವುದು
www.shipmin.gov.in
Maritime India Vision 2030 | Maritime Amrit Kaal Vision 2047 | Sagarmala Programme

ಕಾಂಗ್ರೆಸ್‌ನ ಎಸ್‌ಐಆರ್ ಜನಜಾಗೃತಿ ಸಮಾವೇಶದಲ್ಲಿ ಬಿ.ಕೆ.ಹರಿಪ್ರಸಾದ್

ಎಚ್ಚರ ತಪ್ಪಿದರೆ ಸಂವಿಧಾನ ಬುಡಮೇಲು

■ **ವಿಕ ಸುದ್ದಿಲೋಕ** ಮಂಗಳೂರು

''ಮತದಾರರ ಪಟ್ಟಿ ಪರಿಷ್ಕರಣೆ-2026 ಸಂದರ್ಭ ಕಾಂಗ್ರೆಸಿಗರು ಸ್ವಲ್ಪ ಎಚ್ಚರ ತಪ್ಪಿದರೂ, ಬಿಜೆಪಿ-ಆರ್‌ಎಸ್‌ಎಸ್‌ನವರು ಅರ್ಹ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಟ್ಟು, ಸಂವಿಧಾನವನ್ನೇ ಬುಡಮೇಲು ಮಾಡಲಿದ್ದಾರೆ,'' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು.

ಮಂಗಳವಾರ ಕೆಪಿಸಿಸಿ ಮಾರ್ಗದರ್ಶನದಂತೆ 'ಕಾಂಗ್ರೆಸ್ ನಡೆ ಮತ ರಕ್ಷಣೆ ಕಡೆ' ಎಂಬ ಎಸ್ ಐಆರ್ ಜನಜಾಗೃತಿ ಸಮಾವೇಶ ಉದ್ಘಾಟಿಸಿ, ''ಕೆಲವರಿಗೆ ಪ್ರಜಾಪ್ರಭುತ್ವ, ಸಂವಿಧಾನ ಮತ್ತು ತ್ರಿವರ್ಣ ಧ್ವಜದ ಬಗ್ಗೆ ಗೌರವ ಇಲ್ಲ. ಅಂಥವರು ನಮ್ಮನ್ನು ಆಳಲು ಹೊರಟಿದ್ದಾರೆ,'' ಎಂದು ಆರೋಪಿಸಿದರು.

''ದೇಶಾದ್ಯಂತ ಎಸ್‌ಐಆರ್ ಮೂಲಕ ಬಿಜೆಪಿ-ಆರ್‌ಎಸ್‌ಎಸ್‌ನವರು ನೈಜ ಮತದಾರರನ್ನು ಕೈಬಿಡುವ ಷಡ್ಯಂತ್ರ ಮಾಡುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್-ಬಿಜೆಪಿ ನಡುವಿನ ಗೆಲುವಿನ ಅಂತರ 35 ಲಕ್ಷ ಮತಗಳು. ಇಷ್ಟೊಂದು ಷಡ್ಯಂತ್ರ, ಮೋಸ ಮಾಡುತ್ತಾರೆಂದರೆ ಬಿಜೆಪಿಯವರು ಹೇಳುವಂತೆ ಅವರ ಪಾರ್ಟಿ ವಿತ್ ಡಿಫರೆನ್ಸ್ ಎಂಬುದು ಇದೇ,'' ಎಂದರು.

ಕಾಂಗ್ರೆಸ್ ಎಸ್‌ಐಆರ್ ಜಾಗೃತಿ ಸಮಿತಿ ಅಧ್ಯಕ್ಷ ವಿ.ಆರ್.ಸುದರ್ಶನ್ ಮಾತನಾಡಿ, ''ನೈಜ ಮತದಾರರ ಹಕ್ಕು ರಕ್ಷಿಸುವುದು ಪ್ರಜಾಪ್ರಭುತ್ವ ಗಟ್ಟಿಗೊಳಿಸುವುದು ಪಕ್ಷದ ಬಿಎಲ್‌ಎಗಳು ಹಾಗೂ ಮುಖಂಡರ ಮೇಲಿದೆ,'' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಡಾ.ಮಂಜುನಾಥ್ ಭಂಡಾರಿ, ಮಾಜಿ ಸಚಿವರಾದ ವಿನಯ ಕುಮಾರ್ ಸೊರಕೆ, ಬಿ.ರಮಾನಾಥ ರೈ, ಕೆ.ಜಯಪ್ರಕಾಶ್ ಹೆಗ್ಡೆ ಎಸ್‌ಐಆರ್ ಜಾಗೃತಿ ಕುರಿತಂತೆ ಬಿಎಲ್‌ಎಗಳಿಗೆ ಮಾಹಿತಿ ನೀಡಿದರು. ಬಳಿಕ ಬಿಎಲ್‌ಎಗಳ ಜತೆ ಸಂವಾದ ನಡೆಯಿತು.

ರಾಜೀನಾಮೆಗೆ ಆಗ್ರಹ: ''ಸಂಪೂರ್ಣ ಆಯೋಧ್ಯೆ ಬಿಜೆಪಿಯವರು ವ್ಯವಹಾರವಾಗಿ ಮಾರ್ಪಡಿಸಿದ್ದು, ದೇಶದ ಭಕ್ತರು ನೀಡಿರುವ ಹಣವನ್ನು ದೋಚುತ್ತಿದ್ದಾರೆ. 200 ಕೋಟಿ ರೂ. ಕಳ್ಳತನ ವರದಿಯಿಂದ ಬಿಜೆಪಿಗೆ ಯಾವುದೇ ಧಾರ್ಮಿಕ ಬದ್ಧತೆ, ಗೌರವ ಇಲ್ಲ ಎಂಬುದು ಸಾಬೀತಾಗಿದೆ,'' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

''ಆಯೋಧ್ಯೆ ಪ್ರಕರಣದಲ್ಲಿ ಎಸ್‌ಐಟಿ ತನಿಖೆಯಿಂದ ಸೂಕ್ತ ಫಲಿತಾಂಶ ದೊರಕದು. ಹಾಲಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಈ ಬಗ್ಗೆ ತನಿಖೆಯಾಗಬೇಕು. ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಪ್ರಕರಣದ ಹೊಣೆ ಹೊತ್ತು ರಾಜೀನಾಮೆ ನೀಡಬೇಕು,'' ಎಂದು ಆಗ್ರಹಿಸಿದರು.

ಮಂಗಳೂರಿನಲ್ಲಿ ಮಂಗಳವಾರ ನಡೆದ 'ಕಾಂಗ್ರೆಸ್ ನಡೆ ಮತ ರಕ್ಷಣೆ ಕಡೆ' ಎಂಬ ಎಸ್‌ಐಆರ್ ಜನಜಾಗೃತಿ ಸಮಾವೇಶವನ್ನು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಉದ್ಘಾಟಿಸಿದರು.

ಕೆಪಿಸಿಸಿ ಅಧ್ಯಕ್ಷರಿಗೆ ಸರಳ ಸ್ವಾಗತ

ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಪ್ರಥಮ ಬಾರಿಗೆ ಮಂಗಳೂರಿಗೆ ಭೇಟಿ ನೀಡಿದ ಬಿ.ಕೆ.ಹರಿಪ್ರಸಾದ್, ತಮಗೆ ಸನ್ಮಾನ, ಗೌರವ ಬೇಡ, ಏನಾದರೂ ಕೊಡುವುದಿದ್ದರೆ ಪಕ್ಷದ ನಿಧಿಗೆ ಹಣ ಕೊಡಿ ಎಂದು ಹೇಳಿದ್ದರಿಂದ ಸರಳವಾಗಿ ಅವರನ್ನು ಕಾರ್ಯಕ್ರಮಕ್ಕೆ ಬರಮಾಡಿಕೊಳ್ಳಲಾಯಿತು.

ನಿಗಮ, ಅಕಾಡೆಮಿ ಬದಲಾವಣೆ

''ರಾಜ್ಯದಲ್ಲಿ ಅಧಿಕಾರ ಹಂಚಿಕೆ ಒಪ್ಪಂದದಂತೆ ಸಿಎಂ ಬದಲಾವಣೆ ಯಾಗಿದ್ದು, ನಿಗಮ ಮಂಡಳಿ, ಅಕಾಡೆಮಿಗಳ ಬದಲಾವಣೆ ಯಾಗಲಿದೆ,'' ಎಂದು ಬಿ.ಕೆ. ಹರಿಪ್ರಸಾದ್ ಹೇಳಿದರು.

ಜಿಲ್ಲಾಧ್ಯಕ್ಷರ ಆಯ್ಕೆ

''ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಕುರಿತಂತೆ ಅನ್ಯ ರಾಜ್ಯದ ಕಾಂಗ್ರೆಸ್‌ನ ವೀಕ್ಷಕರು ಬಂದು ಎಐಸಿಸಿ ಸೃಜನ್ ಸಂಘಟನಾ ಅಭಿಯಾನ ಮೂಲಕ ಆಕಾಂಕ್ಷಿ, ಅರ್ಹ ಇಬ್ಬರು ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಲಿದ್ದಾರೆ. ಅಂತಿಮವಾಗಿ ಜಿಲ್ಲಾಧ್ಯಕ್ಷರ ಆಯ್ಕೆಯನ್ನು ಎಐಸಿಸಿ ಮಾಡಲಿದೆ,'' ಎಂದು ಬಿ.ಕೆ. ಹರಿಪ್ರಸಾದ್ ಹೇಳಿದರು. ''ಕಾಂಗ್ರೆಸ್ ಸರಕಾರ ಆಡಳಿತಕ್ಕೆ ಬಂದ ಮೇಲೆ ಶೇ.99ರಷ್ಟು ಶಾಂತಿ ನೆಲೆಸಿದೆ. ದಕ್ಷಿಣ ಕನ್ನಡ ಜಿಲ್ಲೆಗೂ ಉತ್ತಮ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಕಳೆದೊಂದು ವರ್ಷದಲ್ಲಿ ಶಾಂತಿ ಕದಡುವ ಗಲಾಟೆ ಯಾಗಿಲ್ಲ. ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳು, ಜನರಿಗೆ ಧನ್ಯವಾದಗಳು,'' ಎಂದರು.

ವಸತಿ ಶಾಲೆಯಲ್ಲಿ ಗಲಾಟೆ ಹೆದರಿ ಹೊರಬಿದ್ದ ಮಕ್ಕಳು

ಆಲ್ದೂರು (ಚಿಕ್ಕಮಗಳೂರು): ಸಮೀಪದ ತುಡಕೂರು ಗ್ರಾಮದಲ್ಲಿರುವ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯಲ್ಲಿ ಸೋಮವಾರ ರಾತ್ರಿ ನಡೆದ ಮಕ್ಕಳ ಗಲಾಟೆ ಆತಂಕಕ್ಕೆ ಕಾರಣವಾಗಿದೆ.

ಶಾಲೆಯಲ್ಲಿ ಮಕ್ಕಳ ನಡುವೆ ನಡೆದ ಜಗಳದಿಂದ ಭಯಗೊಂಡ ಉತ್ತರ ಕರ್ನಾಟಕ ಮೂಲದ ನಾಲ್ಕು ಪುಟ್ಟ ಮಕ್ಕಳು, ವಸತಿ ಶಾಲೆಯಿಂದ ತಪ್ಪಿಸಿಕೊಂಡು ತಮ್ಮ ಊರು ಸೇರಲು ತೀರ್ಮಾನಿಸಿ ಮಂಗಳವಾರ ಬೆಳಗ್ಗೆಯೇ ರಸ್ತೆಯಲ್ಲಿ ಸಾಗುತ್ತಿದ್ದುದನ್ನು ಗಮನಿಸಿದ ಸ್ಥಳೀಯರು ಸುರಕ್ಷಿತವಾಗಿ ಮರಳಿ ವಸತಿ ಶಾಲೆಗೆ ಸೇರಿಸಿದ್ದಾರೆ.

ಬೆಳ್ಳಂಬೆಳಗ್ಗೆ ಬೆನ್ನಿಗೆ ಬ್ಯಾಗ್ ಹಾಕಿಕೊಂಡು ವಸತಿ ಶಾಲೆಯಿಂದ ಸುಮಾರು 2 ಕಿ.ಮೀ. ವರೆಗೆ ಈ ಮಕ್ಕಳು ನಡೆದು ಸಾಗಿದ್ದರು. ಆಲ್ದೂರು ಪಟ್ಟಣದ ಕಡೆ ಬರುತ್ತಿದ್ದ ಸಂದರ್ಭದಲ್ಲಿ ಸ್ಥಳೀಯರು ಪ್ರೀತಿಯಿಂದ ಮಾತನಾಡಿಸಿದಾಗ ವಿಷಯ ಬಾಯ್ಬಿಟ್ಟರು. ನಂತರ ಗ್ರಾಮಸ್ಥರು ಮಕ್ಕಳನ್ನು ಮರಳಿ ವಸತಿ ಶಾಲೆಗೆ ತಲುಪಿಸುವ ಮೂಲಕ ಸಂಭವಿಸಬಹುದಾಗಿದ್ದ ಅನಾಹುತ ತಪ್ಪಿಸಿದರು. ಈ ವಸತಿ ಶಾಲೆಯು ಸಮಾಜ ಕಲ್ಯಾಣ ಇಲಾಖೆಗೆ ಒಳಪಟ್ಟಿದ್ದು, ಇಷ್ಟೆಲ್ಲ ಬೆಳವಣಿಗೆ ನಡೆದರೂ ವಾರ್ಡನ್ ಸೇರಿ ಯಾವ ಸಿಬ್ಬಂದಿ ಇದನ್ನು ಗಮನಿಸಿರಲಿಲ್ಲ.

ಇಬ್ಬರು ಕಿಶೋರ ಕಾರ್ಮಿಕರ ರಕ್ಷಣೆ

ಶಿವಮೊಗ್ಗ: ಶಿಕಾರಿಪುರ ತಾಲೂಕು ಶಿರಾಳಕೊಪ್ಪದ ಕ್ರಷರ್ ಹತ್ತಿರದ ಗಣಿ ಪ್ರದೇಶದಲ್ಲಿ ಕಿಶೋರ ಕಾರ್ಮಿಕರು ಕೆಲಸ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ಕಾರ್ಮಿಕ ನಿರೀಕ್ಷಕರು, ಪೊಲೀಸ್ ಇಲಾಖೆ ಹಾಗೂ ಮಕ್ಕಳ ಸಹಾಯವಾಣಿ ಜಂಟಿಯಾಗಿ ಸೋಮವಾರ ದಾಳಿ ನಡೆಸಿ, ಇಬ್ಬರನ್ನು ರಕ್ಷಿಸಿದ್ದಾರೆ.

ಈ ಮಕ್ಕಳನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಲಾಗಿದೆ.

ಅಂಗಡಿ ಮುಂಗಟ್ಟುಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಇತರ ಉದ್ಯಮಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಹಾಗೂ 18 ವರ್ಷದೊಳಗಿನ ಕಿಶೋರ ಕಾರ್ಮಿಕರನ್ನು ಅಪಾಯಕಾರಿ ಉದ್ಯಮಗಳಲ್ಲಿ ಕೆಲಸಕ್ಕೆ ಇರಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧ. 50 ಸಾವಿರ ರೂ.ವರೆಗೆ ದಂಡ ಅಥವಾ ಎರಡು ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ಎರಡನ್ನೂ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ ಎಂದು ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಸದಸ್ಯ ಕಾರ್ಯದರ್ಶಿ ಹಾಗೂ ಕಾರ್ಮಿಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿ ಉತ್ಪನ್ನ ಸಾಗಣೆ ವಾಹನಗಳಿಂದ ಟೋಲ್ ವಸೂಲಿಗೆ ಆಕ್ರೋಶ

ಬೆಂ-ಮೈ ಎಕ್ಸ್‌ಪ್ರೆಸ್ ಹೈವೇನಲ್ಲಿ ಪ್ರತಿಭಟನೆ

■ **ವಿಕ ಸುದ್ದಿಲೋಕ** ಶ್ರೀರಂಗಪಟ್ಟಣ (ಮಂಡ್ಯ)

ಕೃಷಿ ಉತ್ಪನ್ನ ಸಾಗಣೆ ವಾಹನಗಳಿಂದ ಟೋಲ್ ಶುಲ್ಕ ಸಂಗ್ರಹಿಸುವುದನ್ನು ವಿರೋಧಿಸಿ ರೈತ ಸಂಘ, ದಸಂಸ ಹಾಗೂ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ಹೈವೇ ಗಣಂಗೂರು ಟೋಲ್ ಬಳಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು.

ಎಕ್ಸ್‌ಪ್ರೆಸ್ ಹೈವೇ ಟೋಲ್ ಬಳಿ ಜಮಾವಣೆಗೊಂಡ ನೂರಾರು ಪ್ರತಿಭಟನಕಾರರು, ಟೋಲ್ ಸಂಗ್ರಹಕ್ಕೆ ತಡೆ ಒಡ್ಡಿದರು. ಹರಿಯಾಣ ಮಾದರಿಯಲ್ಲಿ ರೈತರು ಕಬ್ಬು, ಎಳನೀರು, ಧಾನ್ಯ ಇತರ ಕೃಷಿ ಉತ್ಪನ್ನಗಳನ್ನು ಸಾಗಿಸುವ ಯಾವುದೇ ವಾಹನಗಳಿಂದ ಶುಲ್ಕ ಸಂಗ್ರಹಿಸಬಾರದು ಎಂದು ಒತ್ತಾಯಿಸಿದರು. ಪೊಲೀಸರು ಪ್ರತಿಭಟನಾಕಾರರನ್ನು ನಿಯಂತ್ರಿಸಲು ಹರಸಾಹಸಪಟ್ಟರು. ನಂತರ ಟೋಲ್ ಮುಂದೆಯೇ ಅರ್ಧ ಗಂಟೆ ಧರಣಿ ನಡೆಸಿದರು.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜೇಶ್‌ಗೌಡ ಮಾತನಾಡಿ, ''ಸರ್ವಿಸ್ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು, ರೈತರ ಅಕ್ಕಪಕ್ಕದ ಹಳ್ಳಿಗಳ ರೈತರ ವಾಹನಗಳಿಗೆ ಶುಲ್ಕ ವಸೂಲಿ ಮಾಡಬಾರದು,'' ಎಂದು ಆಗ್ರಹಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ''ಕೃಷಿ ಉತ್ಪನ್ನ ಸಾಗಣೆ ಟೋಲ್ ಶುಲ್ಕ ಕುರಿತಂತೆ ಹರಿಯಾಣ ಮಾದರಿಯನ್ನು ಟೋಲ್‌ನಲ್ಲಿ ಅನುಸರಿಸಬೇಕು ಟೋಲ್ ಬಳಿ ವೈದ್ಯರು, ವೈದ್ಯಕೀಯ ಸಿಬ್ಬಂದಿ ನೇಮಕ ಮಾಡಬೇಕು, ಶುದ್ಧ ಕುಡಿಯುವ ನೀರು ಘಟಕ ಸ್ಥಾಪನೆ ಮಾಡಬೇಕು. ಮೂಲ ಸೌಕರ್ಯ ಕಲ್ಪಿಸಬೇಕು,'' ಎಂದು ಒತ್ತಾಯಿಸಿದರು.

ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರಿ ಎಇಇ ದೇವಿಕ್ ಸಲಹೆವಾಲು ಆಲಿಸಿದರು. ''ಇನ್ನು ಮುಂದೆ ಕೃಷಿ ಉತ್ಪನ್ನಗಳನ್ನು ಸಾಗಣೆ ಮಾಡುವ ವಾಹನಗಳಿಂದ ಯಾವುದೇ ಶುಲ್ಕ ಪಡೆಯುವುದಿಲ್ಲ, ಪ್ರತ್ಯೇಕ ಟೋಲ್ ಲೇನ್‌ನಲ್ಲಿ ಆ ವಾಹನಗಳನ್ನು ಬಿಡಲಾಗುವುದು,'' ಎಂದು ಭರವಸೆ ನೀಡಿದರು.

''ಬಾಕಿ ಉಳಿದಿರುವ ಅಭಿವೃದ್ಧಿ ಕೆಲಸಗಳ ಸಂಬಂಧ ಮೇಲಧಿಕಾರಿಗಳ ಗಮನಕ್ಕೆ ತರಲಾಗುವುದು,'' ಎಂದು ತಿಳಿಸಿದರು. ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಗಣಂಗೂರು ಬಳಿಯ ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ಹೈವೇ ಟೋಲ್‌ನಲ್ಲಿ ಕೃಷಿ ಉತ್ಪನ್ನ ಸಾಗಣೆ ವಾಹನಗಳಿಂದ ಟೋಲ್ ಶುಲ್ಕ ಸಂಗ್ರಹ ವಿರೋಧಿಸಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಯಿತು.

₹1.02 ಕೋಟಿ ಮೌಲ್ಯದ ಮದ್ಯ ವಶ

■ **ವಿಕ ಸುದ್ದಿಲೋಕ** ವಿಜಯಪುರ

ಗೋವಾದಿಂದ ಮಹಾರಾಷ್ಟ್ರಕ್ಕೆ ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ಜಾಲವನ್ನು ಪತ್ತೆ ಹಚ್ಚಿರುವ ಕರ್ನಾಟಕ ಪೊಲೀಸರು, 1.02 ರೂ. ಮೌಲ್ಯದ ನಾನಾ ಬ್ರಾಂಡ್ ಮದ್ಯ ವಶಪಡಿಸಿಕೊಂಡು ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಲಾರಿ ಚಾಲಕ, ಗದಗ ಜಿಲ್ಲೆಯ ಜಲ್ಲಿಗೇರಿಯ ಶ್ರೀನಿವಾಸ ಕಾಸಪ್ಪ ಮೀಸಿ, ವಿಜಯಪುರದ ಹುಸೇನ್‌ಸಾಬ್ ಮುಲ್ಲಾ, ಸೊಲ್ಲಾಪುರದ ಸಿದ್ದರಾಮ ಡಾಲೆ ಹಾಗೂ ತಾಳಿಕೋಟೆ ಗಡಿಸೋಮನಾಳದ ಬಸವರಾಜ ಭಜಂತ್ರಿ ಅಕ್ರಮವಾಗಿ ಮದ್ಯ ಸಾಗಣೆ ಮಾಡುತ್ತಿದ್ದ ವೇಳೆ ಸಿಕ್ಕಿಬಿದ್ದಿದ್ದಾರೆ.

ಆರೋಪಿಗಳು ಮಂಗಳವಾರ ಮುಂಜಾನೆ ವಿಜಯಪುರದ ಕೊಲ್ಹಾರ ಬಳಿ ಮದ್ಯ ತುಂಬಿದ್ದ ಲಾರಿಯನ್ನು ನಿಲ್ಲಿಸಿದ್ದರ ಮಾಹಿತಿ ಆಧರಿಸಿ ಡಿಎಸ್ಪಿ ನೇತೃತ್ವದ ಪೊಲೀಸರ ತಂಡ ದಾಳಿ ನಡೆಸಿತು. ಪರಿಶೀಲನೆ ನಡೆಸಿದಾಗ ರಸಗೊಬ್ಬರದ ಮಧ್ಯೆ ಅಕ್ರಮವಾಗಿ ಮದ್ಯ ಇತ್ತು. ಆರೋಪಿಗಳು ಪರವಾನಗಿ ಇಲ್ಲದೇ ಗೋವಾದ ಪಣಜಿಯಿಂದ ಮಹಾರಾಷ್ಟ್ರಕ್ಕೆ ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದರು. ಜಲನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶೃಂಗೇರಿ ಶ್ರೀಗಳ ವಿಜಯಯಾತ್ರೆ

ಶೃಂಗೇರಿ (ಚಿಕ್ಕಮಗಳೂರು): ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿಯವರು ಜೂನ್ 27ರಿಂದ ಜುಲೈ 9ರವರೆಗೆ ರಾಜ್ಯದ ನಾನಾ ಭಾಗ ಸೇರಿದಂತೆ, ತೆಲಂಗಾಣ ಮತ್ತು ಆಂಧ್ರ ಪ್ರದೇಶದಲ್ಲಿ ವಿಜಯ ಯಾತ್ರೆ ಕೈಗೊಳ್ಳುವರು.



ಜೂನ್ 27ರಂದು ಶೃಂಗೇರಿಯಿಂದ ರಾಮನಗರಕ್ಕೆ ತೆರಳಿ, 29ರವರೆಗೆ ಬೆಂಗಳೂರಿನಲ್ಲಿ ವಾಸ್ತವ್ಯ ಮಾಡುವರು. ನಂತರ ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಸಂಚರಿಸಿ ಜುಲೈ 9ಕ್ಕೆ ಶೃಂಗೇರಿಗೆ ವಾಪಸ್ ಬರಲಿದ್ದಾರೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿನಿಯ ಜತೆ ಅನುಚಿತ ವರ್ತನೆ, ಶಿಕ್ಷಕನ ವಿರುದ್ಧ ಕೇಸ್

ಹೂವಿನಹಡಗಲಿ (ವಿಜಯನಗರ): ವಿದ್ಯಾರ್ಥಿನಿಯೊಬ್ಬಳ ಜತೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ತಾಲೂಕಿನ ಸರಕಾರಿ ಪ್ರೌಢಶಾಲೆಯೊಂದರ ಶಿಕ್ಷಕ ಹನುಮಂತಪ್ಪ ವಿರುದ್ಧ ಇಟ್ಟಿಗಿ ಠಾಣೆಯಲ್ಲಿ ಮಂಗಳವಾರ ಪೋಕ್ಸೊ ಕಾಯಿದೆ ಅಡಿ ಪ್ರಕರಣ ದಾಖಲಾಗಿದೆ.



ಸರಕಾರ ಪೂರೈಸಿರುವ ಸಮವಸ್ತ್ರಗಳನ್ನು ಹೊಂದಿಕೆ ಮಾಡಿ ಇಡಲು ಮೂವರು ವಿದ್ಯಾರ್ಥಿನಿಯರನ್ನು ಸಮವಸ್ತ್ರವಿದ್ದ ಕೋಣೆಯೊಳಗೆ ಈ ಶಿಕ್ಷಕ ಕರೆದುಕೊಂಡು ಹೋಗಿದ್ದರು. ನಂತರ ಇಬ್ಬರು ವಿದ್ಯಾರ್ಥಿನಿಯರನ್ನು ಹೊರಗೆ ಕಳಿಸಿ, ಒಬ್ಬ ವಿದ್ಯಾರ್ಥಿನಿಯ ಜತೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆ ಬಾಲಕಿಯ ಪಾಲಕರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಾಗಿದೆ.

ಆರೋಪಿ ಶಿಕ್ಷಕ, ಮೂಲತಃ ಬಳ್ಳಾರಿ ತಾಲೂಕಿನ ಸಂಜೀವರಾಯನಕೋಟೆಯ ನಿವಾಸಿ. 6 ವರ್ಷಗಳಿಂದ ಈ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ವಿರುದ್ಧ ಹಿಂದೆಯೂ ಇಂಥದೇ ಪ್ರಕರಣವೊಂದು ದಾಖಲಾಗಿತ್ತು ಎಂದು ತಿಳಿದುಬಂದಿದೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಅಪರಾಧಿಗೆ 20 ವರ್ಷ ಜೈಲು

ಕಲಬುರಗಿ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ 55 ಸಾವಿರ ರೂ. ದಂಡವನ್ನು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ವಿಧಿಸಿದೆ. ವಾಡಿ ಠಾಣೆ ವ್ಯಾಪ್ತಿಯ ಆಂಜನೇಯ (25) ಶಿಕ್ಷೆಗೊಳಗಾದ ಅಪರಾಧಿ. 16 ವರ್ಷದ ಬಾಲಕಿಗೆ ಜೀವ ಬೆದರಿಕೆ ಹಾಕಿ ಬಲವಂತವಾಗಿ ಅಪಹರಿಸಿದ್ದ. ಬಳಿಕ ಬೆಂಗಳೂರಿನ ನಿವಾಸವೊಂದರಲ್ಲಿ ಬಂಧನದಲ್ಲಿಟ್ಟು, ಲೈಂಗಿಕ ದೌರ್ಜನ್ಯ ಎಸಗಿದ್ದ ಹಿನ್ನೆಲೆಯಲ್ಲಿ ಪೋಕ್ಸೊ ಕಾಯಿದೆಯಡಿ ಪ್ರಕರಣ ದಾಖಲಾಗಿತ್ತು. ಅಪ್ರಾಪ್ತೆಗೆ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ 5 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಕೋರ್ಟ್ ಸೂಚಿಸಿದೆ.

ಅಪರಾಧ ಸುದ್ದಿ

ಪುತ್ತೂರು ಕಲಾವಿದ ರಚಿಸಿದ ಲೋಗೋ ಆಯ್ಕೆ

ಪುತ್ತೂರು(ದ.ಕ.): ಕೇಂದ್ರ ಗ್ರಾಮೀಣ ಅಭಿವೃದ್ಧಿ ಸಚಿವಾಲಯ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಆಜೀವಿಕಾ ಮಿಷನ್ (ವಿಬಿ-ಜಿ ರಾಮ್‌ಜಿ) ಕಾಯಿದೆ ಬಗ್ಗೆ ಏರ್ಪಡಿಸಿದ್ದ ರಾಷ್ಟ್ರಮಟ್ಟದ ಲೋಗೊ ವಿನ್ಯಾಸ ಸ್ಪರ್ಧೆಯಲ್ಲಿ ಪುತ್ತೂರಿನ ರಾಮ್‌ಪ್ರಸಾದ್ ಡಿ.ಕೆ. ಬಿಡಿಸಿರುವ ಲೋಗೊ ಆಯ್ಕೆಯಾಗಿದೆ.

ವಿಬಿ-ಜಿ ರಾಮ್‌ಜಿ ಕಾಯಿದೆಯ ನಿಬಂಧನೆಗಳು ಮತ್ತು ಉದ್ದೇಶಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ರಾಷ್ಟ್ರಮಟ್ಟದ ಲೋಗೊ ವಿನ್ಯಾಸ ಸ್ಪರ್ಧೆಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು.

ನನ್ನ ಹಳ್ಳಿಗಾಗಿ 60 ಸೆಕೆಂಡ್‌ಗಳು- ವಿಡಿಯೊ ಚಾಲೆಂಜ್, ವಿಕಸಿತ ಭಾರತ ರಸಪ್ರಶ್ನೆ ಮತ್ತು ವಿಬಿ-ಜಿ ರಾಮ್‌ಜಿ ಕಾಯಿದೆ ಲೋಗೊ ವಿನ್ಯಾಸ ವಿಷಯಗಳಲ್ಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ಪೈಕಿ ಲೋಗೊ ವಿನ್ಯಾಸ ಸ್ಪರ್ಧೆಯಲ್ಲಿ ರಾಮ್‌ಪ್ರಸಾದ್ ಅವರು ರಚಿಸಿದ ಲೋಗೊ ಆಯ್ಕೆಯಾಗಿದೆ. ಅವರನ್ನು ಜೂನ್ 28, 29ರಂದು ದಿಲ್ಲಿಯ ನಡೆಯಲಿರುವ ಸಮ್ಮೇಳನದಲ್ಲಿ ಸನ್ಮಾನಿಸಲಾಗುತ್ತದೆ.

ವಿಬಿ-ಜಿ ರಾಮ್‌ಜಿ ಲೋಗೊ ವಿನ್ಯಾಸ ಸ್ಪರ್ಧೆ

ಬೆಳಕಿನ ಮಾರಾಟಕ್ಕೆ ಎಸ್ಕಾಂ ಆಕ್ಷೇಪ

» ಮೊದಲ ಪುಟದಿಂದ

ಬೆಸ್ಕಾಂ ಆಕ್ಷೇಪಣೆಗಳು

- ಪ್ರಸ್ತಾವಿತ ಪ್ರದೇಶದಲ್ಲಿ ಸ್ವತಂತ್ರ ವಿದ್ಯುತ್ ವಿತರಣಾ ಜಾಲ ನಿರ್ಮಿಸುವ ಕುರಿತು ಟಾಟಾ ಸಂಸ್ಥೆಯು ಸ್ಪಷ್ಟ ಯೋಜನೆ ಸಲ್ಲಿಸಿಲ್ಲ. ಬದಲಾಗಿ, ಬೆಸ್ಕಾಂನ ಈಗಿರುವ ಮೂಲಸೌಕರ್ಯವನ್ನು ಅವಲಂಬಿಸಿ ವಿದ್ಯುತ್ ಸರಬರಾಜು ಮಾಡಲು ಉದ್ದೇಶಿಸಿರುವುದಾಗಿ ಹೇಳಿದೆ.
- ವಿದ್ಯುತ್ ಖರೀದಿ ಯೋಜನೆ ಕುರಿತಂತೆ ಅಲ್ಪಾವಧಿ ವಿದ್ಯುತ್ ಖರೀದಿಯು ಹೆಚ್ಚಿನ ಅವಲಂಬನೆಯು ಗ್ರಾಹಕರಿಗೆ ಹೆಚ್ಚುವರಿ ವೆಚ್ಚದ ಭಾರವನ್ನು ಉಂಟು ಮಾಡುವ ಸಾಧ್ಯತೆಯಿದೆ.
- ಕೈಗಾರಿಕಾ ಹಾಗೂ ವಾಣಿಜ್ಯ ವಲಯದ ಹೆಚ್ಚಿನ ಆದಾಯ ತರುವ ಗ್ರಾಹಕರನ್ನೇ ಗುರಿಯಾಗಿಸಿಕೊಂಡು ಟಾಟಾ ಸಂಸ್ಥೆ ಸೇವೆ ನೀಡುವ ಸಾಧ್ಯತೆ ಇರುವುದರಿಂದ ಸಬ್ಸಿಡಿ ಪಡೆಯುವ ಸಾಮಾನ್ಯ ಗ್ರಾಹಕರಿಗೆ ತೊಂದರೆಯಾಗುತ್ತದೆ.
- ಬೆಸ್ಕಾಂನ ಆರ್ಥಿಕ ಸ್ಥಿರತೆಗೆ ಧಕ್ಕೆಯಾಗುತ್ತದೆ.
- ಗೃಹ, ಕೃಷಿ ಹಾಗೂ ಇತರೆ ಸಬ್ಸಿಡಿ ಆಧಾರಿತ ಗ್ರಾಹಕರಿಗೆ ನೀಡಲಾಗುತ್ತಿರುವ ಕ್ರಾಸ್ ಸಬ್ಸಿಡಿ ವ್ಯವಸ್ಥೆ ದುರ್ಬಲಗೊಳ್ಳುವ ಅಪಾಯವಿದೆ.
- ಬೆಸ್ಕಾಂನ ದೀರ್ಘಾವಧಿಯ ವಿದ್ಯುತ್ ಖರೀದಿ ಒಪ್ಪಂದಗಳು, ಸಾರ್ವಜನಿಕ ಸೇವಾ ಬಾಧ್ಯತೆಗಳಿಗೆ ಧಕ್ಕೆಯಾಗಿ ಗ್ರಾಹಕರಿಗೆ ಹಣಕಾಸಿನ ಹೊರೆ ಹೆಚ್ಚುವ ಸಾಧ್ಯತೆಯಿದೆ.
- ಎಲ್ಲಾ ಗ್ರಾಹಕರಿಗೂ ಸಮರ್ಪಕ ಹಾಗೂ ಗುಣಮಟ್ಟದ ವಿದ್ಯುತ್ ಒದಗಿಸುವ ಕಾನೂನುಬದ್ಧ ಹೊಣೆಗಾರಿಕೆ ಬೆಸ್ಕಾಂ ಮೇಲಿದೆ. ಇದಕ್ಕಾಗಿ ಬೆಸ್ಕಾಂ 2035ರ ನಂತರವೂ ಮುಂದುವರಿಯುವ ದೀರ್ಘಾವಧಿಯ ಖರೀದಿ ಒಪ್ಪಂದಗಳನ್ನು ಮಾಡಿಕೊಂಡಿದ್ದು, ವಿದ್ಯುತ್ ಬಳಕೆ ಆಗದಿದ್ದರೂ ನಿಗದಿತ ಸ್ಥಿರ ಶುಲ್ಕಗಳನ್ನು ಪಾವತಿಸಬೇಕಾಗಿದೆ. ಟಿಪಿಸಿಎಲ್‌ಗೆ ಇಂತಹ ಯಾವುದೇ ಹೊಣೆಗಾರಿಕೆಗಳಿಲ್ಲ.
- ಟಿಪಿಸಿಎಲ್‌ನ ವ್ಯವಹಾರ ಮಾದರಿಯು ಹೆಚ್ಚುವರಿ ದರ ಪಾವತಿಸುವ ಗ್ರಾಹಕರನ್ನು ಆಕರ್ಷಿಸುವುದರ ಮೇಲೆ ಕೇಂದ್ರೀಕೃತವಾಗಿದೆ. ಇದರಿಂದ ಬೆಸ್ಕಾಂ ತನ್ನ ಶೇ.80ರಷ್ಟು ಕ್ರಾಸ್ ಸಬ್ಸಿಡಿ ಪಡೆಯುವ ವರ್ಗದ ಗ್ರಾಹಕರಿಗೆ ಸೇವೆ ಒದಗಿಸಲು ಅವಲಂಬಿಸಿರುವ ಆರ್ಥಿಕ ಆಧಾರವೇ ದುರ್ಬಲಗೊಳ್ಳಲಿದೆ.

ಬೆಂಗಳೂರು ಪೂರ್ವ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು ರವರ ಕಚೇರಿ, ಮಾರತಳ್ಳಿ ವಿಭಾಗ,
ಬೆಳ್ಳಂದೂರು ಮುಖ್ಯ ರಸ್ತೆ, ಬೆಳ್ಳಂದೂರು, ಬೆಂಗಳೂರು: 560103

ಸಂ : ಬೆಂಪೂನಪಾ/ಕಾಅ/ಮಾರಹ/ಟೆಂಡ/01/2026-27 ದಿನಾಂಕ : 23.06.2026

ಟೆಂಡರ್‌ಗಳಿಗಾಗಿ ಆಹ್ವಾನ (ಅಲ್ಪಾವಧಿ)
(ಜಿಒಕೆ ಕೆಪಿಪಿಪಿ ಮೂಲಕ)

ಕಾರ್ಯಪಾಲಕ ಅಭಿಯಂತರರು, ಕೆ ಆರ್ ಪುರ ವಿಭಾಗ, ಇವರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ /ಸಿ ಪಿ ಡಬ್ಲ್ಯೂ ಡಿ /ಕೆ ಪಿ ಡಬ್ಲ್ಯೂ ಡಿ /ರೈಲ್ವೇಸ್ /ಎಂಇಎಸ್ ಅಥವಾ ಯಾವುದೇ ರಾಜ್ಯ/ ಕೇಂದ್ರ ಸರಕಾರದ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವ ಕಾಮಗಾರಿಗಳಿಗೆ ಐಟಂ ದರದ ಟೆಂಡರ್ ಆಹ್ವಾನಿಸಿದೆ. ಗುತ್ತಿಗೆದಾರರು ಕರ್ನಾಟಕ ಸರಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in/eportal/index.seam** ಮೂಲಕ ಗುತ್ತಿಗೆದಾರರ ಲಾಗಿನ್ ಅಡಿಯಲ್ಲಿ ಟೆಂಡರ್ ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ/ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) ಜಿಎಸ್‌ಟಿ ಹೊರತುಪಡಿಸಿ/ ಇಎಂಡಿ (ರೂ. ಗಳಲ್ಲಿ)/ಪೂರ್ಣಗೊಳಿಸುವ ಅವಧಿ
1	Comprehensive development of Roads and Drains and Other allied works in ward no. 45-Marathalli, 46-Yamlur, 47-Bellanduru, 49-Doddanekannelli, 41-Munnekollala, 48-Panathur in Marthalli Division of Mahadevapura constituency. (Sl no. From 01 to 18 of Annexure-2) Amount put to Tender : **Rs.980.00 Lakhs**, EMD (in Rupees): **Rs.14,70,000/-. Period of Completion : 09 Months.**

ಕಾರ್ಯಕ್ರಮಗಳ ವೇಳಾಪಟ್ಟಿ :
1. ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30.06.2026 ಬೆಳಿಗ್ಗೆ 11.00 ಗಂಟೆಯ ಒಳಗೆ
2. ಪ್ರೀ ಬಿಡ್ ಮೀಟಿಂಗ್‌ನ ದಿನಾಂಕ ಮತ್ತು ಸಮಯ : 30.06.2026 ಸಂಜೆ 4.00 ಗಂಟೆಗೆ.
3. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ : 04.07.2026 ಸಂಜೆ 4.00 ಗಂಟೆಯ ವರೆಗೆ.
4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 06.07.2026 ಸಂಜೆ 04.30 ಗಂಟೆಗೆ.
5. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 07.07.2026 ಸಂಜೆ 04.00 ಗಂಟೆಗೆ.
6. ಟೆಂಡರ್‌ಗಳ ಮಾನ್ಯತೆ : 180 ದಿನಗಳು.

ಟೆಂಡರ್ ಗೆ ಸಂಬಂಧಿಸಿದ ಇತರ ನಿಯಮ ಮತ್ತು ಷರತ್ತುಗಳಿಗೆ ಟೆಂಡರ್ ದಸ್ತಾವೇಜು ಗಳನ್ನು ಉಲ್ಲೇಖಿಸಬಹುದು ಮತ್ತು ಯಾವುದೇ ತಿದ್ದುಪಡಿ /ಸೇರ್ಪಡೆಗಳನ್ನು **https://kppp.Karnataka.gov.in** ನಲ್ಲಿ ಮಾತ್ರ ಪ್ರಕಟಿಸಲಾಗುವುದು ಅಥವಾ ಕೆಪಿಪಿಪಿ ಪೋರ್ಟಲ್ ಸಂಪರ್ಕಿಸಿ

ಸಹಿ/- ಕಾರ್ಯಪಾಲಕ ಅಭಿಯಂತರರು, ಮಾರತಹಳ್ಳಿ ವಿಭಾಗ, ಬಿಇಸಿಸಿ

PUBLIC NOTICE

It is hereby notified that, my clients have agreed to purchase the Schedule Property from its Owner **M/s. KIMSONS INDUSTRIAL PRODUCTS**, a registered Partnership Firm, having its Office at No.4/2, Kimsons Building, 3rd Cross, Kalasipalyam New Extension, Bengaluru-560002, represented by its Partners : **(i)Mr.SALEEM ULLA @ G.MOHAMMED SALEEM ULLA** S/o late Mr.G.Mohammed Khasim **and (ii) Mr.K.MOHAMMED WAHEED REHMAN** S/o late Mr.G.Mohammed Khasim, represented by his GPA holder: **Mr.SALEEM ULLA @ G.MOHAMMED SALEEM ULLA**. If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **14 (Fourteen) days** from the date of publication of this notice. Objection/s received thereafter will not be binding on my clients.

SCHEDULE

All that piece and parcel of the vacant **Site/land bearing Sy.No.286/2**, having E.P.I.D.No.8000010217, measuring East to West (35.6+27.6)/2 Mtrs and North to South 76 Mtrs, in all measuring 2401.6 Sq.Mtrs, situated at **HRBR Layout 2nd Block**, Banasawadi Village, Bengaluru and bounded as follows:

East by : Road
West by : Remaining portion of land in Sy.No.286/2
North by : Road
South by : Remaining portion of land in Sy.No.286/2

Sd/- BAYYA REDDY. M, Advocate
No.101, 4th Floor, Sri Manjunatha Complex,
22nd Main Road, BSK 2nd Stage, Opp : Banashankari
BDA Complex, Bengaluru-560070.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ

ಕ್ರ.ಸಂ.:ಪಂರಾಇಂ/ವಿಬೆ/ಪಿಬಿ-3/ಟೆಂಡರ್-15/2026-27/ ದಿನಾಂಕ: 23-06-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1 & 2ರಲ್ಲಿ ಒಟ್ಟು 17 (**27466, 27461, 27459, 27467, 27468, 27470, 27458, 27482, 27469, 27472, 27471, 27460, 27517, 27049/CALL-2, 16814/CALL-2, 3707/CALL-3, 27516**) ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ.70.00 ಹಾಗೂ ರೂ.5.19 ಲಕ್ಷಗಳು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ.1,40,000/- ಹಾಗೂ 6875/-ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ **ದಿನಾಂಕ: 07-07-2026 ಸಂಜೆ 17:28 ರೊಳಗಾಗಿ**, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ **ದಿನಾಂಕ: 07-07-2026 ಸಂಜೆ 17.30 ಗಂಟೆಯವರೆಗೆ**, ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 09-07-2026. ಮುಂಜಾನೆ 11:00 ಗಂಟೆಯ** ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 09-07-2026 ರಂದು ಮುಂಜಾನೆ 11.30 ಗಂಟೆಗೆ** ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in**ರಲ್ಲಿ ಪಡೆಯಬಹುದು.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.

ವಾ.ಸಾ.ಸಂ.ಇ./ಬೆಳಗಾವಿ/486/ 2026-27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾವೇರಿ

ಟೆಂಡರ್ ಸಂ:ಜಿಪವಕಇಹಾ/ಮೊದೇವಶಾ/ಟೆಂಡರ್/ಸಿಆರ್-2/2026-27 ದಿನಾಂಕ: 20-06-2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ದ್ವಿ-ಲಕೋಟೆ

2026-27 ನೇ ಸಾಲಿಗೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಗ್ರೂಪ್: "ಸಿ" ಮತ್ತು "ಡಿ" ವೃಂದಗಳಿಗೆ ಸ್ಟಾಫ್ ನರ್ಸ್, ಅಡುಗೆಯವರು ಅಡುಗೆ ಸಹಾಯಕರು, ಸ್ವಚ್ಚತಾ ಸಿಬ್ಬಂದಿ, ಕಾವಲುಗಾರರು, ಜವಾನರು ಹುದ್ದೆಗಳಿಗೆ ಹೊರಸಂಪನ್ಮೂಲ ಸಿಬ್ಬಂದಿ ಸೇವೆ ಪಡೆಯಲು ಟೆಂಡರ್ ಆಹ್ವಾನಿಸುವ ಕುರಿತು.

1	ಟೆಂಡರ್ ಪ್ರಕಟಣೆ ದಿನಾಂಕ:	20-06-2026
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಅಂದಾಜು ಮೊತ್ತ ರೂ, 106.58 ಲಕ್ಷಗಳು
3	ಟೆಂಡರ್ ಫಾರಂ ಬೆಲೆ	As per kpp-Portal
4	ಟೆಂಡರ್ ಫಾರಂ ಸಲ್ಲಿಸಲು E-Portal ಲಭ್ಯವಾದ ದಿನಾಂಕ:	As per kpp-Portal
5	ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ	ದಿನಾಂಕ:07-07-2026 ರಂದು ಸಾಯಂಕಾಲ 05.00 ಗಂಟೆ
6	ಪ್ರಿ-ಬಿಡ್ ಮೀಟಿಂಗ್ ದಿನಾಂಕ	25-06-2026
7	ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ ಅಥವಾ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಚಿಸುವ ಇತರೇ ದಿನಾಂಕದಂದು (ಬದಲಾವಣೆಗೆ ಒಳಪಟ್ಟಿರುತ್ತದೆ)	ದಿನಾಂಕ: 08-07-2026 ರಂದು ಸಾಯಂಕಾಲ 5.00 ಗಂಟೆ
8	ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ ಅಥವಾ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಚಿಸುವ ಇತರೇ ದಿನಾಂಕದಂದು (ಬದಲಾವಣೆಗೆ ಒಳಪಟ್ಟಿರುತ್ತದೆ)	ದಿನಾಂಕ:13-07-2026 ರಂದು ಸಾಯಂಕಾಲ 5.00 ಗಂಟೆ
9	ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ: 266453/-
10	ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ	**http://kppp.karnataka.gov.in** ಹಾಗೂ ಕಚೇರಿ ವೇಳೆಯಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಜಿಲ್ಲಾಡಳಿತ ಭವನ "ಸಿ" ಬ್ಲಾಕ್ ರೂಮ್ ನಂ: 38 ದೇವಗಿರಿ. ಹಾವೇರಿ - ಫೋನ್ 08375-249022

ಸಹಿ/-ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು
ಹಾವೇರಿ

ವಾ.ಸಾ.ಸಂ.ಇ/ಹಾವೇರಿ/188/ದೇಶಪಾಂಡೆಪಬ್ಲಿಸಿಟಿ/2026-27

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ ನಿವೇಶನ ಖಾತೆ ನಂ. 31-511-371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110.

ಸಂ: ಬಿಐಎಎಪಿಎ/ಟಿಪಿ/ಭೂಉಬ/195/2025-26/26-27/808 ದಿನಾಂಕ : 18.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ಭೂಉಪಯೋಗ ವಲಯದಿಂದ **ಕೈಗಾರಿಕೆ ವಲಯ**ಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ.	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ ಎ.ಎಂ. ಮೊಹಮದ್ ಅಮಾನುಲ್ಲಾ ಬಿನ್ ಲೇ॥ ಎಂ.ಅಬ್ದುಲ್ಲ	ದೇವನಹಳ್ಳಿ	ಕುಂದಾಣ	ಮುದ್ದ ನಾಯಕನಹಳ್ಳಿ	9/3	0-23	ವ್ಯವಸಾಯ	**ಕೈಗಾರಿಕೆ**

<u>ಷರಾ</u> :- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಸದರಿ ಜಮೀನುಗಳ ಪರಿಸರದಲ್ಲಿ ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನುಗಳ ಪರಿಸರದಲ್ಲಿ ಕೈಗಾರಿಕೆ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ಕೈಗಾರಿಕೆ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ಕೈಗಾರಿಕೆ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ ಕೈಗಾರಿಕೆ ಬೆಳವಣಿಗೆಗಳನ್ನು ಅಭಿವೃದ್ಧಿಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು **ವ್ಯವಸಾಯ** ಭೂಉಪಯೋಗ ವಲಯದಿಂದ **ಕೈಗಾರಿಕೆ** ಭೂಉಪಯೋಗ ವಲಯಕ್ಕೆ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/1319/ಎಂಎಎ/2026-27

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಬುಧವಾರ,24 ಜೂನ್ 2026
ಇಂದಿನ ತಾಪಮಾನ 22° ಕನಿಷ್ಠ 28° ಗರಿಷ್ಠ
X.com /vijaykarnataka facebook.com/vijaykarnataka www.vijaykarnataka.com

ಬದನೆಕಾಯಿ ದರವೂ ಸೆಂಚುರಿಯತ್ತ
»12

ಪ್ರಯಾಣಿಕರ ಸುರಕ್ಷತೆ, ವೇಗದ ಸಂಚಾರಕ್ಕೆ ಪೂರಕ | ದಿಲ್ಲಿ ಮಾದರಿಯಲ್ಲಿ ಸೆಮಿ ಹೈಸ್ಪೀಡ್ ಪ್ರಾದೇಶಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆಗೆ ಒಲವು

ಉಪನಗರ ರೈಲಿಗೆ ಯುರೋಪ್ ಸಿಗ್ನಲಿಂಗ್ ವ್ಯವಸ್ಥೆ

■ **ಮಯೂರ್ ಹೆಗಡೆ** ಬೆಂಗಳೂರು
mayur.hegde@timesofindia.com

ಬೆಂಗಳೂರು ಉಪನಗರ ರೈಲು ಯೋಜನೆಯಲ್ಲಿ ಯುರೋಪಿಯನ್ ಟ್ರೈನ್ ಕಂಟ್ರೋಲ್ ಸಿಸ್ಟಂ (ಇಟಿಸಿಎಸ್) ಸಿಗ್ನಲಿಂಗ್ ವ್ಯವಸ್ಥೆ ಅಳವಡಿಸಿಕೊಳ್ಳಲು ಕೆ-ರೈಡ್ ಮುಂದಾಗಿದೆ. ಇದರಿಂದ ಪ್ರಯಾಣಿಕರ ಸುರಕ್ಷತೆ, ಅತ್ಯಂತ ವೇಗದ ಸಂಚಾರ ಹಾಗೂ ಭವಿಷ್ಯದಲ್ಲಿ ಮಾರ್ಗ ವಿಸ್ತರಣೆಗೆ ಹೆಚ್ಚು ಅನುಕೂಲವಾಗಲಿದೆ.

ಮೆಟ್ರೊ ತಂತ್ರಜ್ಞಾನಕ್ಕಿಂತ ಪರಿಣಾಮಕಾರಿ

ಡಿಜಿಟಲ್ ಸಿಗ್ನಲಿಂಗ್ ಮತ್ತು ಸ್ವಯಂಚಾಲಿತ ರೈಲು ರಕ್ಷಣೆ ವ್ಯವಸ್ಥೆ ಇದಾಗಿದ್ದು, ಸದ್ಯ ನಮ್ಮ ಮೆಟ್ರೊದಲ್ಲಿ ಬಳಕೆಯಾಗುತ್ತಿರುವ 'ಡಿಸ್ಟೆನ್ಸ್ ಟು ಗೋ' (ಡಿಟಿಜಿ) ಹಾಗೂ ಕಮ್ಯುನಿಕೇಶನ್ ಬೇಸ್ಡ್ ಟ್ರೈನ್ ಕಂಟ್ರೋಲ್ (ಸಿಬಿಟಿಸಿ) ಸಿಗ್ನಲಿಂಗ್ ತಂತ್ರಜ್ಞಾನಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿರಲಿದೆ.

''ಸದ್ಯ ಉಪನಗರ ರೈಲು ಯೋಜನೆಯ ನಾಲ್ಕು ಕಾರಿಡಾರ್‌ಗಳಿಗೆ ಇಟಿಸಿಎಸ್ ಸಿಗ್ನಲಿಂಗ್ ವ್ಯವಸ್ಥೆ ಪ್ರಸ್ತಾಪಿಸಿದ್ದೇವೆ. ಇದು ಗಂಟೆಗೆ 200-250 ಕಿ.ಮೀ. ವೇಗದಲ್ಲಿ ರೈಲು ಸಂಚರಿಸಲು ಸಾಧ್ಯವಾಗುವಷ್ಟು ನೆರವು ನೀಡಲಿದೆ. ಸಬ್ ಅರ್ಬನ್ ಜಾಲ ಬೆಂಗಳೂರಿನ ಸುತ್ತಲಿನ ನಗರಗಳಿಗೆ ವಿಸ್ತರಣೆಯಾದಾಗ ಸಿಬಿಟಿಸಿ ತಂತ್ರಜ್ಞಾನ ಸೂಕ್ತವಾಗಲ್ಲ, ಅಲ್ಲದೆ, ಈ ನೆಟ್‌ವರ್ಕ್‌ನಲ್ಲಿ ವಿವಿಧ ಕಾರಿಡಾರ್‌ಗಳ ನಡುವಿನ ಅಂತರ ಕಾರ್ಯಕ್ಷಮತೆಗೆ ಹೊಂದಿಕೆ ಆಗುವುದಿಲ್ಲ. ಹೀಗಾಗಿ, ಸಿಗ್ನಲಿಂಗ್ ವ್ಯವಸ್ಥೆ ಬದಲಿಸಲು ಯೋಜಿಸಲಾಗಿದೆ,'' ಎಂದು ಕೆ-ರೈಡ್ ಮೂಲಗಳು ತಿಳಿಸಿವೆ.

ಕಾರಿಡಾರ್ ವಿಸ್ತರಣೆ: ಕೆ-ರೈಡ್ ಈ ಹಿಂದೆ ದೇವನಹಳ್ಳಿ-ಚಿಕ್ಕಬಳ್ಳಾಪುರ, ಚಿಕ್ಕಬಾಣಾವರ-ಕುಣಿಗಲ್ ಸೇರಿದಂತೆ ಸುಮಾರು 146 ಕಿಮೀ ಹೆಚ್ಚುವರಿ ಉಪನಗರ ರೈಲು ಕಾರಿಡಾರ್‌ಗಳನ್ನು ವಿಸ್ತರಿಸಲು ಪ್ರಸ್ತಾಪಿಸಿತ್ತು. ಆದರೆ, ನೈಋತ್ಯ ರೈಲ್ವೆ ಇದನ್ನು ತಿರಸ್ಕರಿಸಿತ್ತು. ಮತ್ತೊಂದೆಡೆ, ಕರ್ನಾಟಕ ಸರಕಾರವು ದಿಲ್ಲಿ ಮಾದರಿಯಲ್ಲಿ ಬೆಂಗಳೂರಿನಿಂದ ಮೈಸೂರು, ತುಮಕೂರು, ಕೋಲಾರ ಮುಂತಾದ ನಗರಗಳಿಗೆ 5 ಸೆಮಿ-ಹೈ-ಸ್ಪೀಡ್ ಪ್ರಾದೇಶಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆ (ಆರ್‌ಆರ್‌ಟಿಎಸ್) ಕಾರಿಡಾರ್‌ಗಳನ್ನು ಪ್ರಸ್ತಾಪಿಸಿದೆ. ''ತಾಂತ್ರಿಕವಾಗಿ ಆರ್‌ಆರ್‌ಟಿಎಸ್ ಎಂಬುದು ಉಪನಗರ ರೈಲಿನ ಮುಂದಿನ ಹಂತವಾಗಿದೆ. ನಮ್ಮ ಮೂಲಸೌಕರ್ಯ ಮತ್ತು ಸಿಗ್ನಲಿಂಗ್ ವಿನ್ಯಾಸವನ್ನು ಭವಿಷ್ಯದಲ್ಲಿ ಹೆಚ್ಚಿನ ವೇಗದ ಕಾರ್ಯಾಚರಣೆಗೆ ಬೆಂಬಲಿಸುವ ರೀತಿಯಲ್ಲಿ ಯೋಜಿಸಲಾಗುತ್ತಿದೆ,'' ಎಂದು ಕೆ-ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಸ್ತುತ, ಇಟಿಸಿಎಸ್ (ಲೆವೆಲ್-2) ಸಿಗ್ನಲಿಂಗ್ ವ್ಯವಸ್ಥೆಯು ದಿಲ್ಲಿ-ಘಾಜಿಯಾಬಾದ್-ಮೀರತ್ ನಮೋ ಭಾರತ್ ಕಾರಿಡಾರ್‌ನಲ್ಲಿ ಬಳಕೆಯಾಗುತ್ತಿದೆ. ಅಲ್ಲದೆ 508 ಕಿಮೀ ಉದ್ದದ ಮುಂಬಯಿ -ಅಹಮದಾಬಾದ್ ಬುಲೆಟ್ ಟ್ರೈನ್ ಯೋಜನೆಗೂ ಇದನ್ನು ಪ್ರಸ್ತಾಪಿಸಲಾಗಿದೆ.

ಪ್ರಯಾಣಿಕರಿಗೆ ಲಾಭವೇನು?

01 ಸ್ವಯಂಚಾಲಿತ ಸುರಕ್ಷತೆ
ಈ ವ್ಯವಸ್ಥೆಯು ರೈಲುಗಳು ಮತ್ತು ಟ್ರ್ಯಾಕ್‌ಸೈಡ್ ಉಪಕರಣಗಳ ನಡುವೆ ನಿರಂತರ ಸಂಪರ್ಕವನ್ನು ಕಲ್ಪಿಸುತ್ತದೆ. ಇದು ಸ್ವಯಂಚಾಲಿತ ರೈಲು ಸುರಕ್ಷತೆ(ಎಟಿಪಿ) ಮತ್ತು ಸ್ವಯಂಚಾಲಿತ ರೈಲು ಕಾರ್ಯಾಚರಣೆ (ಎಟಿಒ) ಮತ್ತು ಸ್ವಯಂಚಾಲಿತ ರೈಲು ಮೇಲ್ವಿಚಾರಣೆ (ಎಟಿಎಸ್) ಒಳಗೊಂಡ ಸಂಯೋಜಿತ ವ್ಯವಸ್ಥೆಯಾಗಿದ್ದು, ಹೆಚ್ಚಿನ ಸುರಕ್ಷತೆ ನೀಡುತ್ತದೆ.

02 ಕಾಯುವ ಸಮಯ ಕಡಿತ
ರೈಲುಗಳ ಸಂಚಾರದ ನಡುವಿನ ಸಮಯದ ಅಂತರವನ್ನು ಕಡಿಮೆ ಮಾಡುತ್ತದೆ. ಇದರಿಂದಾಗಿ ಹೆಚ್ಚಿನ ರೈಲುಗಳನ್ನು ಓಡಿಸಲು ಮತ್ತು ಪ್ರಯಾಣಿಕರ ಕಾಯುವ ಸಮಯವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ.

03 ರೈಲು ಬದಲಾಯಿಸುವ ಅಗತ್ಯವಿಲ್ಲ
ಪ್ರಮುಖ ಅನುಕೂಲವೆಂದರೆ ಅಂತರ-ಕಾರ್ಯಕ್ಷಮತೆ. ಪ್ರಯಾಣಿಕರು ರೈಲುಗಳನ್ನು ಬದಲಾಯಿಸದೆಯೇ ಒಂದೇ ರೈಲಿನಲ್ಲಿ ಬೇರೆಬೇರೆ ಕಾರಿಡಾರ್‌ಗಳಿಗೆ ಪ್ರಯಾಣಿಸಲು ಅನುವು ಮಾಡಿಕೊಡುತ್ತದೆ.

ಯೋಜನೆಯ ಗಡುವು

ಈಚೆಗೆ ನಡೆದ ಪ್ರಧಾನಿ ಕಾರ್ಯಾಲಯದ ಪರಿಶೀಲನಾ ಸಭೆಯಲ್ಲಿ ಬೆನ್ನಿಗಾನಹಳ್ಳಿ - ಚಿಕ್ಕಬಾಣಾವರ 'ಮಲ್ಲಿಗೆ' ಮಾರ್ಗವನ್ನು 2028ರ ಡಿಸೆಂಬರ್, ಹೀಲಲಿಗೆ - ರಾಜಾನುಕುಂಟೆ 'ಕನಕ' ಮಾರ್ಗವನ್ನು 2029ರ ಜೂನ್ ಹಾಗೂ ಕೆಎಸ್‌ಆರ್ ಬೆಂಗಳೂರು ಸಿಟಿಯಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ದೇವನಹಳ್ಳಿಗೆ ಸಂಪರ್ಕ ಕಲ್ಪಿಸುವ 'ಸಂಪಿಗೆ' ಮಾರ್ಗ, ಕೆಂಗೇರಿ - ವೈಟ್ ಫೀಲ್ಡ್ 'ಪಾರಿಜಾತ' ಮಾರ್ಗವನ್ನು '2030'ಕ್ಕೆ ಪೂರ್ಣಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ.

ಜಾಲ ವಿಸ್ತರಣೆಗೆ ಅನುಕೂಲ
ಮೊದಲು ಉಪನಗರ ರೈಲು ಯೋಜನೆಯ ವಿಸ್ತೃತ ಯೋಜನಾ ವರದಿಯಲ್ಲಿ ನಮ್ಮ ಮೆಟ್ರೊದ ಹಳದಿ, ಗುಲಾಬಿ ಮತ್ತು ನೀಲಿ ಲೈನ್‌ಗಳಲ್ಲಿ ಬಳಕೆಯಾಗಲಿರುವ ಸಿಬಿಟಿಸಿ ಸಿಗ್ನಲಿಂಗ್ ವ್ಯವಸ್ಥೆಯನ್ನೇ ಪ್ರಸ್ತಾಪಿಸಲಾಗಿತ್ತು. ಆದರೆ, ಭವಿಷ್ಯದ ಪ್ರಾದೇಶಿಕ ಮತ್ತು ನಗರ ರೈಲು ವಿಸ್ತರಣೆಗಳಿಗೆ ಇಟಿಸಿಎಸ್ ಹೆಚ್ಚು ಪೂರಕವಾಗಿದೆ. ನಗರದೊಳಗೆ ರೈಲುಗಳು ಪ್ರತಿ 1-2 ಕಿಲೋಮೀಟರ್‌ಗೆ ನಿಲ್ಲುತ್ತವೆ. ಇದಕ್ಕೆ ಸಿಬಿಟಿಸಿ ಸೂಕ್ತ. ಆದರೆ, ಹೊರವಲಯ ಮತ್ತು ನೆರೆಯ ಜಿಲ್ಲೆಗಳಿಗೆ ಸಬ್‌ಅರ್ಬನ್ ರೈಲು ಜಾಲ ವಿಸ್ತರಣೆಯಾದಾಗ ಯೂರೋಪ್ ಮಾದರಿಯ ಈ ಸಿಗ್ನಲಿಂಗ್ ವ್ಯವಸ್ಥೆ ಅತ್ಯಂತ ವೇಗದ ರೈಲು ಸಂಚಾರಕ್ಕೆ ಅನುವು ಮಾಡಿಕೊಡುತ್ತದೆ.

'ಕಡಿಮೆ ಅಗಲದ ರಸ್ತೆ ಮಧ್ಯೆಯೂ ಬಿಳಿ ಬಣ್ಣದ ಮಾರ್ಕಿಂಗ್ ಮಾಡಿ'

ಬೆಂಗಳೂರು: ನಗರದಲ್ಲಿ 4 ಮೀಟರ್‌ಗಿಂತ ಕಡಿಮೆ ಅಗಲವಿರುವ ರಸ್ತೆಗಳ ಮಧ್ಯಭಾಗದಲ್ಲೂ ಬಿಳಿ ಬಣ್ಣದ ಮಾರ್ಕಿಂಗ್ ಮಾಡಬೇಕು. ರಸ್ತೆಯ ಅಂಚಿನಲ್ಲಿ ಮಾರ್ಕಿಂಗ್ ಮಾಡಬೇಕಾದ ಅಗತ್ಯವಿಲ್ಲ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು. ಕಾರಿನಲ್ಲಿ ಸಂಚರಿಸುವ ಸಂದರ್ಭದಲ್ಲೇ ಮೊಬೈಲ್‌ನಲ್ಲಿ ಮಂಗಳವಾರ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಜಿಬಿಎ ಮುಖ್ಯ ಆಯುಕ್ತರೂ ಸೇರಿದಂತೆ ಇತರೆ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದರು. ''ಎಂಜಿನಿಯರ್‌ಗಳಿಗೆ ಸಮರ್ಪಕವಾಗಿ ಕೆಲಸ ಮಾಡುವಂತೆ ಸೂಚನೆ ನೀಡಿದರೆ, ಥಿಯರಿ, ಲೆಕ್ಚರ್ ಕೊಡ್ತಾರೆ. ಆದರೆ, ಥಿಯರಿಗೂ ಕೆಲಸಕ್ಕೂ ಸಂಬಂಧವೇ ಇರುವುದಿಲ್ಲ. ರಸ್ತೆ ಗುಂಡಿಗಳನ್ನು ಮುಚ್ಚದೆಯೇ ನೇರವಾಗಿ ಡಾಂಬರೀಕರಣ ಮಾಡಿದರೆ, ರಸ್ತೆಗಳು ಹೆಚ್ಚು ಕಾಲ ಬಾಳಿಕೆ ಬರುವುದಿಲ್ಲ. ಐಆರ್‌ಸಿಯಲ್ಲಿ ಏನಿದೆಯೋ ಗೊತ್ತಿಲ್ಲ. ಅಧಿಕಾರಿಗಳು ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡಬೇಕು. ರಸ್ತೆ ಗುಂಡಿ ಮುಚ್ಚಿದ ನಂತರವೇ ಡಾಂಬರು ಹಾಕಬೇಕು. ಈ ಸಂಬಂಧ ಅಂದಾಜು ವೆಚ್ಚ ಸಿದ್ಧಪಡಿಸಿ ಟೆಂಡರ್ ಕರೆಯಬೇಕು,'' ಎಂದು ಸೂಚಿಸಿದರು. ''ರಸ್ತೆ ಮಧ್ಯಭಾಗದಲ್ಲಿ ಬಿಳಿ ಬಣ್ಣದ ಮಾರ್ಕಿಂಗ್ ಮಾಡುವಂತೆ ಸಾವಿರ ಬಾರಿ ಹೇಳಿದ್ದೇನೆ. ಆದರೂ, ರಸ್ತೆಯ ಅಂಚಿನಲ್ಲಷ್ಟೇ ಮಾರ್ಕಿಂಗ್ ಮಾಡಲಾಗುತ್ತಿದೆ. ಇದರಿಂದ ಎಡ ಭಾಗದಲ್ಲಿ ಸಂಚರಿಸುವವರು ಬಲ ಭಾಗದತ್ತ, ಬಲ ಭಾಗಕ್ಕೆ ತೆರಳಬೇಕಿರುವವರು ಎಡ ಭಾಗದಿಂದ ಚಲಿಸುತ್ತಾರೆ. ಇದರಿಂದ ಸಮಸ್ಯೆಯಾಗುತ್ತಿದೆ. ಎಂಜಿನಿಯರ್‌ಗಳ ಮೆದುಳು ನಿಷ್ಕ್ರಿಯವಾಗಿದೆಯೋ ಏನೋ ಗೊತ್ತಿಲ್ಲ, ರಸ್ತೆ ಮಾರ್ಕಿಂಗ್ ಬಗ್ಗೆ ಸೂಚಿಸಿದ್ದರೂ, ಮತ್ತೆ ತಪ್ಪು ಮಾಡುತ್ತಿದ್ದಾರೆ. ರಸ್ತೆಯ ಅಗಲವು 4 ಮೀಟರ್ ಇದ್ದರೂ ಮಧ್ಯಭಾಗದಲ್ಲಿ ಬಿಳಿ ಬಣ್ಣದ ಮಾರ್ಕಿಂಗ್ ಮಾಡಬೇಕು. ರಸ್ತೆಯ ಅಂಚಿನಲ್ಲಿ ಮಾರ್ಕಿಂಗ್ ಅಗತ್ಯವಿಲ್ಲ, ರಸ್ತೆ ಅಭಿವೃದ್ಧಿಯ ಅಂದಾಜು ಪಟ್ಟಿ ಸಿದ್ಧಪಡಿಸುವಾಗ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಟೆಂಡರ್ ಆಹ್ವಾನಿಸಬೇಕು,'' ಎಂದು ತಾಕೀತು ಮಾಡಿದರು. ''ಬೆಂಗಳೂರಿನ ರಸ್ತೆಗಳು ಇನ್ನಾದರೂ ಗುಣಮಟ್ಟದಿಂದ ಕೂಡಿರಬೇಕು. ರಸ್ತೆಗಳು ಕನಿಷ್ಠ 20-30 ವರ್ಷ ಬಾಳಿಕೆ ಬರಬೇಕು. ರಸ್ತೆ ಗುಂಡಿಗಳನ್ನು ಆದಷ್ಟು ಶೀಘ್ರವಾಗಿ ಮುಚ್ಚಿ, ಬಳಿಕ ಡಾಂಬರು ಹಾಕಬೇಕು,'' ಎಂದು ಹೇಳಿದರು.



ನೀರಿನ ಸಮಸ್ಯೆ ಎದುರಾಗದಂತೆ ಮುಂಜಾಗ್ರತಾ ಕ್ರಮಕ್ಕೆ ಸೂಚನೆ

ಬೆಂಗಳೂರು: ಮುಂಗಾರು ಮಳೆ ವಿಳಂಬವಾಗಿರುವುದರಿಂದ ನಗರಕ್ಕೆ ನೀರಿನ ಕೊರತೆ ಉಂಟಾಗುವ ಆತಂಕ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಜಲಮಂಡಳಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಸಿದ್ಧತೆ ನಡೆಸಲು ಮುಂದಾಗಿದೆ. ಈ ಕುರಿತು ಮಂಗಳವಾರ ಮಂಡಳಿಯಲ್ಲಿ ಪ್ರಗತಿ ಪರಿಶೀಲನೆ ಸಭೆ ನಡೆಸಿರುವ ಬೆಂಗಳೂರು ಜಲಮಂಡಳಿ ಅಧ್ಯಕ್ಷೆ ಡಾ.ಎನ್.ಮಂಜುಳಾ, ಮುಂಗಾರು ಹಿನ್ನಡೆಯಿಂದ ಮುಂದಿನ ದಿನಗಳಲ್ಲಿ ನಗರದಲ್ಲಿ ನೀರಿನ ಸಮಸ್ಯೆ ಎದುರಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಮಳೆ ಕೊರತೆಯಿಂದ ಭವಿಷ್ಯದಲ್ಲಿ ಉಂಟಾಗಬಹುದಾದ ನೀರಿನ ಅಭಾವವನ್ನು ಎದುರಿಸುವ ಸಿದ್ಧತೆಗಳ ಕುರಿತು, ಸದ್ಯ ಕೆಆರ್‌ಎಸ್ ಜಲಾಶಯದಲ್ಲಿ ಲಭ್ಯವಿರುವ ನೀರಿನ ಪ್ರಮಾಣ ಹಾಗೂ ಅದನ್ನು ಅತ್ಯಂತ ಎಚ್ಚರಿಕೆಯಿಂದ ಬಳಕೆ ಮಾಡುವ ಬಗ್ಗೆ ಅಧಿಕಾರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ಪರ್ಯಾಯ ವ್ಯವಸ್ಥೆಯಾಗಿ ಹೇಮಾವತಿ ಮತ್ತು ಕಬಿನಿ ಜಲಾಶಯಗಳಿಂದ ನಗರಕ್ಕೆ ನೀರು ಸರಬರಾಜು ಮಾಡುವ ಸಾಧ್ಯತೆಗಳ ಬಗ್ಗೆ ಮಾಹಿತಿ ಪಡೆದರು.

ಅಕ್ರಮವಾಗಿ ನಿವೇಶನಗಳಿಗೆ ಖಾತಾ ವಿತರಣೆ: ಎಆರ್‌ಒ ಅಮಾನತು

ಬೆಂಗಳೂರು: ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಹೇರೋಹಳ್ಳಿಯಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಬಡಾವಣೆಯಲ್ಲಿನ 50ಕ್ಕೂ ಅಧಿಕ ನಿವೇಶನಗಳಿಗೆ ಕಾನೂನುಬಾಹಿರವಾಗಿ ಎ-ಖಾತೆ ಮತ್ತು ಇ-ಖಾತಾ ಮಾಡಿಕೊಟ್ಟು ಅಕ್ರಮವೆಸಗಿದ್ದ ಸಹಾಯಕ ಕಂದಾಯ ಅಧಿಕಾರಿ ಕೆ.ಎಸ್.ಮಂಜುಳಾ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶಿಸಲಾಗಿದೆ. ಸಹಾಯಕ ಕಂದಾಯ ಅಧಿಕಾರಿ ಮಂಜುಳಾ ಅವರು ಕಾನೂನುಬಾಹಿರವಾಗಿ 50ಕ್ಕೂ ಅಧಿಕ ನಿವೇಶನಗಳಿಗೆ ಎ-ಖಾತಾ, ಇ-ಖಾತಾ ವಿತರಿಸಿರುವ ಕುರಿತು ಬಿಜೆಪಿಯ ಎನ್.ಆರ್.ರಮೇಶ್ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಲು ಪಾಲಿಕೆ ವಲಯ-1ರ ಜಂಟಿ ಆಯುಕ್ತರಿಗೆ ಆಯುಕ್ತರು ಸೂಚಿಸಿದ್ದರು. ಅದರಂತೆ ಜಂಟಿ ಆಯುಕ್ತರು ನಡೆಸಿದ ತನಿಖೆಯಲ್ಲಿ ಸಹಾಯಕ ಕಂದಾಯ ಅಧಿಕಾರಿ ಕೆ.ಎಸ್.ಮಂಜುಳಾ ಅವರು ಬೆಂಗಳೂರು ಉತ್ತರ ತಾಲೂಕಿನ ಯಶವಂತಪುರ ಹೋಬಳಿಯ ಹೇರೋಹಳ್ಳಿ ಗ್ರಾಮದ ಸರ್ವೆ ನಂ. 56/1ರಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಬಡಾವಣೆಯಲ್ಲಿನ 50ಕ್ಕೂ ಅಧಿಕ ನಿವೇಶನಗಳಿಗೆ ಎ-ಖಾತಾ, ಇ-ಖಾತಾ ಮಾಡಿಕೊಟ್ಟು, ಪಾಲಿಕೆಗೆ ಕೋಟ್ಯಂತರ ರೂ. ನಷ್ಟ ಉಂಟು ಮಾಡಿರುವುದು ಸಾಬೀತಾಗಿತ್ತು. ಹೀಗಾಗಿ, ಜಂಟಿ ಆಯುಕ್ತರ ಶಿಫಾರಸಿನಂತೆ ಮಂಜುಳಾ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಪೂರ್ವ ನಗರ ಪಾಲಿಕೆ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಮೆಟ್ರೊ ನೇರಳೆ ಮಾರ್ಗದಲ್ಲಿ ತಾಂತ್ರಿಕ ದೋಷ

■ **ವಿಕ ಸುದ್ದಿಲೋಕ** ಬೆಂಗಳೂರು

ಕಬ್ಬನ್‌ಪಾರ್ಕ್ ನಿಲ್ದಾಣದಲ್ಲಿ ಚಲಿಸುತ್ತಿದ್ದ ರೈಲಿನಲ್ಲಿ ತಾಂತ್ರಿಕ ದೋಷ

ಮೆಜೆಸ್ಟಿಕ್, ಸೆಂಟ್ರಲ್ ಕಾಲೇಜು ಸೇರಿ ಹಲವೆಡೆ ಪ್ರಯಾಣಿಕರ ಪರದಾಟ

ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕೆಲ ಕಾಲ ಪ್ರಯಾಣಿಕರು ಪರದಾಡಿದ ಘಟನೆ ಮಂಗಳವಾರ ಸಂಜೆ ನಡೆದಿದೆ.

ಕಬ್ಬನ್‌ಪಾರ್ಕ್ ಮೆಟ್ರೊ ನಿಲ್ದಾಣದಲ್ಲಿ ರೈಲು ದಿಢೀರ್ ನಿಂತಿದ್ದರಿಂದ ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರಯಾಣಿಕರು ರೈಲಿನೊಳಗೆ ಸಿಲುಕಿ ಪರದಾಡಿದರು. ಈ ವೇಳೆ ರೈಲಿನ ಬಾಗಿಲುಗಳನ್ನು ತೆರೆಯುವ ಮೂಲಕ ಲೋಕೋಪೈಲೆಟ್ ಪ್ರಯಾಣಿಕರು ರೈಲಿನಿಂದ ಇಳಿಯಲು ಸಹಕರಿಸಿದರು.

ರೈಲು ಸಂಚಾರದಲ್ಲಿ ವ್ಯತ್ಯಯವಾಗಿದ್ದರಿಂದ ಮೆಜೆಸ್ಟಿಕ್, ಎಂ.ಜಿ.ರಸ್ತೆ, ಟ್ರಿನಿಟಿ, ಹಲಸೂರು ಸೇರಿದಂತೆ ನೇರಳೆ ಮಾರ್ಗದ ಹಲವು ನಿಲ್ದಾಣಗಳಲ್ಲಿ ಪ್ರಯಾಣಿಕರು ಪರದಾಡುವಂತಾಯಿತು.

ದಿಢೀರ್ ಉಂಟಾದ ತಾಂತ್ರಿಕ ದೋಷದಿಂದ ಕೆಲ ಕಾಲ ಮಾಗಡಿ ರಸ್ತೆ, ಚಲ್ಲಘಟ್ಟ ನಡುವೆ ಹಾಗೂ ಎಂ.ಜಿ.ರಸ್ತೆ ಹಾಗೂ ವೈಟ್‌ಫೀಲ್ಡ್ ರೈಲುಗಳ ಸೇವೆ ಮಾತ್ರ ಲಭ್ಯವಾಗಿತ್ತು. ಎಂ.ಜಿ.ರಸ್ತೆಯಿಂದ ಮಾಗಡಿ ರಸ್ತೆಯವರೆಗೆ ಮತ್ತು ಕಬ್ಬನ್‌ಪಾರ್ಕ್, ವಿಧಾನಸೌಧ, ಮೆಜೆಸ್ಟಿಕ್ ಮಾರ್ಗದಲ್ಲಿ ತಾತ್ಕಾಲಿಕವಾಗಿ ಮೆಟ್ರೋ ಸೇವೆ ನಿಲ್ಲಿಸಲಾಗಿತ್ತು.

ಮೆಟ್ರೊ ಸಂಚಾರ ವಿಳಂಬವಾದ ಹಿನ್ನೆಲೆಯಲ್ಲಿ ಪ್ರಯಾಣಿಕರು ಆಟೋ, ಕ್ಯಾಬ್‌ಗಳಲ್ಲಿ ತೆರಳಲು ಮುಂದಾಗಿದ್ದರಿಂದ ಕಬ್ಬನ್ ಪಾರ್ಕ್, ಟ್ರಿನಿಟಿ ಸೇರಿ ಕೆಲ ನಿಲ್ದಾಣಗಳ ರಸ್ತೆಗಳಲ್ಲಿ ವಾಹನ ದಟ್ಟಣೆ ಕೂಡ ಉಂಟಾಯಿತು.

ಬಿಎಂಆರ್‌ಸಿಎಲ್ ವಿಷಾದ
ನೇರಳೆ ಮಾರ್ಗದಲ್ಲಿ ಉಂಟಾದ ತಾಂತ್ರಿಕ ದೋಷದ ಬಗ್ಗೆ ಬಿಎಂಆರ್‌ಸಿಎಲ್ ವಿಷಾದ ವ್ಯಕ್ತಪಡಿಸಿದೆ. ಸಂಜೆ 6.32ಕ್ಕೆ ಕಬ್ಬನ್‌ಪಾರ್ಕ್ ಬಳಿ ನೇರಳೆ ಮಾರ್ಗದ ರೈಲಿನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು. ಇದರಿಂದ ಪ್ರಯಾಣಿಕರಿಗೆ ಅಡಚಣೆ ಉಂಟಾಗಿದ್ದಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ರಸ್ತೆ ಗುಂಡಿಗಳ ಚಿತ್ರ ನೀವೂ ಕಳಿಸಿ

ಮಹಾನಗರದಲ್ಲಿ ಕೊಂಚ ಜೋರು ಮಳೆ ಸುರಿದರೂ ಡಾಂಬರು ಕಿತ್ತು ಬಂದು, ಚಂದ್ರನ ಮೇಲಿನ ಕುಳಿಗಳಂತೆ ಗುಂಡಿಗಳು ಸೃಷ್ಟಿಯಾಗುತ್ತಿವೆ. ಅಲ್ಲದೆ, ಕಳಪೆ ಕಾಮಗಾರಿಯ ಬಣ್ಣ ಬಟಾಬಯಲಾಗುತ್ತಿದೆ. ರಸ್ತೆ ಗುಂಡಿ ತಪ್ಪಿಸಲು ಹೋಗಿ ಬಿದ್ದು ಗಾಯಗೊಳ್ಳುವ ವಾಹನ ಸವಾರರಿಗೆ ಲೆಕ್ಕವಿಲ್ಲ, ಅಷ್ಟೇ ಅಲ್ಲ; ಸಾವು-ನೋವುಗಳು ಸಂಭವಿಸುತ್ತಲೇ ಇವೆ. ರಸ್ತೆ ಗುಂಡಿಗಳನ್ನು ಮುಚ್ಚುವ ಸಲುವಾಗಿಯೇ ಪ್ರತಿ ವರ್ಷ ಸಾವಿರಾರು ಕೋಟಿ ರೂ. ವ್ಯಯಿಸಲಾಗುತ್ತಿದೆ. ಆದಾಗ್ಯೂ, ದುರ್ಬೀನು ಹಾಕಿ ಹುಡುಕಿದರೂ ಗುಂಡಿಗಳಿಲ್ಲದ ರಸ್ತೆಗಳು ಕಾಣ ಸಿಗುವುದಿಲ್ಲ, ಸಾರ್ವಜನಿಕರು ತಾವು ನಿತ್ಯ ಸಂಚರಿಸುವ ಹಾಗೂ ತಮ್ಮ ಪ್ರದೇಶದ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು ಕಂಡು ಬಂದರೆ, ಫೋಟೊಗಳನ್ನು ತೆಗೆದು ಕಳುಹಿಸಬಹುದು. ಫೋಟೊ ಜತೆಗೆ ರಸ್ತೆಯ ಹೆಸರು, ಯಾವ ಪ್ರದೇಶ ಎಂಬುದನ್ನು ಬರೆದು ಕಳುಹಿಸಬಹುದು.

76766 68588

ಕಸ ಸಂಗ್ರಹದ ಆಟೊಗಳ ನಿಗಾಕ್ಕೆ 'ಮಾತ್ರ' ಆ್ಯಪ್ ಬಳಕೆ

ಬೆಂಗಳೂರು: ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮನೆ-ಮನೆಯಿಂದ ಕಸ ಸಂಗ್ರಹಿಸುವ ವ್ಯವಸ್ಥೆ ಮೇಲೆ ನಿಗಾ ಇಡುವ ಉದ್ದೇಶದಿಂದ ಪ್ರಾಯೋಗಿಕವಾಗಿ 25 ಆಟೊ ಟಿಪ್ಪರ್‌ಗಳ ಚಾಲಕರ ಮೊಬೈಲ್‌ಗಳಿಗೆ 'ಮಾತ್ರ' ಅಪ್ಲಿಕೇಷನ್ ಅಳವಡಿಸಲಾಗಿದೆ.

''ಈ ಅಪ್ಲಿಕೇಷನ್ ಮೂಲಕ ಕಸ ಸಂಗ್ರಹ ಆಟೊಗಳು ನಿಗದಿತ ಸಮಯದಲ್ಲಿ ಕಾರ್ಯ ನಿರ್ವಹಿಸುತ್ತಿವೆಯೇ? ಯಾವ ಮಾರ್ಗದಲ್ಲಿ ಸಂಚರಿಸುತ್ತಿವೆ, ಎಷ್ಟು ದೂರ ಕ್ರಮಿಸಿವೆ ಹಾಗೂ ಎಷ್ಟು ತಾಸು ಕೆಲಸ ಮಾಡಿವೆ ಎಂಬುದರ ಮಾಹಿತಿ ಲಭ್ಯವಾಗುತ್ತದೆ,'' ಎಂದು ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ತಿಳಿಸಿದರು.

ಮದ್ಯವ್ಯಸನಿಗಳಾಗಿದ್ದ ತಾಯಿ-ಮಗ | ಕುಡಿತ ಬೇಡ ಎಂದಿದ್ದಕ್ಕೆ ಕೃತ್ಯ | ಅಜ್ಜಿ ಕೊಂದು ತಂದೆಗೆ ಕರೆ ಮಾಡಿದ್ದ ಹಂತಕ

ಪುತ್ರನ ಜತೆ ಸೇರಿ ತಾಯಿ ಕೊಂದ ಮಗಳು

■ **ವಿಕ ಸುದ್ದಿಲೋಕ** ಬೆಂಗಳೂರು

ಮದ್ಯಸೇವನೆ ತ್ಯಜಿಸುವಂತೆ ಬುದ್ಧಿವಾದ ಹೇಳಿದ ಅಜ್ಜಿಯನ್ನು ತನ್ನ ತಾಯಿ ಜತೆ ಸೇರಿ ಮೊಮ್ಮಗನೇ ಕೊಲೆಗೈದಿರುವ ದಾರುಣ ಘಟನೆ ಕೆಂಗೇರಿ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.

ಹಾಸನ ಮೂಲದ ಜಯಮ್ಮ (70) ಕೊಲೆಯಾದವರು. ಕೊಲೆ ಆರೋಪಿಗಳಾದ ಜಯಮ್ಮನ ಮಗಳಾದ ಭಾಗ್ಯಲಕ್ಷ್ಮಿ (49), ಮೊಮ್ಮಗ ಕುಶಾಲ್ (26) ಎಂಬುವವರನ್ನು ಪೊಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ.

ಹದಿನೈದು ವರ್ಷಗಳ ಹಿಂದೆ ತನ್ನ ಪತಿ ಕೃಷ್ಣನಾಯ್ಕ್ ಅವರಿಂದ ದೂರಾಗಿದ್ದ ಭಾಗ್ಯಲಕ್ಷ್ಮಿ ಪುತ್ರ ಕುಶಾಲ್ ಜತೆ ಸುಭಾಷ್‌ನಗರದ ಮೋನಿಷಾ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಫ್ಲ್ಯಾಟ್‌ನಲ್ಲಿ ವಾಸಿಸುತ್ತಿದ್ದರು.

ಪದವೀಧರನಾಗಿದ್ದ ಕುಶಾಲ್ ಮದ್ಯವ್ಯಸನಿಯಾಗಿದ್ದ. ತಾಯಿ ಭಾಗ್ಯಲಕ್ಷ್ಮಿ ಕೂಡ ಮದ್ಯ ಸೇವಿಸುತ್ತಿದ್ದರು. ತಾಯಿ-ಮಗ ಮದ್ಯ ಸೇವಿಸಿ ಗಲಾಟೆ ಮಾಡುತ್ತಿದ್ದರಿಂದ ಅಪಾರ್ಟ್‌ಮೆಂಟ್ ಅಸೋಸಿಯೇಶನ್ ಹಲವು ಬಾರಿ ಎಚ್ಚರಿಕೆ ನೀಡಿತ್ತು. ಜತೆಗೆ, ಕುಶಾಲ್‌ನನ್ನು ಮದ್ಯವ್ಯಸನ ಮುಕ್ತ ಕೇಂದ್ರಕ್ಕೂ ಸೇರಿಸಲಾಗಿತ್ತು. ಒಂದು ತಿಂಗಳ ಹಿಂದೆ ಅಲ್ಲಿಂದ ವಾಪಸ್ ಬಂದಿದ್ದ.

ಈ ನಡುವೆ, ಭಾಗ್ಯಲಕ್ಷ್ಮಿ ತಾಯಿ ಜಯಮ್ಮ ಕೆಲದಿನಗಳ ಹಿಂದೆ ಫ್ಲ್ಯಾಟ್‌ಗೆ ಬಂದಿದ್ದರು. ಭಾನುವಾರ ತಡರಾತ್ರಿ ತಾಯಿ-ಮಗ ಮದ್ಯ ಸೇವಿಸಿದ್ದು, ಇದನ್ನು ಜಯಮ್ಮ ಆಕ್ಷೇಪಿಸಿದ್ದರು. ಇದೇ ವಿಚಾರಕ್ಕೆ ಜಗಳ ನಡೆದಿದ್ದು ಮದ್ಯದ ಅಮಲಿನಲ್ಲಿದ್ದ ತಾಯಿ-ಮಗ, ಬ್ಯಾಟ್ ಹಾಗೂ ದೊಣ್ಣೆಯಿಂದ ಜಯಮ್ಮನ ತಲೆಗೆ ಹೊಡೆದು ಕೊಲೆಗೈದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲೆ ಬಳಿಕ ಕರೆ?: ಅಜ್ಜಿ ಜಯಮ್ಮನನ್ನು ಕೊಂದ ಬಳಿಕ ಕುಶಾಲ್, ತನ್ನ ತಾಯಿ ಜತೆ ಅದೇ ಮನೆಯಲ್ಲಿ ಸೋಮವಾರ ಸಾಯಂಕಾಲದವರೆಗೂ ಇದ್ದ. ಬಳಿಕ ತಂದೆ ಕೃಷ್ಣನಾಯ್ಕ್ ಹಾಗೂ ಚಿಕ್ಕಪ್ಪ ಸ್ವಾಮಿನಾಯ್ಕ್‌ಗೆ ದೂರವಾಣಿ ಕರೆ ಮಾಡಿ ಮದ್ಯ ಖರೀದಿಗೆ ಹಣ ಕಳಿಸುವಂತೆ ತಿಳಿಸಿದ್ದ. ಆದರೆ ಅವರು ಹಣಕೊಡಲು ನಿರಾಕರಿಸಿದ್ದರು. ಪುನಃ ಚಿಕ್ಕಪ್ಪ ಸ್ವಾಮಿನಾಯ್ಕ್‌ಗೆ ಕರೆಮಾಡಿ ಅಜ್ಜಿ ಮೃತಪಟ್ಟಿದ್ದ ವಿಚಾರ ತಿಳಿಸಿದ್ದ. ಇದರಿಂದ ಆತಂಕಗೊಂಡ ಸ್ವಾಮಿನಾಯ್ಕ್ ಪೊಲೀಸರಿಗೆ ಮಾಹಿತಿ ನೀಡಿದ್ದರು. ಕೂಡಲೇ ಪೊಲೀಸರು ಸ್ಥಳಕ್ಕೆ ಆಗಮಿಸಿದ್ದರು. ಮನೆಯ ಬಾತ್‌ರೂಂನ ಬಳಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಜಯಮ್ಮನ ಮೃತದೇಹವನ್ನು ಪೊಲೀಸರು ಮಹಜರು ನಡೆಸಿ ವಶಪಡಿಸಿಕೊಂಡರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಸ್ತಿ ಮಾರುತ್ತಿದ್ದ ತಾಯಿ-ಮಗ

ಗಂಡನಿಂದ ದೂರಾದ ಬಳಿಕ ಮದ್ಯವ್ಯಸನಿಯಾಗಿದ್ದ ಭಾಗ್ಯಲಕ್ಷ್ಮಿ ಹಾಗೂ ಕುಶಾಲ್, ತಮ್ಮ ಹೆಸರಿನಲ್ಲಿದ್ದ ನಿವೇಶನಗಳನ್ನು ಮಾರಾಟ ಮಾಡಿ ದುಂದು ವೆಚ್ಚ ಮಾಡುತ್ತಿದ್ದರು. ಈ ವಿಚಾರಕ್ಕೆ ಜಯಮ್ಮ ಕೂಡ ಅಸಮಾಧಾನಗೊಂಡಿದ್ದು, ಮಗಳು ಹಾಗೂ ಮೊಮ್ಮಗನಿಗೆ ಹಲವು ಬಾರಿ ಬುದ್ಧಿವಾದ ಹೇಳಿದರೂ ಸರಿಹೋಗಿರಲಿಲ್ಲ. ಭಾನುವಾರ ರಾತ್ರಿಯೂ ಇದೇ ವಿಚಾರಕ್ಕೆ ಜಗಳ ಆರಂಭವಾಗಿ ಜಯಮ್ಮನ ಕೊಲೆಯುಲ್ಲಿ ಅಂತ್ಯವಾಗಿದೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ. ಆರೋಪಿ ತಾಯಿ-ಮಗನನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯವು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ತ್ರಿವಳಿ ಕೊಲೆಗೆ ಬೆಚ್ಚಿಬಿದ್ದ ರಾಜಧಾನಿ | ಹೆತ್ತವರು, ಒಡ ಹುಟ್ಟಿದ ತಂಗಿಯ ಜೀವ ತೆಗೆದ ಯುವತಿ | ಲಿವ್‌ಇನ್ ರಿಲೇಷನ್‌ಶಿಪ್‌ಗೆ ಪೋಷಕರ ಆಕ್ಷೇಪ

ಪ್ರಿಯಕರನ ಜತೆ ಸೇರಿ ಪೋಷಕರು, ಸಹೋದರಿಯ ಕೊಲೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕೆ.ಆರ್.ಪುರದ ಶೀಗೇಹಳ್ಳಿ ಬಳಿಯ ಡೊಮಿನಿಕ್ ಲೇಔಟ್‌ನಲ್ಲಿ ಯುವತಿಯೊಬ್ಬಳು ಪ್ರಿಯಕರನ ಜತೆ ಸೇರಿ ಹೆತ್ತ ತಂದೆ, ತಾಯಿ ಹಾಗೂ ಒಡ ಹುಟ್ಟಿದ ಸಹೋದರಿಯನ್ನು ನಿರ್ದಯವಾಗಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದು, ತ್ರಿವಳಿ ಕೊಲೆಗೆ ರಾಜಧಾನಿ ಬೆಚ್ಚಿ ಬಿದ್ದಿದೆ.



ತಮಿಳುನಾಡು ಮೂಲದ ಸೋಮಸುಂದರ್ (52), ಅವರ ಪತ್ನಿ ಮುತ್ತುಲಕ್ಷ್ಮಿ (48) ಹಾಗೂ ಕಿರಿಯ ಮಗಳು ಸುಪ್ರಿಯಾ (19) ಕೊಲೆಯಾದವರು. ಸೋಮಸುಂದರ್ ದಂಪತಿಯ ಹಿರಿಯ ಮಗಳು ಶ್ವೇತಾ, ತನ್ನ ಪ್ರಿಯಕರ ಕೆನತ್ ಜತೆ ಸೇರಿ ಈ ದುಷ್ಕೃತ್ಯ ಎಸಗಿ ಪರಾರಿಯಾಗಿದ್ದಾಳೆ.

ಬಿ.ಟೆಕ್ ಪದವೀಧರರಾದ ಶ್ವೇತಾ ಮತ್ತು ಕೆನತ್, ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದರು. ವೈಟ್‌ಫೀಲ್ಡ್‌ನ ಕೆನತ್, ಹೈದರಾಬಾದ್ ಮೂಲದ ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ. ಪರಸ್ಪರ ಪ್ರೀತಿಸುತ್ತಿದ್ದ ಶ್ವೇತಾ ಮತ್ತು ಕೆನತ್, ಡೊಮಿನಿಕ್ ಲೇಔಟ್‌ನ ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಸುಮಾರು ಎರಡು ತಿಂಗಳಿಂದ ಲಿವ್‌ಇನ್ ರಿಲೇಷನ್‌ಶಿಪ್‌ನಲ್ಲಿ ಇದ್ದರು. ಶ್ವೇತಾಳ ವರ್ತನೆಯಿಂದ ಮನನೊಂದಿದ್ದ ಪೋಷಕರು, ಕೆನತ್ ಜತೆಗಿನ ಆಕೆಯ ಸಂಬಂಧಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಕೆನತ್‌ನನ್ನು ಬಿಟ್ಟು ಮನೆಗೆ ವಾಪಸ್ ಬರುವಂತೆ ಆಕೆಗೆ ಬುದ್ಧಿ ಹೇಳಿದ್ದರು. ಆದರೂ ಪೋಷಕರ ಮಾತು ಕೇಳದ ಶ್ವೇತಾ, ಕುಟುಂಬದಿಂದ ದೂರವಾಗಿದ್ದಳು. ಪೋಷಕರ ಜತೆಗಿನ ಭಿನ್ನಾಭಿಪ್ರಾಯದ ಕಾರಣಕ್ಕೆ ಆಕೆ ಮನೆಗೂ ಬರುತ್ತಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಮಧ್ಯೆ ಶ್ವೇತಾ, ಕೆನತ್ ಜತೆ ಲಿವ್‌ಇನ್ ರಿಲೇಷನ್‌ಶಿಪ್‌ನಲ್ಲಿ ಇರುವ ವಿಚಾರ ಗೊತ್ತಾಗಿ ಸೋಮಸುಂದರ್ ದಂಪತಿಯು ಕಿರಿಯ ಮಗಳೊಂದಿಗೆ ಭಾನುವಾರ (ಜೂ.21) ರಾತ್ರಿ ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ಗೆ ಹೋಗಿದ್ದರು. ನಂತರ ಆ ಮೂವರು ಶ್ವೇತಾಳ ಫ್ಲ್ಯಾಟ್‌ನಲ್ಲೇ ಉಳಿದುಕೊಂಡಿದ್ದರು. ಕೆನತ್ ಜತೆಗಿನ ಲಿವ್‌ಇನ್ ರಿಲೇಷನ್‌ಶಿಪ್ ವಿಚಾರವಾಗಿ ಸೋಮಸುಂದರ್ ದಂಪತಿ ಅಸಮಾಧಾನ ವ್ಯಕ್ತಪಡಿಸಿ ಮಗಳು ಶ್ವೇತಾಗೆ ಸೋಮವಾರ ರಾತ್ರಿ ಬೈದಿದ್ದಾರೆ. ನಂತರ ಶ್ವೇತಾ ಮತ್ತು ಪೋಷಕರ ಮಧ್ಯೆ ಜಗಳವಾಗಿದೆ. ಬಳಿಕ ಜಗಳ ವಿಕೋಪಕ್ಕೆ ಹೋಗಿ ಶ್ವೇತಾ, ಪ್ರಿಯಕರ ಕೆನತ್‌ನ ಜತೆ ಸೇರಿ ತಂದೆ ತಾಯಿಗೆ ಮನಸೋಇಚ್ಛೆ ಚಾಕು ಇರಿದಿದ್ದಾಳೆ.

ಈ ವೇಳೆ ಬೇರೊಂದು ಕೊಠಡಿಯಲ್ಲಿದ್ದ ಸುಪ್ರಿಯಾ, ಪೋಷಕರ ಚೀರಾಟ ಕೇಳಿ ರಕ್ಷಣೆಗೆ ಧಾವಿಸಿದ್ದಾಳೆ. ಆಗ ಶ್ವೇತಾ ಮತ್ತು ಕೆನತ್ ಒಟ್ಟಾಗಿ ಸುಪ್ರಿಯಾಗೆ ಮನಬಂದಂತೆ ಚಾಕು ಇರಿದಿದ್ದಾರೆ. ಸೋಮಸುಂದರ್, ಕೆನತ್‌ನಿಂದ ತಪ್ಪಿಸಿಕೊಂಡು ಫ್ಲ್ಯಾಟ್‌ನಿಂದ ಹೊರಬಂದು ಮೆಟ್ಟಿಲುಗಳ ಬಳಿ ಕುಸಿದು ಬಿದ್ದಿದ್ದಾರೆ. ಸೋಮಸುಂದರ್‌ರ ನರಳಾಟ ಕೇಳಿದ ನೆರೆಹೊರೆಯವರು ಅವರನ್ನು ಆಸ್ಪತ್ರೆಗೆ ಕರೆದೊಯ್ಯಲು ಯತ್ನಿಸಿದ್ದಾರೆ. ಆದರೆ, ಮಾರ್ಗಮಧ್ಯೆಯೇ ಸೋಮಸುಂದರ್ ಉಸಿರು ಚೆಲ್ಲಿದ್ದಾರೆ. ನಂತರ ನೆರೆಹೊರೆಯವರು ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಸ್ವಲ್ಪ ಸಮಯದಲ್ಲೇ ಸ್ಥಳಕ್ಕೆ ಬಂದ ಪೊಲೀಸರು, ಫ್ಲ್ಯಾಟ್‌ನ ಒಳಗೆ ಹೋಗಿ ನೋಡಿದಾಗ ಮುತ್ತುಲಕ್ಷ್ಮಿ ಹಾಗೂ ಸುಪ್ರಿಯಾ ಕೊಲೆಯಾಗಿ ರಕ್ತದ ಮಡುವಿನಲ್ಲಿ ಬಿದ್ದಿರುವುದು ಗೊತ್ತಾಗಿದೆ.

ಸಿ.ಸಿ ಕ್ಯಾಮೆರಾದಲ್ಲಿ ಸೆರೆ: ''ಭಾನುವಾರ ರಾತ್ರಿ ಅಪಾರ್ಟ್‌ಮೆಂಟ್ ಬಳಿ ಬಂದಿದ್ದ ಸೋಮಸುಂದರ್ ದಂಪತಿ ಮತ್ತು ಸುಪ್ರಿಯಾರನ್ನು ಶ್ವೇತಾ ತಮ್ಮ ಫ್ಲ್ಯಾಟ್‌ಗೆ ಕರೆದೊಯ್ದಿದ್ದರು. ಬಳಿಕ ಆ ಮೂವರು ಶ್ವೇತಾರ ಫ್ಲ್ಯಾಟ್‌ನಲ್ಲೇ ತಂಗಿದ್ದರು. ಸೋಮಸುಂದರ್ ಅವರು ಸೋಮವಾರ ರಾತ್ರಿ ರಕ್ತಸಿಕ್ತ ದೇಹದೊಂದಿಗೆ ಫ್ಲ್ಯಾಟ್‌ನಿಂದ ಹೊರ ಬಂದಾಗ ಕೊಲೆ ವಿಚಾರ ತಿಳಿಯಿತು,'' ಎಂದು ಸಾಯಿ ಗ್ರೀನ್ ಹೋಮ್ಸ್ ಅಪಾರ್ಟ್‌ಮೆಂಟ್‌ನ ಸೆಕ್ಯೂರಿಟಿ ಗಾರ್ಡ್ ವೀರ್ ಬಹದ್ದೂರ್ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಪೊಲೀಸರು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಶ್ವೇತಾ ಮತ್ತು ಕೆನತ್, ಅಪಾರ್ಟ್‌ಮೆಂಟ್‌ನ ಮತ್ತೊಂದು ಗೇಟ್‌ನಿಂದ ಹೊರ ಹೋಗಿ ಕಾಲ್ಕಿತ್ತಿದ್ದಾರೆ. ಆರೋಪಿಗಳು ಪರಾರಿಯಾಗಿರುವ ದೃಶ್ಯ ಅಕ್ಕಪಕ್ಕದ ಕಟ್ಟಡಗಳ ಸಿ.ಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕೆ.ಆರ್.ಪುರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಲಾಗಿದೆ. ಸಿಬ್ಬಂದಿ ಆರೋಪಿಗಳ ಮೊಬೈಲ್ ಕರೆಗಳ ಜಾಡು ಹಿಡಿದು ಅವರ ಬೆನ್ನು ಬಿದ್ದಿದ್ದಾರೆ. ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದ ಬಳಿಕ ಕೊಲೆಗೆ ನಿಖರ ಕಾರಣ ಏನೆಂದು ಗೊತ್ತಾಗಲಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

30 ಲಕ್ಷ ರೂ. ಸಾಲ, ಆಸ್ತಿ ಕೇಳಿದ ಮಗಳು

ಸಾಫ್ಟ್‌ವೇರ್ ಕಂಪನಿ ಉದ್ಯೋಗಿಯಾಗಿದ್ದ ಸೋಮಸುಂದರ್, ಕುಟುಂಬ ಸದಸ್ಯರೊಂದಿಗೆ ವೈಟ್‌ಫೀಲ್ಡ್ ಬಳಿಯ ನಲ್ಲೂರಹಳ್ಳಿಯಲ್ಲಿ ವಾಸವಾಗಿದ್ದರು. ಮುತ್ತುಲಕ್ಷ್ಮಿ ಗೃಹಿಣಿಯಾಗಿದ್ದರು. ಸುಪ್ರಿಯಾ, ಮೊದಲ ವರ್ಷದ ಪದವಿ ಓದುತ್ತಿದ್ದಳು. ಕೆನತ್, ಅನ್ಯ ಧರ್ಮೀಯನೆಂಬ ಕಾರಣಕ್ಕೆ ಆತನೊಂದಿಗೆ ಶ್ವೇತಾಳ ಮದುವೆ ಮಾಡಲು ಸೋಮಸುಂದರ್ ದಂಪತಿ ನಿರಾಕರಿಸಿದ್ದರು. ಶ್ವೇತಾ ಸುಮಾರು 30 ಲಕ್ಷ ರೂ. ಸಾಲ ಮಾಡಿಕೊಂಡಿದ್ದಳು. ಆ ಸಾಲ ತೀರಿಸಲು ಬೇಕಿದ್ದ ಹಣಕ್ಕಾಗಿ ಆಕೆ ಆಸ್ತಿಯಲ್ಲಿ ಪಾಲು ಕೊಡುವಂತೆ ತಂದೆ ಬಳಿ ಕೇಳಿದ್ದಳು. ಇದರಿಂದ ಕೋಪಗೊಂಡಿದ್ದ ಸೋಮಸುಂದರ್ ದಂಪತಿ ಆಸ್ತಿಯಲ್ಲಿ ಪಾಲು ಕೊಡಲು ನಿರಾಕರಿಸಿ, ಶ್ವೇತಾಗೆ ಬೈದು ಕಳುಹಿಸಿದ್ದ ವಿಚಾರ ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ತಮಿಳುನಾಡಿನ ತಿರುಚಿಯಲ್ಲಿರುವ ಸೋಮಸುಂದರ್ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದೆ. ಅವರು ನಗರಕ್ಕೆ ಬಂದ ನಂತರ ಮೂವರ ಮರಣೋತ್ತರ ಪರೀಕ್ಷೆ ನಡೆಸಲಾಗುತ್ತದೆ. ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ಶ್ವೇತಾ, ಕೆಲ ತಿಂಗಳುಗಳ ಹಿಂದೆ ಕೆಲಸ ಬಿಟ್ಟಿದ್ದಳು. ಕೆನತ್, ಮನೆಯಿಂದಲೇ ಕೆಲಸ ಮಾಡುತ್ತಿದ್ದ ಎಂದು ಗೊತ್ತಾಗಿದೆ. ವೈಟ್‌ಫೀಲ್ಡ್‌ನಲ್ಲಿರುವ ಆತನ ಪೋಷಕರ ವಿಚಾರಣೆ ನಡೆಸಿ, ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಜೂ.26ರಂದು ಶ್ರದ್ಧಾ ನೃತ್ಯಾರ್ಣವ

ಬೆಂಗಳೂರು: ನಗರದ ಶ್ರದ್ಧಾ ನೃತ್ಯ ಕೇಂದ್ರದ ವತಿಯಿಂದ ಜೂ.26ರಂದು ಸಂಸ್ಥೆಯ 16ನೇ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಲಿದೆ. ಸಂಜೆ 6ರಿಂದ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸಂಸ್ಥೆಯ ಶಿಷ್ಯವೃಂದದ ನೃತ್ಯದ ಜೊತೆಗೆ 'ಆನಂದ ತಾಂಡವ' ಎಂಬ ವಿಶೇಷ ನೃತ್ಯರೂಪಕ ನಡೆಯಲಿದೆ. ಕಾರ್ಯಕ್ರಮದಲ್ಲಿ ಖ್ಯಾತ ನೃತ್ಯಪಟು ಡಾ. ವೀಣಾ ಮೂರ್ತಿ ವಿಜಯ್, ಶಿಕ್ಷಣ ತಜ್ಞೆ ಡಾ. ಲಕ್ಷ್ಮಿ ವಿ. ನಾಗೇಶ್ವರ, ಶೀಲಾ ಚಂದ್ರಶೇಖರ್ ಮತ್ತು ಧರ್ಮೇಂದ್ರ ಕುಮಾರ್ ಅರೇನಹಳ್ಳಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶ್ಯಾಮಣ್ಣ ಗಾರ್ಡನ್‌ನಲ್ಲಿ ಕಸ ತೆರವು

ಬೆಂಗಳೂರು: ವಿಜಯನಗರ ಕ್ಷೇತ್ರದ ಶ್ಯಾಮಣ್ಣ ಗಾರ್ಡನ್‌ನಲ್ಲಿ ರಸ್ತೆ ಪಕ್ಕ ರಾಶಿ ಬಿದ್ದ ಕಸವನ್ನು ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದ್ದಾರೆ. ಜೂ.16ರ ಸಂಚಿಕೆಯಲ್ಲಿ ವಿಜಯ ಕರ್ನಾಟಕವು 'ಪ್ಲೀಸ್, ಕೊಳಚೆಯಿಂದ ಮುಕ್ತಿ ಕೊಡಿಸಿ' ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟಿಸಿ ಕಸದ ಸಮಸ್ಯೆ ಕುರಿತು ಗಮನ ಸೆಳೆದಿತ್ತು. ವರದಿ ಬೆನ್ನಲ್ಲೇ ಪಶ್ಚಿಮ ನಗರ ಪಾಲಿಕೆ ಕಾಮಗಾರಿ ವಿಭಾಗದ ವತಿಯಿಂದ ತೆರವುಗೊಳಿಸಲಾಗಿದೆ. ಪೈಪ್‌ಲೈನ್ ರಸ್ತೆಯಲ್ಲಿ ಚರಂಡಿ ಹೂಳನ್ನು ತೆರವು ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಪಾಲಿಕೆ ತಿಳಿಸಿದೆ.

ಎಲ್ಲಿ-ಏನು?

ಬುಧವಾರ

ಬಿ.ಎಂ.ಶ್ರೀ ಪ್ರತಿಷ್ಠಾನ: ಹರಿಶ್ಚಂದ್ರ ಕಾವ್ಯದ ಗಾನರಾಣಿಯರ ಪ್ರಸಂಗ ವಾಚನ : ಸಾಹಿತಿ ಡಾ. ಲಕ್ಷ್ಮಣದಾಸ್. **ಸ್ಥಳ:** ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್.ಕಾಲೊನಿ. ಸಂಜೆ 5.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ: ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಪ್ರಯುಕ್ತ ಪ್ರಜಾಪ್ರಭುತ್ವದಲ್ಲಿ ದಲಿತರ ಸ್ಥಾನಮಾನ ಕುರಿತು ವಿಚಾರ ಸಂಕಿರಣ. ಉದ್ಘಾಟನೆ : ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ. ಅಧ್ಯಕ್ಷತೆ: ಸಂಘಟನೆ ರಾಜ್ಯ ಸಂಚಾಲಕ ಶ್ಯಾಮರಾವ್ ಘಾಟ್ಗೆ. **ಸ್ಥಳ:** ಗಾಂಧಿಭವನ, ಶಿವಾನಂದ ಸರ್ಕಲ್. ಬೆಳಗ್ಗೆ 11.

ನಿಧನ

ಡಿ. ತುಳಸಿದಾಸ್

ಬೆಂಗಳೂರು: ಶ್ರೀ ಯೋಗಿನಾರಾಯಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉಪಾಧ್ಯಕ್ಷ ಹಾಗೂ ಐಟಿಐ ನಿವೃತ್ತ ಅಧಿಕಾರಿಗಳ



ಅಸೋಸಿಯೇಷನ್‌ನಲ್ಲಿ ಇಸಿ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ಸೇವೆ ಸಲ್ಲಿಸಿದ ಡಿ. ತುಳಸಿದಾಸ್ (80) ಮಂಗಳವಾರ ಸಂಜೆ ನಿಧನರಾದರು. ಮೃತರಿಗೆ ಮೂವರು ಪುತ್ರಿಯರಿದ್ದಾರೆ. ಅವರ ಪಾರ್ಥಿವ ಶರೀರವನ್ನು ಬುಧವಾರ ಸಂಜೆ 4 ಗಂಟೆಯವರೆಗೂ ಉತ್ತರಹಳ್ಳಿ ಮುಖ್ಯರಸ್ತೆ, 1ನೇ ಕ್ರಾಸ್, ಬಿಎಚ್‌ಸಿಎಸ್ ಲೇಔಟ್‌ನಲ್ಲಿ ಇರಿಸಲಾಗುವುದು. ನಂತರ ಬನಶಂಕರಿ ಚಿತಾಗಾರದಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಮಡಿವಾಳದ ಎಫ್‌ಎಸ್‌ಎಲ್ ಕಚೇರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಭೇಟಿ | ವೈಲ್ಡ್ ಲೈಫ್ ಫೊರೆನ್ಸಿಕ್ ಘಟಕ ಶೀಘ್ರ ಕಾರ್ಯಾರಂಭ

ವಿಧಿವಿಜ್ಞಾನ ಪ್ರಯೋಗಾಲಯ ಸಾಧನೆ ರಾಷ್ಟ್ರಕ್ಕೆ ಮಾದರಿ

■ **ವಿಕ ಸುದ್ದಿಲೋಕ** ಬೆಂಗಳೂರು

ದೇಶದಲ್ಲಿಯೇ ಅತ್ಯಾಧುನಿಕ ಹಾಗೂ ಅತ್ಯಂತ ಪರಿಣಾಮಕಾರಿ ವಿಧಿ ವಿಜ್ಞಾನ (ಫೊರೆನ್ಸಿಕ್) ತನಿಖಾ ವ್ಯವಸ್ಥೆ ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದು, ರಾಜ್ಯದ ಪ್ರಯೋಗಾಲಯ ನಿರ್ದೇಶನಾಲಯವು ರಾಷ್ಟ್ರವೇ ಹೆಮ್ಮೆಪಡುವ ಸಾಧನೆ ಮಾಡಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಶ್ಲಾಘಿಸಿದರು.

ಮಂಗಳವಾರ ಮಡಿವಾಳದಲ್ಲಿರುವ ಎಫ್‌ಎಸ್‌ಎಲ್ ಕಚೇರಿಗೆ ಭೇಟಿ ನೀಡಿ ಪರಿಶೀಲನಾ ಸಭೆ ನಡೆಸಿದ ಸಚಿವರು, ''ಕರ್ನಾಟಕದ ಫೊರೆನ್ಸಿಕ್ ವಿಜ್ಞಾನ ಪ್ರಯೋಗಾಲಯವು ಅಪರಾಧ ತನಿಖೆಯಲ್ಲಿ ವೈಜ್ಞಾನಿಕ ನಿಖರತೆ, ತಾಂತ್ರಿಕ ಸಾಮರ್ಥ್ಯ ಮತ್ತು ವೇಗದ ವರದಿ

ವ್ಯವಸ್ಥೆಯಲ್ಲಿ ದೇಶದ ಅತ್ಯುತ್ತಮ ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿದೆ,'' ಎಂದರು.

''ರಾಜ್ಯದ ಎಫ್‌ಎಸ್‌ಎಲ್‌ಗೆ ರಾಷ್ಟ್ರೀಯ ಮಾನ್ಯತಾ ಮಂಡಳಿ ಮಾನ್ಯತೆ ದೊರೆತಿದ್ದು, ಅಂತಾರಾಷ್ಟ್ರೀಯ ಗುಣಮಟ್ಟದ ಮಾನದಂಡಗಳಡಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ಡಿಜಿಟಲ್ ಮತ್ತು ಮೊಬೈಲ್ ಫೊರೆನ್ಸಿಕ್ ವಿಭಾಗಗಳಿಗೆ ಮಾಹಿತಿ ತಂತ್ರಜ್ಞಾನ ಕಾಯಿದೆಯಡಿ ಎಲೆಕ್ಟ್ರಾನಿಕ್ಸ್ ಎವಿಡೆನ್ಸ್ ಎಕ್ಸಾಮಿನರ್ ಸ್ಥಾನಮಾನ ದೊರೆತಿರುವುದು ದೇಶದಲ್ಲೇ ಗಮನಾರ್ಹ ಸಾಧನೆಯಾಗಿದೆ. ಇತ್ತೀಚೆಗೆ ಸರಕಾರದ ಸಂಸ್ಥೆಗಳಿಗೆ ನೀಡಲಾಗುವ ಪ್ರತಿಷ್ಠಿತ ಡಿ.ಎಸ್.ಸಿ.ಐ. ಪ್ರಶಸ್ತಿಯನ್ನು ಕರ್ನಾಟಕ ಎಫ್‌ಎಸ್‌ಎಲ್ ತನ್ನ ಅತ್ಯುತ್ತಮ ಡಿಜಿಟಲ್ ಫೊರೆನ್ಸಿಕ್ ಸಾಮರ್ಥ್ಯಕ್ಕಾಗಿ ಪಡೆದಿದೆ. ಇದು ರಾಜ್ಯದ ತನಿಖಾ ವ್ಯವಸ್ಥೆಯ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ,'' ಎಂದು ಹೇಳಿದರು.

ಗೌರಿ ಲಂಕೇಶ್, ಎಂ.ಎಂ. ಕಲಬುರ್ಗಿ, ನರೇಂದ್ರ ದಾಭೋಲ್ಕರ್ ಹಾಗೂ ಗೋವಿಂದ ಪನ್ಸಾರೆ ಹತ್ಯೆ ಪ್ರಕರಣಗಳ ನಡುವಿನ ವೈಜ್ಞಾನಿಕ ಸಂಪರ್ಕವನ್ನು ಫೊರೆನ್ಸಿಕ್ ವಿಶ್ಲೇಷಣೆಯ ಮೂಲಕ ಪತ್ತೆ ಹಚ್ಚಿದ್ದ ಎಫ್‌ಎಸ್‌ಎಲ್ ಕಾರ್ಯಕ್ಕೆ ದೇಶಾದ್ಯಂತ ಪ್ರಸಿದ್ಧಿ ಪಡೆದಿತ್ತು. ರಾಜ್ಯದಲ್ಲಿ ಮೊದಲ ಬಾರಿಗೆ ವೈಲ್ಡ್ ಲೈಫ್ ಫೊರೆನ್ಸಿಕ್ ಘಟಕ ಆರಂಭಿಸಲು ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿದೆ ಎಂದು ಘೋಷಿಸಿದರು. ವನ್ಯಜೀವಿ ಅಪರಾಧಗಳು ಹಾಗೂ ಅಕ್ರಮ ಸಾಗಾಟ ಪ್ರಕರಣಗಳ ತನಿಖೆಗೆ ಇದು ನೆರವಾಗಲಿದೆ ಎಂದು ಸಚಿವರು ಮಾಹಿತಿ ನೀಡಿದರು.

ಎಫ್‌ಎಸ್‌ಎಲ್‌ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರಕಾರ ಆದ್ಯತೆ ನೀಡಲಿದ್ದು, ವೈಜ್ಞಾನಿಕ ಅಧಿಕಾರಿಗಳೂ ಸೇರಿದಂತೆ ಅಗತ್ಯ ಸಿಬ್ಬಂದಿ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು. ಕಳೆದ ಕೆಲವು ವರ್ಷಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಾದರೂ ತಂತ್ರಜ್ಞಾನ ಬಳಕೆ ಹಾಗೂ ಕಾರ್ಯಕ್ಷಮತೆಯಿಂದ ಹಲವು ವಿಭಾಗಗಳಲ್ಲಿ ವರದಿ ನೀಡುವ ಅವಧಿಯನ್ನು 40 ತಿಂಗಳಿಂದ ಕೇವಲ 1 ರಿಂದ 4 ತಿಂಗಳಿಗೆ ಇಳಿಸಿರುವುದು ಇಲಾಖೆಯ ಮತ್ತೊಂದು ಗಮನಾರ್ಹ ಸಾಧನೆಯಾಗಿದೆ ಎಂದು ಸಚಿವರು ಹೇಳಿದರು.

ಸಭೆಯಲ್ಲಿ ಡಿಜಿಪಿ ಡಾ.ಎಂ.ಎ.ಸಲೀಂ, ಎಡಿಜಿಪಿ ಪಿ.ಹರಿಶೇಖರನ್, ಸಂಸ್ಥೆಯ ನಿರ್ದೇಶಕಿ ದಿವ್ಯಾ ಗೋಪಿನಾಥ್ ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು.

ಹಾರೋಹಳ್ಳಿ ಕೈಗಾರಿಕಾ ಪ್ರದೇಶ ಕುರಿತು ಕೆಐಎಡಿಬಿ ವರದಿ

ಶಬ್ದ ಮಾಲಿನ್ಯ ತಗ್ಗಿಸಲು ಕ್ರಮ

■ **ವಿಕ ಸುದ್ದಿಲೋಕ** ಬೆಂಗಳೂರು

ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ರಾತ್ರಿ ವೇಳೆ ಹೆಚ್ಚುತ್ತಿರುವ ಶಬ್ದ ಮಾಲಿನ್ಯ ತಗ್ಗಿಸಲು ತಜ್ಞರ ಅಭಿಪ್ರಾಯ ಪಡೆದು ಉತ್ತಮ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ವರದಿ ಸಲ್ಲಿಸಿದೆ.

ಇದರ ಜತೆಗೆ, ಹಾರೋಹಳ್ಳಿ ಮೂರನೇ ಹಂತದ ಕೈಗಾರಿಕಾ ಪ್ರದೇಶವನ್ನು ಹಸಿರು ತಾಣವನ್ನಾಗಿ ನಿರ್ಮಿಸಲು ನಿರ್ಧರಿಸಿರುವ ಕೆಐಎಡಿಬಿ, ಉದ್ಯಾನಗಳಿಗಾಗಿಯೇ 147 ಎಕರೆ ಮತ್ತು ಬಫರ್ ವಲಯ (ಬಾಹ್ಯ ವಲಯ) ನಿರ್ಮಾಣಕ್ಕೆ 76.36 ಎಕರೆಯಷ್ಟು ಜಮೀನು ಕಾಯ್ದಿರಿಸಿದೆ. ಹೀಗೆ, ಆದ್ಯತೆ ಮೇರೆ ಶಬ್ದ ಮಾಲಿನ್ಯ ತಡೆಗಟ್ಟಲು ತಜ್ಞರ ಅಭಿಪ್ರಾಯ ಪಡೆಯುವುದಾಗಿ ವರದಿಯಲ್ಲಿ ಉಲ್ಲೇಖಿಸಿದೆ.

ಈ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳು ವಾಯು ಮತ್ತು ಜಲ ಮಾಲಿನ್ಯ ಉಂಟು ಮಾಡುತ್ತಿವೆ. ಕೈಗಾರಿಕೆಗಳಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಹೊರಬಿಡಲಾಗುತ್ತಿದ್ದು, ಪರಿಸರಕ್ಕೆ ಮಾರಕವಾಗಿ ಪರಿಣಮಿಸಿದೆ. ಇದಲ್ಲದೆ, ಕೈಗಾರಿಕೆಗಳು ಅಂತರ್ಜಲದ ಅತಿಯಾದ ಬಳಕೆ ಮಾಡುತ್ತಿವೆ ಎಂದು ಆರೋಪಿಸಿ 2022ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣಕ್ಕೆ ಅರ್ಜಿ

ಉದ್ಯಾನಗಳ ನಿರ್ಮಾಣಕ್ಕೆ 147 ಎಕರೆ ಮೀಸಲು

ಸಲ್ಲಿಕೆಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಎನ್‌ಜಿಟಿ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಕೆಎಸ್‌ಪಿಸಿಬಿ, ಕೆಐಎಡಿಬಿ ಮತ್ತು ಜಿಲ್ಲಾಧಿಕಾರಿಗಳನ್ನೊಳಗೊಂಡ ಜಂಟಿ ಸಮಿತಿ ರಚಿಸಲು ನಿರ್ದೇಶನ ನೀಡಿತು. ಇದರ ಸಮನ್ವಯ ಮತ್ತು ಮೇಲ್ವಿಚಾರಣೆಗಾಗಿ ಕೆಎಸ್‌ಪಿಸಿಬಿಯನ್ನು ನೋಡಲ್ ಏಜೆನ್ಸಿಯಾಗಿ ನೇಮಕ ಮಾಡಿತ್ತು.

ಅದರಂತೆ, ಸಂಶೋಧನೆ ನಡೆಸಿದ ಜಂಟಿ ಸಮಿತಿ, ಕೆಐಎಡಿಬಿಗೆ ಕೆಲ ಶಿಫಾರಸುಗಳನ್ನು ಮಾಡಿದೆ. ಅದರಲ್ಲಿ ಪ್ರಮುಖವಾಗಿ ಕೈಗಾರಿಕಾ ಪ್ರದೇಶದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಶಬ್ದ ಮಾಲಿನ್ಯ ತಗ್ಗಿಸಲು ಕೈಗಾರಿಕಾ ಪ್ರದೇಶದ ಸುತ್ತಲೂ ಹಸಿರು ವಲಯ ಅಭಿವೃದ್ಧಿಪಡಿಸಿ, ನಿರ್ವಹಿಸಬೇಕು. ಅಲ್ಲದೆ, ಮುಂಬರುವ ಹಾರೋಹಳ್ಳಿ ಮೂರು ಮತ್ತು ನಾಲ್ಕನೇ ಹಂತದ ಕೈಗಾರಿಕಾ ಪ್ರದೇಶಗಳ ಸುತ್ತಲೂ ಬಫರ್ ವಲಯಗಳನ್ನು ಸ್ಥಾಪಿಸಬೇಕು. ರಾತ್ರಿ ವೇಳೆ ಶಬ್ದದ ಪ್ರಮಾಣ ಕಡಿಮೆ ಮಾಡಲು ತಜ್ಞರನ್ನು ಸಂಪರ್ಕಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೆಐಎಡಿಬಿಗೆ ಶಿಫಾರಸುಗಳನ್ನು ಮಾಡಿತ್ತು. ಇದನ್ನಾಧರಿಸಿ ಉದ್ಯಾನಗಳ ನಿರ್ಮಾಣ ಮತ್ತು ಬಫರ್ ವಲಯ ಸ್ಥಾಪನೆಗೆ ಅಗತ್ಯವಿರುವ ಜಮೀನು ಕಾಯ್ದಿರಿಸಿರುವುದಾಗಿ ಕೆಐಎಡಿಬಿ ವರದಿ ಸಲ್ಲಿಸಿದೆ.

ಹಾರೋಹಳ್ಳಿ ಮತ್ತು ಬಿಡದಿ ಕೈಗಾರಿಕಾ ಪ್ರದೇಶಗಳಲ್ಲಿನ ಕೈಗಾರಿಕಾ ಚಟುವಟಿಕೆಗಳಿಗೆ ಬೆಂಬಲವಾಗಿ ಒಟ್ಟು 13.5 ಎಂಎಲ್‌ಡಿ ನೀರು ಸರಬರಾಜಿಗೆ ಮಂಜೂರಾತಿ ದೊರೆತಿದೆ. ವೃಷಭಾವತಿ ನದಿಯ ಬೈರಮಂಗಲ ಕೆರೆ ಬಳಿ 10 ಎಂಎಲ್‌ಡಿ ತೃತೀಯ ಹಂತದ ಸಂಸ್ಕರಣಾ ಘಟಕ (Tertiary Treatment Plant) ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆ ನೀಡಲಾಗಿದೆ. ಈ ಘಟಕವು ಬಿಡದಿ, ಶಾನಮಂಗಲ ಮತ್ತು ಹಾರೋಹಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಸಂಸ್ಕರಿಸಿದ ನೀರನ್ನು ಪೂರೈಸಲಿದೆ. 10 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ 35.59 ಕೋಟಿ ರೂ. ವೆಚ್ಚದ ಈ ಯೋಜನೆಯ ಕಾಮಗಾರಿ ಪ್ರಸ್ತುತ ಪ್ರಗತಿಯಲ್ಲಿದೆ ಎಂದು ಕೆಐಎಡಿಬಿ ವರದಿಯಲ್ಲಿ ಉಲ್ಲೇಖಿಸಿದೆ.

ಅಧಿಕಾರದ ಕುರ್ಚಿ ಸೇವೆಗೆ, ದರ್ಪಕ್ಕಲ್ಲ

ನ್ಯಾ. ಶಿವರಾಜ ವಿ.ಪಾಟೀಲ್ ಅಭಿಮತ

ಬೆಂಗಳೂರು: ಸಂವಿಧಾನದಡಿ ಆದರ ಆಶಯಗಳಿಗೆ ಅನುಗುಣವಾಗಿ ಕೆಲಸ ಮಾಡುವ ವ್ಯಕ್ತಿಗಳಿಂದ ಮಾತ್ರ ಸಂವಿಧಾನದ ಜೀವಂತಿಕೆ ಇರಲಿದೆ ಎಂದು ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ.ಪಾಟೀಲ್ ಅಭಿಪ್ರಾಯಪಟ್ಟರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಂಗಳವಾರ ನಯನ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ 'ಸಂವಿಧಾನ ನುಡಿ ಸಂಹಿತೆ: ಭಾರತದ ಸಂವಿಧಾನದಲ್ಲಿ ಭಾಷೆಗಳು ನಡೆದ ಹಾದಿ' ಎಂಬ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

''ಅಧಿಕಾರದ ಕುರ್ಚಿ ಅಥವಾ ಸ್ಥಾನದ ಮೇಲೆ ಕೂರುವ ಪ್ರತಿಯೊಬ್ಬ ವ್ಯಕ್ತಿಯೂ ಕೃತಜ್ಞತೆ, ವಿನಯ, ಸೇವಾ ಮನೋಭಾವ ಮತ್ತು ಕರ್ತವ್ಯ ಪರಿಪಾಲನೆ ಎಂಬ ಮೂರು ಮಂತ್ರಗಳನ್ನು ಅಳವಡಿಸಿಕೊಳ್ಳಬೇಕು. ತಮಗೆ ದೊರೆತಿರುವ ಕುರ್ಚಿ ಕೇವಲ ಸೇವೆ ಮಾಡುವುದಕ್ಕಾಗಿಯೇ ಹೊರತು ದರ್ಪ ಅಥವಾ ಅಧಿಕಾರ ಪ್ರದರ್ಶಿಸುವುದಕ್ಕಲ್ಲ, ಸಿಕ್ಕಿರುವ ಸ್ಥಾನ ಕರ್ತವ್ಯದ ಪರಿಪಾಲನೆಗೆ ಮುಡುಪಾಗಿದೆಯೇ ಹೊರತು ಅಹಂಕಾರಕ್ಕಲ್ಲ ಎಂಬ ಪ್ರಜ್ಞೆ ಇರಬೇಕು,'' ಎಂದು ತಿಳಿಸಿದರು.

ಪುಸ್ತಕ ಕುರಿತು ಮಾತನಾಡಿದ ಚಿಂತಕ,



ಪ್ರಾಧ್ಯಾಪಕ ಪ್ರೊ.ಎ.ನಾರಾಯಣ,'' ಸಂವಿಧಾನದ ನಿರ್ದಿಷ್ಟ ಭಾಗಕ್ಕೆ ಸಂಬಂಧಿಸಿದಂತೆ ಒಂದು ಸಂಗ್ರಹವೇ 'ಸಂವಿಧಾನ ನುಡಿ ಸಂಹಿತೆ' ಆಗಿದೆ. ಸಂವಿಧಾನದ 17ನೇ ಭಾಗದ ಭಾಷೆ, ಇದಕ್ಕೆ ಪೂರಕವಾಗಿ ಆಗಿರುವ ಚರ್ಚೆಗಳನ್ನು ಈ ಪುಸ್ತಕ ಒಳಗೊಂಡಿದೆ. ಇದನ್ನು ಒಂದು ಕಡತ ಎನ್ನಬಹುದು,'' ಎಂದರು.

''ಇತ್ತೀಚೆಗೆ ರಾಜಭವನದ ಹೆಸರನ್ನು ಲೋಕಭವನ ಎಂದು ಬದಲಾಯಿಸಲಾಯಿತು. ಪ್ರಜಾಪ್ರಭುತ್ವದಲ್ಲಿ 'ರಾಜ' ಎಂಬ ಪದವು ಸೂಕ್ತವಲ್ಲವೆನ್ನುವುದಾದರೆ, ಅದನ್ನು ರಾಜ್ಯಭವನ ಮಾಡಬಹುದಿತ್ತು. ಆದರೆ, ಅಲ್ಲಿ ಹಿಂದಿ ಬಳಸಬೇಕಿತ್ತು. ಹೀಗೆ ಹಿಂದಿಯನ್ನು ಅಧಿಕೃತ ಭಾಷೆಯಾಗಿ ಹೇರುವ ಪ್ರಯತ್ನ ನಡೆಯುತ್ತಿದೆ,'' ಎಂದು ಎಚ್ಚರಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡಿ, ''ಡಾ. ಸಂತೋಷ ಹಾನಗಲ್ಲ ಸಂಪಾದಿಸಿರುವ 'ಸಂವಿಧಾನ ನುಡಿ ಸಂಹಿತೆ' ಕೃತಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಭಾಷಾ ಪರ ಆಶಯಗಳಿಗೆ ಮಹತ್ವದ ಸೇರ್ಪಡೆಯಾಗಿದೆ,'' ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ.ಮಂಜುನಾಥ್, ಡಾ.ಬಿ.ಎಸ್. ಮಂಜುನಾಥಸ್ವಾಮಿ, ದಾಕ್ಷಾಯಿಣಿ ಹುಡೇದ, ಯಾಕೂಬ್ ಖಾದರ್, ಡಾ. ರಫಿಕುಮಾರ್ ನೀಹ ಹಾಗೂ ಟಿ. ತಿಮ್ಮೇಶ್ ಹಾಜರಿದ್ದರು.

ನಾಟಕ ಅಕಾಡೆಮಿ ಪ್ರಶಸ್ತಿಗಳ ಪ್ರದಾನ 26 ರಂದು

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯ 2024-25ನೇ ಸಾಲಿನ ಪುಸ್ತಕ ಬಹುಮಾನ, 2025-26ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳ ಪ್ರದಾನ ಸಮಾರಂಭವನ್ನು ಜೂನ್ 26ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಈ ಸಂದರ್ಭದಲ್ಲಿ ಶಿವಮೊಗ್ಗ ರಂಗಾಯಣದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಬೊಳುವಾರು ಮಹಮ್ಮದ್ ಕುಂಞ ಅವರ ಕಾದಂಬರಿ ಆಧಾರಿತ 'ಸ್ವಾತಂತ್ರ್ಯ ಓಟ' ನಾಟಕದ ಪ್ರದರ್ಶನವೂ ಇರಲಿದೆ. 2024-25ನೇ ಸಾಲಿನ ಪುಸ್ತಕ ಬಹುಮಾನ, 2025-26ನೇ ಸಾಲಿನ ವಾರ್ಷಿಕ ಪ್ರಶಸ್ತಿ ಹಾಗೂ 2025-26ನೇ ಸಾಲಿನ ಎಚ್.ವಿ. ವೆಂಕಟಸುಬ್ಬಯ್ಯ ದತ್ತಿನಿಧಿ ಪುರಸ್ಕಾರಗಳನ್ನು ಪ್ರದಾನ ಮಾಡಲಾಗುವುದು.

ಪತ್ನಿ ಉಸಿರುಗಟ್ಟಿಸಿ ಕೊಂದು ಆತ್ಮಹತ್ಯೆಗೆ ಶರಣಾದ ವೃದ್ಧ

■ **ವಿಕ ಸುದ್ದಿಲೋಕ** ಬೆಂಗಳೂರು

ಬದುಕಿನ ಸಂಧ್ಯಾಕಾಲದಲ್ಲಿ ಕಾಡುತ್ತಿದ್ದ ಅನಾರೋಗ್ಯದಿಂದ ಬೇಸತ್ತು ಪತ್ನಿಯನ್ನು ಉಸಿರುಗಟ್ಟಿಸಿ ಕೊಂದ 85 ವರ್ಷದ ವೃದ್ಧರೊಬ್ಬರು ಬಳಿಕ ತಾನೂ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಸಂಪಿಗೆಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ.

ಬಿಹಾರ ಮೂಲದ ಸುಮಿತ್ರಾ ದೇವಿ (77) ಹಾಗೂ ನಂದನ್‌ಪ್ರಸಾದ್ (85) ಮೃತರು. ರಾಚೇನಹಳ್ಳಿ ಕೆರೆ ಸಮೀಪದ ಚೊಕ್ಕನಾಯಕನಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಮಗನ ಕುಟುಂಬದ ಜತೆ ನಂದನ್ ದಂಪತಿ ವಾಸಿಸುತ್ತಿದ್ದರು. ಸೋಮವಾರ ತಡರಾತ್ರಿ ತಮ್ಮ ಕೊಠಡಿಯಲ್ಲಿ ಪತ್ನಿಯನ್ನು ಉಸಿರುಗಟ್ಟಿಸಿ ಕೊಲೆಗೈದಿರುವ ನಂದನ್ ಅವರು ಬಳಿಕ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಂಗಳವಾರ ಬೆಳಗ್ಗೆ ಈ ದುರಂತ ಬೆಳಕಿಗೆ ಬಂದಿದೆ.

ಹೃದ್ರೋಗ ಸಮಸ್ಯೆಯಿಂದ ಬಳಲುತ್ತಿದ್ದ ನಂದನ್, ವಯೋಸಹಜ ಅಂಧತ್ವ ಹಾಗೂ ಕಿವುಡುತನಕ್ಕೆ ಒಳಗಾಗಿದ್ದ ಪತ್ನಿ ಸುಮಿತ್ರಾ ದೇವಿಯನ್ನು ಕೊಂದು, ತಾನೂ ಜೀವ ಕಳೆದುಕೊಂಡಿದ್ದಾರೆ. ಮಕ್ಕಳಿಗೆ

- ■ ಮಕ್ಕಳಿಗೆ ಹೊರೆಯಾಗಬಾರದು ಎಂಬ ನಿಟ್ಟಿನಲ್ಲಿ ಕೃತ್ಯ ಶಂಕೆ
- ■ ವಯೋಸಹಜವಾಗಿ ಕಾಡುತ್ತಿತ್ತು ಅಂಧತ್ವ, ಕಿವುಡುತನ



ಹೊರೆಯಾಗಬಾರದು ಎಂಬ ಕಾರಣಕ್ಕೆ ಈ ನಿರ್ಧಾರ ಕೈಗೊಂಡಿರುವ ಸಾಧ್ಯತೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳ್ಳಂಬೆಳಗ್ಗೆ ಪುತ್ರನಿಗೆ ಶಾಕ್: ನಂದನ್ ಪ್ರಸಾದ್ ದಂಪತಿಯ ಪುತ್ರ ಕಿರಣ್ ಕುಮಾರ್ ಭಾರತೀಯ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿ, 2025ರಲ್ಲಿ ನಿವೃತ್ತಿಯಾಗಿದ್ದರು. ಪತ್ನಿ, ಮಗ ಹಾಗೂ ಮಗಳ ಜತೆ ಚೊಕ್ಕನಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ನೆಲೆಸಿದ್ದರು. ಸೆಕ್ಯೂರಿಟಿ ಏಜೆನ್ಸಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಸ್ವಂತ ಊರಿನಲ್ಲಿದ್ದ ವೃದ್ಧ ಪೋಷಕರನ್ನು ಇತ್ತೀಚೆಗೆ ಕರೆತಂದು ತಮ್ಮ ಜತೆಯೇ ಇರಿಸಿಕೊಂಡು ಆರೈಕೆ ಮಾಡುತ್ತಿದ್ದರು. ಬಿಹಾರದಲ್ಲಿ ಸಂಬಂಧಿಕರ ಮದುವೆ ಕಾರಣಕ್ಕೆ ಪತ್ನಿ ಹಾಗೂ ಮಗ ತೆರಳಿದ್ದರು. ಪುತ್ರಿ ಹಾಗೂ ತಂದೆ-ತಾಯಿ ಜತೆ ಕಿರಣ್‌ಕುಮಾರ್ ಇಲ್ಲಿಯೇ ಇದ್ದರು. ಸೋಮವಾರ ರಾತ್ರಿ ಊಟ ಮುಗಿಸಿದ ನಂದನ್ ದಂಪತಿಯು ತಮ್ಮ ಕೊಠಡಿಯಲ್ಲಿ ಮಲಗಲು ತೆರಳಿದ್ದರು.

ಮಂಗಳವಾರ ಬೆಳಗ್ಗೆ ಪುತ್ರಿ ಜತೆ ತಿಂಡಿ ಸಿದ್ಧಪಡಿಸಿದ್ದ ಕಿರಣ್‌ಕುಮಾರ್, ಪೋಷಕರನ್ನು ಕರೆಯಲು ಕೊಠಡಿ ಬಾಗಿಲು ಬಡಿದಿದ್ದಾರೆ. ಒಳಗಡೆಯಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದರಿಂದ ಆತಂಕಗೊಂಡು ಸುತ್ತಿಗೆಯಿಂದ ಬಾಗಿಲು ಒಡೆದು ಒಳನೋಡಿದಾಗ ತಂದೆ ನೇಣುಕುಣಿಕೆಯಲ್ಲಿ ನೇತಾಡುತ್ತಿದ್ದರೆ, ತಾಯಿ ಮಲಗಿದ್ದ ಸ್ಥಳದಲ್ಲಿಯೇ ಮೃತಪಟ್ಟಿರುವುದು ಕಂಡು ಬೆಚ್ಚಿಬಿದ್ದಿದ್ದಾರೆ. ಬಳಿಕ ಪೊಲೀಸರಿಗೂ ಮಾಹಿತಿ ನೀಡಿದ್ದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ವಿದ್ಯಾರ್ಥಿಗಳಿಂದ ಪಿಜಿ ಮಾಲೀಕನ ಕೊಲೆ

ಬೆಂಗಳೂರು: ಪೇಯಿಂಗ್ ಗೆಸ್ಟ್ (ಪಿಜಿ) ಕಟ್ಟಡದ ಕೊಳಾಯಿ ನಲ್ಲಿಯಲ್ಲಿ ಕಾಲು ತೊಳೆಯುವ ವಿಚಾರಕ್ಕೆ ಶುರುವಾದ ಗಲಾಟೆ ಪಿ.ಜಿ. ಮಾಲೀಕನ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ರಾಮಮೂರ್ತಿನಗರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮಾಧವ್ ಮೇಟ್ಲಿ (37) ಕೊಲೆಯಾದವರು. ಕೊಲೆ ಆರೋಪಿಗಳಾದ ರಾಕೇಶ್ (21), ಡಾನ್ ಬೈಟನ್ಸ್ (20) ಬಂಧಿತರು. ಆಂಧ್ರಪ್ರದೇಶ ಮೂಲದ ಮಾಧವ್, ಕಸ್ತೂರಿನಗರ ಮುಖ್ಯ ರಸ್ತೆಯ ಕಟ್ಟಡವೊಂದರಲ್ಲಿ ಲಕ್ಷ್ಮೀ ನರಸಿಂಹ ಹೆಸರಿನ ಪಿಜಿ ನಡೆಸುತ್ತಿದ್ದರು. ಸೋಮವಾರ ಸಂಜೆ 6.30ರ ಸುಮಾರಿಗೆ ಮದ್ಯ ಸೇವಿಸಿದ್ದ ರಾಕೇಶ್ ಹಾಗೂ ಬೈಟನ್ಸ್ ಪಿಜಿ ಮುಂದೆ ಹೋಗುತ್ತಿದ್ದರು. ಕಾಲಿಗೆ ಕೆಸರು ಹಿಡಿದಿದ್ದ ಕಾರಣ ಕಾಲು ತೊಳೆಯಲು ಒಳಗಡೆ ಹೋಗಿದ್ದರು. ಕೊಳಾಯಿ ನಲ್ಲಿಯಲ್ಲಿ ನೀರು ಬಿಟ್ಟುಕೊಂಡು

ಕಾಲು ತೊಳೆಯುತ್ತಿದ್ದುದನ್ನು ಕಂಡ ಮಾಧವ್, ತಗಾದೆ ತೆಗೆದಿದ್ದರು. ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶವಿಲ್ಲ ಎಂದು ತರಾಟೆ ತೆಗೆದುಕೊಂಡಿದ್ದರು.

ಈ ವಿಚಾರಕ್ಕೆ ಜಗಳ ನಡೆದು ಮಾಧವ್, ಪಿಜಿಯಲ್ಲಿದ್ದ ಕ್ರಿಕೆಟ್ ಬ್ಯಾಟ್‌ನಿಂದ ಹಲ್ಲೆಗೆ ಮುಂದಾಗಿದ್ದರು. ಅದೇ ಬ್ಯಾಟ್ ಕಸಿದ ರಾಕೇಶ್, ಬೈಟನ್ಸ್, ಮಾಧವ್ ತಲೆ ಹಾಗೂ ಇತರ ಭಾಗಗಳಿಗೆ ಹಲ್ಲೆ ನಡೆಸಿದ್ದರು. ಗಂಭೀರ ಹಲ್ಲೆಗೊಳಗಾದ ಮಾಧವ್ ಸ್ಥಳದಲ್ಲಿಯೇ ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಆರ್.ಎಸ್.ಪಾಳ್ಯದ ರಾಕೇಶ್, ಅಂತಿಮ ವರ್ಷದ ವರ್ಷದ ಬಿಕಾಂ ವಿದ್ಯಾರ್ಥಿಯಾಗಿದ್ದ. ಬೈಟನ್ಸ್ ಮೊದಲ ವರ್ಷದ ಬಿಬಿಎ ವಿದ್ಯಾರ್ಥಿಯಾಗಿದ್ದ. ಆರೋಪಿಗಳನ್ನು ಬಂಧಿಸಿ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ನಗರ ಅಭಿವೃದ್ಧಿಗೆ ಸಂಸದ ತೇಜಸ್ವಿ ಪತ್ರ

ಬೆಂಗಳೂರು: ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಿ ಜಾರಿಗೊಳಿಸುವಂತೆ ಕೋರಿ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಪತ್ರ ಬರೆದಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಮಾತನಾಡಿದ ಅವರು, ''ಕೃಷ್ಣ ಬೈರೇಗೌಡ ಅವರನ್ನು ಭೇಟಿಯಾಗಿ ನಗರದ ಅಭಿವೃದ್ಧಿ ಮತ್ತು ನಾಗರಿಕರಿಗೆ ಅನುಕೂಲವಾಗುವ 15 ಅಂಶಗಳ ಬಗ್ಗೆ ವಿಸ್ತಾರವಾಗಿ ಚರ್ಚಿಸಿದ್ದೇನೆ. ಜನರ ಜೀವನಮಟ್ಟ ಸುಧಾರಿಸುವ ಕ್ರಮಗಳಿಗೆ ಕೇಂದ್ರದಿಂದ ಸಹಕಾರ ನೀಡಲಾಗುವುದು. ರಾಜ್ಯ ಸರಕಾರದ 30ಕ್ಕೂ ಹೆಚ್ಚು ಯೋಜನೆಗಳು ಬಾಕಿ ಇವೆ. ಹೊಸ ಯೋಜನೆ ಜಾರಿಗೂ ಮೊದಲು ಹಳೆ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸುವಂತೆ ಕೋರಿದ್ದೇನೆ,'' ಎಂದು ಹೇಳಿದರು. ''ಬಿಎಂಆರ್‌ಸಿಎಲ್, ಬಿಡಿಎ, ಕೆಆರ್‌ಐಡಿಎಲ್ ಸೇರಿ 12ಕ್ಕೂ ಹೆಚ್ಚು ಮೂಲಸೌಕರ್ಯ ಏಜೆನ್ಸಿಗಳು ಬೆಂಗಳೂರಿನಲ್ಲಿವೆ. ಇವುಗಳ ನಡುವೆ ಸಮನ್ವಯ ಏಜೆನ್ಸಿ ಇಲ್ಲ. ಬಿಎಲ್‌ಟಿಎಗೆ ಅಧ್ಯಕ್ಷರ ನೇಮಕ ಮಾಡಿ ನೋಡಲ್ ಏಜೆನ್ಸಿ ಮಾಡುವ ಬಗ್ಗೆ ಸಮಾಲೋಚಿಸಲಾಗಿದೆ,'' ಎಂದರು.



ಪ್ರಕಾಶ್ ಶೇಷರಾಘವಾಚಾರ್ ರಚಿತ 'ಮೋದಿ ಸರಕಾರದ ಸವಾಲು, ಸಂಘರ್ಷ ಮತ್ತು ಸಾಧನೆಗಳ ಕುರಿತಾದ 'ವಿಕಾಸ ಪಥ' ಪುಸ್ತಕವನ್ನು ಸೆಂಚುರಿ ಕ್ಲಬ್‌ನಲ್ಲಿ ಬಿಡುಗಡೆಗೊಳಿಸಲಾಯಿತು. ಸಮಾರಂಭದಲ್ಲಿ ಪದ್ಮಶ್ರೀ ಪುರಸ್ಕೃತ ಅಂಕೇಗೌಡ, ಹಿರಿಯ ಪತ್ರಕರ್ತ ವಿಶ್ವೇಶ್ವರಭಟ್, ಶಾಸಕ ಎಸ್.ಆರ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ್ ಉಪಸ್ಥಿತರಿದ್ದರು.

ತ್ಯಾಗರಾಜ ಕೋಆಪರೇಟಿವ್ ಬ್ಯಾಂಕಿನ ಬನಶಂಕರಿ 1ನೇ ಹಂತದ ಶಾಖೆಯ ಸ್ವಂತ ಕಟ್ಟಡವನ್ನು ಸಂಸದ ತೇಜಸ್ವಿ ಸೂರ್ಯ ಉದ್ಘಾಟಿಸಿದರು. ಮಾಜಿ ಸಚಿವ ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷ ಎಚ್.ಕೆ. ಪಾಟೀಲ್, ಬ್ಯಾಂಕಿನ ಅಧ್ಯಕ್ಷ ಎಂ.ಆರ್.ವೆಂಕಟೇಶ್, ಶಾಸಕ ರವಿಸುಬ್ರಮಣ್ಯ, ಹೆಚ್ಚುವರಿ ನಿಬಂಧಕ ಬಾಲಶೇಖರ್, ನಿರ್ದೇಶಕರು ಇದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿ (ಕೆಪಿಟಿಸಿಎಲ್) ಪದ್ಮನಾಭನಗರ ವಿದ್ಯುತ್ ಉಪಕೇಂದ್ರ ವ್ಯಾಪ್ತಿಯಲ್ಲಿ ಜೂ. 24ರಂದು ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳಲಿರುವುದರಿಂದ ವಿವಿಧೆಡೆ ಅಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಬನಗಿರಿನಗರ, ಪಾಪಯ್ಯ ಗಾರ್ಡನ್,



ಬಾಲಾಜಿ ಕಲ್ಯಾಣ ಮಂಟಪ, ಸಿದ್ದಮ್ಮ-ಸಿದ್ದಯ್ಯ ರೆಡ್ಡಿ ಏರಿಯಾ, ದಕ್ಷಿಣ 9ನೇ ಉಪ ವಿಭಾಗ ಕಚೇರಿ, ಜಯನಗರ ವಿಭಾಗ ಕಚೇರಿ, 30ನೇ ಮುಖ್ಯ ರಸ್ತೆ, ಬಿ.ಎನ್.ಎಂ. ಕಾಲೇಜು, ಬಿಡಿಎ ಕಾಂಪ್ಲೆಕ್ಸ್, ದೇವಗಿರಿ ದೇವಸ್ಥಾನ, ಬಿಎಸ್‌ಎನ್‌ಎಲ್ ಕಚೇರಿ, ಬನಶಂಕರಿ 2ನೇ ಹಂತ, ಎಸ್. ಎಲ್.ವಿ.ಹೋಟೆಲ್‌ನಿಂದ 24ನೇ ಕ್ರಾಸ್, ಚನ್ನಮ್ಮನಕೆರೆ ಅಚ್ಚುಕಟ್ಟು, ಮಂಜುನಾಥ ಕಾಲೊನಿ, ಬಿಎಂಟಿಸಿ ಡಿಪೋ, ರಾಜೀವ್ ನಗರ, ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ಪದ್ಮನಾಭನಗರ, ರಾಘವೇಂದ್ರ ಲೇಔಟ್, 18ನೇ ಮೇನ್ ಟೆಲಿಫೋನ್ ಎಕ್ಸ್‌ಚೇಂಜ್, ಕಿಡ್ನಿ ಫೌಂಡೇಶನ್, ಮಹಾರಾಜ ಆಸ್ಪತ್ರೆ, ಲಕ್ಷ್ಮೀಕಾಂತ ಕಲ್ಯಾಣ ಮಂಟಪ, ಪುಟ್ಟಲಿಂಗಯ್ಯ ರಸ್ತೆ, ಆರ್.ಕೆ. ಲೇಔಟ್, ಕದಿರೇನಹಳ್ಳಿ, ಯಾರಬ್ ನಗರ, 9ನೇ ಮೇನ್, ಮೋನೋ ಟೈಪ್, ಕಾವೇರಿ ನಗರ, ಡಾ. ಅಂಬೇಡ್ಕರ್‌ನಗರ, ಎಂ. ಎಂ. ಕೈಗಾರಿಕಾ ಪ್ರದೇಶ, ಉಮಾ ಮಹೇಶ್ವರಿ ದೇವಸ್ಥಾನದ 15ರಿಂದ 17ನೇ ಡಿ ಕ್ರಾಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಅದೇ ರೀತಿ ಯೆಲ್ಲಾರ್‌ಬಂಡೆ ವಿದ್ಯುತ್ ಉಪಕೇಂದ್ರ ವ್ಯಾಪ್ತಿಯಲ್ಲೂ ಬೆಳಗ್ಗೆ 11ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಎ.ಕೆ. ಆಶ್ರಮ ರಸ್ತೆ, ದೇವೇಗೌಡ ರಸ್ತೆ, ಆರ್.ಟಿ. ನಗರ 1ನೇ ಬ್ಲಾಕ್, ತಿಮ್ಮಯ್ಯ ಗಾರ್ಡನ್, ಮೋದಿ ಗಾರ್ಡನ್, ಸೈನಿಕ ಪ್ರದೇಶ, ವೀರಣ್ಣಪಾಳ್ಯ, ಲುಂಬಿಣಿ ಗಾರ್ಡನ್, ಜಲಮಂಡಳಿ ಎಸ್‌ಟಿಪಿ, ಮರಿಯಣ್ಣಪಾಳ್ಯ, ಕಾಫಿ ಬೋರ್ಡ್ ಲೇಔಟ್, ಕೆಂಪಾಪುರ, ದಾಸರಹಳ್ಳಿ, ಮಾರುತಿ ಲೇಔಟ್, ಭುವನೇಶ್ವರಿ ನಗರ, ಬಿಇಎಲ್ ಕಾರ್ಪೊರೇಟ್ ಕಚೇರಿ, ಚಾಣಕ್ಯ ಲೇಔಟ್, ನಾಗವಾರ, ಎಂ. ಎಸ್. ರಾಮಯ್ಯ ನಾರ್ತ್ ಸಿಟಿ, ಥಣಿಸಂದ್ರ ಮುಖ್ಯ ರಸ್ತೆ, ಆಶೀರ್ವಾದ ನಗರ, ಅಮರಜ್ಯೋತಿ ಲೇಔಟ್, ರಾಚೇನಹಳ್ಳಿ ಮುಖ್ಯ ರಸ್ತೆ, ಮೇಸ್ತ್ರಿ ಪಾಳ್ಯ, ರಾಯಲ್ ಎನ್‌ಕ್ಲೇವ್, ಶ್ರೀರಾಮಪುರ, ವಿ.ಎಚ್.ಬಿ.ಸಿ.ಎಸ್. ಲೇಔಟ್, ವೀರಣ್ಣಪಾಳ್ಯ, ಜೋಜಪ್ಪ ಲೇಔಟ್, ಗೋವಿಂದಪುರ, ವೀರಣ್ಣಪಾಳ್ಯ ಮುಖ್ಯ ರಸ್ತೆ, ಬೈರಪ್ಪ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಅಭಿನಂದನೆಗಳು



ಸಿ.ಎ. ನಿತೀಶ್ ಕಾಮತ್

(ಶ್ರೀ ನಿತ್ಯಾನಂದ ಕಾಮತ್ ಹಾಗೂ ಶ್ರೀಮತಿ ನಂದಿತಾ (ಪ್ರತಿಮಾ) ಕಾಮತ್ ಅವರ ಸುಪುತ್ರ ಮಿತ್ತಬೈಲು, ಮೂಡುಬಿದಿರೆ)

ಮೇ 2026ರಲ್ಲಿ ನಡೆದ ಸಿ.ಎ. ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲೇ ಉತ್ತೀರ್ಣರಾದ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು.

ಬಂಧುಗಳು ಹಾಗೂ ಮಿತ್ರರು

ಪಿಜಿ ಕೋರ್ಸ್ ಪ್ರವೇಶಕ್ಕೆ ಅರ್ಜಿ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯ 2026-27ನೇ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ.

ಎರಡು ವರ್ಷಗಳ ಎಂ.ಎಸ್ಸಿ ಅರ್ಥಶಾಸ್ತ್ರ, ಎಂ.ಎಸ್ಸಿ ಹಣಕಾಸು ಅರ್ಥಶಾಸ್ತ್ರ, ಎಂ.ಎ. ಅರ್ಥಶಾಸ್ತ್ರ, ಎಂ.ಎಸ್ಸಿ ಅಭಿವೃದ್ಧಿ ಅರ್ಥಶಾಸ್ತ್ರ, ಎಂ.ಎಸ್ಸಿ ಡೇಟಾ ಸೈನ್ಸ್ ಅನಾಲಿಟಿಕ್ಸ್, ಎಂ.ಎಸ್ಸಿ ಸಾರ್ವಜನಿಕ ನೀತಿ ಕೋರ್ಸ್‌ಗಳಿಗೆ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಜೂ.30ರವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದ್ದು, 2026-27ನೇ ಸಾಲಿನಲ್ಲಿ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ (ಸಿಯುಇಟಿ-ಪಿಜಿ)ಗೆ ಹಾಜರಾದ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಈ ಎಲ್ಲಾ ಕೋರ್ಸ್‌ಗಳು ಪೂರ್ಣಾವಧಿ ವಿಷಯದ ವಸತಿ ಸೌಲಭ್ಯಸಹಿತ ಕಾರ್ಯಕ್ರಮಗಳಾಗಿವೆ. ಅರ್ಜಿ, ಅರ್ಹತೆ, ಮಾನದಂಡಗಳಿಗಾಗಿ http://base.ac.in ವೆಬ್‌ಸೈಟ್ ಪರಿಶೀಲಿಸಬಹುದಾಗಿದೆ.

ಬದನೆಕಾಯಿ ದರವೂ ಸೆಂಚುರಿಯತ್ತ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಕಳೆದ ಎರಡು ವಾರಗಳಿಂದ ಕೆಲವೆಡೆ ಅತಿವೃಷ್ಟಿಯಾದರೆ, ಮತ್ತೆ ಕೆಲವೆಡೆ ಅನಾವೃಷ್ಟಿಯಾಗಿದೆ. ಹೀಗಾಗಿ, ಹಲವೆಡೆ ಬೆಳೆಯಿದ್ದರೂ ನೀರಿಲ್ಲದೆ ಒಣಗಿದರೆ, ಇನ್ನೂ ಕೆಲವೆಡೆ ಮಳೆಯಿಂದಾಗಿ ಬೆಳೆ ಹಾಳಾಗಿದೆ. ಹೀಗಾಗಿ, ಸೊಪ್ಪು-ತರಕಾರಿಗಳ ಬೆಲೆಯಲ್ಲಿ ಏರಿಕೆಯಾಗಿದೆ.

ಬಿಳಿ ಬದನೆಕಾಯಿ ಇದೇ ಮೊದಲ ಬಾರಿಗೆ ಕೆ.ಜಿ.ಗೆ 100-110 ರೂ. ತಲುಪಿದ್ದು, ವಾಂಗಿಬಾತ್ ಪ್ರಿಯರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಕ್ಯಾಪ್ಸಿಕಂ, ಬಜ್ಜಿ ಮೆಣಸಿನಕಾಯಿ ದರ ಕೂಡ ಸೆಂಚುರಿಯತ್ತ ತಲುಪಿದೆ. ಬೀಟ್‌ರೂಟ್, ನವಿಲುಕೋಸು ಬೆಳೆ ಮಳೆಯಿಂದ ಹಾಳಾಗಿದ್ದು, ಹಸಿ ಮೆಣಸಿನಕಾಯಿ, ನುಗ್ಗೆಕಾಯಿ ಹೀಗೆ ಹಲವು ತರಕಾರಿಗಳ ದರ ಏರುಗತಿಯಲ್ಲಿ ಸಾಗುತ್ತಿದೆ. ಸೊಪ್ಪಿನ ಬೆಳೆ ಮಳೆಯಿಂದ ಹಾಳಾಗಿದ್ದು, ಬೆಲೆ ಏರಿಕೆಯಾಗಿದೆ. ಅದರಲ್ಲೂ ಬಹು ಬೇಡಿಕೆಯ ಮೆಂತ್ಯ ಸೊಪ್ಪಿನ ದರ ಹಾಪ್‌ಕಾಮ್ಸ್‌ನಲ್ಲಿ ಕೆ.ಜಿ.ಗೆ 135 ರೂ. ಇದ್ದರೆ, ಚಿಲ್ಲರೆ ಮಾರಾಟದಲ್ಲಿ ಕಂತೆಗೆ 35-40 ರೂ. ನಂತೆ ಮಾರಾಟವಾಗುತ್ತಿದೆ. ಸಬ್ಬಸಿಗೆ ಸೊಪ್ಪು ಮತ್ತು ಪುದೀನ ದರ ಕೂಡ ಏರಿಕೆಯಾಗಿದೆ.

ಬೀನ್ಸ್, ಕ್ಯಾಪ್ಸಿಕಂ, ಬೆಂಡೆಕಾಯಿ ನೆರೆಯ ಕೇರಳಕ್ಕೂ ರಫ್ತಾಗುತ್ತದೆ. ಅದೇ ರೀತಿ ಆಂಧ್ರ, ತಮಿಳುನಾಡು ಭಾಗಗಳಿಗೂ ಕೆಲವು ತರಕಾರಿಗಳು ಹೋಗುತ್ತವೆ. ಮಹಾರಾಷ್ಟ್ರದಿಂದ ಈರುಳ್ಳಿ ಸೇರಿದಂತೆ ಕೆಲವು ಹಣ್ಣು-ತರಕಾರಿಗಳು ಅನ್ಯ ರಾಜ್ಯಗಳಿಂದ ಕರ್ನಾಟಕಕ್ಕೂ ಬರುತ್ತವೆ.

ದುಬಾರಿಯಾದ ಮೊಟ್ಟೆ



ಮೇ ತಿಂಗಳಲ್ಲಿ ಬಿಸಿಲ ತಾಪ ಹೆಚ್ಚಾಗಿದ್ದುದರಿಂದ ಮೊಟ್ಟೆ ಬಳಕೆ ಕಡಿಮೆಯಾಗಿತ್ತು. ಜತೆಗೆ, ಶಾಲೆಗಳಿಗೆ ರಜೆಯಿದ್ದುದರಿಂದ ಬಳಕೆ ಮತ್ತಷ್ಟು ಕಡಿಮೆಯಿದ್ದು, 5.30 ರೂ.ಗೆ ಸಿಗುತ್ತಿತ್ತು. ಜೂನ್ ತಿಂಗಳಲ್ಲಿ ಶಾಲೆಗಳು ಆರಂಭವಾದವು. ಮಳೆಗಾಲವೂ ಶುರುವಾಯಿತು. ಹೀಗಾಗಿ, ಮೊಟ್ಟೆಗಳ ಬಳಕೆ ಹೆಚ್ಚಾಗಿದ್ದು, ಕ್ರಮೇಣ ದರವೂ ಏರಿಕೆಯಾಗುತ್ತಾ ಸಾಗಿದೆ. ಇದೀಗ ಸಗಟು ದರದಲ್ಲಿ 7.05 ಪೈಸೆಯಿದ್ದರೆ, ಚಿಲ್ಲರೆ ದರದಲ್ಲಿ 7.50 ರೂ.ನಿಂದ 7.80 ರೂ.ವರೆಗೆ ಮಾರಾಟ ಮಾಡಲಾಗುತ್ತಿದೆ. ಇದರಿಂದ ಮೊಟ್ಟೆ ಪ್ರಿಯರಿಗೆ ದರ ಏರಿಕೆಯ ಬಿಸಿ ತಟ್ಟಿದೆ. ಶ್ರಾವಣ ಮಾಸದವರೆಗೂ ದರ ಯಥಾಸ್ಥಿತಿಯಲ್ಲಿರುವ ಸಾಧ್ಯತೆಯಿದೆ. ರಾಜ್ಯಾದ್ಯಂತ 1.50 ಕೋಟಿ ಮೊಟ್ಟೆಗಳು ಉತ್ಪಾದನೆಯಾಗುತ್ತಿವೆ ಎನ್ನುತ್ತಾರೆ ನ್ಯಾಷನಲ್ ಎಗ್ ಕೋಆರ್ಡಿನೇಷನ್ ಕಮಿಟಿ ಬೆಂಗಳೂರು ವಲಯದ ಅಧ್ಯಕ್ಷ ಟಿ. ವೆಂಕಟೇಶ್ವರಲು.

ಇದೀಗ ಕೆಲವೆಡೆ ಬರಗಾಲ, ಮತ್ತೆ ಕೆಲವೆಡೆ ನೆರೆ ಹೀಗಾಗಿ ದರಗಳಲ್ಲಿ ಏರುಪೇರಾಗಿದೆ.

ಟೊಮೆಟೊ ಇಳಿಕೆ, ನುಗ್ಗೆ ಏರಿಕೆ: ಕಳೆದ ವಾರ ಟೊಮೇಟೊ ದರ ಕೆ.ಜಿ.ಗೆ 50-60 ರೂ.ವರೆಗೆ ತಲುಪಿತ್ತು. ಇದೀಗ ಅದು 30-40 ರೂ. ಗೆ ಇಳಿಕೆಯಾಗಿದೆ. ಏಕಕಾಲಕ್ಕೆ ಹೆಚ್ಚು ರೈತರು ಬೆಳೆದಿರುವುದರಿಂದ ಬೆಲೆ ಕೊಂಚ ತಗ್ಗಿದೆ. ಆದರೆ, ನುಗ್ಗೆಕಾಯಿ ಎರಡು ವಾರಗಳ ಹಿಂದೆ ಕೆ.ಜಿ.ಗೆ 55 ರೂ. ಇದ್ದುದು, ಇದೀಗ 90 ರೂ. ತಲುಪಿದೆ.

ಕೊಂಚ ಇಳಿದ ಟೊಮೆಟೊ, ಸೊಪ್ಪಿನ ದರ ಏರಿಕೆ

ಹಾಪ್‌ಕಾಮ್ಸ್‌ನಲ್ಲಿ ತರಕಾರಿ ದರ (ಕೆ.ಜಿ.ಗಳಲ್ಲಿ)

	(ರೂ.ಗಳಲ್ಲಿ)
ಬಿಳಿಬದನೆ	100
ಬೀನ್ಸ್	100
ದಪ್ಪ ಮೆಣಸಿನಕಾಯಿ	90
ಬಜ್ಜಿ ಮೆಣಸಿನಕಾಯಿ	90
ಟೊಮೇಟೊ	40
ನುಗ್ಗೆಕಾಯಿ	90
ಮೂಲಂಗಿ	40
ಮೆಂತ್ಯ ಸೊಪ್ಪು	135
ಅರಿವೆ ಸೊಪ್ಪು	44
ದಂಟಿನ ಸೊಪ್ಪು	52
ಸಬ್ಬಕ್ಕಿ ಸೊಪ್ಪು	54
ಪುದೀನ	100
ಕೊತ್ತಂಬರಿ ಸೊಪ್ಪು	60

ಕಡಿಮೆ ಮೊತ್ತಕ್ಕೆ ಡೆಲ್ಲಿಗೆ ಮರಳಿದ ರಿಷಬ್ ಪಂತ್

ಹೊಸದಿಲ್ಲಿ: ಐಪಿಎಲ್ ಇತಿಹಾಸದಲ್ಲೇ ಅತ್ಯಂತ ಪ್ರಮುಖ ಆಟಗಾರರ ವಿನಿಮಯ ಪ್ರಕ್ರಿಯೆ ಮಂಗಳವಾರ ಪೂರ್ತಿಗೊಂಡಿದೆ. ಲಖನೌ ಸೂಪರ್ ಜಯಂಟ್ಸ್ (ಎಲ್‌ಎಸ್‌ಜಿ) ತಂಡದ ಮಾಜಿ ನಾಯಕ ರಿಷಭ್ ಪಂತ್ ಮತ್ತೆ ಡೆಲ್ಲಿ ಕ್ಯಾಪಿಟಲ್ಸ್ (DC) ತಂಡಕ್ಕೆ ಮರಳಲಿದ್ದಾರೆ. ಮತ್ತೊಂದೆಡೆ ಡೆಲ್ಲಿ ತಂಡದ ಸ್ಟಾರ್ ಸ್ಪಿನ್ನರ್ ಕುಲ್ದೀಪ್ ಯಾದವ್ ಲಖನೌ ಸೂಪರ್ ಜಯಂಟ್ಸ್ ತಂಡವನ್ನು ಸೇರಲಿದ್ದಾರೆ.

ಡೆಲ್ಲಿ ಮತ್ತು ಲಖನೌ ಮಧ್ಯೆ ಹೈಪ್ರೊಫೈಲ್ ಆಟಗಾರರ ವಿನಿಮಯ

₹27 ಕೋಟಿಯಿಂದ ₹15 ಕೋಟಿಗೆ ಇಳಿದ ಸ್ಟಾರ್ ಆಟಗಾರ

ರಿಷಭ್ ಪಂತ್ 2016ರಿಂದ 2024ರವರೆಗೆ ಒಂಬತ್ತು ಸೀಸನ್‌ಗಳನ್ನು ಡೆಲ್ಲಿ ಕ್ಯಾಪಿಟಲ್ಸ್ ಪರ ಆಡಿದ್ದರು. 2021ರಿಂದ 2024ರವರೆಗೆ ನಾಲ್ಕು ಸೀಸನ್‌ಗಳಲ್ಲಿ ತಂಡವನ್ನು ಮುನ್ನಡೆಸಿದ್ದರು. 2025ರ ಮೆಗಾ ಹರಾಜಿನಲ್ಲಿ ಪಂತ್‌ರನ್ನು ಎಲ್‌ಎಸ್‌ಜಿ ತಂಡ ಐಪಿಎಲ್ ಇತಿಹಾಸದಲ್ಲೇ ದಾಖಲೆಯ 27 ಕೋಟಿ ರೂಪಾಯಿಗೆ ಖರೀದಿಸಿತ್ತು. ಮಂಗಳವಾರ ಪಂತ್ 15 ಕೋಟಿ ರೂ. ಪರಿಷ್ಕೃತ ಮೊತ್ತಕ್ಕೆ ಡಿಸಿ ತಂಡವನ್ನು ಸೇರಿದ್ದಾರೆ. ಎಡಗೈ ರಿಸ್ಟ್ ಸ್ಪಿನ್ನರ್ ಕುಲದೀಪ್ ಯಾದವ್ ಅವರು ಡೆಲ್ಲಿ ಕ್ಯಾಪಿಟಲ್ಸ್ ಜೊತೆಗಿನ ಯಶಸ್ವಿ ಐದು ಸೀಸನ್‌ಗಳ ನಂತರ ಈಗ 13.50 ಕೋಟಿ ರೂಪಾಯಿಗಳಿಗೆ ಲಖನೌ ತಂಡ ಕೂಡಿಕೊಂಡಿದ್ದಾರೆ. ಇತ್ತೀಚೆಗೆ ಕೊನೆಗೊಂಡ ಐಪಿಎಲ್ ಟೂರ್ನಿಯಲ್ಲಿ ರಿಷಬ್, ನಾಯಕತ್ವ ವೈಫಲ್ಯ ಮತ್ತು ಕಳಪೆ ವೈಯಕ್ತಿಕ ಪ್ರದರ್ಶನದಿಂದ ವ್ಯಾಪಕ ಟೀಕೆಗೆ ಗುರಿಯಾಗಿದ್ದರು.

ಇರಾಕ್ ವಿರುದ್ಧ 3–0 ಭರ್ಜರಿ ಜಯ | ಎಂಬಾಪೆ ಡಬಲ್ ಗೋಲ್

ನಾಕೌಟ್ ಹಂತಕ್ಕೆ ಫ್ರಾನ್ಸ್

ಫಿಲಿಡೆಲ್ಫಿಯಾ(ಅಮೆರಿಕ): ಸ್ಟಾರ್ ಆಟಗಾರ ಕಿಲಿಯನ್ ಎಂಬಾಪೆ ಬಾರಿಸಿದ ಆಕರ್ಷಕ ಡಬಲ್ ಗೋಲ್ ನೆರವಿನಿಂದ ಫ್ರಾನ್ಸ್ ತಂಡ ಮಂಗಳವಾರ ಫಿಫಾ ವಿಶ್ವಕಪ್ ಪಂದ್ಯದಲ್ಲಿ ಇರಾಕ್ ವಿರುದ್ಧ 3–0 ಗೋಲುಗಳ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಫ್ರಾನ್ಸ್ ಅಧಿಕೃತವಾಗಿ ನಾಕೌಟ್ ಹಂತ ಪ್ರವೇಶಿಸಿದೆ. ಮೆಕ್ಸಿಕೊ, ಅಮೆರಿಕ, ಜರ್ಮನಿ, ಅರ್ಜೆಂಟಿನಾ, ನಾರ್ವೆ ಈಗಾಗಲೇ ನಾಕೌಟ್ ಪ್ರವೇಶಿಸಿವೆ.

ಎಂಬಾಪೆ ದಾಖಲೆ: ಮಂಗಳವಾರದ ಪಂದ್ಯದಲ್ಲಿ ಎಂಬಾಪೆ ತಮ್ಮ ವೃತ್ತಿಜೀವನದ ವಿಶ್ವಕಪ್ ಗೋಲುಗಳ ಸಂಖ್ಯೆಯನ್ನು 16ಕ್ಕೆ ಏರಿಕೆ ಮಾಡಿಕೊಂಡಿದ್ದು, ಸಾರ್ವಕಾಲಿಕ ಅತಿ ಹೆಚ್ಚು ಗೋಲು ಗಳಿಸಿದವರ ಪಟ್ಟಿಯಲ್ಲಿ ಜರ್ಮನಿಯ ಮಿರೋಸ್ಲಾವ್ ಕ್ಲೋಸ್ ಅವರನ್ನು ಸರಿಗಟ್ಟಿದ್ದಾರೆ.

ಮಳೆಯಿಂದ ಬಾಧಿತವಾದ ಪಂದ್ಯದಲ್ಲಿ ಉಸ್ಮಾನ್ ಡೆಂಬೆಲೆ ಫ್ರಾನ್ಸ್ ಪರ 3ನೇ ಗೋಲು ಗಳಿಸಿ ಗೆಲುವಿನ ಅಂತರ ಹೆಚ್ಚಲು ಕಾರಣರಾದರು. ಮಳೆಯಿಂದಾಗಿ ಪಂದ್ಯಕ್ಕೆ ಸುಮಾರು ಎರಡು ಗಂಟೆಗಳ ಕಾಲ ಅಡ್ಡಿಯಾಗಿತ್ತು. ತೀವ್ರ ಗುಡುಗು ಸಹಿತ ಮಳೆಯ ಮುನ್ಸೂಚನೆ ಇದ್ದಿದ್ದರಿಂದ ಲಿಂಕನ್ ಫೈನಾನ್ಷಿಯಲ್ ಫೀಲ್ಡ್‌ನ ಸಿಬ್ಬಂದಿ ಮೈದಾನದ ನೀರನ್ನು ಹೊರಹಾಕಲು ಹರಸಾಹಸ ಪಡಬೇಕಾಯಿತು.

ಹ್ಯಾಟ್ರಿಕ್ ಅವಕಾಶ ಮಿಸ್: ವೃತ್ತಿಜೀವನದ 100ನೇ ಅಂತಾರಾಷ್ಟ್ರೀಯ ಪಂದ್ಯವಾಡಿದ 27 ವರ್ಷದ ಎಂಬಾಪೆ, 14ನೇ ಮತ್ತು 54ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಇರಾಕ್ ತಂಡದ ಕಳಪೆ ರಕ್ಷಣಾತ್ಮಕ ಆಟದ ಲಾಭ ಪಡೆದ ಅವರು, ಎದುರಾಳಿ ಗೋಲ್‌ಕೀಪರ್ ಅಹ್ಮದ್ ಬಾಸಿಲ್‌ರನ್ನು ವಂಚಿಸಿ ಚೆಂಡನ್ನು ನೆಟ್ ಒಳಕ್ಕೆ ತಳ್ಳಿದರು.

ಕಿಲಿಯನ್ ಎಂಬಾಪೆ

ನಾರ್ವೆಗೆ ಜಯ

ಮಂಗಳವಾರ ನಡೆದ ಇನ್ನೆರಡು ಪಂದ್ಯಗಳಲ್ಲಿ ನಾರ್ವೆ ತಂಡ ಸೆನೆಗಲ್ ತಂಡವನ್ನು 3-2 ಗೋಲುಗಳಿಂದ ಮಣಿಸಿದೆ. ಅಲ್ಜೀರಿಯಾ ತಂಡ ಜೋರ್ಡಾನ್ ತಂಡವನ್ನು 2-1 ಗೋಲುಗಳಿಂದ ಪರಾಭವಗೊಳಿಸಿದೆ.

90ನೇ ನಿಮಿಷದಲ್ಲಿ ಅವರು ಮೈದಾನದಿಂದ ಹೊರನಡೆಯುವ ಮುನ್ನ ಹ್ಯಾಟ್ರಿಕ್ ಗಳಿಸುವ ಸುವರ್ಣ ಅವಕಾಶವೊಂದನ್ನು ಕೈತಪ್ಪಿಸಿಕೊಂಡರು.

ಜಾಗತಿಕ ಫುಟ್‌ಬಾಲ್ ಶ್ರೇಷ್ಠರ ಸಾಲಿಗೆ ಸೇರುವ ಅರ್ಜೆಂಟಿನಾದ ಲಯೋನೆಲ್ ಮೆಸ್ಸಿ ಒಟ್ಟು 18 ಗೋಲ್‌ಗಳನ್ನು ಗಳಿಸಿ ಸೋಮವಾರದ ಪಂದ್ಯದಲ್ಲಿ ಜರ್ಮನಿಯ ಕ್ಲೋಸ್ ಅವರ ಅತ್ಯಧಿಕ ಗೋಲ್ ದಾಖಲೆಯನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದ್ದಾರೆ.

ಇರಾಕ್ ತಂಡದ ಹೋರಾಟ: 1986ರ ನಂತರ ಕೇವಲ ಎರಡನೇ ಬಾರಿಗೆ ವಿಶ್ವಕಪ್ ಆಡುತ್ತಿರುವ ಇರಾಕ್ ತಂಡಕ್ಕೆ ಆರಂಭದಲ್ಲೇ ಹಿನ್ನಡೆಯಾಯಿತು. ತಂಡದ ಪ್ರಮುಖ ಸ್ಟ್ರೈಕರ್ ಐಮೆನ್ ಹುಸೇನ್ 26ನೇ ನಿಮಿಷದಲ್ಲಿ ಗಾಯಗೊಂಡು ಮೈದಾನ ತೊರೆದರು. ಅವರ ಜಾಗಕ್ಕೆ ಅಲಿ ಅಲ್-ಹಮಾದಿ ಕಣಕ್ಕಿಳಿದರೂ ತಂಡಕ್ಕೆ ಯಾವುದೇ ಗೋಲು ಗಳಿಸಲು ಸಾಧ್ಯವಾಗಲಿಲ್ಲ.

2018ರ ಚಾಂಪಿಯನ್ ಹಾಗೂ 2022ರ ರನ್ನರಪ್ ಫ್ರಾನ್ಸ್, ಈ ಬಾರಿಯೂ ಸ್ಪೇನ್ ಜೊತೆ ವಿಶ್ವಕಪ್ ಗೆಲ್ಲುವ ಜಂಟಿ ಫೇವರಿಟ್ ತಂಡವಾಗಿ ಕಣಕ್ಕಿಳಿದಿದೆ. ತನ್ನ ಮುಂದಿನ ಪಂದ್ಯದಲ್ಲಿ ಫ್ರಾನ್ಸ್ ಜುಲೈ 4ರಂದು ಇದೇ ಮೈದಾನದಲ್ಲಿ ಜರ್ಮನಿ ತಂಡವನ್ನು ಎದುರಿಸುವ ಸಾಧ್ಯತೆಯಿದೆ.

ಪಂದ್ಯಗಳು

- **ಸ್ವಿಟ್ಜರ್ಲೆಂಡ್ vs ಕೆನಡಾ** — ಬುಧವಾರ ಮಧ್ಯರಾತ್ರಿ 12.30 — ಸ್ಥಳ ವ್ಯಾಂಕೋವರ್
- **ಬೋಸ್ನಿಯ vs ಕತಾರ್** — ಬುಧವಾರ ಮಧ್ಯರಾತ್ರಿ 12.30 — ಸ್ಥಳ: ಸಿಯಾಟೆಲ್
- **ಮೊರಾಕ್ಕೊ vs ಹೈಟಿ** — ಗುರುವಾರ ಮುಂಜಾನೆ 3.30 — ಸ್ಥಳ: ಅಟ್ಲಾಂಟಾ
- **ಸ್ಕಾಟ್ಲೆಂಡ್ vs ಬ್ರೆಜಿಲ್** — ಗುರುವಾರ ಮುಂಜಾನೆ 3.30 — ಸ್ಥಳ: ಮಯಾಮಿ
- **ದಕ್ಷಿಣ ಆಫ್ರಿಕಾ vs ದಕ್ಷಿಣ ಕೊರಿಯ** — ಗುರುವಾರ ಮುಂಜಾನೆ 6.30 — ಸ್ಥಳ: ಗ್ವಾಡಾಲುಪೆ
- **ಜೆಕಿಯಾ vs ಮೆಕ್ಸಿಕೊ** — ಗುರುವಾರ ಮುಂಜಾನೆ 6.30 — ಸ್ಥಳ: ಮೆಕ್ಸಿಕೊ ಸಿಟಿ

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಪಾಕ್ ವಿರುದ್ಧ ಭಾರತಕ್ಕೆ ರೋಚಕ ಜಯ

ಎಫ್‌ಐಎಚ್ ಪ್ರೊ ಲೀಗ್

ಲಂಡನ್: ರೋಚಕ ಹಾಕಿ ಪಂದ್ಯದಲ್ಲಿ ಭಾರತ ತಂಡವು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ 4– 3 ಗೋಲುಗಳ ಅಂತರದಿಂದ ರೋಚಕ ಜಯ ಸಾಧಿಸಿದೆ. ಎಫ್‌ಐಎಚ್ ಪ್ರೊ ಲೀಗ್ ಪಂದ್ಯದ ಆರಂಭಿಕ ಕ್ವಾರ್ಟರ್‌ನಲ್ಲಿ ಮೊದಲ ಗೋಲು ಬಿಟ್ಟುಕೊಟ್ಟು ಹಿನ್ನಡೆ ಅನುಭವಿಸಿದ ಭಾರತ, ನಂತರ ಆಕ್ರಮಣಕಾರಿ ಆಟ ಪ್ರದರ್ಶಿಸಿ ಸತತ ನಾಲ್ಕು ಗೋಲುಗಳನ್ನು ಬಾರಿಸುವ ಮೂಲಕ ಪಂದ್ಯದ ಮೇಲೆ ಪೂರ್ಣ ನಿಯಂತ್ರಣ ಸಾಧಿಸಿತು.

ಭಾರತದ ಪರ ಅಭಿಷೇಕ್ (22ನೇ ನಿ.) ಮತ್ತು ನೀಲಕಂಠ ಶರ್ಮಾ (24ನೇ ನಿ.) ತಲಾ ಒಂದು ಗೋಲು ಗಳಿಸಿ ತಿರುಗೇಟು ನೀಡಿದರೆ, ಸುಖ್‌ಜೀತ್ ಸಿಂಗ್ 40ನೇ ನಿಮಿಷದಲ್ಲಿ ಗೋಲು ದಾಖಲಿಸಿ ತಂಡದ ಮುನ್ನಡೆ ವಿಸ್ತರಿಸಿದರು. ಪಂದ್ಯದ 53ನೇ ನಿಮಿಷದಲ್ಲಿ ರಾಜಿಂದರ್‌ಸಿಂಗ್ ಪೆನಾಲ್ಟಿ ಕಾರ್ನರ್‌ನಲ್ಲಿ ಡ್ರ್ಯಾಗ್-ಫ್ಲಿಕ್ ಮಾಡಿ ಸ್ಕೋರ್ ಅಂತರವನ್ನು 4–1 ಕ್ಕೆ ಏರಿಸಿದರು. ಭಾರತದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲಾಗಿ ಪರಿವರ್ತಿಸುವಲ್ಲಿ ವಿಫಲರಾದರು. ಪಂದ್ಯದ ಕೊನೆಯ ಆರು ನಿಮಿಷಗಳಿದ್ದಾಗ ಪಾಕಿಸ್ತಾನದ ಅಬೂಬಕರ್ ಎರಡು ಗೋಲುಗಳನ್ನು ಗಳಿಸಿ ಪಾಕಿಸ್ತಾನ ಕಮ್‌ಬ್ಯಾಕ್ ಮಾಡುವ ಸುಳಿವು ನೀಡಿದರಾದರೂ, ಅಂತಿಮವಾಗಿ ಭಾರತ 4–3 ರಿಂದ ಜಯದ ನಿಟ್ಟುಸಿರು ಬಿಟ್ಟಿತು.

ಭಾರತ- ಪಾಕ್ ಆಟಗಾರರ ಹಸ್ತಲಾಘವ: ಪಂದ್ಯಕ್ಕೂ ಮೊದಲು ಭಾರತ- ಪಾಕಿಸ್ತಾನ ತಂಡದ ಹಾಕಿ ಆಟಗಾರರು ಪರಸ್ಪರ ಹಸ್ತಲಾಘವ ಮಾಡುವ ಮೂಲಕ 'ನೋ ಹ್ಯಾಂಡ್ ಶೇಕ್ ವಾರ್' ನೀತಿಗೆ ತದ್ವಿರುದ್ಧವಾಗಿ ನಡೆದುಕೊಂಡಿದ್ದು ಗಮನಸೆಳೆಯಿತು. ಕ್ರಿಕೆಟ್ ಸೇರಿದಂತೆ ಹಲವು ಕ್ರೀಡಾರಂಗದಲ್ಲಿ ಭಾರತ- ಪಾಕ್ ತಂಡಗಳು ಮುಖಾಮುಖಿಯಾದಾಗಲೆಲ್ಲಾ, ಇತ್ತಂಡಗಳ ಆಟಗಾರರು ಪಂದ್ಯಕ್ಕೂ ಮೊದಲು ಹಸ್ತಲಾಘವ ಮಾಡದೆ 'ನೋ ಹ್ಯಾಂಡ್ ಶೇಕ್' ನೀತಿಯನ್ನು ಅನುಸರಿಸುತ್ತಿದ್ದವು. ಪಹಲ್ಗಾಮ್ ದಾಳಿಗೆ ಪ್ರತಿರೋಧವಾಗಿ ಭಾರತೀಯ ಕ್ರಿಕೆಟ್ ಆಟಗಾರರು ಪಾಕ್ ತಂಡದ ವಿರುದ್ಧ 'ನೋ ಹ್ಯಾಂಡ್ ಶೇಕ್' ನೀತಿ ಅನುಸರಿಸಿದ್ದರು. ಇದು 'ನೋ ಹ್ಯಾಂಡ್ ಶೇಕ್ ವಾರ್' ಎಂದೇ ಹೆಸರಾಯಿತು.

ಗೆಲುವಿನ ಖಾತೆ ತೆರೆದ ಗುಲ್ಬರ್ಗಾ ಮಿಸ್ಟಿಕ್ಸ್

ಕ್ರಾಂತಿ ಕುಮಾರ್ ಆಲ್‌ರೌಂಡ್ ಮಿಂಚು | ಶಿವಮೊಗ್ಗ ಯೋಧಾಸ್ ತಂಡಕ್ಕೆ ಎರಡನೇ ಸೋಲು

■ ವಿಕ ಸುದ್ದಿಲೋಕ ಮೈಸೂರು

ಕ್ರಾಂತಿ ಕುಮಾರ್ ಅವರ ಆಲ್‌ರೌಂಡ್ ಪ್ರದರ್ಶನ ಹಾಗೂ ಆರಂಭಿಕ ಬ್ಯಾಟರ್‌ಗಳ ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವು ಶಿವಮೊಗ್ಗ ಯೋಧಾಸ್ ವಿರುದ್ಧ 95 ರನ್‌ಗಳ ಭರ್ಜರಿ ಜಯ ದಾಖಲಿಸಿತು.

ಮೈಸೂರಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಮಂಗಳವಾರದ ಪಂದ್ಯದಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವು ತನ್ನ ಮೊದಲ ಗೆಲುವಿನ ಸಿಹಿ ಕಂಡಿತು. ಮೊದಲು ಬ್ಯಾಟಿಂಗ್ ನಡೆಸಿದ ಗುಲ್ಬರ್ಗಾ ಮಿಸ್ಟಿಕ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 232 ರನ್‌ಗಳ ಬೃಹತ್ ಮೊತ್ತ ಕಲೆಹಾಕಿತು. ತಂಡದ ಆರಂಭಿಕ ಬ್ಯಾಟರ್ ಲೋಚನ್ ಗೌಡ (21 ಎಸೆತಗಳಲ್ಲಿ 47) ಹಾಗೂ ಮೂರನೇ ಕ್ರಮಾಂಕದ ಪ್ರಖರ್ ಚತುರ್ವೇದಿ (19 ಎಸೆತಗಳಲ್ಲಿ 45) ಸ್ಫೋಟಕ ಬ್ಯಾಟಿಂಗ್ ನಡೆಸಿ ತಂಡಕ್ಕೆ ಭದ್ರ ಅಡಿಪಾಯ ಹಾಕಿದರು. ಪವರ್‌ಪ್ಲೇ ಅವಧಿಯಲ್ಲೇ ಮಿಸ್ಟಿಕ್ಸ್ 93 ರನ್ ಕಲೆಹಾಕಿ ಎದುರಾಳಿಗಳ ಮೇಲೆ ಒತ್ತಡ ಹೇರಿತು.



ನಂತರ ಮ್ಯಾಕ್‌ನೀಲ್ ನೊರೊನ್ಹಾ (16 ಎಸೆತಗಳಲ್ಲಿ 26), ನಾಯಕ ಮನೀಶ್ ಪಾಂಡೆ (11 ಎಸೆತಗಳಲ್ಲಿ 22) ಹಾಗೂ ಕ್ರಾಂತಿ ಕುಮಾರ್ (22 ಎಸೆತಗಳಲ್ಲಿ 31) ಉಪಯುಕ್ತ ಕೊಡುಗೆ ನೀಡಿದರು. ಧ್ರುವ್ ಪ್ರಭಾಕರ್ (14 ಎಸೆತಗಳಲ್ಲಿ 13) ಅಂತಿಮ ಹಂತದಲ್ಲಿ ಉತ್ತಮ ಸಾಥ್ ನೀಡಿದರು.

ಶಿವಮೊಗ್ಗ ಪರ ಭೀಮ್ ರಾವ್ ನಾವಲೆ 31 ರನ್ ನೀಡಿ 2 ವಿಕೆಟ್ ಕಬಳಿಸಿದರೆ, ನವೀನ್ ಎಂಜಿ 44 ರನ್ ನೀಡಿ 2 ವಿಕೆಟ್ ಪಡೆದರು.

ಬೃಹತ್ ಗುರಿ ಬೆನ್ನತ್ತಿದ ಶಿವಮೊಗ್ಗ ಯೋಧಾಸ್ ತಂಡ ಆರಂಭದಲ್ಲಿ ಲವ್ನಿತ್ ಸಿಸೋಡಿಯಾ (14 ಎಸೆತಗಳಲ್ಲಿ 30) ಮೂಲಕ ಉತ್ತಮ ಆರಂಭ ಪಡೆದರೂ, ಉಳಿದ ಬ್ಯಾಟರ್‌ಗಳು ನಿರೀಕ್ಷಿತ ಪ್ರದರ್ಶನ ನೀಡಲಿಲ್ಲ. ನಾಯಕ ಸ್ಮರಣ್ ರವಿಚಂದ್ರನ್ (23) ಹಾಗೂ ಹರ್ಷಿಲ್ ಧರ್ಮಾಣಿ (23) ಹೋರಾಟ ನಡೆಸಿದರೂ ತಂಡವನ್ನು ಸಂಕಷ್ಟದಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರ್: ಗುಲ್ಬರ್ಗಾ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 232 (ಲೋಚನ್ ಗೌಡ 47, ಪ್ರಖರ್ ಚತುರ್ವೇದಿ 45, ಕ್ರಾಂತಿಕುಮಾರ್ ಔಟಾಗದೇ 31, ಎಂ.ಜಿ. ನವೀನ್ 44ಕ್ಕೆ 2, ಭೀಮರಾವ್ ನವಲೆ 31ಕ್ಕೆ 2); **ಶಿವಮೊಗ್ಗ ಲಯನ್ಸ್:** 19.4 ಓವರ್‌ಗಳಲ್ಲಿ 137 (ಲವ್ನಿತ್ ಸಿಸೋಡಿಯ 30, ಆರ್. ಸ್ಮರಣ್ 23, ಹರ್ಷಿಲ್ ಧರ್ಮಾನಿ 23. ಗೌತಮ್ ಮಿಶ್ರ 34ಕ್ಕೆ 3, ಕ್ರಾಂತಿಕುಮಾರ್ 8ಕ್ಕೆ 2, ರೋನಿತ್ ಮೋರೆ 12ಕ್ಕೆ 2).

ವೊಂಡ್ರೊಸೊವಾಗೆ 4 ವರ್ಷ ನಿಷೇಧ!

ಪ್ರಾಗ್: ಮಾಜಿ ವಿಂಬಲ್ಡನ್ ಚಾಂಪಿಯನ್ ಮಾರ್ಕೆಟಾ ವೊಂಡ್ರೊಸೊವಾ ಅವರು ಡೋಪಿಂಗ್ ಪರೀಕ್ಷೆಗೆ ಒಳಪಡಲು ನಿರಾಕರಿಸಿದ ಹಿನ್ನೆಲೆಯಲ್ಲಿ ನಾಲ್ಕು ವರ್ಷಗಳ ಅಮಾನತು ಶಿಕ್ಷೆಗೆ ಗುರಿಯಾಗಿದ್ದಾರೆ.

2025ರ ಡಿಸೆಂಬರ್‌ನಲ್ಲಿ ಅವರ ಮನೆಯಲ್ಲಿ ತಪಾಸಣೆಗೆ ಬಂದಿದ್ದ ಡೋಪಿಂಗ್ ಅಧಿಕಾರಿಗೆ ಮಾದರಿ ನೀಡದೆ ಅಸಹಕಾರ ತೋರಿದ್ದರು.

ಅಂತಾರಾಷ್ಟ್ರೀಯ ಟೆನಿಸ್ ಬದ್ಧತಾ ಸಂಸ್ಥೆ (ITIA) ವೊಂಡ್ರೊಸೊವಾರ ಅಸಹಕಾರ ವರ್ತನೆಗೆ ಸ್ಪಷ್ಟನೆ ಕೋರಿದಾಗ 2023ರ ವಿಂಬಲ್ಡನ್ ವಿಜೇತೆಯಾದ 26 ವರ್ಷದ ಜೆಕ್ ಗಣರಾಜ್ಯದ ಆಟಗಾರ್ತಿ, ಮಾನಸಿಕ ಒತ್ತಡ ಹಾಗೂ ಸುರಕ್ಷತೆಯ ಆತಂಕದ ಕಾರಣ ನೀಡಿ ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದರು. ಆದರೆ, ಸ್ವತಂತ್ರ ನ್ಯಾಯ ಮಂಡಳಿಯು ಇವರ ವಾದವನ್ನು ತಿರಸ್ಕರಿಸಿದ್ದು, ಪರೀಕ್ಷೆ ನಿರಾಕರಿಸಲು ಯಾವುದೇ ಬಲವಾದ ಕಾರಣಗಳಿಲ್ಲ ಎಂದು ಸ್ಪಷ್ಟಪಡಿಸಿದೆ. ವೊಂಡ್ರೊಸೊವಾ ಅವರ ನಿಷೇಧವು ಜೂನ್ 21, 2030ರವರೆಗೆ ಜಾರಿಯಲ್ಲಿರಲಿದೆ.

ಶಾರ್ಪ್ ಅರ್ಧಶತಕ | **ಸ್ಕಾಟ್ಲೆಂಡ್ ವಿರುದ್ಧ ನ್ಯೂಜಿಲೆಂಡ್‌ಗೆ 6 ವಿಕೆಟ್ ಭರ್ಜರಿ ಜಯ**

ಕಿವೀಸ್ ಸೆಮೀಸ್ ಕನಸು ಜೀವಂತ

ಲಂಡನ್: ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಸ್ಕಾಟ್ಲೆಂಡ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಪ್ರಶಸ್ತಿ ಕನಸನ್ನು ಜೀವಂತವಾಗಿರಿಸಿಕೊಂಡಿದೆ.

ಮೊದಲು ಬ್ಯಾಟಿಂಗ್ ಮಾಡಿದ ಸ್ಕಾಟ್ಲೆಂಡ್, ಆರಂಭಿಕ ಆಟಗಾರ್ತಿ ಡಾರ್ಸಿ ಕಾರ್ಟರ್ (50 ರನ್) ಅವರ ಅರ್ಧಶತಕದ ನೆರವಿನಿಂದ 7 ವಿಕೆಟ್‌ಗೆ 131 ರನ್ ಗಳಿಸಿತು. ನ್ಯೂಜಿಲೆಂಡ್‌ನ ಕಳಪೆ ಫೀಲ್ಡಿಂಗ್ ಲಾಭ ಪಡೆದ ಸ್ಕಾಟ್ಲೆಂಡ್ ಬೃಹತ್ ಮೊತ್ತದತ್ತ ಸಾಗಿತ್ತು, ಆದರೆ ಸೋಫಿ ಡಿವೈನ್ ಮತ್ತು ನ್ಯಾನ್ಸಿ ಪಟೇಲ್ ಅಂತಿಮ ಓವರ್‌ಗಳಲ್ಲಿ ರನ್ ವೇಗಕ್ಕೆ ಬ್ರೇಕ್ ಹಾಕಿದರು.

ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ 26 ರನ್ನಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ವೇಳೆ ಜೊತೆಯಾದ ಇಜ್ಜಿ ಶಾರ್ಪ್ (62) ಮತ್ತು ಬ್ರೂಕ್ ಹ್ಯಾಲಿಡೇ (41*) 101 ರನ್‌ಗಳ ಅಮೋಘ ಜೊತೆಯಾಟವಾಡಿ ತಂಡವನ್ನು ಗೆಲುವಿನ ದಡ ತಲುಪಿಸಿದರು. ನ್ಯೂಜಿಲೆಂಡ್ ಸೆಮಿಫೈನಲ್ ತಲುಪಬೇಕಾದರೆ ಶನಿವಾರ ಇಂಗ್ಲೆಂಡ್ ವಿರುದ್ಧ ಗೆಲ್ಲಬೇಕು, ಜೊತೆಗೆ ವೆಸ್ಟ್ ಇಂಡೀಸ್ ತಂಡ ತನ್ನ ಮುಂದಿನ ಪಂದ್ಯದಲ್ಲಿ ಸೋಲಲೆಂದು ಆಶಿಸಬೇಕಿದೆ.



ಸಂಕ್ಷಿಪ್ತ ಸ್ಕೋರ್: ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 131 (ಡಾರ್ಸಿ ಕಾರ್ತರ್ 72, ಸಾರಾ ಬ್ರೈಸ್ 25; ಅಮೆಲಿಯಾ ಕೆರ್ 17ಕ್ಕೆ 3, ಸೋಫಿ ಡಿವೈನ್ 19ಕ್ಕೆ 2) **ನ್ಯೂಜಿಲೆಂಡ್:** 18.2 ಓವರ್‌ಗಳಲ್ಲಿ 4 ವಿಕೆಟ್‌ಗೆ 132 (ಇಜ್ಜಿ ಶಾರ್ಪ್ 62, ಬ್ರೂಕ್ ಹ್ಯಾಲಿಡೇ 41; ಕ್ಯಾಥ್ರಿನ್ ಬ್ರೈಸ್ 13ಕ್ಕೆ 2, ರೇಚೆಲ್ ಸ್ಲೇಟರ್ 22ಕ್ಕೆ 2).

ಹಾರ್ಸ್ ಪವರ್

ಮೈಸೂರು ರೇಸ್ ■ ಅಶ್ವಬಂಧು

ಉತ್ತಮ ಫಾರ್ಮ್‌ನಲ್ಲಿ ಗೋಲ್ಡ್ ರೈಡ್

ಕಳೆದ ಬಾರಿ ಗೆದ್ದಿರುವ ರಾಮನಾಥನ್ ತರಬೇತಿಯಲ್ಲಿ ಪಳಗಿರುವ ಗೋಲ್ಡ್ ರೈಡ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆ ಎಸ್.ವಿ.ಸುಬ್ರಮಣಿಯಮ್ ಮೆಮೋರಿಯಲ್ ಟ್ರೋಫಿ ರೇಸ್‌ನಲ್ಲಿ ಗೆಲ್ಲುವ ಫೇವರೆಟ್ ಆಗಿದೆ. ಎಂಟು ರೇಸ್‌ಗಳನ್ನು ಏರ್ಪಡಿಸಿದ್ದು ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ತೇಜಸ್ 8, ಪೈಲಟ್ ಆಫಿಸರ್ 2, ಮಿಸ್ಟಿಕಲ್ ಈವ್ 7
- 2ನೇ ರೇಸ್: ಕೆರೊಲಿನಾ ಸ್ಪ್ರಿಂಗ್ಸ್ 1, ಅಲ್ಯೂರಿಂಗ್ ಬ್ಯೂಟಿ 10, ಗಿಮ್ಮಿ 8
- 3ನೇ ರೇಸ್: ಬಯೋಮೆಟ್ರಿಕ್ 4, ವಿಂಡ್‌ಬೋರನ್ 10, ಸೀಕ್ರೆಟ್ ಶ್ಯಾಡೊ 9
- 4ನೇ ರೇಸ್: ಎಲ್ಸಾ 6, ನಜೋಮಿ 2, ಫ್ಯೂರಿಯಸ್ ಫನ್ 4
- 5ನೇ ರೇಸ್: ಹಬಿಬ್ಟಿ 6, ಮಿರಾಕ್ಯುಲಸ್ ಗರ್ಲ್ 4, ಸೂಪರ್ ಸ್ಟ್ರೈಡ್ 9
- 6ನೇ ರೇಸ್: ಗೋಲ್ಡ್ ರೈಡ್ 5, ಡ್ರಿಸಾನ 8, ಕಾನ್‌ಸ್ಟ್ಯಾಂಟ್ ವೇರಿಯಬಲ್ 3
- 7ನೇ ರೇಸ್: ವಿಂಟರ್ ಅಜೆಂಡಾ 2, ಚೀಫ್ ಅಡ್ಮಿರಲ್ 12, ಕ್ಲಿಂಪ್ಟ್ 3
- 8ನೇ ರೇಸ್: ಕೌಲ್ಡಿ ಹಿಲ್ಸ್ 2, ಸೆಲ್ಮಾ 6, ಗೋಲ್ಡ್ ಫೇಮ್ 4

ಮಲ್ಟಿ-ಲೆಗ್ ಪೂಲ್ಸ್:

- ಜಾಕ್‌ಪಾಟ್: 4, 5, 6, 7, 8; 1ನೇ ಟ್ರಿಬಲ್: 1, 2, 3;
- 2ನೇ ಟ್ರಿಬಲ್: 3, 4, 5; 3ನೇ ಟ್ರಿಬಲ್: 6, 7, 8

ಅತ್ಯುತ್ತಮ ಬೆಟ್: ಹಬಿಬ್ಟಿ

ಮಳೆಗಾಲದ ಫ್ಯೂಷನ್ ಫ್ಯಾಷನ್

ಶ್ರೇಯಾ ಮಿಂಚಿನಡ್ಕ
feedbacklvk@vijaykarnataka.com

ಮಳೆಗಾಲದ ಬದಲಾಗುವ ಹವಾಮಾನಕ್ಕೆ ತಕ್ಕ ಹಾಗೆ ಫ್ಯೂಷನ್ ಫ್ಯಾಷನ್ ಈ ಬಾರಿ ಗಮನ ಸೆಳೆಯಲಿದೆ.

ಸಾಂಪ್ರದಾಯಿಕ ಮತ್ತು ಆಧುನಿಕ ಶೈಲಿಗಳ ಸಂಯೋಜನೆ 'ಫ್ಯೂಷನ್ ಫ್ಯಾಷನ್' ಈ ವರ್ಷದ ಮಳೆಗಾಲದ ಪ್ರಮುಖ ಟ್ರೆಂಡ್ ಆಗಿ ಹೊರಹೊಮ್ಮಿದೆ. ಭಾರತೀಯ ಸಾಂಪ್ರದಾಯಿಕ ಉಡುಗೆಗಳು ಮತ್ತು ಪಾಶ್ಚಿಮಾತ್ಯ ಉಡುಗೆಗಳನ್ನು ಒಟ್ಟಿಗೆ ಬೆರೆಸಿ ಧರಿಸುವ ವಿಧಾನ ಕೇವಲ ಉಡುಪನ್ನು ವೈಭವೀಕರಿಸುವುದಿಲ್ಲ, ಎರಡೂ ಸಂಸ್ಕೃತಿಗಳ ಸಮ್ಮಿಶ್ರಣವಾಗಿಯೂ ಗಮನ ಸೆಳೆಯುತ್ತದೆ.

ಬಣ್ಣಗಳ ಆಯ್ಕೆ

ಮಳೆಗಾಲದಲ್ಲಿ ಆಯ್ದುಕೊಳ್ಳುವ ಬಟ್ಟೆಯ ಬಣ್ಣ ಕೂಡ ಮುಖ್ಯ. ಬಿಳಿ ಹಾಗೂ ತಿಳಿ ವರ್ಣಗಳ ಬಟ್ಟೆಗಳಿಗಿಂತ ಈ ಸೀಸನ್‌ನಲ್ಲಿ ನಿಯಾನ್, ಆಲಿವ್ ಗ್ರೀನ್, ಸಾಸಿವೆ ಹಳದಿ ಮತ್ತು ರಾಯಲ್ ಬ್ಲೂ ನಂತಹ ಗಾಢ ಬಣ್ಣಗಳ ಇಂಡೋ-ವೆಸ್ಟರ್ನ್ ಉಡುಗೆಗಳು ಮಳೆಯ ವಾತಾವರಣದಲ್ಲೂ ನಿಮ್ಮನ್ನು ಬ್ರೈಟ್ ಆಗಿ ಕಾಣಿಸುವಂತೆ ಮಾಡುತ್ತವೆ.

ಮಾನ್ಸೂನ್ ಮೆರುಗು

ಆಕರ್ಷಕ ದಿರಿಸು

ಲೆಹೆಂಗಾ ಜೊತೆಗೆ ಟೀಶರ್ಟ್ ಧರಿಸುವುದು, ಟೀಶರ್ಟ್ ಮೇಲಿನಿಂದ ಸೀರೆ ಧರಿಸುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚು ಗಮನ ಸೆಳೆದಿರುವ ಫ್ಯೂಷನ್ ಸ್ಟೈಲ್. ಸೀರೆಯನ್ನು ಗೌನ್ ತರಹ ಧರಿಸುವುದು ಅಥವಾ ಸೀರೆಗೆ ಬ್ಲೌಸ್ ಬದಲು ಕ್ರಾಪ್ ಟಾಪ್ ಬಳಸಿದರೆ ಗ್ಲಾಮ್ ಲುಕ್ ಸಿಗುತ್ತದೆ. ಸಾಂಪ್ರದಾಯಿಕ ಅನಾರ್ಕಲಿ ಕುರ್ತಾದ ಮೇಲೆ ಜಪಾನಿ ಶೈಲಿಯ ಸಡಿಲವಾದ ಕಿಮೋನೋ ಜಾಕೆಟ್ ಧರಿಸುವುದು ಈಗಿನ ಹೊಸ ಕ್ರೇಜ್. ಇದು ಕ್ಲಾಸಿಕ್ ಲುಕ್ ನೀಡುತ್ತದೆ. ಸಾಂಪ್ರದಾಯಿಕ ಧೋತಿ ಶೈಲಿಯ ಪ್ಯಾಂಟ್‌ಗಳಿಗೆ ವೆಸ್ಟರ್ನ್ ಕ್ರಾಪ್ ಟಾಪ್ ಅಥವಾ ಶಾರ್ಟ್ ಶರ್ಟ್ ಮ್ಯಾಚ್ ಮಾಡುವುದು ಕಾಲೇಜು ಯುವತಿಯರ ನೆಚ್ಚಿನ ಆಯ್ಕೆ. ಕಂಫರ್ಟ್ ಬಯಸುವವರಿಗೆ ಮಲ್ಟಿ ಪಾಕೆಟ್ ಇರುವ ಕಾರ್ಗೋ ಪ್ಯಾಂಟ್‌ಗಳ ಜೊತೆ ಬ್ಲಾಕ್ ಪ್ರಿಂಟ್‌ನ ಶಾರ್ಟ್ ಕಾಟನ್ ಕುರ್ತಾಗಳು ಸೂಪರ್ ಕಾಂಬಿನೇಷನ್. ■

ಹೀಗೆ ಮಾಡಿ

ಸಾಂಪ್ರದಾಯಿಕ ಉಡುಗೆಗಳಿಗೆ ಕೊಲ್ಹಾಪುರಿ ಚಪ್ಪಲಿ ಧರಿಸುವ ಬದಲು, ಮಳೆಗಾಲದ ಸ್ನೇಹಿಯಾಗಿರುವ ಸ್ಟೈಲಿಶ್ ರಬ್ಬರ್ ಸ್ನೀಕರ್ಸ್ ಅಥವಾ ಜೆಲ್ಲಿ ಶೂಸ್ ಧರಿಸಿ ಫ್ಯೂಷನ್ ಲುಕ್ ಕಂಪ್ಲೀಟ್ ಮಾಡಿ.

ಕೆಲವು ಬಗೆಯ ಲೋಹಗಳ ಆಭರಣಗಳು ಮಳೆಗೆ ಹಾಳಾಗಬಹುದು. ಆದ್ದರಿಂದ ಆಕ್ಸಿಡೈಸ್ಡ್ ಸಿಲ್ವರ್ ಅಥವಾ ಬೋಹೋ ಶೈಲಿಯ ಜಂಕ್ ಜುವೆಲ್ಲರಿಗಳನ್ನು ವೆಸ್ಟರ್ನ್ ಟಾಪ್ ಹಾಗೂ ಕುರ್ತಾಗಳ ಮೇಲೆ ಧರಿಸಿ.

ಮಳೆಗಾಲದಲ್ಲಿ ಬೇಗ ಒಣಗುವ ಜಾರ್ಜೆಟ್, ಪಾಲಿಕಾಟನ್ ಅಥವಾ ಕ್ರೇಪ್ ಫ್ಯಾಬ್ರಿಕ್‌ಗಳ ಫ್ಯೂಷನ್ ಉಡುಗೆಗಳನ್ನು ಆಯ್ದುಕೊಳ್ಳಿ. ಅಪ್ಪಿತಪ್ಪಿಯೂ ಹೆವಿ ಸಿಲ್ಕ್ ಅಥವಾ ದಪ್ಪನೆಯ ಬಟ್ಟೆ ಬೇಡ.

ಲವಲVK beauty ಡೈರಿ

ಹಾಫ್ ಅಪ್ ಹಾಫ್ ಡೌನ್

ವಿಭಿನ್ನ ಲುಕ್ ನೀಡುವ ಹಾಗೂ ಆರಾಮ ಎನಿಸುವ ಕೇಶ ವಿನ್ಯಾಸ ಅಂದರೆ ಹಾಫ್ ಅಪ್ ಹಾಫ್ ಡೌನ್ ಸ್ಟೈಲ್. ಇದು ಉದ್ದ ಕೂದಲಿನ ಸೌಂದರ್ಯವನ್ನು ಎತ್ತಿ ತೋರಿಸುತ್ತದೆ. ಮುಖದ ಮೇಲೆ ಕೂದಲು ಬಾರದಂತೆ ಇಟ್ಟುಕೊಳ್ಳುವುದರಿಂದ ದಿನವಿಡೀ ತಾಜಾತನವನ್ನು ನೀಡುತ್ತದೆ. ಈ ಸ್ಟೈಲ್ ಪಡೆಯಲು ಅನುಸರಿಸಬೇಕಾದ ವಿಧಾನ ಇಲ್ಲಿದೆ.

ಮೊದಲು ಕೂದಲನ್ನು ಚೆನ್ನಾಗಿ ಬಾಚಿ. ತಲೆಯ ಮುಂಭಾಗ ಮತ್ತು ಎರಡೂ ಬದಿಗಳಿಂದ ಸ್ವಲ್ಪ ಕೂದಲನ್ನು ತೆಗೆದುಕೊಳ್ಳಿ. ತೆಗೆದುಕೊಂಡ ಕೂದಲನ್ನು ಹಿಂಭಾಗದಲ್ಲಿ ಸೇರಿಸಿ. ಸಣ್ಣ ರಬ್ಬರ್‌ಬ್ಯಾಂಡ್ ಅಥವಾ ಅಲಂಕಾರಿಕ ಕ್ಲಿಪ್ ಬಳಸಿ ಭದ್ರಪಡಿಸಿ. ಉಳಿದ ಕೂದಲನ್ನು ಸ್ವಾಭಾವಿಕವಾಗಿ ಕೆಳಗೆ ಬಿಡಿ. ಇನ್ನಷ್ಟು ಆಕರ್ಷಕವಾಗಿ ಕಾಣಲು ಕೂದಲಿನ ತುದಿಗಳಿಗೆ ಸಣ್ಣ ಅಲೆಗಳನ್ನು ಮಾಡಬಹುದು. ಬೇಕಿದ್ದರೆ ಮಲ್ಲಿಗೆ ಹೂವು, ಗುಲಾಬಿ ಅಥವಾ ಸುಂದರ ಹೇರ್‌ಕ್ಲಿಪ್‌ಗಳನ್ನು ಬಳಸಿ ಅಲಂಕರಿಸಿ. ಕೊನೆಯಲ್ಲಿ ಸ್ವಲ್ಪ ಹೇರ್‌ಸ್ಪ್ರೇ ಬಳಸಿದರೆ ಕೇಶ ವಿನ್ಯಾಸ ಹೆಚ್ಚು ಸಮಯ ಅಚ್ಚುಕಟ್ಟಾಗಿ ಉಳಿಯುತ್ತದೆ. ಈ ಕೇಶ ವಿನ್ಯಾಸವು ಸೀರೆ, ಚೂಡಿದಾರ್ ಹಾಗೂ ಪಾಶ್ಚಾತ್ಯ ಉಡುಪುಗಳೊಂದಿಗೆ ಕೂಡ ಸುಂದರವಾಗಿ ಕಾಣುತ್ತದೆ. ಸಾಮಾನ್ಯ ಔಟಿಂಗ್, ಫೋಟೋಶೂಟ್ ಮತ್ತು ವಿಡಿಯೋ ಕಂಟೆಂಟ್‌ಗಳಿಗೆ ಇದು ಅತ್ಯುತ್ತಮ ಆಯ್ಕೆ. ■

- ವಿದ್ಯಾ ನವೀನ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು



ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ತುಲಾ, ಮಕರ -ಈ ರಾಶಿಯವರಿಗೆ ಶಶಯೋಗ

ಮೇಷ: ಸರಕಾರಿ ಕಚೇರಿಗಳಿಗೆ ಅಲೆದಾಟವಾದರೂ ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗಲಿವೆ. ತೆಗೆದುಕೊಂಡ ನಿರ್ಧಾರ ಸರಿಯಾದುದೆಂದು ಮನವರಿಕೆ ಆಗುವುದು. ಜೀವನದಲ್ಲಿ ಹೊಸ ಅಧ್ಯಾಯ ಸೃಷ್ಟಿಯಾಗುತ್ತದೆ. **ಶುಭ ಸಂಖ್ಯೆ:** 6, **ಬಣ್ಣ:** ಬೂದು
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಮೀನುಗಾರರು ಉದ್ಯೋಗದಲ್ಲಿ ಅಗತ್ಯವಾಗಿ ಜಾಗರೂಕತೆ ವಹಿಸಲಿದ್ದೀರಿ. ಮಿತ್ರರ ಭೇಟಿಯಿಂದ ಅಚ್ಚರಿಯ ವಿಚಾರ ತಿಳಿಯುವುದು. ಸಿದ್ಧ ಉಡುಪುಗಳ ವ್ಯಾಪಾರದಿಂದ ಹೇರಳ ಲಾಭ ಹೊಂದುವಿರಿ. **ಶುಭ ಸಂಖ್ಯೆ :** 3, **ಬಣ್ಣ:** ಕಪ್ಪು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಸಂಗಾತಿಯು ಇಲ್ಲದಿರುವುದು ಒಂದು ರೀತಿಯ ಜಾಡ್ಯವನ್ನು ತರಬಹುದು. **ಶುಭ ಸಂಖ್ಯೆ :** 8, **ಬಣ್ಣ:** ಪಾಚಿ ಹಸಿರು
(ಕ, ಕಿ, ಕು, ಘ, ಙ, ಚ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರ, ಪುನರ್ವಸು 1, 2, 3

ಕಟಕ: ರಿಯಲ್ ಎಸ್ಟೇಟ್ ಕಸುಬುದಾರರು ಬಂಡವಾಳ ತೊಡಗಿಸುವುದು ಸಮಂಜಸವಲ್ಲ. ದೈಹಿಕ ಶಕ್ತಿ ಹೆಚ್ಚುವುದರಿಂದ ಉತ್ತಮ ಅಭಿವೃದ್ಧಿಯನ್ನು ಕಾಣುವಿರಿ. ನಾನಾ ರೀತಿಯಲ್ಲಿ ಹಣ ಕೈ ಸೇರಲಿದೆ. **ಶುಭ ಸಂಖ್ಯೆ :** 2, **ಬಣ್ಣ:** ಬಿಳಿ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ರಾಜಕಾರಣದ ರಹಸ್ಯ ಬಯಲಾಗುವುದರಿಂದ ಪರಿಣಾಮ ಬೀರಲಿದೆ. ಯಂತ್ರೋಪಕರಣದ ಕ್ರಿಯೆಯಲ್ಲಿ ಅತೀವ ಆಸಕ್ತಿ ಮೂಡುವುದು. ಮನೆ ಖರೀದಿ ಅಥವಾ ನಿವೇಶನ ಖರೀದಿಯ ನಿಮ್ಮ ಯೋಜನೆ ಈಡೇರುವುದು. **ಶುಭ ಸಂಖ್ಯೆ :** 1, **ಬಣ್ಣ:** ಕೇಸರಿ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಗೃಹಿಣಿಯರಿಗೆ ಸಮಸ್ಯೆಯಾದರೆ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಪುರುಷರು ತೆಗೆದುಕೊಳ್ಳುವುದು ಉತ್ತಮ. ಅಗತ್ಯದ ಹಣ ಕೈ ಸೇರುವುದರಿಂದ ಮಾಡಿದ ಸಾಲವನ್ನು ತೀರಿಸಲಿದ್ದೀರಿ. **ಶುಭ ಸಂಖ್ಯೆ :** 7, **ಬಣ್ಣ:** ಗುಲಾಬಿ
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಯಾರ ಸಹಾಯವೂ ಇಲ್ಲದೇ ಒಂದೊಳ್ಳೆ ಉದ್ಯೋಗ ಪಡೆಯುವ ಸಾಮರ್ಥ್ಯ ನಿಮ್ಮಲ್ಲಿ ಇದೆ. ಅನುಮಾನ ಪಡದೇ ಮುಂದುವರಿಯಿರಿ. ಜಾಹೀರಾತು ಕ್ಷೇತ್ರದಲ್ಲಿ ಇರುವವರಿಗೆ ಹೇರಳ ಅವಕಾಶಗಳು ಸಿಗಲಿವೆ. **ಶುಭ ಸಂಖ್ಯೆ :** 4, **ಬಣ್ಣ:** ಬೂದು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಗೃಹಿಣಿಯರಿಗೆ ವಿಶೇಷ ದಿನವಾಗಿದ್ದು, ಆಕಸ್ಮಿಕ ಧನ ಲಾಭ ಅಥವಾ ತವರು ಮನೆಯವರಿಂದ ಉಡುಗೊರೆ ಸಿಗಲಿದೆ. ಮಾತಿನಿಂದ ಸಂಬಂಧಗಳು ಒಡೆದು ಹೋಗುವ ಸಂಭವವಿದೆ. **ಶುಭ ಸಂಖ್ಯೆ :**9, **ಬಣ್ಣ:** ಹಳದಿ
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಉದ್ಯೋಗದಲ್ಲಿನ ಬದಲಾವಣೆ ಬಯಸಿದ ನಿಮಗೆ ನಿಮ್ಮಿಚ್ಛೆಯಂತೆ ಉತ್ತಮ ಆದಾಯ ದೊರೆಯುವ ಕೆಲಸ ಸಿಗಲಿದೆ. ಕಾರ್ಯದ ಒತ್ತಡಗಳು ಸುಖಶಾಂತಿಯನ್ನು ಕಡಿಮೆ ಮಾಡಬಹುದು. **ಶುಭ ಸಂಖ್ಯೆ:** 5, **ಬಣ್ಣ:**ಕೆಂಪು
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತಾರಾಷಾಢ 1ನೇ ಪಾದ

ಮಕರ: ಪ್ರತಿ ಹೆಜ್ಜೆಯನ್ನು ನಿಮ್ಮ ಎದುರಾಳಿಗಳು ಗಮನಿಸುತ್ತಿರುವ ಕಾರಣ ಬಹಳಷ್ಟು ಎಚ್ಚರದಿಂದ ವ್ಯವಹರಿಸಿ. ಮಾಡುತ್ತಿರುವ ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿ. **ಶುಭ ಸಂಖ್ಯೆ :**8, **ಬಣ್ಣ:** ಖಾಕಿ
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಕುಟುಂಬದಲ್ಲಿ ಶುಭ ಕಾರ್ಯಗಳ ಸಂಭ್ರಮದಿಂದಾಗಿ ಹಿರಿಯರ ಮನಸ್ಸಿಗೆ ನೆಮ್ಮದಿ ಸಿಗಲಿದೆ. ಸಜ್ಜನರ ಭೇಟಿಯಿಂದ ಜ್ಞಾನಾರ್ಜನೆ ಮತ್ತು ಸಂತೋಷ ಉಂಟಾಗಲಿದೆ. ತಾಂತ್ರಿಕ ಸಲಹೆಗಾರರಿಗೆ ಮನ್ನಣೆ ಸಿಗಲಿದೆ. **ಶುಭ ಸಂಖ್ಯೆ :** 4, **ಬಣ್ಣ:** ನೀಲಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ದಾಂಪತ್ಯ ಜೀವನದಲ್ಲಿ ತಾಳ್ಮೆ, ಸಮಾಧಾನದಿಂದ ಮುಂದುವರಿಯಿರಿ. ಯಂತ್ರೋಪಕರಣಗಳ ರಿಪೇರಿ ಮತ್ತು ಮಾರಾಟದಿಂದ ಹಾಗೂ ಪಶುಸಂಗೋಪನೆಯಿಂದ ಲಾಭ ಇರುವುದು. **ಶುಭ ಸಂಖ್ಯೆ:** 3, **ಬಣ್ಣ:** ಕಂಚು
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಲವಲVK ಅಭಿರುಚಿ

ಕೊತಿಂಬೀರ್ ವಡಿ

ಮಹಾರಾಷ್ಟ್ರದ ಜನಪ್ರಿಯ ಮತ್ತು ಸಾಂಪ್ರದಾಯಿಕ ತಿನಿಸು ಕೊತಿಂಬೀರ್ ವಡಿಯು ತಾಜಾ ಕೊತ್ತಂಬರಿ ಸೊಪ್ಪು ಮುಖ್ಯ ಸಾಮಗ್ರಿಯಾಗಿ ಸುಲಭ ಮತ್ತು ಕಡಿಮೆ ಅವಧಿಯಲ್ಲಿ ತಯಾರಾಗುವ ಆರೋಗ್ಯಕರ ಸ್ನ್ಯಾಕ್ಸ್. ಇದು ಸಂಜೆಯ ಕಾಫಿ, ಚಹಾಕ್ಕೆ ಒಳ್ಳೆಯ ಜೋಡಿ.



ಸಾಮಗ್ರಿ: ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು-2 ಕಪ್, ಕಡಲೆ ಹಿಟ್ಟು-1 ಕಪ್, ಅಕ್ಕಿ ಹಿಟ್ಟು-ಕಾಲು ಕಪ್, ಬಿಳಿ ಎಳ್ಳು-2 ಚಮಚ, ಅರಿಶಿಣ ಪುಡಿ-ಕಾಲು ಚಮಚ, ಇಂಗು-ಕಾಲು ಚಮಚ, ಧನಿಯಾ ಪುಡಿ-ಅರ್ಧ ಚಮಚ, ಜೀರಿಗೆ ಪುಡಿ- ಅರ್ಧ ಚಮಚ, ಅಚ್ಚ ಮೆಣಸಿನ ಪುಡಿ-1 ಚಮಚ, ಶುಂಠಿ, ಹಸಿ ಮೆಣಸಿನಕಾಯಿ ಪೇಸ್ಟ್-1 ಚಮಚ, ರುಚಿಗೆ ತಕ್ಕಷ್ಟು ಉಪ್ಪು.

ವಿಧಾನ: ಮಿಕ್ಸಿಂಗ್ ಬೌಲ್‌ಗೆ ಮೊದಲಿಗೆ ಕೊತ್ತಂಬರಿ ಸೊಪ್ಪು, ಕಡಲೆ ಹಿಟ್ಟು, ಅಕ್ಕಿ ಹಿಟ್ಟು, ಎಳ್ಳು ಸೇರಿಸಿ ಮಿಶ್ರ ಮಾಡಿ ನಂತರ ಉಳಿದ ಸಾಮಗ್ರಿಗಳನ್ನು ಹಾಕಿ ಚೆನ್ನಾಗಿ ಹೊಂದಿಸಿ. ಸೊಪ್ಪಿನಲ್ಲೇ ತೇವಾಂಶ ಇರುವುದರಿಂದ ಅಗತ್ಯಕ್ಕೆ ತಕ್ಕಂತೆ ಎರಡ್ಮೂರು ಚಮಚ ನೀರು ಹಾಕಿ ಗಟ್ಟಿಯಾಗಿ ಹಿಟ್ಟು ಕಲಸಿ. ಜಿಡ್ಡು ಸವರಿದ ತಟ್ಟೆಯಲ್ಲಿ ಈ ಹಿಟ್ಟನ್ನು ಸಮವಾಗಿ ಹರಡಿ ಹಬೆಯಲ್ಲಿ 10ರಿಂದ 15 ನಿಮಿಷ ಬೇಯಿಸಿ. ಇದು ತಣಿದ ನಂತರ ಸಣ್ಣ ಸಣ್ಣ ಬಿಲ್ಲೆಗಳನ್ನು ಕತ್ತರಿಸಿ. ಬಳಿಕ ತವಾದಲ್ಲಿ ಸ್ವಲ್ಪ ಎಣ್ಣೆ ಹಾಕಿ ಈ ಬಿಲ್ಲೆಗಳನ್ನು ಶಾಲೋ ಫ್ರೈ ಮಾಡಿದರೆ ತಿನ್ನಲು ಮೃದು ಮತ್ತು ಗರಿಗರಿ ಕೊತಿಂಬೀರ್ ವಡಿ ರೆಡಿ. ■

-ಕೆ.ವಿ. ರಾಜಲಕ್ಷ್ಮಿ

ವಿಜಯಬಂಧ – 7987



ಎಡದಿಂದ ಬಲಕ್ಕೆ

2 ತಲೆಯ ಮೇಲೆ ಹೂವಿನ ಕಲಶ ಹೊರುವ ಸಂಭ್ರಮ 5
6 ಈತನ ಆಯುಸ್ಸು ಹೆಚ್ಚಾಗಿ ಮುಪ್ಪು ಬಂದಿದೆ 4
9 ಲಹರಿಯು ಗುಂಗಿನಲ್ಲಿ ನಡೆದ ಜಗಳ 3
11 ಲಾವಣಿ ಕೇಳುತ್ತಾ ಕುಳಿತ ವ್ಯಾಪಾರಿ 3
13 ಸವಾಸೇರಿನಷ್ಟು ಸ್ಥಳದಲ್ಲಿ ಮಾಡಿದ ಬದುಕು 2
14 ವಿವಾಹದಲ್ಲಿ ತಾಳಿ ಕಟ್ಟಿದ ಶುಭ ಘಳಿಗೆ 2
15 ಸದಾ ಕಾಲ ವಸ್ತುಗಳ ದರ ಬಹಳ ಕಡಿಮೆ 3
16 ಸರ ಧರಿಸಲು ಪಾಳಿ ಆರಂಭವಾಗಬೇಕಾಗಿದೆ 3
18 ಕಾಡಿನಲ್ಲಿ ಅರಳಿದ ಹೂವು 4
22 ವನದಲ್ಲಿ ಕಂಡದ್ದು ಹೊಚ್ಚಹೊಸದು 5

ಮೇಲಿನಿಂದ ಕೆಳಕ್ಕೆ

1 ಮುಲಾಜಿಲ್ಲದೆ ಲೇಪಿಸಿಕೊಂಡ ಔಷಧ 3
2 ಕರಡಿ ಕಟ್ಟಿದ ಬಗೆಯಲ್ಲಿ ಸಿಕ್ಕ ರಿಯಾಯಿತಿ 3
3 ಮನೆಯ ಸುತ್ತಲೂ ನಿರ್ಮಿಸುವ ಭಿತ್ತಿ 2
4 ಆವರ್ತನದ ರೀತಿಯಲ್ಲಿ ವರ್ತಿಸಿದ ವ್ಯಾಪಾರಿ 3
5 ಸಹನೆಯಿಂದ ಇರುವವನ ಹತ್ತಿರ ಬರಬಹುದು 3
7 ನಿತ್ಯ ಕೈ ಜೋಡಿಸುತ್ತಾ ಬಂದ ಸೂರ್ಯ 5
8 ವಸತಿಯಲ್ಲಿನ ಜನರ ಅಭಿನಯ ಕಲೆ 4
10 ಲಟ್ಟಣಿಗೆ ಹಿಡಿದು ಲಟ್ಟಿಸುತ್ತಾ ಆಯಾಸಗೊಳ್ಳು 5
12 ಸಕಲ ಕಡೆಯಿಂದ ಕೇಳಿ ಬರುವ ಹಕ್ಕಿ ಪಕ್ಷಿಗಳ ಕೂಗು 4
16 ಹಪ್ಪಳ ಮುರಿಯುವಾಗ ಬಂದ ಸದ್ದು 3
17 ದಿನ ವಾದ ಮಂಡಿಸುತ್ತಿರುವ ಸಚಿವ 3
19 ಮೃದುವಾದ ಕಣ್ಣು ಉತ್ತರಾಯಣದಲ್ಲಿ ತೆರೆದುಕೊಂಡಿದೆ 3
20 ಭೂಮಿಯನ್ನು ಹೊತ್ತಿರುವಂತಹ ಪರ್ವತ 3
21 ಮೇಷ ಮೊದಲಾದರೆ ಕೊನೆಯ ರಾಶಿ 2

ವಿಜಯಬಂಧ | 7986

ಎಡದಿಂದ ಬಲಕ್ಕೆ: 1.ದಾಸ 3.ಬಾಹಿರ 5.ರಾವ 6.ಮಾಯಾವಿ 7.ಮಾತಂಗ 8.ಸುಧಾ 9.ತಾಳಿ 10.ನವಿಲು 12.ಕರಾಳ 14.ನಕ್ಷತ್ರ 15.ಪತನ 17.ಕಾಟ 18.ವಶ್ಯ 19.ರಾಯಸ 21.ಸಮಗ್ರ 22.ಭುಜ 23.ವಿಶ್ರಾಂತಿ 24.ಹತ್ತಿ.

ಮೇಲಿನಿಂದ ಕೆಳಕ್ಕೆ: 1.ಸಮಾಧಾನ 2.ಬಾವಿ 4.ರವಾ 5.ರಾಗತಾಳ 11.ವಿಪಕ್ಷ 13.ರಾವುತ 14.ನಟರಾಜ 16.ನವಗ್ರಹ 20.ಸವಿ 21.ಸತಿ.

ಅ.ನಾ. ಪ್ರಹ್ಲಾದರಾವ್

LOVE VK ❤ LOVE LIFE
ಬುಧವಾರ, 24 ಜೂನ್ 2026 I ADVERTORIAL, ENTERTAINMENT INDUSTRY PROMOTIONAL FEATURE
ಲವಲVK

ಟಾಮ್ ಹಾಲೆಂಡ್ ಮತ್ತು ಝೆಂಡಯಾ ನಟನೆಯ 'ಸ್ಪೈಡರ್ ಮ್ಯಾನ್' ಸಿನಿಮಾದ ಹೊಸ ಸರಣಿ 'ಸ್ಪೈಡರ್ ಮ್ಯಾನ್: ಬ್ರಾಂಡ್ ನ್ಯೂ ಡೇ' ಚಿತ್ರದ ಅಧಿಕೃತ ಟೀಸರ್ ಕನ್ನಡದಲ್ಲಿಯೂ ಬಿಡುಗಡೆಯಾಗಿದೆ.

ನಿರ್ಮಾಪಕ ಬೋನಿ ಕಪೂರ್ ಪುತ್ರಿ ಅನ್ಶುಲಾ ಕಪೂರ್ ಪ್ರಿ ವೆಡ್ಡಿಂಗ್ ಸಮಾರಂಭಗಳು ಆರಂಭವಾಗಿದ್ದು ಜುಲೈ 6ರಂದು ಮದುವೆ ನಡೆಯಲಿದೆ.

ಬಾಲಿವುಡ್‌ನ 'ಹೇ ಜವಾನಿ ತೋ ಇಶ್ಕ್ ಹೋನಾ ಹೈ' ಸಿನಿಮಾದಲ್ಲಿ ನಟಿ ಮೌನಿ ರಾಯ್ ಅವರು ನಟ ವರುಣ್ ಧವನ್ ತಾಯಿಯ ಪಾತ್ರ ಮಾಡಿರುವುದಕ್ಕೆ ಟ್ರೋಲ್ ಆಗುತ್ತಿದ್ದಾರೆ.



A ಫ್ಯಾಮಿಲಿ ಸಿನಿಮಾ?

ಚಿತ್ರಮಂದಿರಕ್ಕೆ ಪ್ರೇಕ್ಷಕರು ಬರುತ್ತಿಲ್ಲ ಎನ್ನುವ ಸಿನಿಮಾ ಮೇಕರ್ಸ್ ಕುಟುಂಬ ಸಮೇತರಾಗಿ ಬಂದು ನೋಡುವ ಚಿತ್ರಗಳನ್ನು ಮಾಡುತ್ತಿದ್ದಾರೆಯೇ? ಸೆನ್ಸಾರ್ ಮಂಡಳಿ ಪ್ರಕಾರ ಇಲ್ಲ, ಇದು ಕೂಡ ಜನರಿಗೆ ಥಿಯೇಟರ್‌ನಲ್ಲಿ ಸಿನಿ ವೀಕ್ಷಣೆ ಅನುಭವಕ್ಕೆ ದೊಡ್ಡ ಅಡ್ಡಿಯಾಗಿದೆಯೇ?

ಕೋಟಿ ಲೂಟಿ ಮಾಡಿದ 'ಎ' ಚಿತ್ರಗಳು

- ಧುರಂಧರ್ 1 ಮತ್ತು 2
- ಅನಿಮಲ್
- ಕಾಶ್ಮೀರ್ ಫೈಲ್ಸ್
- ಕಾರ್ತಿಕೇಯ-2
- ಅರ್ಜುನ್ ರೆಡ್ಡಿ
- ರಾಯನ್
- ಕೂಲಿ

2026ರ ಕನ್ನಡ ಸಿನಿಮಾಗಳು

- 'ಎ'- 18
- 'ಯು'-10
- 'ಯು/ಎ-16ಪ್ಲಸ್- 45
- 'ಯು/ಎ- 13ಪ್ಲಸ್-21
- 'ಯು/ಎ - 7ಪ್ಲಸ್-10

ಎ ಅಥವಾ ಯು/ಎ? ನಿಮ್ಮ ಆಯ್ಕೆ ಯಾವುದು?

ಚಿತ್ರಮಂದಿರದಲ್ಲಿ ಕುಟುಂಬ ಸಮೇತ ಸಿನಿಮಾ ವೀಕ್ಷಿಸುವ ಪ್ಲ್ಯಾನ್ ಮಾಡಿದಾಗ 'ಎ' ಅಥವಾ 'ಯು/ಎ' ಸರ್ಟಿಫಿಕೇಟ್ ನೋಡಿ ಹೋಗುವಿರಾ? ಉತ್ತಮ ಪ್ರತಿಕ್ರಿಯೆ ಬಂದ ಸಿನಿಮಾ ನೋಡಲು ಥಿಯೇಟರ್‌ಗೆ ಹೋದಾಗ ಅಲ್ಲಿ ಮಕ್ಕಳ ಪ್ರವೇಶ ನಿರಾಕರಿಸಿದ್ದಕ್ಕೆ ವಾಪಸ್ಸಾದ ಉದಾಹರಣೆಗಳಿವೆಯಾ? 'ಎ' ಸಿನಿಮಾ ಈಗ ಸಾಮಾನ್ಯವಾಗುತ್ತಿದೆಯೇ? ಸಿನಿಮಾ ಸೆನ್ಸಾರ್ ನಿಯಮಗಳನ್ನು ಬದಲಿಸಬೇಕೇ? 18 ವರ್ಷಕ್ಕಿಂತ ಕೆಳಗಿನವರು ಚಿತ್ರಮಂದಿರಕ್ಕೆ ಹೋಗದೆಯೂ ಓಟಿಟಿ, ಮೊಬೈಲ್‌ನಲ್ಲಿ ವಯಸ್ಕರ ಸಿನಿಮಾಗಳನ್ನು ವೀಕ್ಷಿಸುತ್ತಿರುವ ಬಗ್ಗೆ ನಿಮ್ಮ ಅಭಿಪ್ರಾಯ ಏನು? 40 ಪದಗಳಿಗೆ ಮೀರದಂತೆ ಬರೆದು ನಮಗೆ ವಾಟ್ಸ್ಯಾಪ್ ಮಾಡಿ. ನಿಮ್ಮ ಹೆಸರು, ಸ್ಥಳ ನಮೂದಿಸಿ ಫೋಟೊ ಕಳಿಸಿ.

8880852240

ಕಿರಣ್ ಚಂದ್ರ
kiran.b@timesofindia.com

ಸೆನ್ಸಾರ್ ಮಂಡಳಿ 'ಎ' ಸರ್ಟಿಫಿಕೇಟ್ ಕೊಟ್ಟರೆ ಆ ಸಿನಿಮಾವನ್ನು ಫ್ಯಾಮಿಲಿಗಳು ನೋಡಲು ಬರುವುದಿಲ್ಲ, ಅವರು ಬರಲ್ಲ ಅಂದರೆ ಸಿನಿಮಾ ಯಶಸ್ಸು ಕಾಣಲ್ಲ ಎನ್ನುವ ದಿನದಿಂದ ಹಿಡಿದು, ಸರ್ಟಿಫಿಕೇಟ್ ಸಮಸ್ಯೆಯಾಗಲ್ಲ, 'ಎ' ಪ್ರಮಾಣಪತ್ರ ಬಂದರೂ ಜನರು ಆ ಸಿನಿಮಾ ನೋಡಲು ಬರುತ್ತಾರೆ ಎಂದು ಸಾಕಷ್ಟು ಚಿತ್ರಗಳು ಈಗಾಗಲೇ ನಿರೂಪಿಸಿವೆ.

ನಮ್ಮದು ಕುಟುಂಬ ಸಮೇತರಾಗಿ ನೋಡಬಹುದಾದ ಸಿನಿಮಾ ಎನ್ನುವ ಚಿತ್ರತಂಡಗಳು ಈಗ 'ಎ' ಪ್ರಮಾಣಪತ್ರ ಬಂದರೂ ಪರವಾಗಿಲ್ಲ, ಯು/ಎ ಸಿಕ್ಕರೂ ಓಕೆ ಎನ್ನುವ ಹಂತಕ್ಕೆ ಬಂದು ನಿಂತಿವೆ. ಆದರೆ ಮಲ್ಟಿಪ್ಲೆಕ್ಸ್‌ಗಳಲ್ಲಿ 'ಎ' ಅಥವಾ 'ಯು/ಎ' ಸಿನಿಮಾಗಳಿಗೆ ಮಕ್ಕಳನ್ನು ಬಿಡುವುದಿಲ್ಲ. ಹೀಗೆ ಮಕ್ಕಳನ್ನು ಬಿಟ್ಟು ಸಿನಿಮಾ ನೋಡಲಾಗದ ಎಷ್ಟೋ ಪ್ರೇಕ್ಷಕರು ಥಿಯೇಟರ್‌ನಲ್ಲಿ ಆ ಸಿನಿಮಾ ನೋಡುವ ಪ್ಲ್ಯಾನ್ ಅನ್ನೇ ಕೈಬಿಡುತ್ತಿದ್ದಾರೆ. ಇನ್ನೊಂದೆಡೆ, 'ಎ' ಸರ್ಟಿಫಿಕೇಟ್ ಇರುವ ಎಷ್ಟೋ ಸಿನಿಮಾಗಳನ್ನು ಸಿಂಗಲ್ ಸ್ಕ್ರೀನ್ ಅಥವಾ ಯಾವುದೇ ವಯಸ್ಸಿನ ನಿರ್ಬಂಧವಿಲ್ಲದೆ ವೀಕ್ಷಣೆಗೆ ಅವಕಾಶವಿರುವ ಚಿತ್ರಮಂದಿರಗಳಲ್ಲಿ ಜೆನ್ ಜೀಗಳು ಮುಗಿಬಿದ್ದು ಸಿನಿಮಾ ನೋಡುತ್ತಿದ್ದಾರೆ. ಹಾಗಾದರೆ ಯಾರಿಗೆ ಈ ಸೆನ್ಸಾರ್ ಪ್ರಮಾಣಪತ್ರ ಅನ್ವಯವಾಗುತ್ತದೆ ಎಂಬ ಪ್ರಶ್ನೆ ಮೂಡಿದೆ.

ಎ ಸರ್ಟಿಫಿಕೇಟ್ ಸಿನಿಮಾಗಳನ್ನು ಪ್ರಸಾರ ಮಾಡಲು ಟಿವಿಯವರೂ ಮುಂದೆ ಬರುವುದಿಲ್ಲ, ಅದನ್ನು ಮತ್ತೆ ಸೆನ್ಸಾರ್ ಮಾಡಿಸಿ, ಅನುಚಿತ ಸನ್ನಿವೇಶಗಳಿಗೆ ಕತ್ತರಿ ಹಾಕಿ 'ಯು/ಎ' ಪ್ರಮಾಣಪತ್ರ ಪಡೆದ ನಂತರವೇ ಟಿವಿಯಲ್ಲಿ ಟೆಲಿಕಾಸ್ಟ್ ಮಾಡಲು ಸಾಧ್ಯವಾಗುತ್ತದೆ. ಹೀಗಾಗಿ ಸಿನಿಮಾ ಮೇಕರ್ಸ್ ಟಿವಿ ಪ್ರಸಾರ ಹಕ್ಕಿನ ಮೇಲೂ ಹೆಚ್ಚು ಗಮನ ಕೊಡಬೇಕಾದ ಅನಿವಾರ್ಯವಿದೆ. ಆದರೆ ಓಟಿಟಿಯಲ್ಲಿ 'ಎ' ಅಥವಾ 'ಯು/ಎ' ಸಿನಿಮಾಗಳಿಗೆ ಹೆಚ್ಚಿನ ಬೇಡಿಕೆ ಇದೆ. ಇದರಿಂದಾಗಿ ಯಾವುದಕ್ಕೆ ಸಿನಿಮಾ ಮಾಡಬೇಕೆಂಬ ಗೊಂದಲವಿದೆ.

ಇನ್ನು ಕೆಲವು ಸಿನಿಮಾ ನಿರ್ದೇಶಕರು ಸೆನ್ಸಾರ್ ಮಂಡಳಿ ಮೊದಲಿನಂತೆ ಸಿನಿಮಾ ನೋಡುತ್ತಿಲ್ಲ, 90ರ ದಶಕದ ಎಷ್ಟೋ ರಕ್ತಸಿಕ್ತ ಸಿನಿಮಾಗಳಿಗೆ ಹಾಗೂ ರೊಮ್ಯಾನ್ಸ್ ತುಸು ಹೆಚ್ಚೇ ಇದ್ದ ಚಿತ್ರಗಳಿಗೆ 'ಯು' ಸರ್ಟಿಫಿಕೇಟ್ ಸಿಕ್ಕಿತ್ತು. ಆದರೆ ಈಗ ಮಕ್ಕಳ ಸಿನಿಮಾಗೂ 'ಯು/ಎ' ನೀಡಲಾಗುತ್ತದೆ ಎಂದು ದೂರಿದ್ದಾರೆ. ಕೌಟುಂಬಿಕ ಸಿನಿಮಾ ಅಲ್ಲ ಎನ್ನುವ ಕಾರಣಕ್ಕೆ ಜನರು ಫ್ಯಾಮಿಲಿ ಸಮೇತ ಥಿಯೇಟರ್‌ಗೆ ಬರಲ್ಲ, 'ಎ' ಪ್ರಮಾಣೀಕೃತ ಸಿನಿಮಾಗೆ 18ರ ಕೆಳಗಿನ ಕಾಲೇಜು ವಿದ್ಯಾರ್ಥಿಗಳಿಗೆ ಥಿಯೇಟರ್‌ಗೆ ಪ್ರವೇಶವಿಲ್ಲ, ಹಾಗಾದರೆ ಮತ್ಯಾರು ಸಿನಿಮಾ ನೋಡಿ ಗೆಲ್ಲಿಸಬೇಕು? ■

ನಮ್ಮ ಸಿನಿಮಾಗೆ ಸೆನ್ಸಾರ್ ತಡವಾಗುತ್ತಿದ್ದ ಕಾರಣ ಕೇಂದ್ರ ಸೆನ್ಸಾರ್ ಮಂಡಳಿಯಿಂದ ಪ್ರಾದೇಶಿಕ ಸೆನ್ಸಾರ್ ಮಂಡಳಿಗೆ ಬೇಗ ಸೆನ್ಸಾರ್ ಮುಗಿಸಿಕೊಡಲು ಶಿಫಾರಸ್ಸು ಮಾಡಿದ್ದಕ್ಕೆ 'ಎ' ಸರ್ಟಿಫಿಕೇಟ್ ನೀಡಿದರು. ಅವರು ಹೇಳಿದ ದೃಶ್ಯಗಳಿಗೆ ಕತ್ತರಿ ಹಾಕಿ ಮತ್ತೆ ಸೆನ್ಸಾರ್ ಮಾಡಲು ನಾವು ರೆಡಿ ಇದ್ದರೂ ರಿಲೀಸ್ ಡೇಟ್ ಅನೌನ್ಸ್ ಮಾಡಿ ಪ್ರಚಾರ ನಡೆಸಿದ್ದರಿಂದ ಹೆಚ್ಚು ಸಮಯ ಇರಲಿಲ್ಲ. ಸಿನಿಮಾ ಸೆನ್ಸಾರ್ ಮಾನದಂಡಗಳು ಕಾಲಕ್ಕೆ ತಕ್ಕಂತೆ ಬದಲಾಗಬೇಕಿವೆ. ಸಿನಿಮಾ ಕುರಿತ ಪ್ರತಿಕ್ರಿಯೆ ಕೇಳಿ ನೋಡಲು ಬಂದ ಎಷ್ಟೋ ಕುಟುಂಬಗಳನ್ನು ಚಿತ್ರಮಂದಿರದಿಂದ ವಾಪಸ್ ಕಳಿಸುತ್ತಿದ್ದಾಗ ತುಂಬಾ ಬೇಸರವಾಗಿತ್ತು. ಸದ್ಯದ ಸೆನ್ಸಾರ್ ಮಂಡಳಿಯ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಲು ಫಿಲ್ಮ್ ಚೇಂಬರ್ ಒತ್ತಡ ಹೇರಬೇಕಿದೆ.

-ಸುಕೇಶ್ ಶೆಟ್ಟಿ | ನಿರ್ದೇಶಕ

ಧೂಮಪಾನ ಮಾಡಬೇಡಿ ಎಂದು ಪ್ಯಾಕೆಟ್ ಮೇಲೆ ಹಾಕಿರುತ್ತಾರೆ, ಸಿನಿಮಾಗಳಲ್ಲೂ ಮದ್ಯಪಾನ, ಧೂಮಪಾನ ಮಾಡಬೇಡಿ ಎಂದು ಹೇಳಿಸುತ್ತಾರೆ. ಅದನ್ನು ಮಾಡುವುದು, ಬಿಡುವುದು ಅವರಿಗೇ ಬಿಟ್ಟಿದ್ದು. ಸೆನ್ಸಾರ್ ಯಾವ ಸರ್ಟಿಫಿಕೇಟ್ ಆದರೂ ಕೊಡಲಿ, ಫ್ಯಾಮಿಲಿಯೊಂದಿಗೆ ಸಿನಿಮಾ ನೋಡುವುದು, ಬಿಡುವುದು ಹಣ ಕೊಟ್ಟು ನೋಡುವ ಪ್ರೇಕ್ಷಕನಿಗೆ ಬಿಟ್ಟ ವಿಷಯ. 'ಎ' ಪ್ರಮಾಣಪತ್ರ ಸಿಕ್ಕಿದ ತಕ್ಷಣ ಅಪ್ರಾಪ್ತರಿಗೆ ನಿರ್ಬಂಧ ಹೇರುವುದು ಸರಿಯಲ್ಲ. 'ಧುರಂಧರ್'ನಂತಹ ದೇಶಭಕ್ತಿಯ ಸಿನಿಮಾಗಳನ್ನು ಮಕ್ಕಳಿಗೆ ತೋರಿಸದೆ ಮುದುಕರಿಗೆ ತೋರಿಸಬೇಕೇ ಎಂದು ಪ್ರೇಕ್ಷಕರೇ ನಮ್ಮ ಮೇಲೆ ಕೋಪಿಸಿಕೊಂಡಿದ್ದು ಇದೆ. ಸೆನ್ಸಾರ್‌ನ ಎಲ್ಲಾ ನಿಯಮಗಳು ಸಿನಿಮಾ ರಂಗದ ಕೊಲೆ ಮಾಡುತ್ತಿವೆ.

-ಕೆ.ವಿ. ಚಂದ್ರಶೇಖರ್ | ವೀರೇಶ್ ಥಿಯೇಟರ್ ಮಾಲೀಕ

ಕಿಶನ್ ಬಿಳಗಲಿ, ನಿವೇದಿತಾ ಗೌಡ

ನವಿಲುಗರಿ ಕಿರಿಕಿರಿ

ನಟಿಯರೊಂದಿಗೆ ಜನಪ್ರಿಯ ಕನ್ನಡ ಹಾಡುಗಳಿಗೆ ಡಾನ್ಸ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವ ಕಿಶನ್ ಬಿಳಗಲಿ ಇತ್ತೀಚೆಗೆ ನಿವೇದಿತಾ ಗೌಡರೊಂದಿಗೆ ಡಾನ್ಸ್ ಮಾಡಿರುವ ವಿಡಿಯೊ ವಿವಾದಕ್ಕೊಳಗಾಗಿ ದೂರು ದಾಖಲಾಗಿದೆ.

ಲವಲvk ಸುದ್ದಿಲೋಕ
feedbacklvk@vijaykarnataka.com

ವರ್ತೂರು ಸಂತೋಷ್ ರಿಯಾಲಿಟಿ ಶೋನಲ್ಲಿ ಧರಿಸಿದ್ದ ಹುಲಿ ಉಗುರು ಸಾಕಷ್ಟು ಚರ್ಚೆ ಹುಟ್ಟುಹಾಕಿತ್ತು. ಈ ವಿಷಯದಲ್ಲಿ ಪ್ರಕರಣ ಕೂಡ ದಾಖಲಾಗಿತ್ತು. ಈಗ ಮತ್ತೊಬ್ಬ ನಟ ಕಿಶನ್ ಬಿಳಗಲಿ ಹಾಗೂ ನಟಿ ನಿವೇದಿತಾ ಗೌಡ ವಿಡಿಯೊ ಹಾಡೊಂದರಲ್ಲಿ ನವಿಲುಗರಿ ಬಳಸಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಸಂಬಂಧ ಅವರ ವಿರುದ್ಧ ಅರಣ್ಯ ಇಲಾಖೆಯಲ್ಲಿ ದೂರು ದಾಖಲಾಗಿದೆ.

ಈ ಜೋಡಿ ಇತ್ತೀಚೆಗಷ್ಟೇ ನವಿಲುಗರಿಗಳನ್ನು ಬಳಸಿ ಸಿದ್ಧಪಡಿಸಲಾಗಿದ್ದ ಉಡುಪುಗಳನ್ನು ಧರಿಸಿ ಮಾಡಿದ್ದ ಡಾನ್ಸ್ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಶೇರ್ ಮಾಡಿತ್ತು. ಈಗ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ದೂರು ನೀಡಿದ್ದಾರೆ. ಅವರು ನೈಜ ನವಿಲುಗರಿಗಳನ್ನು ಬಳಸಿ ಉಡುಪು ತಯಾರಿಸಿ ಸಾರ್ವಜನಿಕವಾಗಿ ಪ್ರದರ್ಶಿಸಿರುವುದು ಮತ್ತು ಸಾಮಾಜಿಕ ಜಾಲತಾಣದಲ್ಲಿ ಶೇರ್ ಮಾಡಿರುವುದು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೂರು ದಾಖಲಾದ ತಕ್ಷಣ ಕಿಶನ್ ಬಿಳಗಲಿ ತಮ್ಮ ಅಕೌಂಟ್‌ನಿಂದ ಆ ವಿಡಿಯೊ ತೆಗೆದು ಹಾಕಿದ್ದಾರೆ. ನಿವೇದಿತಾ ಗೌಡ ಈ ಬಗ್ಗೆ ಪ್ರತಿಕ್ರಿಯಿಸಿ, ತಾವು ಕಿಶನ್ ಹೇಳಿದ ಕಾರಣ ನೃತ್ಯ ಮಾಡಿರುವುದಾಗಿ ಹೇಳಿದ್ದಾರೆ.

ದಿನೇಶ್ ಕಲ್ಲಹಳ್ಳಿ ಬೆಂಗಳೂರು ಪ್ರಾದೇಶಿಕ ನಗರ ವಿಭಾಗ ವ್ಯಾಪ್ತಿಯ ಕಗ್ಗಲಿಪುರ ಅರಣ್ಯ ವಲಯ ಅಧಿಕಾರಿಗಳಿಗೆ ತಮ್ಮ ದೂರನ್ನು ದಾಖಲಿಸಿದ್ದಾರೆ. 'ವೈರಲ್ ಆಗಿರುವ ಈ ವಿಡಿಯೊ, ಛಾಯಾಚಿತ್ರಗಳ ತಾಂತ್ರಿಕ ಪರಿಶೀಲನೆ ನಡೆಸಬೇಕು. ಉಡುಪಿನಲ್ಲಿ ಬಳಸಲಾದ ಗರಿಗಳು ಅಸಲಿಯೇ ಅಥವಾ ಕೃತಕವೇ ಎಂಬುದನ್ನು ವೈಜ್ಞಾನಿಕವಾಗಿ ದೃಢೀಕರಿಸಬೇಕು. ಅವು ಅಸಲಿ ನವಿಲುಗರಿಗಳಾಗಿದ್ದಲ್ಲಿ ಕಿಶನ್ ಹಾಗೂ ನಿವೇದಿತಾ ಗೌಡ ಬಳಸಿರುವ ಆ ಉಡುಪುಗಳನ್ನು ತಕ್ಷಣವೇ ವಶಕ್ಕೆ ಪಡೆಯಬೇಕು. ಆ ನವಿಲುಗರಿಗಳ ಮೂಲ, ಖರೀದಿ, ಸಾಗಣೆ, ಸಂಗ್ರಹಣೆಯ ಕುರಿತು ಸಮಗ್ರ ತನಿಖೆ ನಡೆಸಬೇಕು. ಸಂಬಂಧಿತ ವ್ಯಕ್ತಿಗಳ ಹೇಳಿಕೆಗಳನ್ನು ದಾಖಲಿಸಿ ಈ ಗರಿಗಳನ್ನು ಪೂರೈಸಿದ ವ್ಯಕ್ತಿಗಳು ಅಥವಾ ಸಂಸ್ಥೆಗಳ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕು. ನವಿಲು ಗರಿಗಳನ್ನು ಪಡೆಯುವ ಉದ್ದೇಶದಿಂದ ಯಾವುದಾದರೂ ಅಕ್ರಮ ಬೇಟೆ, ಕಳ್ಳಸಾಗಣೆ ಅಥವಾ ವನ್ಯಜೀವಿ ಅಪರಾಧ ನಡೆದಿದೆಯೇ ಎಂಬುದನ್ನು ಪತ್ತೆ ಹಚ್ಚಲು ವಿಶೇಷ ತನಿಖೆ ನಡೆಸಬೇಕು' ಎಂದು ದೂರಿನಲ್ಲಿ ಅವರು ಉಲ್ಲೇಖಿಸಿದ್ದಾರೆ. ■

ಅಂಗೈಯಲ್ಲಿ ಅಡಗುವ ಪುಟ್ಟ ಸಿಹಿ ಪ್ರಪಂಚ

ನಾಲಿಗೆಯ ರುಚಿ ತಣಿಸುವ, ಕಣ್ಮನ ಸೆಳೆಯುವ, ಸಿಹಿಯ ಸಿಂಗಾರದೊಂದಿಗೆ ಪುಟಾಣಿ ಬೆಂಟೊ ಈಗ ಕೇಕ್‌ಗಳ ಲೋಕದಲ್ಲಿ ಸಂಚಲನ ಮೂಡಿಸಿದೆ.

ಶುಭಾ ವಿಕಾಸ್
shubha.hegde@timesofindia.com

ಅಲ್ಲಿ ಸಿಹಿಯ ಸಡಗರವಿದೆ. ಹಿತವಾಗಿ ಕಾಡುವ ಬಣ್ಣದ ಸೊಬಗಿದೆ. ಭಾವದಲ್ಲಿ ಮಿಂದೆದ್ದ ಚಿತ್ತಾರದೊಂದಿಗೆ ಅಂಗೈಯೊಳಗೆ ತೆರೆದುಕೊಳ್ಳುತ್ತದೆ ಸವಿಯ ಪುಟ್ಟ ಪ್ರಪಂಚ. ಅದಕ್ಕೆ ತನ್ನ ಗಾತ್ರ ಹೆಚ್ಚಿಸಿಕೊಳ್ಳುವ ಹಠ ಇಲ್ಲ, ದಿನಗಟ್ಟಲೆ ಇದ್ದು ಬಿಡುವ ಇರಾದೆಯೂ ಇಲ್ಲ. ಅತಿಯಾಗದ ಹಿತವಾದ ಮಿತಿಯೊಂದಿಗೆ ತನ್ನ ಅಸ್ತಿತ್ವವನ್ನು ಸಾರ್ಥಕ್ಯಗೊಳಿಸುವ ಬಯಕೆಯಲ್ಲಿ ಹುಟ್ಟುತ್ತದೆ ಬೆಂಟೊ ಎಂಬ ಪುಟಾಣಿ ಕೇಕ್.

ಬೆಂಟೊ ಬೈಟ್

ಬೆಂಟೊ ಕೇಕ್‌ಗಳು ಮಕ್ಕಳು ಹಾಗೂ ಯುವಜನತೆಯನ್ನು ಸೆಳೆಯುತ್ತಿದ್ದು, ಆಕರ್ಷಕ ವಿನ್ಯಾಸ, ಬಣ್ಣ, ರುಚಿಯ ಮೂಲಕ ಮೋಡಿ ಮಾಡುತ್ತಿವೆ. ಸೋಶಿಯಲ್ ಮೀಡಿಯಾದಲ್ಲಿ ಇದರ ಕ್ರೇಜ್ ಜೋರಾಗಿದೆ. ಆನ್‌ಲೈನ್ ಫುಡ್ ಆ್ಯಪ್‌ಗಳಲ್ಲೂ ಬೆಂಟೊ ಬೆರಗು ಮೂಡಿಸಿದೆ. ಕೆಫೆ, ಬೇಕರಿ ಹಾಗೂ ಹೋಮ್ ಬೇಕರ್‌ಗಳ ಮಾರುಕಟ್ಟೆ ವಿಸ್ತರಿಸಲು ಪುಟಾಣಿ ಕೇಕ್‌ಗಳು ಸಾಥ್ ನೀಡಿವೆ. ಗ್ರಾಹಕರ ಅಗತ್ಯಕ್ಕೆ ಕಸ್ಟಮೈಸ್ ಮಾಡಿಕೊಡುವ ನೂರಾರು ಸ್ಟಾರ್ಟಪ್‌ಗಳು ಹುಟ್ಟಿಕೊಂಡಿವೆ. ಸಾಂಪ್ರದಾಯಿಕ ಬೇಕರಿ ಬ್ರಾಂಡ್‌ಗಳು ಈಗ ತಮ್ಮ ಮೆನುವಿನಲ್ಲಿ ಬೆಂಟೊ ಸೆಕ್ಷನ್ ಸೇರಿಸಿಕೊಳ್ಳುತ್ತಿವೆ. ಈ ಮೂಲಕ ದೊಡ್ಡ ದೊಡ್ಡ ಕ್ರೀಮ್ ಲೇಯರ್‌ಗಳ ಕೇಕ್‌ಗಳನ್ನು ಮೀರಿ ಕೆಲವೇ ತುತ್ತುಗಳಿಗೆ ಸೀಮಿತವಾಗುವ ಪುಟ್ಟ ಕೇಕ್‌ಗಳು ತಮ್ಮ ಸಿಹಿ ಸಾಮ್ರಾಜ್ಯ ವಿಸ್ತರಿಸಲು ಸಜ್ಜಾಗಿವೆ. ಹಾಗಂತ ದೊಡ್ಡ ಕೇಕ್‌ಗಳ ಟ್ರೆಂಡ್ ಮುಗೀತಾ? ಇಲ್ಲ, ಅವುಗಳ ಉದ್ದೇಶವೇ ಬೇರೆ. ದೊಡ್ಡ ಗುಂಪು, ಸಮಾರಂಭದ ಅಗತ್ಯವನ್ನು ಇವು ಪೂರೈಸುತ್ತವೆ.

ದೊಡ್ಡ ಭಾವದ ಪುಟ್ಟ ಪ್ಯಾಕ್

ಬೆಂಟೊ ಕೇಕ್ ಅನ್ನು ಲಂಚ್ ಬಾಕ್ಸ್ ಕೇಕ್ ಎಂದೂ ಕರೆಯುತ್ತಾರೆ. ಬೆಂಟೊ ಎಂಬುದು ಮೂಲತಃ ಜಪಾನಿ ಪದ. ಜಪಾನ್‌ನಲ್ಲಿ ಒಬ್ಬರಿಗೆ ಅಥವಾ ಸಣ್ಣ ಬಾಕ್ಸ್‌ನಲ್ಲಿ ಪ್ಯಾಕ್ ಮಾಡಿದ ಊಟವನ್ನು ಬೆಂಟೊ ಎನ್ನಲಾಗುತ್ತದೆ. ಇದೇ ಪರಿಕಲ್ಪನೆ ಬಳಸಿ ಪುಟ್ಟ ಕೇಕ್ ತಯಾರಿಸಲು ಆರಂಭಿಸಿದ್ದರಿಂದ ಇದಕ್ಕೆ ಬೆಂಟೊ ಕೇಕ್ ಎಂಬ ಹೆಸರು ಬಂತು ಎಂಬುದು ಇದರ ಇತಿಹಾಸ. ಇವು ಕೇವಲ 2ರಿಂದ 4 ಇಂಚು ವ್ಯಾಸ ಹೊಂದಿರುತ್ತವೆ ಹಾಗೂ ಸುಮಾರು 250-300 ಗ್ರಾಂ ತೂಕವಿರುತ್ತವೆ. ಹೀಗಾಗಿ ಇದರ ನೋಟ, ಪ್ಯಾಕೇಜಿಂಗ್ ಆಕರ್ಷಕ. ಒಂದು ಖುಷಿಯನ್ನು ಇಬ್ಬರೇ ಹಂಚಿಕೊಳ್ಳಲು ಸಿಹಿಯಾದ ಮಾಧ್ಯಮವಿದು. ಇಬ್ಬರು ಸೇರಿ ಆಚರಿಸುವ ಸಣ್ಣ ಬರ್ತ್‌ಡೇ ಅಥವಾ ಆ್ಯನಿವರ್ಸರಿಗಳಿಗೆ ಇದು ಬೆಸ್ಟ್. ದೊಡ್ಡ ಕೇಕ್ ತಂದು ಅದು ವ್ಯರ್ಥವಾಗಬಾರದು ಅಂದುಕೊಳ್ಳುವವರಿಗೆ ಇದು ಸೂಕ್ತ ಆಯ್ಕೆ. ಉಡುಗೊರೆಗಾಗಿ ಹೂವಿನ ಬೊಕ್ಕೆ ಕೊಡುವ ಬದಲು ಬೆಂಟೊ ಬಾಕ್ಸ್ ಕೊಡುವ ಟ್ರೆಂಡ್ ಬೆಳೆಯುತ್ತಿದೆ.

ರುಚಿ ಮತ್ತು ಬಣ್ಣದ ಮೆರುಗು

ಬೆಂಟೊ ಕೇಕ್‌ಗಳಲ್ಲಿ ಹೆಚ್ಚಾಗಿ ಪಾಸ್ಟೆಲ್ ಬಣ್ಣಗಳನ್ನು ಬಳಸಲಾಗುತ್ತದೆ. ಇವು ಕಣ್ಣಿಗೆ ಹಿತ ಮತ್ತು ಕ್ಲಾಸಿ ಲುಕ್ ನೀಡುತ್ತವೆ. ಬೇಬಿ ಪಿಂಕ್, ಸಾಫ್ಟ್ ಲ್ಯಾವೆಂಡರ್, ಮಿಂಟ್ ಗ್ರೀನ್, ಪೌಡರ್ ಬ್ಲೂ ಮತ್ತು ಪೀಚ್ ಬಣ್ಣಗಳು ಪ್ರಮುಖವಾಗಿ ಕಾಣುತ್ತವೆ. ಇದರ ಮೇಲೆ ಮಿನಿಮಲಿಸ್ಟಿಕ್ ವಿನ್ಯಾಸದ ಸೊಗಸು ಕಾಣುತ್ತದೆ. ಸಣ್ಣದಾಗಿ ಏನಾದರೂ ಬರೆಯಲು ಅಥವಾ ಚಿಕ್ಕದಾದ ಕಾರ್ಟೂನ್, ಹೂವಿನ ಚಿತ್ರ ಬಿಡಿಸಲು ಮಾತ್ರ ಇದರಲ್ಲಿ ಜಾಗವಿರುತ್ತದೆ. ಸಣ್ಣ ಕರಡಿ ಮುಖ, ಪುಟ್ಟ ಹಾರ್ಟ್ ಸಿಂಬಲ್ಸ್, ಸೂರ್ಯಕಾಂತಿ ಹೂವು ಅಥವಾ ಕ್ಲೌಡ್ ಡಿಸೈನ್‌ಗಳು ಗಮನ ಸೆಳೆದಿವೆ. ಕ್ಲಾಸಿಕ್ ಬೆಲ್ಜಿಯನ್ ಚಾಕೊಲೇಟ್, ಸಾಲ್ಟೆಡ್ ಕ್ಯಾರಮೆಲ್, ರೆಡ್ ವೆಲ್ವೆಟ್ ಹಾಗೂ ಹವಾಮಾನಕ್ಕೆ ತಕ್ಕಂತೆ ಬ್ಲೂಬೆರ್ರಿ, ಸ್ಟ್ರಾಬೆರ್ರಿ ಮತ್ತು ಲಿಚಿಯಂತಹ ಫ್ರೂಟಿ ಫ್ಲೇವರ್‌ಗಳ ಬೆಂಟೊ ಕೇಕ್‌ಗಳಿಗೆ ಬೇಡಿಕೆ ಇದೆ. ■



ದೊಡ್ಡ ಕೇಕ್ ತಂದು ಹೆಚ್ಚು ಸೇವಿಸುವ ಅಥವಾ ಮರುದಿನ ಇಟ್ಟು ತಿನ್ನುವ, ಬಿಸಾಡಿ ವ್ಯರ್ಥ ಮಾಡುವುದಕ್ಕಿಂತ ಸಣ್ಣ ಸಿಹಿಯೊಂದಿಗೆ ಸಂಭ್ರಮ ಮುಗಿಸುವವರ ಆರೋಗ್ಯ ಕಾಳಜಿ, ಆಹಾರ ವ್ಯರ್ಥ ಮಾಡಬಾರದು ಎಂಬ ಮನೋಭಾವ ಬೆಂಟೊ ಕೇಕ್ ಗ್ರಾಹಕರ ಹಿಂದಿದೆ. ಹಲವು ರುಚಿಗಳನ್ನು ಒಂದೇ ಸಲ ಟೇಸ್ಟ್ ಮಾಡಲು ಬೆಂಟೊ ಪೂರಕ. ಕೇಕ್ ಕಾರ್ನಿವಾಲ್‌ಗಳಲ್ಲಿ ಇಂತಹ ಕೇಕ್‌ಗಳು ಸೆಳೆಯುತ್ತವೆ.

-ಸಾರಿಕಾ ಗೋಡ್ಕಿಂಡಿ
ಆರ್ಟಿಸ್ಟ್ ಹಾಗೂ ಹೋಮ್ ಬೇಕರ್

ತಾಳ್ಮೆಯ ಕಲೆಯಿದು

ದೊಡ್ಡ ಕೇಕ್ ಮಾಡುವುದಕ್ಕಿಂತ ಬೆಂಟೊ ಕೇಕ್ ಮಾಡುವುದು ಬೇಕರ್ಸ್‌ಗೆ ಸವಾಲು. ಕೇವಲ 2-3 ಇಂಚಿನ ಪುಟ್ಟ ಜಾಗದಲ್ಲಿ ಐಸಿಂಗ್ ಮಾಡುವುದು, ಅದರ ಮೇಲೆ ಅಕ್ಷರಗಳನ್ನು ಬರೆಯುವುದು ಸೂಕ್ಷ್ಮ ಹಾಗೂ ತಾಳ್ಮೆಯ ಕೆಲಸ. ದೊಡ್ಡ ಕೇಕ್‌ಗೆ ಬಳಸುವಷ್ಟೇ ಸಮಯ ಮತ್ತು ಶ್ರಮ ಇದರ ತಯಾರಿಕೆಗೂ ಬೇಕಾಗುತ್ತದೆ ಎಂಬುದು ಹೋಮ್ ಬೇಕರ್ ಸಾರಿಕಾ ಗೋಡ್ಕಿಂಡಿ ಅಭಿಪ್ರಾಯ.

ಲವಲVK ಸೂಪರ್ ರುಚಿ

RNI No. KARKAN/2016/71628
Vol. 11 Issue no. 174
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.